ಬುಧವಾರ, ಮೇ 6, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಪಾರ್‌ಗೆ ‘ಐಎಂ’ ಪಟ್ಟ

ಬೆಂಗಳೂರಿನ ಚೆಸ್ ಪ್ರತಿಭೆ ಅಪಾರ್ ಸಕ್ಸೇನಾ, ಕರ್ನಾಟಕದ ಅತಿ ಕಿರಿಯ ಇಂಟರ್‌ನ್ಯಾಷನಲ್ ಮಾಸ್ಟರ್ ಎನಿಸಿದ್ದಾನೆ.ಈತ ಐದು ವಾರಗಳ ಅಂತರದಲ್ಲಿ ಮೂರು ಐಎಂ ನಾರ್ಮ್‌ಗಳನ್ನು ಪಡೆದು ಗಮನ ಸೆಳೆದಿದ್ದಾನೆ

ವೇಷ–ಭೂಷಣ



ಬೆಂಗಳೂರಿನ ವಿಶ್ವಕರ್ಮ ಮಾಲಾಧಾರಿಗಳ ತಂಡವು ಮಂಗಳೂರಿನ ರಥಬೀದಿಯಲ್ಲಿ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಬಾಲಕಿ

SHOWROOMS: KARNATAKA: BENGALURU: RENAULT **BANNERGHATTA ROAD** Ph: 9289220872, RENAULT **MYSORE ROAD** Ph: 8527240549, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, RENAULT **YESWANTHPUR** Ph: 9311832962. RENAULT **TUMKUR** Ph: 8527234251.

‘ಶೃಂಗೇರಿಯಲ್ಲಿ ಮತ ಕಳವು ಅಲ್ಲ, ಡಕಾಯಿತಿ’

ಅಂಚೆ ಮತ ವ್ಯವಸ್ಥಿತವಾಗಿ ತಿದ್ದಿ ಕ್ರಿಮಿನಲ್ ಸಂಚು: ಮುಖ್ಯಮಂತ್ರಿ ಆರೋಪ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ‘ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಮತ ಕಳವು ಅಲ್ಲ, ಡಕಾಯಿತಿಯೇ ನಡೆದಿದೆ. ಅಂಚೆ ಮತಪತ್ರಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಇದು ಕ್ರಿಮಿನಲ್ ಸಂಚು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಮತ ಎಣಿಕೆ ಮಾಡಿದ ಬಳಿಕ ಎಲ್ಲ ದಾಖಲಾತಿಗಳನ್ನು ಟ್ರಂಕ್‌ನಲ್ಲಿ ಇಡಲಾಗುತ್ತದೆ. ಮತ ಎಣಿಕೆಯ ಸಂದರ್ಭದಲ್ಲಿ ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿತ್ತು. ಬಿಜೆಪಿಯವರು ಸಿಬ್ಬಂದಿ ಬಳಸಿ ಮತಪತ್ರಗಳನ್ನು ತಿದ್ದಿರುವುದು ಖಚಿತವಾಗಿದೆ. ತಪ್ಪು ಮಾಡಿದ ಯಾರೇ ಆಗಿದ್ದರೂ ಶಿಕ್ಷೆ ಆಗಬೇಕು’ ಎಂದರು.

‘ಶೃಂಗೇರಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಟಿ.ಡಿ ರಾಜೇಗೌಡ ಅವರು 201 ಮತಗಳ ಅಂತರದಲ್ಲಿ ಗೆದ್ದಿದ್ದರು. ಅವರಿಗೆ 569 ಅಂಚೆ ಮತಗಳು, ಪ್ರತಿಸ್ಪರ್ಧಿ ಬಿಜೆಪಿಯ ಡಿ.ಎನ್. ಜೀವರಾಜ್ ಅವರಿಗೆ 692 ಮತಗಳು ಬಂದಿದ್ದವು. ಅವೆಲ್ಲವೂ ಅರ್ಹ ಮತಗಳೆಂದು ಚುನಾವಣಾಧಿಕಾರಿಗಳು, ಏಜೆಂಟರು ಸಹಿ ಮಾಡಿ ಫಲಿತಾಂಶ ಘೋಷಿಸಿದ್ದರು. ಆ ಬಳಿಕ ಮತ ಎಣಿಕೆಯಲ್ಲಿ ಅಕ್ರಮ ಆಗಿದೆ ಎಂದು ಜೀವರಾಜ್ ಅವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಅರ್ಜಿ ಪುರಸ್ಕರಿಸಿದ್ದ ಕೋರ್ಟ್, ಮರು ಎಣಿಕೆಗೆ ನಿರ್ದೇಶನ ನೀಡಿತ್ತು. ಮರು ಎಣಿಕೆಯಲ್ಲಿ ರಾಜೇಗೌಡರಿಗೆ ಬಂದಿದ್ದ 314 ಮತಗಳು ಮಾತ್ರ ಅರ್ಹ, 255 ಅನರ್ಹ ಎಂದು ಆಗಿದೆ. ಜೀವರಾಜ್‌ಗೆ ಮರು ಎಣಿಕೆಯಲ್ಲಿ 690 ಮತಗಳು ಲಭಿಸಿವೆ. ಬಿಜೆಪಿಯವರು ಕ್ರಿಮಿನಲ್ ಸಂಚು ಮಾಡಿ ಮತ ಕಳವು ಮಾಡಿರುವುದು ಸ್ಪಷ್ಟ. ರಾಜೇಗೌಡರಿಗೆ ಬಿದ್ದಿದ್ದ 250 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ’ ಎಂದು ದೂರಿದರು.

‘ರಾಜೇಗೌಡರಿಗೆ ಮೂರನೇ ಸುತ್ತಿನಲ್ಲಿ ಲಭಿಸಿದ್ದ ಎಲ್ಲ 170 ಅಂಚೆ ಮತಗಳು ಈಗ ಅನರ್ಹವಾಗಿವೆ. ಮತಗಳು ಅನರ್ಹವಾಗಿದ್ದರೆ ಹಿಂದೆಯೇ ಆಕ್ಷೇಪ ಎತ್ತಬಹುದಾಗಿತ್ತು. ಆಗ ಯಾರೂ ಆಕ್ಷೇಪ ಎತ್ತಲಿಲ್ಲ ಯಾಕೆ’ ಎಂದು ಪ್ರಶ್ನಿಸಿದರು.

‘ಮರು ಎಣಿಕೆ ಸಂದರ್ಭದಲ್ಲಿ ಇದ್ದ ಚುನಾವಣಾ ವೀಕ್ಷಕರು ಗಂಭೀರ ಸ್ವರೂಪದ ಕ್ರಿಮಿನಲ್ ಸಂಚು ನಡೆದಿರುವುದಾಗಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆಂದು ಗೊತ್ತಾಗಿದೆ. ಅಂಚೆ ಮತಪತ್ರಗಳನ್ನು ವಿಧಿವಿಜ್ಞಾನ ಪರಿಶೀಲನೆಗೆ ಸಲ್ಲಿಸಬೇಕಿತ್ತು. ಚುನಾವಣಾ ಫಲಿತಾಂಶ ಘೋಷಣೆಯನ್ನು ನ್ಯಾಯಾಲಯಕ್ಕೆ ಬಿಡಬೇಕಾಗಿತ್ತು. ಅದನ್ನು ಬಿಟ್ಟು ಚುನಾವಣಾ ವೀಕ್ಷಕರಿಂದ ಅನುಮತಿಯನ್ನೂ ಪಡೆಯದೆ ಚುನಾವಣಾಧಿಕಾರಿ ಆತುರಾತುರವಾಗಿ ಫಲಿತಾಂಶ ಘೋಷಿಸಿದ್ದಾರೆ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

‘ಈ ಹಿಂದೆ ಬಿಜೆಪಿಯವರು ಚಿಲುಮೆ ಎಂಬ ಸಂಸ್ಥೆ ಮೂಲಕ ಮತದಾರರ ಪಟ್ಟಿಯನ್ನೇ ತಿದ್ದುಪಡಿ ಮಾಡಲು ಪ್ರಯತ್ನಿಸಿದ್ದರು. ಆಳಂದದಲ್ಲಿ ನೈಜ ಮತದಾರರನ್ನೇ ಬಿಟ್ಟು ಬಿಟ್ಟಿದ್ದರು. ನಿಷ್ಪಕ್ಷಪಾತವಾದ ಚುನಾವಣೆಯಲ್ಲಿ ಬಿಜೆಪಿಯವರಿಗೆ ನಂಬಿಕೆ ಇಲ್ಲ. ಇಂತಹ ಅಪರಾಧ ಎಸಗಲು ಬಿಜೆಪಿಯವರು ಹಿಂಜರಿಯುವುದಿಲ್ಲ. ಈ ಅಪರಾಧವನ್ನು ಕೇಂದ್ರದ ಇಬ್ಬರು ಸಚಿವರು ಮತ್ತು ವಿರೋಧ ಪಕ್ಷದ ನಾಯಕರು ಸಮರ್ಥಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಮುಂದಿನ ದಿನಗಳಲ್ಲಿ ಜನ ಅವರಿಗೆ ಪಾಠ ಕಲಿಸಲಿದ್ದಾರೆ’ ಎಂದರು.

‘ರಾಜೇಗೌಡ ಅವರು ನೀಡಿದ ದೂರಿನ ಮೇಲೆ ಎಫ್‌ಐಆರ್ ಆಗಿದೆ. ಈ ದೂರಿನ ಮೇಲೆ ನಿಷ್ಪಕ್ಷಪಾತ ತನಿಖೆ ನಡೆಯಬೇಕು’ ಎಂದೂ ಆಗ್ರಹಿಸಿದರು.

‘ಕಾನೂನು ಹೋರಾಟ ಮಾಡುತ್ತೇವೆ’

ಡಿ.ಕೆ.ಶಿವಕುಮಾರ್

‘ಶೃಂಗೇರಿ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದಿರುವ ಅಂಚೆ ಮತಗಳನ್ನು ತಿದ್ದಿದ್ದಲ್ಲದೇ, ಮರುಎಣಿಕೆಯಲ್ಲಿ ಆ ಮತಗಳನ್ನು ಅಸಿಂಧುಗೊಳಿಸಲಾಗಿದೆ. ಇಡೀ ದೇಶದಲ್ಲಿ ಇಂತಹ ಅಪರಾಧ ನಡೆದಿಲ್ಲ. ಇದರ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಮತ ಎಣಿಕೆ ಮಾಡಿದ ಬಳಿಕ ಬಿಜೆಪಿ ಅಭ್ಯರ್ಥಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳನ್ನು ತಿದ್ದಲಾಗಿದೆ. ಹೀಗಾಗಿಯೇ ಅವರು ನಿರ್ದಿಷ್ಟ ಮತಗಳ ಕಟ್ಟು ಅನ್ನೇ ಮರು ಎಣಿಕೆ ಮಾಡಿ ಎಂದು ಪಟ್ಟು ಹಿಡಿದಿದ್ದರು. ಅಧಿಕಾರಿಗಳು ಹಾಗೂ ಬಿಜೆಪಿ ಅಭ್ಯರ್ಥಿ ಈ ಅಕ್ರಮದಲ್ಲಿ ಭಾಗಿಯಾಗಿದ್ದು, ಗಂಭೀರವಾದ ತನಿಖೆ ನಡೆಯಬೇಕಿದೆ. ಇದು ದೇಶದಲ್ಲೇ ಅತಿ ದೊಡ್ಡ ಷಡ್ಯಂತ್ರವಾಗಿದೆ. ಚುನಾವಣಾ ಆಯೋಗವು ನ್ಯಾಯ ಒದಗಿಸಬೇಕಿದೆ’ ಎಂದರು.

‘ನನ್ನ ತಪ್ಪಿದ್ದರೆ ತಲೆದಂಡವಾಗಲಿ’

‘ನನಗೆ ಅನ್ಯಾಯವಾಗಿದೆ. ನಾವು ಕೋರ್ಟ್ ಮೊರೆಹೋಗುತ್ತೇವೆ. ನ್ಯಾಯ ಸಿಗಲಿಲ್ಲ ಎಂದರೆ ಖಂಡಿತವಾಗಿ ಇಡೀ ದೇಶಕ್ಕೆ ಕೆಟ್ಟ ಸಂದೇಶ ಹೋಗುತ್ತದೆ. ನನ್ನ ತಪ್ಪಿದ್ದರೆ ನನ್ನ ತಲೆದಂಡವಾಗಲಿ. ಅವರ ತಪ್ಪಿದ್ದರೆ ಅವರದ್ದೂ ಆಗಲಿ’ ಎಂದು ಟಿ.ಡಿ. ರಾಜೇಗೌಡ ಸವಾಲು ಹಾಕಿದರು.

‘201 ಮತಗಳ ಅಂತರದಿಂದ ಗೆದ್ದ ನನ್ನನ್ನು ಮೋಸದಿಂದ ಸೋಲಿಸುವ ಕೆಲಸ ಮಾಡಲಾಗಿದೆ. ಇದು ಸಂವಿಧಾನಬಾಹಿರ. ಚುನಾವಣಾ ಆಯೋಗ ಮತ್ತು ನ್ಯಾಯಲಯದಲ್ಲಿ ನನಗೆ ನ್ಯಾಯ ಸಿಗುವ ಭರವಸೆಯಿದೆ’ ಎಂದು ಹೇಳಿದರು.

‘ನನ್ನ ವಿರುದ್ಧ ಗೆದ್ದಿದ್ದೇನೆ ಎಂದು ಈಗ ಘೋಷಣೆ ಮಾಡಿಕೊಂಡಿರುವ ಅಭ್ಯರ್ಥಿ ಸುಳ್ಳು ಆಪಾದನೆ ಮಾಡಿದ್ದಾರೆ. ಹೀಗಾಗಿ ನಾನು ನ್ಯಾಯಾಲಯಕ್ಕೆ ಹೋಗಿದ್ದೆ. ಅದೆಲ್ಲವೂ ನ್ಯಾಯಾಲಯದಿಂದ ತಿರಸ್ಕೃತವಾಯಿತು. ನನಗೂ ಸುಪ್ರೀಂ ಕೋರ್ಟಿಗೆ ಹೋಗುವ ಅವಕಾಶವಿತ್ತು. ಆದರೆ, ಇಲ್ಲಿ ಆಗಿರುವ ಘಟನೆಯೇ ಬೇರೆ. ಯಾರಿಗೆ ಎಷ್ಟು ಮತ ಬಿದ್ದಿದೆ ಎಂದು ಎಲ್ಲರೂ ಸಹಿ ಹಾಕಿದ್ದಾರೆ. ನನಗೆ ಬಂದಿರುವ ಸಿಂಧು ಮತಗಳಿಗೆ ಯಾವುದೋ ಗಳಿಗೆಯಲ್ಲಿ ಗುರುತು ಮಾಡಲಾಗಿದೆ’ ಎಂದು ದೂರಿದರು.

ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್. ಶಂಕರ್, ರಾಜ್ಯ ವಕ್ತಾರ ಸುಧೀರ್ ಕುಮಾರ್ ಮುರೊಳ್ಳಿ ಜೊತೆಗಿದ್ದರು.



ಟಿ.ಡಿ.ರಾಜೇಗೌಡ

ಸಭಾಧ್ಯಕ್ಷರಿಂದ ಅನಗತ್ಯ ವಿಳಂಬ: ಆರ್.ಅಶೋಕ ಆರೋಪ

ಪ್ರಮಾಣ ವಚನ ಬೋಧಿಸಿ: ರಾಜ್ಯಪಾಲರಿಗೆ ಮನವಿ

ಆರ್. ಅಶೋಕ

ಬೆಂಗಳೂರು: ‘ಶೃಂಗೇರಿ ಶಾಸಕ ಡಿ.ಎನ್. ಜೀವರಾಜ್ ಅವರಿಗೆ ಪ್ರಮಾಣ ಬೋಧಿಸಲು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ವಿಳಂಬ ಮಾಡುತ್ತಿದ್ದಾರೆ. ಆದ್ದರಿಂದ, ಪ್ರಮಾಣ ವಚನ ಬೋಧಿಸುವಂತೆ ರಾಜ್ಯಪಾಲರನ್ನೇ ಕೋರಿದ್ದೇವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಈ ವಿಚಾರವಾಗಿ ಮಂಗಳವಾರ ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಸಭಾಧ್ಯಕ್ಷರು ಸಂವಿಧಾನದ ಪ್ರಕಾರ ಪ್ರಮಾಣ ವಚನ ಪ್ರಕ್ರಿಯೆ ನಡೆಸದೇ ಇದ್ದರೆ, ಅವರ ವಿರುದ್ಧ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

‘ಮರು ಮತ ಎಣಿಕೆಯಲ್ಲಿ ಜೀವರಾಜ್ ಗೆಲುವು ಸಾಧಿಸಿದ ಬಳಿಕ ಚುನಾವಣಾ ಆಯೋಗ ಪ್ರಮಾಣ ಪತ್ರ ನೀಡಿದೆ. ರಾಜ್ಯ ಸರ್ಕಾರ ರಾಜ್ಯಪತ್ರದಲ್ಲೂ ಇದನ್ನು ಪ್ರಕಟಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಎಲ್ಲ ಶಾಸಕರಿಗೂ ಒಂದೇ ಕಾನೂನು ಇರುವುದು. ಈ ಕುರಿತು ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡಲು ಯತ್ನಿಸಿದರೆ, ಬೇಕೆಂದೇ ಕರೆ ಸ್ವೀಕರಿಸಲಿಲ್ಲ. ಈಗ ಭೇಟಿ ಮಾಡಿದರೆ ನನಗೆ ಕಾನೂನು ಬೋಧನೆ ಮಾಡುತ್ತಿದ್ದಾರೆ’ ಎಂದು ಅಶೋಕ ಕಿಡಿಕಾರಿದರು.

ಯು.ಟಿ.ಖಾದರ್ ಕೂಡ ಶಾಸಕರಾಗಿ ಹಂಗಾಮಿ ಸಭಾಧ್ಯಕ್ಷರ ಮೂಲಕವೇ ಪ್ರಮಾಣ ಸ್ವೀಕರಿಸಿದ್ದಾರೆ. ಅವರೇನೂ ನ್ಯಾಯಾಲಯಕ್ಕೆ ಹೋಗಿಲ್ಲ. ಯಾವುದೇ ಶಾಸಕರ ವಿರುದ್ಧ ನ್ಯಾಯಾಲಯಕ್ಕೆ ಹೋಗಲು 45 ದಿನಗಳ ಕಾಲಾವಕಾಶವಿದ್ದರೂ ಪ್ರಮಾಣ ವಚನ ಪಡೆಯಲು ಅಡ್ಡಿ ಇಲ್ಲ. ಆದರೆ ಸಭಾಧ್ಯಕ್ಷ ಖಾದರ್ ಮಾತ್ರ ಪ್ರಮಾಣ ವಚನಕ್ಕೆ ಅವಕಾಶ ಮಾಡಿಕೊಡದೇ ಹೊಸ ಸಂಪ್ರದಾಯ ಆರಂಭಿಸಿದ್ದಾರೆ ಎಂದು ದೂರಿದರು.

ಜೀವರಾಜ್ ಅವರ ವಿರುದ್ಧದ ದೂರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದೆ. ಕಾಂಗ್ರೆಸ್‌ನವರೇ ದೊಡ್ಡ ಡಕಾಯಿತಿ ಮಾಡುತ್ತಾರೆ. ಮತ ಎಣಿಕೆ ವೇಳೆ ಚುನಾವಣಾಧಿಕಾರಿಗೆ ಸಿದ್ದರಾಮಯ್ಯ ಅಥವಾ ಡಿ.ಕೆ. ಶಿವಕುಮಾರ್ ಕರೆ ಮಾಡಿ ಒತ್ತಡ ಹೇರಿದ್ದಾರೆಯೇ ಎಂಬುದರ ಬಗ್ಗೆ ಸಿಬಿಐ ತನಿಖೆ ಆಗಬೇಕಾಗಿದೆ ಎಂದರು.

ಮರು ಎಣಿಕೆ ಫಲಿತಾಂಶವನ್ನು ಕೋರ್ಟ್‌ಗೆ ಸಲ್ಲಿಸಿ ಎಂದು ಎಲ್ಲೂ ಹೇಳಿಲ್ಲ. ಫಲಿತಾಂಶವನ್ನು ಕೂಡಲೇ ಪ್ರಕಟಿಸಿ ಎಂಬ ಸೂಚನೆ ಇದೆ. ಸಭಾಧ್ಯಕ್ಷರನ್ನು ಭೇಟಿಯಾಗಿ ಕೇಳಿದರೆ, ನಾಳೆ ಬಾ ನೋಡೋಣ, ಕಾನೂನು ಸಲಹೆ ಪಡೆಯಬೇಕಿದೆ ಎನ್ನುತ್ತಾರೆ ಎಂದರು.

‘ಸಂವಿಧಾನದ ವಿಧಿ 188 ರ ಪ್ರಕಾರ, ಪ್ರಮಾಣ ವಚನವನ್ನು ರಾಜ್ಯಪಾಲರು ಬೋಧಿಸುತ್ತಾರೆ. ಸಭಾಧ್ಯಕ್ಷರು ಇರದಿದ್ದರೆ ಬೇರೆಯವರ ಹೆಸರು ಸೂಚಿಸುವ ಅಧಿಕಾರ ರಾಜ್ಯಪಾಲರಿಗಿದೆ. ಸಭಾಧ್ಯಕ್ಷರ ಬದಲು ನೀವೇ ಪ್ರಮಾಣ ವಚನ ಬೋಧಿಸಿ ಎಂದು ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಸರ್ಕಾರ ಹೀಗೆ ಮಾಡಿದ್ದಾಗ ಇಬ್ಬರು ಬಿಜೆಪಿ ಶಾಸಕರು ರಾಜ್ಯಪಾಲರಿಗೆ ಕೋರಿದ್ದರು. ಅದೇ ರೀತಿ ನಾವು ಕೋರಿದ್ದೇವೆ. ಈ ಪ್ರಕ್ರಿಯೆ ನಡೆಯದೇ ಇದ್ದಲ್ಲಿ ಸ್ಪೀಕರ್ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಮತಪತ್ರ ತಿರುಚಲಾಗಿದೆ ಎಂದು ಮುಖ್ಯಮಂತ್ರಿ ಆರೋಪಿಸಿದ್ದಾರೆ. ಜೀವರಾಜ್ ಸೋತು ಎಂಟು ವರ್ಷ ಆಗಿದೆ. ಅವರ ಮಾತನ್ನು ಅಧಿಕಾರಿಗಳು ಕೇಳಲು ಸಾಧ್ಯವೇ? ಅಧಿಕಾರಿಗಳು ಮುಖ್ಯಮಂತ್ರಿ ಮಾತು ಕೇಳುತ್ತಾರೆ. ಶೃಂಗೇರಿ ಕ್ಷೇತ್ರ ಮತ ಕಳವಿಗೆ ಉದಾಹರಣೆಯಾಗಿದ್ದು, ಇಡೀ ಸರ್ಕಾರವನ್ನೇ ವಜಾ ಮಾಡಬೇಕಾಗಿದೆ’ ಎಂದರು.

‘ಪ್ರಮಾಣ ಕೊಟ್ಟೇ ಕೊಡುತ್ತೇವೆ, ತಡ ಮಾಡಿಲ್ಲ’

‘ಜೀವರಾಜ್‌ಗೆ ಪ್ರಮಾಣ ಬೋಧಿಸಲು ತಡ ಮಾಡಿಲ್ಲ. ಸಂವಿಧಾನ ಮತ್ತು ಕಾನೂನಿನ ಪ್ರಕಾರ ಕೊಟ್ಟೇ ಕೊಡಬೇಕಾಗುತ್ತದೆ’ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

‘ಪ್ರಜಾವಾಣಿ’ ಜತೆ ಮಾತನಾಡಿದ ಅವರು, ‘ನಿನ್ನೆ ಬೆಳಿಗ್ಗೆ ಫಲಿತಾಂಶ ಬಂದಿದೆ. ಪ್ರಮಾಣ ವಚನ ಸ್ವೀಕರಿಸಲು ದಿನಾಂಕ ಕೋರಿ ನನ್ನ ಕಚೇರಿಗೆ ಇವತ್ತು(ಮಂಗಳವಾರ) ಪತ್ರ ನೀಡಿದ್ದಾರೆ. ನಾನು ಇವತ್ತು ಮಂಗಳೂರಿನಲ್ಲಿ ಇದ್ದೇನೆ. ಹಾಗಿರುವಾಗ ತಡ ಮಾಡಿದ್ದೇನೆ ಎನ್ನುವುದು ಸರಿಯಲ್ಲ’ ಎಂದರು.

ಯು.ಟಿ.ಖಾದರ್

‘ಕೆಲವು ತಾಂತ್ರಿಕ ವಿಚಾರಗಳೂ ಇವೆ. ಒಂದು ವೇಳೆ ಈ ಆಯ್ಕೆಗೆ ಕೋರ್ಟ್ ತಡೆ ನೀಡಿದರೆ ಎಂಬ ಪ್ರಶ್ನೆಯೂ ಇದೆ. ಇವೆಲ್ಲದಕ್ಕೂ ಸ್ಪಷ್ಟತೆ ಸಿಗಬೇಕಿದೆ. ಅಲ್ಲದೇ, ಇನ್ನೂ ಇಬ್ಬರು ಉಪ ಚುನಾವಣೆಯಲ್ಲಿ ಗೆದ್ದಿದ್ದಾರೆ. ಮೂರು ಜನರದ್ದು ಒಟ್ಟಿಗೆ ಮಾಡಬಹುದೇ ಎಂಬ ವಿಚಾರವನ್ನೂ ಪರಿಶೀಲನೆ ಮಾಡುತ್ತಿದ್ದೇನೆ ಎಂದು ಖಾದರ್ ಹೇಳಿದರು.

ಎಲ್ಲ ಸೌಲಭ್ಯಗಳಿಗೂ ಅರ್ಹರು: ‘ಚುನಾವಣೆಯಲ್ಲಿ ಗೆದ್ದು ಚುನಾವಣಾ ಆಯೋಗದಿಂದ ಪ್ರಮಾಣ ಪತ್ರ ಪಡೆದ ತಕ್ಷಣದಿಂದಲೇ ಅಂತಹ ವ್ಯಕ್ತಿಗಳು ಶಾಸಕರಾಗುತ್ತಾರೆ. ಶಾಸಕರಿಗೆ ಸಿಗಬೇಕಾದ ಎಲ್ಲ ಸೌಲಭ್ಯಗಳೂ ಸಿಗುತ್ತವೆ. ಆದರೆ, ಅಧಿವೇಶನದಲ್ಲಿ ಭಾಗವಹಿಸಲು ಪ್ರಮಾಣ ಪಡೆಯುವುದು ಅಗತ್ಯ’ ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದರು.

ಬತ್ತಿದ ಕೆಂಪುಹೊಳೆ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.



ದಕ್ಷಿಣ ಕನ್ನಡ–ಹಾಸನ ಜಿಲ್ಲೆಗಳನ್ನು ಬೆಸೆಯುವ ಶಿರಾಡಿ ಘಾಟ್ ಸಮೀಪ ಹರಿಯುವ ಕುಮಾರಧಾರಾ ನದಿಯ ಉಪನದಿಯಾದ ಕೆಂಪುಹೊಳೆಯಲ್ಲಿ ನೀರು ಬರಿದಾಗಿದೆ

ಪೊಲೀಸರು ರಾಜಕೀಯ ಒತ್ತಡಕ್ಕೆ ಮಣಿದು ಕೆಲಸ ಮಾಡಬಾರದು: ಹೈಕೋರ್ಟ್

ಜೀವರಾಜ್ ವಿರುದ್ಧದ ಎಫ್‌ಐಆರ್‌ಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸರು ರಾಜಕೀಯ ಒತ್ತಡಗಳಿಗೆ ಮಣಿದು ಕೆಲಸ ಮಾಡಬಾರದು’ ಎಂದು ಎಚ್ಚರಿಸಿರುವ ಹೈಕೋರ್ಟ್, ಮರು ಮತ ಎಣಿಕೆ ವೇಳೆ ಮತಪತ್ರಗಳನ್ನು ತಿದ್ದಿದ ಆರೋಪಕ್ಕೆ ಸಂಬಂಧಿಸಿದಂತೆ ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಜೀವರಾಜ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಜೀವರಾಜ್ ಪರ ಪದಾಂಕಿತ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರು, ‘2023ರ ಮೇ 5ರಂದು ನಡೆದಿದೆ ಎನ್ನಲಾದ ಆರೋಪವನ್ನು ಆಧರಿಸಿ ಈಗ ಪ್ರಕರಣ ದಾಖಲಿಸಲಾಗಿದೆ. ಸೋತಿರುವ ಕಾರಣ ಈ ಎಫ್‌ಐಆರ್ ದಾಖಲಿಸಲಾಗಿದ್ದು, ಇದರಲ್ಲಿ ರಾಜಕೀಯ ದುರುದ್ದೇಶ ಅಡಗಿದೆ’ ಎಂದರು.

ಇದನ್ನು ಆಕ್ಷೇಪಿಸಿದ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ‘ಮತಗಳ ಮೇಲೆ ಡಬಲ್ ಟಿಕ್ ಇದೆ. ಈ ವಿಚಾರವನ್ನು ರಾಜೇಗೌಡರ ಪರ ಮತ ಎಣಿಕೆಯ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ, ಮರು ಎಣಿಕೆ ನಡೆಯುವುದಕ್ಕೆ ಮುನ್ನವೇ ಚುನಾವಣಾಧಿಕಾರಿ ಗೌರವ್ ಶೆಟ್ಟಿ ಗಮನಕ್ಕೆ ತಂದಿದ್ದಾರೆ. ಇಲ್ಲಿ ಮತ ತಿರುಚಿರುವ ಕೃತ್ಯ ನಡೆದಿದೆ’ ಎಂದರು.

ಈ ವಿವರಣೆಗೆ ಕುಪಿತಗೊಂಡ ನ್ಯಾಯಪೀಠ, ‘2023ರಲ್ಲಿ ಮತ ತಿರುಚಲಾಗಿದೆ ಎನ್ನುವುದಾದರೆ ಈ ವಿಚಾರವನ್ನು ಮರು ಎಣಿಕೆಗೆ ಆದೇಶಿಸಿದ ನ್ಯಾಯಾಲಯದ ಗಮನಕ್ಕೆ ತಂದು, ಅಂದೇ ನಿರ್ದೇಶನ ಪಡೆದು ಮುಂದುವರಿಯಬೇಕಿತ್ತು. ಹಾಲಿ ಚುನಾವಣಾಧಿಕಾರಿ ಗೌರವ್ ಶೆಟ್ಟಿ ಅದನ್ನು ಮಾಡಬೇಕಿತ್ತು. ದೂರಿನಲ್ಲಿ ಗೌರವ್ ಶೆಟ್ಟಿಯನ್ನು ಏಕೆ ಆರೋಪಿಯನ್ನಾಗಿ ಮಾಡಲಾಗಿಲ್ಲ’ ಎಂದು ಖಾರವಾಗಿ ಪ್ರಶ್ನಿಸಿತು.

‘ವಿಧಾನ ಸಭಾ ಕ್ಷೇತ್ರದ ಚುನಾವಣಾಧಿಕಾರಿ ವೇದಮೂರ್ತಿ ಹಾಗೂ ಅಂದಿನ ಜಿಲ್ಲಾಧಿಕಾರಿಯನ್ನು ಏಕೆ ಆರೋಪಿಗಳನ್ನಾಗಿ ಮಾಡಲಾಗಿದೆ. ದೂರು ದಾಖಲಿಸುವುದಕ್ಕೂ ಮುನ್ನ ಅವರ ವಾದ ಆಲಿಸಬೇಕಿತ್ತಲ್ಲವೇ? ಇದು ಸಹಜ ನ್ಯಾಯತತ್ವವೇ’ ಎಂದು ಪ್ರಶ್ನಿಸಿತು.

‘ಪ್ರಕರಣದ ತನಿಖಾಧಿಕಾರಿ ಎಲ್ಲಿ’ ಎಂದು ಪ್ರಶ್ನಿಸುತ್ತಿದ್ದಂತೆಯೇ, ತನಿಖಾಧಿಕಾರಿ ನ್ಯಾಯಪೀಠದ ಮುಂದೆ ಬಂದರು. ಅವರನ್ನು ಉದ್ದೇಶಿಸಿ, ‘ಗೌರವ್ ಶೆಟ್ಟಿಯನ್ನು ಏಕೆ ಆರೋಪಿಯನ್ನಾಗಿ ಮಾಡಿಲ್ಲ. ಎಲ್ಲಿಂದ ಬಂದಿದ್ದೀರಿ? ನಿಮಗೆ ಕಣ್ಣು ಕಾಣುವುದಿಲ್ಲವೇ? ಯಾರೋ ಎಸಗಿದ ಪ್ರಮಾದಕ್ಕೆ ಇನ್ಯಾರದೋ ವಿರುದ್ಧ ಏಕೆ ಪ್ರಕರಣ ದಾಖಲಿಸಿದ್ದೀರಿ? ನಿಮ್ಮನ್ನು ಅಮಾನತು ಮಾಡಲು ಆದೇಶ ಬರೆಯಲಾಗುವುದು’ ಎಂದು ಮೌಖಿಕವಾಗಿ ಎಚ್ಚರಿಸಿತು.

ಪ್ರಕರಣವೇನು?

‘2023ರ ಮೇ 13ರಂದು ಮತ ಎಣಿಕೆ ಮುಗಿದ ಬಳಿಕ ಜೀವರಾಜ್, ವೇದಮೂರ್ತಿ ಮತ್ತು ಅಂದಿನ ಚಿಕ್ಕಮಗಳೂರು ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ಸಂಚು ರೂಪಿಸಿ ಮತಪೆಟ್ಟಿಗೆಗಳ ಸೀಲು ತೆಗೆದು ರಾಜೇಗೌಡ ಅವರಿಗೆ ಬಿದ್ದಿದ್ದ ಒಂದು ಕಟ್ಟಿನ 170 ಮತಗಳನ್ನು ತಿದ್ದಿದ್ದಾರೆ’ ಎಂದು ಆರೋಪಿಸಿ ಸುಧೀರ್ ಕುಮಾರ್ ಮುರೊಳ್ಳಿ 2026ರ ಮೇ 3ರಂದು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಈ ದೂರಿನ ಅನ್ವಯ ಆರೋಪಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಜೀವರಾಜ್ ಪರ ಹೈಕೋರ್ಟ್ ವಕೀಲೆ ಪಿ.ಎಲ್. ವಂದನಾ ರೆಡ್ಡಿ ವಕಾಲತ್ತು ವಹಿಸಿದ್ದಾರೆ.

ಚಿಟಿಕೆ ಸುದ್ದಿ

ರಘುನಾಥ ಚ.ಹ. ಕಥಾಸಂಕಲನಕ್ಕೆ ಬೆಸಗರಹಳ್ಳಿ ಪ್ರಶಸ್ತಿ

ಮಂಡ್ಯ: ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ವತಿಯಿಂದ ನೀಡುವ 2025ನೇ ಸಾಲಿನ ‘ಡಾ.ಬೆಸಗರಹಳ್ಳಿ ರಾಮಣ್ಣ ವಾರ್ಷಿಕ ಕಥಾಸಂಕಲನ ಪ್ರಶಸ್ತಿ’ಗೆ ‘ಪ್ರಜಾವಾಣಿ’ಯ ಅಭಿಮತ ಸಂಪಾದಕ ರಘುನಾಥ ಚ.ಹ. ಅವರ ‘ಇಲ್ಲಿಂದ ಮುಂದೆಲ್ಲ ಕಥೆ’ ಕಥಾ ಸಂಕಲನ ಆಯ್ಕೆಯಾಗಿದೆ.

ರಘುನಾಥ ಚ.ಹ.

ಪ್ರಶಸ್ತಿಯು ₹50 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಜೂನ್ 14ರಂದು ಮಂಡ್ಯ ನಗರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಈ ಸ್ಪರ್ಧೆಗೆ ಒಟ್ಟು 83 ಕೃತಿಗಳು ಬಂದಿದ್ದವು ಎಂದು ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್. ಸುಜಾತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆದ್ದಾರಿ ಕಾಮಗಾರಿ ವಿಳಂಬ: ಧರಣಿ

ಶಿರಸಿ: ‘ಶಿರಸಿ–ಹಾವೇರಿ ಹೆದ್ದಾರಿ 766ಇ ಕಾಮಗಾರಿ ವಿಳಂಬ ಖಂಡಿಸಿ ತಾಲ್ಲೂಕಿನ ಬಿಸಲಕೊಪ್ಪದಲ್ಲಿ ಸಾರ್ವಜನಿಕರು ಮಂಗಳವಾರ ಪ್ರತಿಭಟನೆ ನಡೆಸಿದರು.

ಬೆಳಿಗ್ಗೆ 8.30ರಿಂದ ಮಧ್ಯಾಹ್ನ 1.30ರವರೆಗೆ ಪ್ರತಿಭಟನೆ ನಡೆಯಿತು. ಬಿಸಲಕೊಪ್ಪದ ಬಳಿ ರಸ್ತೆಗೆ ಟ್ರ್ಯಾಕ್ಟರ್ ಅಡ್ಡವಾಗಿ ನಿಲ್ಲಿಸಿ, ವಾಹನಗಳ ಸಂಚಾರವನ್ನು ತಡೆದರು.

‘ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ’ ಎಂದು ಟೀಕಿಸಿದರು. ಪ್ರಾಧಿಕಾರದ ಬ್ಯಾನರ್‌ಗೆ ಹಾರ ಹಾಕಿ ಶ್ರದ್ಧಾಂಜಲಿ ಸಲ್ಲಿಸಿದಂತೆ ಅಣಕವಾಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಸುನೀಲ ನಾಯ್ಕ ಮಳಲಗಾಂವ ಅವರು ‘ಶಿರಸಿ ನಗರದಂಚಿನ ಚಿಪಗಿ ನಾಕಾದಿಂದ ಮಳಲಗಾಂವವರೆಗೆ ಸಮಸ್ಯೆ ಇದೆ. ಕಿರು ಸೇತುವೆಗಳು ಪ್ರಾಣಕ್ಕೆ ಕಂಟಕವಾಗಿವೆ. ಅಪಘಾತಗಳು ಸಂಭವಿಸುತ್ತಿದ್ದರೂ, ನಿರ್ಲಕ್ಷ್ಯ ವಹಿಸಿದೆ’ ಎಂದರು.

ಸ್ಥಳಕ್ಕೆ ಭೇಟಿ ನೀಡಿದ್ದ ಪ್ರಾಧಿಕಾರದ ಯೋಜನಾ ನಿರ್ದೇಶಕ ಶಿವಕುಮಾರ, ‘ಮೇ 7ರಂದು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ ನಡೆಸುವುದರ ಜೊತೆಗೆ ಬಿಸಲಕೊಪ್ಪ ಪಂಚಾಯಿತಿಗೆ ಭೇಟಿ ನೀಡಿ, ಅಹವಾಲು ಆಲಿಸುವೆ’ ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ಕೊನೆಗೊಂಡಿತು.

ಶಿರಸಿ–ಹಾವೇರಿ ಹೆದ್ದಾರಿ ಕಾಮಗಾರಿ ವಿಳಂಬ ಖಂಡಿಸಿ ಸೋಮವಾರ ಶಿರಸಿ ತಾಲ್ಲೂಕಿನ ಬಿಸಲಕೊಪ್ಪದಲ್ಲಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

‘ಫಲಿತಾಂಶ ಘೋಷಿಸಲು ಸೂಚನೆ ಇತ್ತು’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆ ನಂತರ ಡಿ.ಎನ್. ಜೀವರಾಜ್ ಅಥವಾ ಟಿ.ಡಿ. ರಾಜೇಗೌಡ ಅವರು ಪಡೆಯುವ ಮತಗಳಲ್ಲಿ ವ್ಯತ್ಯಾಸ ಕಂಡುಬಂದರೆ ಫಲಿತಾಂಶ ಘೋಷಣೆ ಮಾಡಬೇಕು ಎಂದು ಹೈಕೋರ್ಟ್ ಸೂಚನೆ ನೀಡಿತ್ತು.

2023ರಲ್ಲಿ ಎಣಿಕೆ ವೇಳೆ ತಿರಸ್ಕೃತಗೊಂಡಿದ್ದ 279 ಮತಗಳಲ್ಲಿ ಯಾವುದಾದರೂ ಮತ ಮರು ಎಣಿಕೆ ವೇಳೆ ಮಾನ್ಯವಾದರೆ ಅವುಗಳನ್ನು ಹಿಂದೆಯೇ ಸಿಂಧುವಾಗಿದ್ದ ಮತಗಳ ಜತೆಗೆ ಸೇರಿಸಿ, ಎಲ್ಲ ಅಂಚೆ ಮತಗಳನ್ನು ಎಣಿಕೆ ಮಾಡಬೇಕು’ ಎಂದು ಆದೇಶದಲ್ಲಿ ತಿಳಿಸಿತ್ತು.

ಶನಿವಾರ (ಮೇ 2) ಬೆಳಿಗ್ಗೆ ಆರಂಭವಾಗಿದ್ದ ಮತ ಎಣಿಕೆ ರಾತ್ರಿ 2 ಗಂಟೆ ತನಕವೂ ನಡೆಯಿತು. ಮತಪತ್ರಗಳನ್ನು ಸ್ಟ್ರಾಂಗ್ ರೂಮಿಗೆ ತಲುಪಿಸಿದ ನಂತರ ಭಾನುವಾರ ಬೆಳಗಿನ ಜಾವ 3 ಗಂಟೆ ಸುಮಾರಿನಲ್ಲಿ ಚುನಾವಣಾಧಿಕಾರಿ ಗೌರವಕುಮಾರ್ ಶೆಟ್ಟಿ ಮಾಧ್ಯಮಗಳಿಗೆ ವಿವರ ನೀಡಿದ್ದರು.

‘ಚುನಾವಣಾ ಆಯೋಗಕ್ಕೆ ವರದಿ ಕಳುಹಿಸಲಾಗಿದೆ. ಫಲಿತಾಂಶ ಘೋಷಣೆಗೆ ನನಗೆ ಸ್ಪಷ್ಟ ನಿರ್ದೇಶನ ಇಲ್ಲ. ಎಲೆಕ್ಟ್ರಾನಿಕ್ ಮತಯಂತ್ರಗಳ ಮತಗಳನ್ನು ನಾನು ಎಣಿಕೆ ಮಾಡಿಲ್ಲ. ಅಂಚೆ ಮತಗಳನ್ನಷ್ಟೇ ಎಣಿಕೆ ಮಾಡಿ ಫಲಿತಾಂಶ ಘೋಷಣೆ ಮಾಡಲು ಆಗುವುದಿಲ್ಲ. ನ್ಯಾಯಾಲಯದಲ್ಲಿ ಫಲಿತಾಂಶ ಘೋಷಣೆಯಾಗಲಿದೆ’ ಎಂದೂ ಸ್ಪಷ್ಟಪಡಿಸಿದ್ದರು.

ಆದರೆ, ಭಾನುವಾರ ರಾತ್ರಿ ವೇಳೆಗೆ ಫಲಿತಾಂಶ ಘೋಷಿಸಿದ ಚುನಾವಣಾಧಿಕಾರಿ, ಸೋಮವಾರ ಬೆಳಿಗ್ಗೆ ಡಿ.ಎನ್.ಜೀವರಾಜ್ ಅವರಿಗೆ ಪ್ರಮಾಣಪತ್ರ ವಿತರಣೆ ಮಾಡಿದರು.

ಮರು ಮತ ಎಣಿಕೆಗೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ, ‘ಈಗಿರುವ ಫಲಿತಾಂಶ ವ್ಯತ್ಯಾಸವಾದರೆ ಆಯೋಗದ ಅನುಮತಿ ಪಡೆದು ಘೋಷಣೆ ಮಾಡಲಾಗುವುದು’ ಎಂದೂ ತಿಳಿಸಿದ್ದರು.

ಈ ಕುರಿತು ಸ್ಪಷ್ಟನೆ ಪಡೆಯಲು ಗೌರವಕುಮಾರ್ ಶೆಟ್ಟಿ ಅವರಿಗೆ ಹಲವು ಬಾರಿ ಕರೆ ಮಾಡಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ರಾಜೇಗೌಡ ಹೆಸರಿನ ಫಲಕ ತೆರವು; ಮತ್ತೆ ಅಳವಡಿಕೆ

ಚಿಕ್ಕಮಗಳೂರು: ನರಸಿಂಹರಾಜಪುರ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಶಾಸಕರ ಕಚೇರಿ ಮುಂದಿದ್ದ ಟಿ.ಡಿ.ರಾಜೇಗೌಡ ಹೆಸರಿನ ಫಲಕವನ್ನು ಕೆಲವರು ಕಿತ್ತು ಹಾಕಿದ್ದು, ವಿರೋಧದ ಬಳಿಕ ಮತ್ತೆ ಅಳವಡಿಸಲಾಗಿದೆ.

ವೆಲ್ಡಿಂಗ್ ಕೆಲಸಗಾರರನ್ನು ಕರೆಸಿ ಕಬ್ಬಿಣದ ಫಲಕ ಉರುಳಿಸಿದ್ದು, ಆ ವೇಳೆ ‘ಜೈಶ್ರೀರಾಮ್’ ಘೋಷಣೆ ಕೂಗಿರುವ ವಿಡಿಯೊ ಹರಿದಾಡುತ್ತಿದೆ. ಇದಕ್ಕೆ ಕಾಂಗ್ರೆಸ್ ಮುಖಂಡರು ವಿರೋಧ ವ್ಯಕ್ತಪಡಿಸಿದ ಬಳಿಕ, ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಮತ್ತೆ ಅಳವಡಿಕೆ ಮಾಡಿದ್ದಾರೆ.

ತಾಲ್ಲೂಕು ಪಂಚಾಯಿತಿ ಕಚೇರಿ ಬಳಿ ಅಳವಡಿಕೆ ಮಾಡಿದ್ದ ಫಲಕವನ್ನು ತೆಗೆದಿರುವುದು

‘ಜೀವರಾಜ್ ಶಾಸಕರಾಗಿ ಪ್ರಮಾಣವಚನ ಸ್ವೀಕರಿಸುವ ಮುನ್ನವೇ ಅವರ ಕಾರ್ಯಕರ್ತರು ದಬ್ಬಾಳಿಕೆ ಆರಂಭಿಸಿದ್ದಾರೆ. ಇಂಥ ದಬ್ಬಾಳಿಕೆ, ದೌರ್ಜನ್ಯವನ್ನು ಕ್ಷೇತ್ರದ ಜನ ಸಹಿಸುವುದಿಲ್ಲ’ ಎಂದು ತಾಲ್ಲೂಕು ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ರತನ್‌ಗೌಡ ಹೇಳಿದ್ದಾರೆ.

ಬಸ್‌ಗೆ ಬೆಂಕಿ ಪ್ರಯಾಣಿಕರು ಪಾರು

ಹಾವೇರಿ: ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ದೇವರಗುಡ್ಡ ಬಳಿ ಕೆಎಸ್‌ಆರ್‌ಟಿಸಿ ‘ಪಲ್ಲಕ್ಕಿ’ ಬಸ್‌ಗೆ ಸೋಮವಾರ ತಡರಾತ್ರಿ ಬೆಂಕಿ ಹೊತ್ತಿಕೊಂಡಿದ್ದು, ಪೂರ್ಣ ಸುಟ್ಟು ಕರಕಲಾಗಿದೆ.

ಬಸ್‌ನಲ್ಲಿದ್ದ 17 ಮಂದಿ ಪಾರಾಗಿದ್ದಾರೆ. ಈ ಬಸ್ ‘ದೇವರಗುಡ್ಡ–ಗುತ್ತಲ ಮಾರ್ಗವಾಗಿ ಗದಗಕ್ಕೆ ಹೋಗುತ್ತಿತ್ತು.

ಬ್ರೇಕ್ ಹಾಕಿದಾಗ ಚಕ್ರಗಳಿಂದ ಬೇರೆ ಶಬ್ದ ಬರುತ್ತಿದೆ ಎಂದು ಪ್ರಯಾಣಿಕರೊಬ್ಬರು ಚಾಲಕನ ಗಮನಕ್ಕೆ ತಂದರು. ಹೊಗೆ ಬರುತ್ತಿದ್ದುದನ್ನು ಗಮನಿಸಿ ಪ್ರಯಾಣಿಕರನ್ನು ಇಳಿಸಲಾಗಿದೆ.

ಬೆಂಕಿಗೆ ಆಹುತಿಯಾದ ಬಸ್

ಧಾರಾಕಾರ ವರ್ಷಧಾರೆಗೆ ಕುಂದಾನಗರಿಯಲ್ಲಿ ಉರುಳಿದ ಮರಗಳು

ಮೈಸೂರು, ಬೆಳಗಾವಿಯಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರ ಹಾಗೂ ತಾಲ್ಲೂಕಿನ ವಿವಿಧೆಡೆ ಮಂಗಳವಾರ ಸಂಜೆ ಧಾರಾಕಾರ ಮಳೆ ಹಾಗೂ ಬಿರುಗಾಳಿ ಪರಿಣಾಮ 6 ಮರಗಳು, 3 ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ಇಲ್ಲಿನ ಜಿಲ್ಲಾಸ್ಪತ್ರೆ ರಸ್ತೆ, ಮಾರುಕಟ್ಟೆ ಪ್ರದೇಶ ಸೇರಿ ವಿವಿಧೆಡೆ ಮರಗಳು ಬುಡಸಮೇತ ಕಿತ್ತು ಬಿದ್ದಿವೆ.

ಶಾಹೂನಗರದಲ್ಲಿ ಮರದ ಪಕ್ಕದಲ್ಲೇ ಆಟವಾಡುತ್ತಿದ್ದ ಮಕ್ಕಳು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಜಿಲ್ಲಾಸ್ಪತ್ರೆ ರಸ್ತೆಯಲ್ಲಿ ಜನಜಂಗುಳಿ ಇದ್ದರೂ ಮರದ ಅರ್ಧ ಭಾಗ ಮುರಿದು ಬೀಳುವ ಸೂಚನೆ ಕಂಡ ತಕ್ಷಣ ಜನ ಸುರಕ್ಷಿತ ಸ್ಥಳಕ್ಕೆ ಓಡಿ ಪಾರಾಗಿದ್ದಾರೆ.

ಬೆಳಗಾವಿಯ ಮಾರುಕಟ್ಟೆ ಪ್ರದೇಶದಲ್ಲಿ ಮಳೆ ನೀರು ಹೊಳೆಯಂತೆ ಹರಿಯಿತು –ಪ್ರಜಾವಾಣಿ ಚಿತ್ರ

ಮರಗಳು ಉರುಳಿದ ಪರಿಣಾಮ ವಾಹನ ಸಂಚಾರ ವ್ಯತ್ಯಯಗೊಂಡಿತು. ಮಾರುಕಟ್ಟೆ ರಸ್ತೆ ಹೊಳೆಯಂತಾಗಿತ್ತು. ನೀರಿನ ರಭಸಕ್ಕೆ ರಸ್ತೆ ಮೇಲಿದ್ದ ಸ್ಕೂಟರ್‌ಗಳು ತೇಲಿಹೋದವು.

ಕಾಫಿ ಬೆಳೆಗಾರರು, ರೈತರಿಗೆ ಸಂತಸ

ಮೈಸೂರು: ಮೈಸೂರು ಭಾಗದ ಮಡಿಕೇರಿ ತಾಲ್ಲೂಕು ಹಾಗೂ ಹಾಸನ ಜಿಲ್ಲೆಯ ಅರಸೀಕೆರೆ, ಹೊಳೆನರಸೀಪುರ, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಸುತ್ತಮುತ್ತ ಮಂಗಳವಾರ ಭಾರಿ ಗುಡುಗು, ಸಿಡಿಲು ಅಬ್ಬರಿಸಿ ಮಳೆ ಸುರಿಯಿತು.

ಕೊಡಗು ಜಿಲ್ಲೆಯಲ್ಲಿ ಬಿಸಿಲಿನ ಬೇಗೆಯಿಂದ ಕಂಗೆಟ್ಟಿದ್ದ ಕಾಫಿ ಬೆಳೆಗಾರರು ಹಾಗೂ ರೈತರ ಮೊಗದಲ್ಲಿ ಮಳೆ ಮಂದಹಾಸ ಮೂಡಿಸಿದೆ.

‘ತಾಯಿ ಆರೈಕೆ ಮಗನ ಕಾನೂನಾತ್ಮಕ ಜವಾಬ್ದಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎರಡನೇ ಪತ್ನಿ ಹಾಗೂ ಆಕೆಗೆ ಜನಿಸಿದ ಮಕ್ಕಳನ್ನು ಪೋಷಣೆ ಮಾಡುವ ಸಾಮರ್ಥ್ಯ ಹೊಂದಿರುವ ವ್ಯಕ್ತಿ, ತನ್ನ ಮೊದಲ ಪತ್ನಿ ಮತ್ತು ಆಕೆಯ ಮಕ್ಕಳು ಹಾಗೂ ವೃದ್ಧ ತಾಯಿಗೆ ಜೀವನಾಂಶ ನೀಡಲು ಹಣವಿಲ್ಲ ಎಂಬ ಕಾರಣ ನೀಡಲು ಕಾನೂನಿನ ಅವಕಾಶವಿಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ಮೊದಲ ಪತ್ನಿ ಮತ್ತು ಆಕೆಯ ಮಕ್ಕಳಿಗೆ ತಿಂಗಳಿಗೆ ₹30 ಸಾವಿರ ಜೀವನಾಂಶ ನೀಡಬೇಕು ಎಂದು ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ಪತಿಯೊಬ್ಬರು (43) ಸಲ್ಲಿಸಿದ್ದ ಪುನರಾವಲೋಕನ ಅರ್ಜಿ (ಆರ್‌ಪಿ–ಎಫ್‌ಸಿ 100139/2025) ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಬಿ.ಗೀತಾ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರ 74 ವರ್ಷದ ವೃದ್ಧ ತಾಯಿ ಮೆಸ್ ಒಂದರಲ್ಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ’ ಎಂಬ ಅಂಶವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, ‘ತಾಯಿಗೆ ಆದಾಯವಿದ್ದರೂ ಅಥವಾ ಆಕೆ ಅನಾರೋಗ್ಯದಿಂದ ಬಳಲುತ್ತಿದ್ದರೂ ಮಗನಾಗಿ ಆಕೆಯನ್ನು ನೋಡಿಕೊಳ್ಳುವುದು ಆತನ ಕಾನೂನಾತ್ಮಕ ಜವಾಬ್ದಾರಿ. ಹಾಗಾಗಿ, ಅರ್ಜಿದಾರ ಪ್ರತಿ ತಿಂಗಳು ₹17,500 ಅನ್ನು ಮೊದಲ ಹೆಂಡತಿಯ ಕುಟುಂಬ ಮತ್ತು ತಾಯಿಗೆ ನೀಡಬೇಕು’ ಎಂದು ಆದೇಶಿಸಿದೆ.

ಬೆಳಗಾವಿ ಕೌಟುಂಬಿಕ ಪ್ರಧಾನ ನ್ಯಾಯಾಲಯದ ಆದೇಶವನ್ನು ಮಾರ್ಪಾಡು ಮಾಡಿರುವ ನ್ಯಾಯಪೀಠ, ತಿಂಗಳಿಗೆ ₹30 ಸಾವಿರ ಜೀವನಾಂಶದ ಮೊತ್ತವನ್ನು ಕಡಿಮೆ ಮಾಡಿ ಆದೇಶಿಸಿದೆ.

ಆರ್‌ಜಿಯುಎಚ್‌ಎಸ್ ನಿರ್ಣಯ ರದ್ದು

ಬೆಂಗಳೂರು: ಕಾಲೇಜುಗಳ ಮಾನ್ಯತೆ ಮುಂದುವರಿಕೆಗೆ ಸಂಬಂಧಿಸಿದಂತೆ ಸೆನೆಟ್ ಸದಸ್ಯರನ್ನು, ಸ್ಥಳೀಯ ಪರಿಶೀಲನಾ ಸಮಿತಿಯಿಂದ (ಎಲ್‌ಐಸಿ) ಹೊರಗಿಡುವ ಕುರಿತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಸಿಂಡಿಕೇಟ್ ಸಭೆ ಕೈಗೊಂಡಿದ್ದ ನಿರ್ಣಯವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಸೆನೆಟ್ ಸದಸ್ಯರು 2024ರಲ್ಲಿ ಕೈಗೊಂಡಿದ್ದ ನಿರ್ಣಯ ಪ್ರಶ್ನಿಸಿ ಜೆ.ನಂದೀಶ್ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತು ಆದೇಶಿಸಿದೆ.

‘ಕಾಲೇಜುಗಳ ಮಾನ್ಯತೆ ಮುಂದುವರಿಸಲು ಹಾಗೂ ಹೊಸ ಕಾಲೇಜಿಗೆ ಮಾನ್ಯತೆ ನೀಡುವ ಸಂಪೂರ್ಣ ಕಾರ್ಯವಿಧಾನವನ್ನು ಎಲ್‌ಐಸಿ ಅನುಸರಿಸಬೇಕು. ಒಂದು ವೇಳೆ ಸೆನೆಟ್ ಸದಸ್ಯರನ್ನು ಹೊರಗಿಡುವ ನಿರ್ಧಾರ ಕೈಗೊಂಡರೆ ಅದು ಪ್ರಕ್ರಿಯೆಯ ಅಡಿಪಾಯದ ಮೇಲೆ ಪರಿಣಾಮ ಬೀರುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಶಾಸನವನ್ನು ತಿದ್ದುಪಡಿ ಮಾಡಲು ಅಥವಾ ರದ್ದುಗೊಳಿಸಲು, ಸಿಂಡಿಕೇಟ್ ತನ್ನ ಪ್ರಸ್ತಾವನೆಯನ್ನು ಒಪ್ಪಿಗೆ ನೀಡುವ ಅಧಿಕಾರ ಹೊಂದಿರುವ ಸೆನೆಟ್‌ಗೆ ಸಲ್ಲಿಸಬೇಕು. ನಂತರ ಸೆನೆಟ್ ಶಿಫಾರಸಿನೊಂದಿಗೆ ಅಂತಹ ನಿರ್ಣಯದ ಒಪ್ಪಿಗೆ ಪಡೆಯಲು ರಾಜ್ಯ ಸರ್ಕಾರದ ಮುಂದಿಡಬೇಕಾಗುತ್ತದೆ. ಆದರೆ ಇಲ್ಲಿ ಆ ನಿಯಮವನ್ನು ಪಾಲನೆ ಮಾಡಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

ನೂರ್ 'ಸೂಪರ್'
ನವದೆಹಲಿಯಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬೌಲರ್ ನೂರ್ ಅಹಮದ್ (22ಕ್ಕೆ2) ಅವರು ಡೆಲ್ಲಿ ಕ್ಯಾಪಿಟಲ್ಸ್ ಎದುರು ಮಿಂಚಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸೆನ್ಸೆಕ್ಸ್ 77,017 | ನಿಫ್ಟಿ 24,032 | $/₹ 95.18

ಸರ್ಕಾರ ರಚನೆ ಕಸರತ್ತು ಶುರು

ಪಶ್ಚಿಮ ಬಂಗಾಳದಲ್ಲಿ ಹೀನಾಯ ಸೋಲು ಕಂಡಿರುವ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ. ಇತ್ತ ತಮಿಳುನಾಡಿನಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ಜೋಸೆಫ್ ವಿಜಯ್ ಸರ್ಕಾರ ರಚನೆಗೆ ಅವಕಾಶ ಕೋರಿ ಹಕ್ಕು ಮಂಡಿಸಿದ್ದಾರೆ. ಕೇರಳದಲ್ಲಿ ಬಹುಮತ ಪಡೆದಿರುವ ಯುಡಿಎಫ್ ಮೈತ್ರಿಕೂಟದ ಮುಖ್ಯಮಂತ್ರಿ ಆಯ್ಕೆಗೆ ಕಾಂಗ್ರೆಸ್ ಕಸರತ್ತು ನಡೆಸುತ್ತಿದೆ

ಹಕ್ಕು ಮಂಡಿಸಿದ ವಿಜಯ್

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಸಂಸ್ಥಾಪಕ ಜೋಸೆಫ್ ವಿಜಯ್ ಅವರು ಸರ್ಕಾರ ರಚಿಸಲು ಮಂಗಳವಾರ ಹಕ್ಕು ಮಂಡಿಸಿದ್ದಾರೆ.

'ಟಿವಿಕೆ 108 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಏಕೈಕ ದೊಡ್ಡ ಪಕ್ಷವಾಗಿರುವುದರಿಂದ ಸರ್ಕಾರ ರಚಿಸಲು ನಮ್ಮನ್ನು ಆಹ್ವಾನಿಸಬೇಕು' ಎಂದು ರಾಜ್ಯಪಾಲರನ್ನು ಕೋರಿದ್ದಾರೆ.

'ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಲು ಅವಕಾಶ ಕೊಡುವಂತೆ ಕೋರುತ್ತಿದ್ದೇನೆ' ಎಂದು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರಿಗೆ ಇ–ಮೇಲ್ ಮೂಲಕ ಮನವಿ ಮಾಡಿಕೊಂಡಿದ್ದಾರೆ.

ವಿಜಯ್

ಬುಧವಾರ ಅವರು ರಾಜ್ಯಪಾಲರನ್ನು ಭೇಟಿ ಮಾಡಲಿದ್ದಾರೆ' ಎಂದು ಟಿವಿಕೆ ಮೂಲಗಳು ತಿಳಿಸಿವೆ.

ಟಿವಿಕೆ ಗೆಲುವಿನ ಬೆನ್ನಿಗೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ವಿಜಯ್ ಜೊತೆ ಮಾತನಾಡಿದ್ದು, ಬೆಂಬಲ ನೀಡುವ ನಿರೀಕ್ಷೆ ವ್ಯಕ್ತವಾಗಿದೆ.

ಶಾಸಕಾಂಗ ಪಕ್ಷದ ನಾಯಕ: ಚುನಾವಣೆಯಲ್ಲಿ ಅಭೂತಪೂರ್ವ ಸಾಧನೆ ಮಾಡಿರುವ ವಿಜಯ್ ಅವರು ಟಿವಿಕೆಯ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

▸11

'ಕಾಂಗ್ರೆಸ್ ಬೆಂಬಲ ಕೋರಿದ ಟಿವಿಕೆ'

'ವಿಜಯ್ ಅವರು ಸರ್ಕಾರ ರಚಿಸಲು ಕಾಂಗ್ರೆಸ್‌ನ ಬೆಂಬಲ ಕೋರಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

'ವಿಜಯ್ ಅವರ ಕೋರಿಕೆಯ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳುವಂತೆ ಪಕ್ಷದ ಹೈಕಮಾಂಡ್, ತಮಿಳುನಾಡು ಪ್ರದೇಶ ಕಾಂಗ್ರೆಸ್ ಸಮಿತಿಗೆ ನಿರ್ದೇಶನ ನೀಡಿದೆ' ಎಂದಿದ್ದಾರೆ.

ಕೆಳಗಿಳಿಯಲು ಒಲ್ಲದ ಮಮತಾ

ಕೋಲ್ಕತ್ತ (ಪಿಟಿಐ): 'ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಫಲಿತಾಂಶ 'ನೈಜ ಜನಾದೇಶವಲ್ಲ, ದೊಡ್ಡ ಪಿತೂರಿ' ಎಂದು ಆರೋಪಿಸಿರುವ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಲು ನಿರಾಕರಿಸಿದ್ದಾರೆ.

ಮಮತಾ ಬ್ಯಾನರ್ಜಿ

'ನಾನು ರಾಜೀನಾಮೆ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ, ನಾವು ಜನಾದೇಶದಿಂದ ಸೋತಿಲ್ಲ. ಒಳಸಂಚಿನಿಂದಾಗಿ ಸೋತಿದ್ದೇವೆ. ಆದ್ದರಿಂದ ರಾಜೀನಾಮೆ ನೀಡಲು ಲೋಕಭವನಕ್ಕೆ ಹೋಗುವುದಿಲ್ಲ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ನಾನು ಏಕೆ ರಾಜೀನಾಮೆ ನೀಡಬೇಕು? ನಾವು ಸೋತಿಲ್ಲ. ಮತಗಳನ್ನು ಲೂಟಿ ಮಾಡಲಾಗಿದೆ. ರಾಜೀನಾಮೆಯ ಪ್ರಶ್ನೆ ಎಲ್ಲಿಂದ ಉದ್ಭವಿಸುತ್ತದೆ? ಎಂದು ಪ್ರತಿಪಾದಿಸಿದರು.

ಆದರೂ ಸಾಂವಿಧಾನಿಕ ಆಯ್ಕೆಗಳು ಮುಕ್ತವಾಗಿವೆ ಎಂದು ಮಮತಾ ಸೂಚಿಸಿದರು. 'ಅವರು ಸಾಂವಿಧಾನಿಕ ನಿಯಮಗಳ ಅನುಸಾರ ಮುಂದಿನ ಕ್ರಮ ತೆಗೆದುಕೊಳ್ಳಬಹುದು' ಎಂದರು. ಆದರೆ, ಆ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಲಿಲ್ಲ.

'ಮತ ಎಣಿಕೆಯಲ್ಲಿ ದೊಡ್ಡ ಪ್ರಮಾಣದ ಅಕ್ರಮಗಳು ನಡೆದಿವೆ. ಸುಮಾರು 100 ಸ್ಥಾನಗಳನ್ನು 'ಲೂಟಿ ಮಾಡಲಾಗಿದೆ' ಎಂಬ ಆರೋಪವನ್ನು ಅವರು ಪುನರುಚ್ಚರಿಸಿದರು.

'ಈ ಚುನಾವಣೆಯಲ್ಲಿ ನಾವು ಬಿಜೆಪಿ ವಿರುದ್ಧ ಹೋರಾಡಿಲ್ಲ. ಬಿಜೆಪಿಗಾಗಿ ಕೆಲಸ ಮಾಡುತ್ತಿದ್ದ ಚುನಾವಣಾ ಆಯೋಗದ ವಿರುದ್ಧ ಹೋರಾಡಿದ್ದೇವೆ. ನನ್ನ ಇಡೀ ರಾಜಕೀಯ ಜೀವನದಲ್ಲಿ ಇಂತಹ ಚುನಾವಣೆಯನ್ನು ಎಂದಿಗೂ ನೋಡಿಲ್ಲ' ಎಂದರು.

ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ್ದರಿಂದ ತಮ್ಮ ಕಾರ್ಯತಂತ್ರದಲ್ಲಿ ಬದಲಾವಣೆಯಾಗಿರುವುದರ ಸೂಚನೆ ನೀಡಿದ ಮಮತಾ, ರಾಷ್ಟ್ರ ಮಟ್ಟದಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟವನ್ನು ಬಲಪಡಿಸುವತ್ತ ಗಮನಹರಿಸುವುದಾಗಿ ತಿಳಿಸಿದರು.

'ಇಂಡಿಯಾ ಮೈತ್ರಿಕೂಟದ ನಾಯಕರು ಒಗ್ಗಟ್ಟು ವ್ಯಕ್ತಪಡಿಸಲು ನನಗೆ ಕರೆ ಮಾಡಿದ್ದಾರೆ. ಸೋನಿಯಾ ಮತ್ತು ರಾಹುಲ್ ಗಾಂಧಿ ನನ್ನೊಂದಿಗೆ ಮಾತನಾಡಿದ್ದಾರೆ' ಎಂದರು.

▸11

ಕೇರಳಂ: ಮೂವರಲ್ಲಿ ಯಾರಿಗೆ ಸಿ.ಎಂ ಕುರ್ಚಿ?

ರಮೇಶ್ ಚೆನ್ನಿತ್ತಲ


ವಿ.ಡಿ. ಸತೀಶನ್


ವೇಣುಗೋಪಾಲ್

ತಿರುವನಂತಪುರ (ಪಿಟಿಐ): ಕೇರಳಂನಲ್ಲಿ ಚುನಾವಣಾ ವಿಜಯೋತ್ಸವದ ನಡುವೆಯೇ, ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದನ್ನು ನಿರ್ಧರಿಸಲು ಯುಡಿಎಫ್ ಮುಖಂಡರು ಕಸರತ್ತು ನಡೆಸಿದ್ದಾರೆ.

ದಶಕಗಳ ಬಳಿಕ ಮರಳಿ ಅಧಿಕಾರ ಲಭಿಸಿರುವುದರಿಂದ ಮುಖ್ಯಮಂತ್ರಿ ಆಯ್ಕೆಯೂ ಸೇರಿ ಆಡಳಿತದಲ್ಲಿ ತೀವ್ರ ಎಚ್ಚರಿಕೆಯಿಂದ ಅಡಿ ಇರಿಸಲು ಮುಖಂಡರು ನಿರ್ಧರಿಸಿದ್ದಾರೆ.

ಕಾಂಗ್ರೆಸ್ 63 ಸ್ಥಾನಗಳನ್ನು ಗೆದ್ದಿರುವುದರಿಂದ ಮುಖ್ಯಂತ್ರಿ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಮಿತ್ರ ಪಕ್ಷಗಳ ಒತ್ತಡಕ್ಕೆ ಮಣಿಯುವ ಅಗತ್ಯವಿಲ್ಲ ಎಂದು ಮೂಲಗಳು ಹೇಳಿವೆ.

'ಈಗಾಗಲೇ ಕಾಂಗ್ರೆಸ್ ಮುಖಂಡರ ನಡುವೆ ಮುಂದಿನ ಹಂತದ ಬಗ್ಗೆ ಅನೌಪಚಾರಿಕ ಮಾತುಕತೆಗಳು ನಡೆದಿವೆ. ಈ ಗೆಲುವು ಕೇವಲ ರಾಜಕೀಯವಲ್ಲ, ಭಾವನಾತ್ಮಕವೂ ಆಗಿದೆ. ಜನರ ವಿಶ್ವಾಸ ಕಾಂಗ್ರೆಸ್ ಮೇಲೆ ಮರಳಿರುವುದರ ಸೂಚನೆ ಇದು. ಹೀಗಾಗಿ ಅಭ್ಯರ್ಥಿ ಆಯ್ಕೆಯೂ ಅಷ್ಟೇ ಸಮತೋಲಿತವಾಗಿರಬೇಕು' ಎಂದು ಹಿರಿಯ ಮುಖಂಡರು ಸಲಹೆ ನೀಡಿದ್ದಾರೆ.

ವಿರೋಧ ಪಕ್ಷದ ನಾಯಕರಾಗಿದ್ದ ವಿ.ಡಿ. ಸತೀಶನ್, ಹಿರಿಯ ಮುಖಂಡ ರಮೇಶ್ ಚೆನ್ನಿತ್ತಲ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಸಂಸದ ಕೆ.ಸಿ. ವೇಣುಗೋಪಾಲ್ ಹೆಸರುಗಳು ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಮುಖವಾಗಿ ಕೇಳಿಬರುತ್ತಿವೆ.

▸11

ಮಕ್ಕಳ ದುರ್ಬಳಕೆ, ದೌರ್ಜನ್ಯ ಎಸಗಿದ ಆರೋಪ
ಜಾಮೀನು ಪಡೆದ ವಚನಾನಂದ ಶ್ರೀ

ಪ್ರಜಾವಾಣಿ ವಾರ್ತೆ

ಹರಿಹರ: ಮಕ್ಕಳ ಮೇಲೆ ದೌರ್ಜನ್ಯ ಹಾಗೂ ಅವರ ದುರ್ಬಳಕೆಯ ಆರೋಪ ಎದುರಿಸುತ್ತಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪದಚ್ಯುತ ಪೀಠಾಧಿಪತಿ ವಚನಾನಂದ ಸ್ವಾಮೀಜಿ ಅವರು ಮಂಗಳವಾರ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ.

ಮಠದ ವಸತಿ ನಿಲಯದಲ್ಲಿ ಮಕ್ಕಳ ಮೇಲೆ ದೌರ್ಜನ್ಯ ನಡೆಸಿರುವುದಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುವ ಮುನ್ಸೂಚನೆ ಅರಿತ ಸ್ವಾಮೀಜಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ– 482ರ ಅಡಿ ನಿರೀಕ್ಷಣಾ ಜಾಮೀನು ಕೋರಿ ಏ.21ರಂದು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಅವರಿಗೆ ಜಾಮೀನು ಮಂಜೂರು ಮಾಡಿದೆ.

ವಚನಾನಂದ ಸ್ವಾಮೀಜಿ

ಸರ್ಕಾರಿ ವಕೀಲರ ಆಕ್ಷೇಪಣೆ ಹಾಗೂ ಪ್ರತಿವಾದ ಆಲಿಸಿದ ನ್ಯಾಯಾಲಯ, 'ತನಿಖೆಗೆ ಸಂಪೂರ್ಣ ಸಹಕಾರ ನೀಡಬೇಕು, ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಮತ್ತು ನ್ಯಾಯಾಲಯದ ಅನುಮತಿಯಿಲ್ಲದೆ ವ್ಯಾಪ್ತಿ ಪ್ರದೇಶ ಬಿಟ್ಟು ಹೋಗಬಾರದು' ಎಂಬ ಷರತ್ತುಗಳನ್ನು ವಿಧಿಸಿ ಆದೇಶ ನೀಡಿದೆ.

ಪ್ರಕರಣದ ಹಿನ್ನೆಲೆ: ಮಕ್ಕಳ ಮೇಲಿನ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿದಂತೆ ಏಪ್ರಿಲ್ 17ರಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಮಂಜುಳಾ ಮಹೇಶ್ ನೇತೃತ್ವದ ತಂಡ ಮಠಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು.

'ಸ್ವಾಮೀಜಿ ಅವರು ಮಸಾಜ್ ಮಾಡಿಸಿಕೊಳ್ಳುತ್ತಾರೆ, ಹೊಡೆಯುತ್ತಾರೆ, ನಿಂದಿಸುತ್ತಾರೆ ಹಾಗೂ ಅನಾರೋಗ್ಯ ಉಂಟಾದಾಗ ಔಷಧ ಕೊಡುವುದಿಲ್ಲ' ಎಂದು ಸಮಿತಿ ಎದುರು ಮಕ್ಕಳು ಅಳಲು ತೋಡಿಕೊಂಡಿದ್ದರು.

ಸಮಿತಿ ಸದಸ್ಯರು ಮಕ್ಕಳ ವಾಸದ ಕೊಠಡಿ, ಗುರು ನಿವಾಸ ಹಾಗೂ ಭೋಜನಾಲಯಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಈ ಬೆಳವಣಿಗೆಯ ಬೆನ್ನಲ್ಲೇ ಶ್ರೀಗಳಿಗೆ ಬಂಧನದ ಭೀತಿ ಎದುರಾಗಿತ್ತು.

'ಮಠದಲ್ಲಿ ಶಿಕ್ಷಣ ಪಡೆಯುತ್ತಿದ್ದವರಲ್ಲಿ ಮೂವರು ಬಾಲಕರು ಸ್ವಾಮೀಜಿ ವಿರುದ್ಧ ಆರೋಪ ಮಾಡಿದ್ದಾರೆ. ಮಕ್ಕಳ ಕಲ್ಯಾಣ ಸಮಿತಿ ಈ ಬಾಲಕರೊಂದಿಗೆ 3 ಹಂತಗಳಲ್ಲಿ ಸಮಾಲೋಚನೆ ನಡೆಸುತ್ತದೆ. ಈ ಪ್ರಕ್ರಿಯೆ ಪೂರ್ಣಗೊಳ್ಳುವ ಹಂತಕ್ಕೆ ಬಂದಿದ್ದು, ಬಳಿಕ ತೀರ್ಮಾನ ಕೈಗೊಳ್ಳಲಾಗುತ್ತದೆ. ಸ್ವಾಮೀಜಿ ವಿರುದ್ಧ ಸಮಿತಿ ಈವರೆಗೆ ದೂರು ದಾಖಲಿಸಿಲ್ಲ' ಎಂದು ಮೂಲಗಳು ಮಾಹಿತಿ ನೀಡಿವೆ.

ಮೇ 4ರಿಂದ ಹರಿಹರದ ಹೊರವಲಯದಲ್ಲಿರುವ ಮಠದ ಆವರಣದಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಲೆಕ್ಕಪತ್ರದ ವಿವಾದ ಹಾಗೂ ಮಠದ ಆಡಳಿತಾತ್ಮಕ ಸಂಘರ್ಷ ಇನ್ನೂ ಬೂದಿ ಮುಚ್ಚಿದ ಕೆಂಡದಂತೆಯೇ ಮುಂದುವರಿದಿದೆ.

ಶೃಂಗೇರಿ ಫಲಿತಾಂಶ: ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರುಎಣಿಕೆ ನಂತರ ಬಿಜೆಪಿಯ ಡಿ.ಎನ್.ಜೀವರಾಜ್ ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಿಸಿದ ನಂತರ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷ ಬಿಜೆಪಿ ಮಧ್ಯೆ ರಾಜಕೀಯ ಜಟಾಪಟಿ ತೀವ್ರಗೊಂಡಿದೆ.

ಇದರ ಬೆನ್ನಲ್ಲೇ ಜಂಟಿ ಮಾಧ್ಯಮಗೋಷ್ಠಿ ನಡೆಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ತಪ್ಪು ಎಸಗಿರುವ ಜೀವರಾಜ್ ಮತ್ತು ಚುನಾವಣಾಧಿಕಾರಿ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಚುನಾವಣಾ ವೀಕ್ಷಕರ ಅನುಮತಿ ಪಡೆಯದೆ ಮತ್ತು ನ್ಯಾಯಾಲಯದ ಗಮನಕ್ಕೂ ತರದೆ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾಧಿಕಾರಿ ತರಾತುರಿಯಲ್ಲಿ ಘೋಷಣೆ ಮಾಡಿದ್ದಾರೆ. ಈ ಎಲ್ಲದರ ವಿರುದ್ಧ ಕಾನೂನು ಹೋರಾಟ ನಡೆಸುತ್ತೇವೆ ಎಂದು ಹೇಳಿದ್ದಾರೆ.

ಜೀವರಾಜ್

ಜೀವರಾಜ್ ಅವರು ಗೆಲುವು ಸಾಧಿಸಿದ್ದಾರೆ ಎಂದು ಘೋಷಿಸಿದ್ದರೂ ಅವರು ಪ್ರಮಾಣ ವಚನ ಸ್ವೀಕಾರಕ್ಕೆ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಈವರೆಗೂ ಅವಕಾಶ ನೀಡಿಲ್ಲ ಎಂದು ಆರೋಪಿಸಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಬಿಜೆಪಿ ನಿಯೋಗವು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ದೂರು ಸಲ್ಲಿಸಿದೆ. ಜೀವರಾಜ್ ಅವರಿಗೆ ನೀವೇ ಪ್ರಮಾಣ ವಚನ ಬೋಧಿಸಬೇಕು ಎಂದು ರಾಜ್ಯಪಾಲರಿಗೆ ನಿಯೋಗ ಮನವಿ ಮಾಡಿದೆ.

ಈ ಮಧ್ಯೆಯೇ, ಮತಗಳನ್ನು ತಿರುಚಿದ ಆರೋಪ ಆಧರಿಸಿ ಡಿ.ಎನ್.ಜೀವರಾಜ್ ಹಾಗೂ ಅಂದಿನ ಚುನಾವಣಾಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಅದಕ್ಕೆ ಹೈಕೋರ್ಟ್ ತಡೆ ನೀಡಿದೆ.

> **ಈ ಹಿಂದೆ ಮತ ಎಣಿಕೆ ಸಂದರ್ಭದಲ್ಲಿ ಎಲ್ಲವೂ ಸರಿಯಾಗಿದೆ ಎಂದು ಎಲ್ಲ ಪಕ್ಷಗಳ ಏಜೆಂಟರು ಒಪ್ಪಿಕೊಂಡು ಸಹಿ ಮಾಡಿದ್ದಾರೆ. ಈಗ ಮರು ಮತಎಣಿಕೆಯಲ್ಲಿ ವ್ಯತ್ಯಾಸ ಹೇಗೆ ಬಂದಿತು?**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಜೀವರಾಜ್ ಸೋತು ಎಂಟು ವರ್ಷ ಆಗಿದೆ. ಅವರ ಮಾತನ್ನು ಅಧಿಕಾರಿಗಳು ಕೇಳಲು ಸಾಧ್ಯವೇ? ಅಧಿಕಾರಿಗಳು ಮುಖ್ಯಮಂತ್ರಿಯ ಮಾತು ಕೇಳುತ್ತಾರೆ. ಈ ಬಗ್ಗೆ ಸಿಬಿಐ ತನಿಖೆಯಾಗಲಿ**
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಮ್ಯುಟೇಷನ್‌ಗಾಗಿ ₹2.5 ಲಕ್ಷ ಲಂಚ, ಸೆರೆ

ಪ್ರಜಾವಾಣಿ ವಾರ್ತೆ

ಜನವಾಡ (ಬೀದರ್ ಜಿಲ್ಲೆ): ಮನೆಯ ಮ್ಯುಟೇಷನ್ ನೀಡಲು ₹2.5 ಲಕ್ಷ ಲಂಚ ಪಡೆಯುತ್ತಿದ್ದ ಬೀದರ್ ತಾಲ್ಲೂಕಿನ ಮರಕುಂದಾ ಗ್ರಾಮ ಆಡಳಿತಾಧಿಕಾರಿ ಶಿವಕುಮಾರ, ಅವರ ಸಹಚರ ಶರಣಯ್ಯ ಸ್ವಾಮಿ ಮಂಗಳವಾರ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

ಶಿವಕುಮಾರ

ಮರಕುಂದಾ ಗ್ರಾಮದ ಮಹಾದೇವ ಶಾಂತಪ್ಪ ಅವರು ಮನೆಯ ಮ್ಯುಟೇಷನ್‌ಗಾಗಿ ಗ್ರಾಮ ಆಡಳಿತಾಧಿಕಾರಿ ಸಂಪರ್ಕಿಸಿದ್ದರು. ಇದಕ್ಕಾಗಿ ಶಿವಕುಮಾರ ಹಾಗೂ ಶರಣಯ್ಯ ಸ್ವಾಮಿ ₹5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಮಹಾದೇವ ಅವರು ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿದ ಲೋಕಾಯುಕ್ತ ಪೊಲೀಸರು, ಮರಕುಂದಾ ಗ್ರಾಮದ ಹೊರವಲಯದ ಧಾಬಾದಲ್ಲಿ ಮಹಾದೇವ ಅವರಿಂದ ಮುಂಗಡವಾಗಿ ₹2.5 ಲಕ್ಷ ಲಂಚ ಪಡೆಯುತ್ತಿದ್ದಾಗ ಆರೋಪಿಗಳನ್ನು ವಶಕ್ಕೆ ಪಡೆದರು.

ಲೋಕಾಯುಕ್ತ ಡಿವೈಎಸ್‌ಪಿ ಹನುಮಂತರಾಯ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಪಿ.ಐ ಅರ್ಜುನಪ್ಪ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ನಿಟ್ಟೂರು: ಬಂಡೆಗಲ್ಲು ಶಾಸನ ಪತ್ತೆ

ಪ್ರಜಾವಾಣಿ ವಾರ್ತೆ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ನಿಟ್ಟೂರು ಗ್ರಾಮದ ಸುಕ್ರದಪ್ಪನ ಬೆಟ್ಟದ ಬಳಿ ಹೊಲದಲ್ಲಿ ಬಂಡೆಗಲ್ಲು ಶಾಸನ ಪತ್ತೆಯಾಗಿದೆ.

ನಿಟ್ಟೂರಿನಲ್ಲಿರುವ ಅಶೋಕನ ಶಿಲಾಶಾಸನ ಪತ್ತೆಯಾಗಿರುವ ಸ್ಥಳದಿಂದ ಸುಮಾರು ಒಂದು ಕಿ.ಮೀ ದೂರದಲ್ಲಿರುವ ಈ ಬಂಡೆಗಲ್ಲು ಶಾಸನವನ್ನು ಸಂಶೋಧನಾರ್ಥಿಗಳಾದ ಅಶೋಕ್ ಅಬಕಾರಿ, ಮನೋಹರ ಸಿ.ಎಂ ಗುರುತಿಸಿ, ಕ್ಷೇತ್ರ ಅಧ್ಯಯನಕ್ಕೆ ಧಾರವಾಡದ ಲಿಪಿತಜ್ಞ ಮಾರುತಿ ಭಜಂತ್ರಿ ಹಾಗೂ ಹಿರೇಬೆಣಕಲ್ ಮಂಜುನಾಥ ದೊಡ್ಡಮನಿ ಅವರ ಗಮನಕ್ಕೆ ತಂದರು.

ಶಾಸನವು ಬಂಡೆಯೊಂದರ ಮೇಲೆ ಪ್ರಾಚೀನ ಲಿಪಿಯಲ್ಲಿ ಬರೆಯಲ್ಪಟ್ಟಿದ್ದು, ಏಳು ಸಾಲುಗಳಿವೆ. ಮೌರ್ಯರ ಆಳ್ವಿಕೆಯನ್ನು ಒಳಗೊಂಡಿರುವ ಪ್ರದೇಶವೆಂದು ಗುರುತಿಸಲಾಗಿತ್ತು. ಸದ್ಯ ಪತ್ತೆಯಾದ ಶಾಸನದ ಲಿಪಿಯ ಆಧಾರದ ಮೇಲೆ ಇದು ಏಳನೇ ಶತಮಾನ ಬಾದಾಮಿ ಚಾಲುಕ್ಯರ ಕಾಲದಿಂದ ರಾಷ್ಟ್ರಕೂಟರ ಕಾಲಘಟ್ಟಕ್ಕೆ ಸೇರಿದ್ದು ಎಂದು ಅಂದಾಜಿಸಲಾಗಿದೆ.

'ಇತಿಹಾಸ ಸಂಶೋಧಕ ಗಂಗಾವತಿಯ ಶರಣಬಸಪ್ಪ ಕೋಲ್ಕರ ಮಾರ್ಗದರ್ಶನದಲ್ಲಿ ಶಾಸನದ ಅಧ್ಯಯನ ನಡೆಸುತ್ತಿದ್ದು, ಶಾಸನದ ಕುರಿತು ಶೀಘ್ರವೇ ಮಾಹಿತಿ ಒದಗಿಸಲಾಗುವುದು' ಎಂದು ಲಿಪಿತಜ್ಞ ಮಾರುತಿ ಭಜಂತ್ರಿ ತಿಳಿಸಿದ್ದಾರೆ.


ಹೊಲದಲ್ಲಿ ಪತ್ತೆಯಾಗಿರುವ ಬಂಡೆಗಲ್ಲು ಶಾಸನ

ಇರಾನ್ ದಾಳಿ: ಮೂವರು ಭಾರತೀಯರಿಗೆ ಗಾಯ

ದುಬೈ (ಎಪಿ): ಹೊರ್ಮುಜ್ ಜಲಸಂಧಿಯನ್ನು ವಾಣಿಜ್ಯ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲು ಅಮೆರಿಕದ ಸೇನೆ ಭಾರಿ ಪ್ರಯತ್ನ ನಡೆಸಿರುವ ಬೆನ್ನಲ್ಲೇ, ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ಫುಜೈರಾಹ್ ಬಂದರಿನಲ್ಲಿರುವ ತೈಲ ಘಟಕವನ್ನು ಗುರಿಯಾಗಿಸಿ ಇರಾನ್ ಡ್ರೋನ್ ಮೂಲಕ ಮಂಗಳವಾರ ಸರಣಿ ದಾಳಿ ನಡೆಸಿದೆ.

ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದು, ಭಾರತ ಈ ದಾಳಿಯನ್ನು ಖಂಡಿಸಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಫುಜೈರಾಹ್ ಬಂದರಿನ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫುಜೈರಾಹ್ ಬಂದರಿನಲ್ಲಿನ ಯುಎಇಯ ಸಂಸ್ಕರಣ ವಲಯವು ಹೊರ್ಮುಜ್ ಜಲಸಂಧಿಯೊಂದಿಗೆ ಸಂಪರ್ಕ ಕಲ್ಪಿಸುವ ಪರ್ಯಾಯ ಕೊಳವೆ ಮಾರ್ಗವಾಗಿದೆ. ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಇರಾನ್ ನಿರ್ಬಂಧ ಹೇರಿದ ನಂತರ ಯುಎಇ ಈ ಮಾರ್ಗವನ್ನು ಪ್ರಮುಖವಾಗಿ ಅವಲಂಬಿಸಿತ್ತು.

'ಯುಎಇ ಮತ್ತು ಅಲ್ಲಿನ ತೈಲ ಘಟಕದ ಮೇಲೆ ದಾಳಿ ನಡೆಸುವ ಯಾವುದೇ ಯೋಜನೆಯನ್ನು ಇರಾನ್ ಹೊಂದಿಲ್ಲ' ಎಂದು ಇರಾನ್‌ನ ಸರ್ಕಾರಿ ಟಿವಿ ಈ ಮೊದಲು ವರದಿ ಮಾಡಿತ್ತು. ಆದರೆ, 'ಹೊರ್ಮುಜ್ ಮುಕ್ತಗೊಳಿಸಲು ಅಮೆರಿಕದ ಮುಂದಾಗಿದ್ದರಿಂದ ಡ್ರೋನ್ ದಾಳಿ ನಡೆಸಲಾಗಿದೆ' ಎಂದು ಮೂಲಗಳು ಹೇಳಿವೆ.

▸10

ಸ್ವೀಕಾರಾರ್ಹವಲ್ಲ: ಭಾರತದ ಖಂಡನೆ

'ಫುಜೈರಾಹ್ ಬಂದರಿನ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯರು ಗಾಯಗೊಂಡಿರುವ ಘಟನೆ ಸ್ವೀಕಾರಾರ್ಹವಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

▸10

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಪಿಐಎಲ್ ದುರ್ಬಳಕೆ: 'ಸುಪ್ರೀಂ' ಕಿಡಿ

ನವದೆಹಲಿ (ಪಿಟಿಐ): ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ದುರ್ಬಳಕೆ ಮಾಡಿಕೊಳ್ಳುತ್ತಿರುವ ಕುರಿತಂತೆ ಸುಪ್ರೀಂ ಕೋರ್ಟ್ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿದೆ.



'ಇವು ಈಗ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಾಗಿ ಉಳಿದಿಲ್ಲ. ಅವುಗಳು 'ಖಾಸಗಿ ಹಿತಾಸಕ್ತಿ ಅರ್ಜಿ', 'ಪ್ರಚಾರ ಹಿತಾಸಕ್ತಿ ಅರ್ಜಿ', 'ಪೈಸಾ ಆಸಕ್ತಿಯ ದಾವೆ' ಹಾಗೂ 'ರಾಜಕೀಯ ಹಿತಾಸಕ್ತಿ ವ್ಯಾಜ್ಯ'ಗಳಾಗಿವೆ' ಎಂದು ಹೇಳಿದೆ.

ವಿವರ ▸7

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ಮಳೆ ಬರುವ ಸಾಧ್ಯತೆ ಇದೆ

ಇದೇ 8ರಿಂದ ಮಾವು–ಹಲಸಿನ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಮೇ 8ರಿಂದ 17ರವರೆಗೆ ಕಬ್ಬನ್ ಉದ್ಯಾನದಲ್ಲಿ ಮಾವು, ಹಲಸಿನ ಹಣ್ಣುಗಳ ಪ್ರದರ್ಶನ, ಮಾರಾಟ ಮೇಳ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಿಗಮದ ಅಧ್ಯಕ್ಷ ಡಾ.ಬಿ.ಸಿ. ಮುದ್ದುಗಂಗಾಧರ್, 'ಸಹಜವಾಗಿ ಮಾಗಿದ ಹಣ್ಣುಗಳನ್ನು ಗ್ರಾಹಕರಿಗೆ ಪೂರೈಸುವ ಉದ್ದೇಶದಿಂದ ಮೇಳವನ್ನು ಆಯೋಜಿಸಲಾಗುತ್ತದೆ. ಇಲ್ಲಿ ರೈತರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕಕ್ಕೆ ಅವಕಾಶ ಕಲ್ಪಿಸಲಾಗಿದೆ. ವೈವಿಧ್ಯಮಯ ಮಾವು ಮತ್ತು ಹಲಸಿನ ಹಣ್ಣುಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶ ಇದೆ' ಎಂದು ಹೇಳಿದರು.

'ಮೇಳದಲ್ಲಿ ರಾಮನಗರ, ಚಿಕ್ಕಬಳ್ಳಾಪುರ, ಉತ್ತರ ಕನ್ನಡ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಮಾವು ಮತ್ತು ಹಲಸು ಬೆಳೆಗಾರರು ಭಾಗವಹಿಸಲಿದ್ದಾರೆ. 40ರಿಂದ 50 ಮಾವಿನ ತಳಿ ಮತ್ತು 10ರಿಂದ 12 ಹಲಸಿನ ತಳಿಗಳನ್ನು ಕಾಣಬಹುದು. ಮಾವು ಬೆಳೆಗಾರರಿಗೆ 50 ಹಾಗೂ ಹಲಸು ಬೆಳೆಗಾರರಿಗೆ 7 ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ' ಎಂದರು.

'ಈ ಬಾರಿ ರಾಜ್ಯದಲ್ಲಿ 1.45 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗಿದೆ. ಹವಾಮಾನ ವೈಪರೀತ್ಯದಿಂದ ಹೂ ಬಿಡುವ ಪ್ರಕ್ರಿಯೆ ತಡವಾಗಿದ್ದು, ವಿವಿಧ ಹಂತಗಳಲ್ಲಿ ಮಾವಿನ ಫಸಲು ಬರುವ ಸಾಧ್ಯತೆ ಇದ್ದು, ಮಾರುಕಟ್ಟೆಗೂ ತಡವಾಗಿ ಬರಲಿದೆ. ಹಣ್ಣುಗಳು ಲಭ್ಯವಾಗುವ ಅವಧಿಯೂ ಹೆಚ್ಚಾಗಲಿದೆ' ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ವೇದಮೂರ್ತಿ ಮಾತನಾಡಿ, 'ಭೌಗೋಳಿಕ ಮಾನ್ಯತೆ(ಜಿಐ) ಪಡೆದಿರುವ ಉತ್ತರ ಕನ್ನಡ ಜಿಲ್ಲೆಯ ಕರಿ ಇಶಾಡ್ ಮಾವು ಮೇಳದಲ್ಲಿ ಇರಲಿದೆ. ಬಾದಾಮಿ, ರಸಪುರಿ, ಮಲ್ಲಿಕಾ, ಸಿಂಧೂರ, ತೋತಾಪುರಿ, ದಶೇರಿ ಸೇರಿದಂತೆ ವಿವಿಧ ಮಾವು ತಳಿಗಳ ಹಣ್ಣುಗಳು ಮೇಳದಲ್ಲಿ ಮಾರಾಟಕ್ಕೆ ಲಭ್ಯ ಇರಲಿವೆ. ಹಲಸಿನಲ್ಲಿ ರುದ್ರಾಕ್ಷಿ, ಶಿವರಾತ್ರಿ, ಏಕಾದಶಿ ಮತ್ತು ತೂಬಗೆರೆ ತಳಿಯ ಹಣ್ಣು ಇರಲಿವೆ' ಎಂದರು.

'ಬೆಳೆಗಾರರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸಿ, ರಿಯಾಯಿತಿ ದರದಲ್ಲಿ ಗ್ರಾಹಕರಿಗೆ ರುಚಿಕರ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ' ಎಂದು ಹೇಳಿದರು.

'ಜಿಬಿಎ ವ್ಯಾಪ್ತಿಯ ಪೂರ್ವ, ಪಶ್ಚಿಮ, ಕೇಂದ್ರ, ಉತ್ತರ, ದಕ್ಷಿಣ ಭಾಗಗಳಲ್ಲಿ ಈ ಬಾರಿ ಮಾವು ಮೇಳಗಳನ್ನು ಆಯೋಜಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಈ ಬಗ್ಗೆ ಪಾಲಿಕೆಯ ಆಯುಕ್ತರೊಂದಿಗೆ ಮಾತನಾಡುತ್ತಿದ್ದೇವೆ' ಎಂದರು.

ಬಾರ್ಟನ್ ಪ್ರಶಸ್ತಿಗೆ ಸುಭಾನಿ ಶೇಖ್ ಆಯ್ಕೆ

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ಪ್ರತಿಷ್ಠಿತ 'ಬಾರ್ಟನ್ ಪ್ರಶಸ್ತಿ 2026'ಕ್ಕೆ ಹೈದರಾಬಾದ್‌ನ ವ್ಯಂಗ್ಯಚಿತ್ರಕಾರ ಸುಭಾನಿ ಶೇಖ್ ಅವರನ್ನು ಆಯ್ಕೆ ಮಾಡಿದೆ.

ಜೂನ್ 1 ರಂದು ನಡೆಯುವ ಸಂಸ್ಥೆಯ 25ನೇ ವಾರ್ಷಿಕೋತ್ಸವದಲ್ಲಿ ಸುಭಾನಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. 'ಅಂತರರಾಷ್ಟ್ರೀಯ ಮಾಯಾ ಕಾಮತ್ ಸ್ಮಾರಕ' ವ್ಯಂಗ್ಯಚಿತ್ರ ಸ್ಪರ್ಧೆಯ ವಿಜೇತರಿಗೂ ಬಹುಮಾನವನ್ನು ಇದೇ ಸಂದರ್ಭದಲ್ಲಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಸುಭಾನಿ ಶೇಖ್ ಅವರು 'ಡೆಕ್ಕನ್ ಕ್ರಾನಿಕಲ್' ಪತ್ರಿಕೆಯಲ್ಲಿ ವ್ಯಂಗ್ಯಚಿತ್ರಕಾರರಾಗಿ ಕೆಲಸ ಮಾಡುತ್ತಿದ್ದು, ಅನೇಕ ರಾಷ್ಟ್ರೀಯ , ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

PREMIER HIGH SCHOOL, SRIRAMPURAM (Near Mantri Mall) Requires Experienced Female Teachers for Nursery, Social Science, Hindi (Primary), Drawing, Craft & PE. Call: 9538836721/ 080-23421020

JANATHA EDUCATION SOCIETY®
VIVEKANANDA EDUCATIONAL INSTITUTIONS
Dr.Rajkumar Road, 2nd Stage, Rajajinagar, Bengaluru-55 Phone : 080-23371952 /6366733434

Applications are invited for the following Vacancies

PUBLIC SCHOOL-Kumbalgodu
- **PRIMARY ENGLISH TEACHER :** Any Degree with D.Ed. with 2 years' experience.
- **PRIMARY MATHEMATICS TEACHER :** Any Degree with D.Ed. with 2 years' experience.
- **HIGH SCHOOL ENGLISH TEACHER :** BA or MA in English with B.Ed. with 2 years' experience.
- **COMPUTER TEACHER / ICT :** BCA/MCA with 2yrs' exp.
- **DRAWING/ ARTS & CRAFT TEACHER :** Degree in Fine Arts with 0-2 years' experience.

DEGREE COLLEGE FOR WOMEN
- **PHYSICAL EDUCATION DIRECTOR :** B.PED, M.PED with 0-2 years of experience.

PU COLLEGE & PU COLLEGE FOR WOMEN
- **LECTURER** for CET Coaching- Physics, Mathematics and Biology – B.Ed, M.Sc with CET, 2-5 yrs' exp.
- **WEB DESIGNER :** Degree or Diploma in Web Design or Graphic Design additional design tool and Coral scripts

COLLEGE OF PHARMACY
- **ASSISTANT PROFESSOR :** Pharmacology Dept.- M.Pharm in Pharmacology with 0-3 years' experience.
- **ASSISTANT PROFESSOR :** Pharmaceutical Chemistry Dept.-M. Pharm in Pharmaceutical Chemistry with 0-3 years' experience.

INSTITUTE OF MANAGEMENT
- **ASSISTANT PROFESSOR :** BCA Dept.-BCA, MCA with 0-2 years' experience
- **ASSISTANT PROFESSOR** - English – MA in English with 2-3 years' experience.

- **ASSISTANT ENGINEER** - B.E in civil, minimum 5 years of experience in civil work.

Eligible candidates may send their BIODATA along with 2 passport size photos through registered post or in person to the **Hon.Secretary** to reach him within 10 days or email to **jobs@vivekanandacolleges.in**

H.C Bala krishna, Hon.President — Sri Appareddy Harish, Hon.Secretary

ST.FRANCIS COLLEGE | BENGALURU
Permanently Affiliated to Dr. Manmohan Singh Bengaluru City University
Accredited 'B++' Grade by NAAC | Approved by AICTE
P.B.No. 3417, 3rd Block, 8th Main, Koramangala, Bengaluru-560034.
Tel: 080-25531037/38, Cell Ph: 9481857854 / 9449260409
Website: www.stfranciscollege.edu.in

FACULTY RECRUITMENT
Applications are invited for the post of Associate/ Assistant Professors for the following departments

Departments	Specialization	Qualification & Experience
B.Com	Accounting & Finance/ Analytics	Master's Degree with NET/SLET/Ph.D in the relevant subjects with at least 55% marks in Master Degree and above 3 years of experience.
B.B.A.	Finance	
English		
Physical Education Asst. Director (Women)	Basket Ball, Hand Ball, Athletics	
B.C.A	Preference for AI/ ML/ Data Science	
B.V.A. (Visual Arts)	3D Animation with Visual Effects	

Job Location: **KORAMANGALA, BENGALURU**
Interested and Eligible Candidates may send their CV along with recent passport size photograph and copies of qualification and experience certificate to below given Email-ID:
admin@stfranciscollege.edu.in

Smt. Bylamma Educational & Charitable Trust (R)
HARWARD INTERNATIONAL SCHOOL
CBSE Affiliation No. 830335
Dasanapura, Tumkur Road, Bengaluru North 562162
ACADEMIC YEAR 2026-27
TGT, PRT — MATHS | SOCIAL STUDIES, COMPUTER SCIENCE, ART TEACHER, KANNADA | HINDI, LADY ACCOUNTANT, Transport Manager
WALK-IN 10-30 to 2-30
Eligible candidates mail your application with updated CV to : email: infoharwardints@gmail.com
Contact : 9880112833 / 9945230285

ANGELS HIGH School M.C.Layout, Vijayanagar, Bangalore. Required Experienced Teachers for Science and Maths for High School and Primary.8431812577/ 9986555788.

ದಿ ಸ್ಪೋರ್ಟ್ಸ್ ಸ್ಕೂಲ್
ಕನಕಪುರ ರಸ್ತೆ.
ಬೇಕಾಗಿದ್ದಾರೆ
PGT/TGT ಶಿಕ್ಷಕರು
CBSE ಮತ್ತು ಕಾಲೇಜು ವಿಭಾಗಗಳಿಗೆ ಯೋಗ ಮತ್ತು ಗ್ರಂಥಪಾಲಕರ ಜೊತೆಗೆ ವಿವಿಧ ಬೋಧನಾ ಹುದ್ದೆಗಳಿಗೆ ಬೇಕಾಗಿದ್ದಾರೆ.
ಅರ್ಹತೆ: ಕನಿಷ್ಠ 3 ವರ್ಷಗಳ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.
ಅರ್ಜಿ ಸಲ್ಲಿಸಲು: ಆಸಕ್ತರು ನಿಮ್ಮ ಮಾಹಿತಿಯನ್ನು careers@thesportsschool.com ಇಮೇಲ್ ಮಾಡಿ.

WANTED FOR immediate appointment SCIENCE (CBZ) TEACHER for CAMLIN HIGH SCHOOL Hampinagar, Vijayanagar 2nd Stage, Bangalore-104. WALK.IN INTERVIEW. Cantact: 23301363

WANTED TEACHERS: Nursery, Primary and High School Classes for all the Subjects including Computer. 'SRI VIDYA KENDRA' Peenya 1st Stage, Bangalore-58 Ph: 9900708182, 28398833, 41179155

REQUIRED EXPERIENCED Female Academic Supervisor having 3- 5 years experience, also Primary and High school teachers with B.A., M.A./ B.Ed/ B.Sc., M.Sc./ B.Ed. for Social Science & English. Walk in Interview. Contact: Max Muller Public School, Mahalakshmi Layout, B'lore-96. Mobile: 080-23376050/ 51. Email Id :maxmullerpublicschool.mlayout@gmail.com.

WANTED COMPUTER Teacher (1 std to 10 Std) for Lewa English High School Woc Road, Mahaganapathinagar Rajajinagar, Bangalore- 10 Email: lewa.bangalore@gmail.com Contact: 9742964160/ 080-23350167/ 9916327680

SREE VENKATESHWARA ENGLISH SCHOOL #1, V.S Layout, KR Puram, Bangalore-560036. WANTED: TEACHERS PRIMARY-B.A B.Ed Social, English and Hindi Teacher. Attractive salary, Attend with Original certificates. Contact:080 25611873, 7411135627. Email- svs.krp.bangalore@gmail.com

Accounts & Finance

WANTED ACCOUNTANT B.Com Graduate with GST-& TDS`Audit Experience 5-10yrs`Salary 40000`plus Incentive Age`Below 50years`& WANTED HR ADMIN Recent`Retired Employees Salary 30000`plus incentive Call:7338084555 9845053636:Mail glprojects7889 @gmail.com Interview-Time 10am`to`6pm

WANTED SENIOR ACCOUNTANT with 10-15 years experience for a Reputed Real Estate Company. Interested candidates may kindly mail their resumes to: info@ highgateshotel.com

Engg/ Production Technical

AEROSPACE COMPONENTS Manufacturing Company requires (1) VMC PROGRAMMER (Autodesk Powermill/ Solidcam/ Mastercam) (2) QUALITY CONTROL ENGINEERS. Qualification: ITI/ Diploma/ B.E. 'MAP SYSTEM (I) PVT LTD' Peenya Industrial Area Contact: 8310411192

HIRING - CIVIL SITE ENGINEER 3-5 Years experience in residential/commercial building projectsLocation: Bengaluru Qualification: BE/ Diploma in civil Send resume : pbconstructions.43@gmail.com WhatsApp : 8867757730

Marketing & Sales

VASA SCIENTIFIC CO. Required Sales Executives & Marketing Manager for Bangalore, Tumkur & Mysore. (Local candidate only) Qualification: PUC (Science)/B.Sc Experience: fresher & Minimum 5 Years in Sales/Marketing. Age below 35yrs. Good communication & field experience with two Wheeler. Contact: 8971703434

WANTED SALES Managers, Sales Executives, Telecallers. Opportunity to earn up to 40,000 P.M. Contact 8867627879

Multiple Vacancy

WANTED EXPERIENCED MARKETING EXECUTIVES, OFFICE ASSISTANT for Civil Engineer Office, Attur, Yelahanka, 9731135574 Good Salary

Receptionist/ Secretary

WANTED IMMEDIATELY Lady RECEPTIONIST, TELE-CALLERS. Best Salary. Good in English, Computer Knowledge. Bangalore South Candidates Call: 99000-54468

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

General

"REQUIRED PETROL BUNK STAFF, CASHIER, ATTENDER Salary:- ₹15000/- to ₹17000/- for Banashankari 6th Stage. Contact: 7760149193

COUNTER SALESMAN, (Male) 2/ 3 years experience. Boys/ Girls, 10th pass, for The Raymond Shop, Jayanagar. Call: 6363012151

RENTAL PROPERTIES

Accommodation Available

Industrial And Factory

AVAILABLE INDUSTRIAL Warehouse 160000 sqft Vijipura Hoskote Contact: 9341234288/ 9663224353/ 9845417487.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

REAL ESTATE SELLING

Sites

Kumbalgodu

'EXCELLENT KUMBALGODU Industrial sites 100x200 near Challaghatta Metro Rs. 5500/- per Sqft for immediate Settlement Contact: Mahesh: 9341828282'

DH DECCAN HERALD The Power of Good
ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
080- 45557163/164
*Conditions apply

CONNECT — ಕ್ಲಾಸಿಫೈಡ್ಸ್

Sulakshmi Silks Proudly Presents
Mysore Silk Weavers' Seere Utsava
6th SEERE UTSAVA
6ನೇ ಸೀರೆ ಉತ್ಸವ
A Celebration of Elegance
PRE VARAMAHALAKSHMI SALE
FLAT 50% OFF on all Pure Mysore Silk Saree collections
Exclusive Health Offer!
Get a FREE Blood Checkup (Includes 50 comprehensive tests) *on every bill above Rs. 10,000*
ನಿಮ್ಮ ಆರೋಗ್ಯವೇ ನಮ್ಮ ಭಾಗ್ಯ!
6th - 17th May 2026
Address: Hemachandra Sagara Kalyana Mantapa, Jayanagar, Bengaluru
Call: 99727 18898 | 96631 27606
Experience the legacy

RV Institute of Management®
Approved by AICTE, New Delhi, Accredited by NAAC with 'A+' grade. | Autonomous Institution, Affiliated to Dr.Manmohan Singh Bengaluru City University
CELEBRATING 25 YEARS of Excellence
Go,change the world® — Autonomous Institution of Excellence
Register for **PGCET/KMAT 2026**
one week intensive coaching for **MBA** now & get admission in your dream institution..
Mode of coaching **Hybrid** (Offline in the Campus & Online platform - Zoom)
Date 18th May to 23rd May 2026 (One Week)
Registration fee **Rs.500/-** (Includes certificate & study material)
Scan QR code below to register online & pay the fee
SCAN ME

Placement Summary for 2023-2025	
Total No. of companies (On/Off Campus)	89
Total Number of Students	178
Total Number of Students not opted for Placements	15
Total Number of Students opted for Placements	163
Total Number of Students Placed	160
Placed Percentage	98%
Highest package	17.25LPA
Median package	6.4 LPA

Time 9.00am to 2.00pm (on all days)
PGCET Code B252
Top 15 Rankers who join our institution from PGCET (within 100 Rank) will be given a merit scholarship of Rs 50,000/-.
Scholarship of Rs 50,000/- to Top 15 Academic Performers in MBA 1st year (above 7.0 CGPA)
Please call: 90089 60025 / 080 26547048, for more information
E-mail : rvimpgcet@gmail.com Website : www.rvim.edu.in

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-26701

MQI INSTITUTIONS ISO 9001:2015
Recognised by Govt. of Karnataka
LIMITED SEATS
ADMISSIONS OPEN FOR 2026 – 2027
MQI COLLEGE OF MANAGEMENT (MBA Program)
MQI DEGREE COLLEGE (B.Com, BBA and BCA)
MQI PRE-UNIVERSITY COLLEGE (Science, Commerce and Arts)
MQI HIGH SCHOOL
SPECIAL SCHOLARSHIPS For Meritorious, SC/ST and Economically Deserving Students
For admissions and more details contact us at:
Call: 080-48144679 +91 88920 19865
https://mqidegreecollege.com / mqidc2007@gmail.com
ROUNAQH

PUBLIC NOTICE

PUBLIC NOTICE
It is for general information that I was previously known as **Neelakantan Navaneethakrishnan** S/O Neelakantan Sanal Kumar, R/O A44, Medley, Goodearth Malhar, Behind ACS College of Engg., Kengeri, PO: Kumbalagodu, DIST: Bengaluru South, Karnataka-560060, and after being diagnosed with Gender Dysphoria under the supervision of registered medical practitioner in Bangalore, **have changed my gender as Female.** I shall henceforth be known as Neelakantan Navaneethakrishnan D/O Neelakantan Sanal Kumar. Vide the affidavit dated 28-03-2026, before Notary S.I. Balaguru, Bengaluru (Reg No 10191).

Sahakara Bhishma Shri K. H. Patil Memorial Trust's
K. H. PATIL SCHOOL OF LAW, BENGALURU
Affiliated to Karnataka State Law University, Hubballi & Approved by Bar Council of India
Grameena Bhavan, #6, 13th Cross Road, Jnanabharathi 2nd Block, BDA Layout, Amma Ashram Road, Bengaluru-98
Email: khpsl.blr@gmail.com | website: https://www.khplawschool.in
ADMISSIONS OPEN Academic Year 2026–27
Applications are invited from eligible candidates for admission to the following Law programmes:

Programme	Duration
B.A. LL.B.	(5 Years)
B.Com. LL.B.	(5 Years)
LL.B.	(3 Years)

Eligibility: PUC or Equivalent with 45% Marks (40% for SC/ST) for 5 year LL.B. and Degree in any stream for 3 Year LL.B.).
How to apply: Interested and eligible candidates may apply either in person or by post using the prescribed application form. The application form can be obtained from the college admission section or downloaded from the official website: https://www.khplawschool.in
Why Choose Us?-
Experienced Faculty and academic excellence | Moot Court Training and Legal Aid activities | Library with extensive Legal Resources | Focus on practical Legal Education
Contact us for more details:
Principal: 9035354809, Admissions: 7795899712 or mail to khpsl.blr@gmail.com or visit the official website : https://www.khplawschool.in
Sd/- Principal

PERSONAL

Lost

DOCUMENT LOST
I, **Bobba Srinivas,** residing at No. 42, 3rd Main, 6th Cross, 1st Floor, Ramaiah Layout, Kammanahalli, Bengaluru- 560084, have lost my **Original Sale Deed Identification No.1559 & 1560, Plot No's: 11, 12 & Survey No.: 83, 84, Thimmapur Village, year 2004. Registered at Shad Nagar, SRO Hyderabad, Telangana.** If found please contact: **8618992701**

Change of Name

I, SRI. K.R. Sathish Reddy, Aged about 51 Years, S/o. Late Rama Reddy. A, R/at No. 20, Royale Habitat Housing Colony, Near Nagarjuna Apartment, HSR Layout 2nd Sector, Bangalore- 560034 now Bangalore- 560102 declares that my name is to be read as (i) " K.R. Sathish Reddy"(ii) "Sathish Reddy K.R." and (iii) " K.R Satish Reddy " (iv) "Satish Reddy K.R." for all practical purposes by reading along with Aadhar Cards and other documents and the same is attested before the Notary public Sri. C. Venkatapathy Advocate and Notary Sl. No. 131 Page No. 08, Volume No. 03 dated 28-04-2026.

I, SAASHIKA RAMASWAMY, Residing at Bengaluru-560100 have changed my name as SAASHIKA, vide affidavit dated 5/5/2026 before Notary K.S. Bammappanavar, Bengaluru

RAMAN GROUP OF INSTITUTIONS
134, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org
RAMAN P.U. COLLEGE
36, Magadi Main Road, Next to Samrudhi Hotel, Opp. Pooja Convension Hall, Bengaluru-560079
In association with Deeksha Vedantu
Science + Integrated ♦ Commerce
Contact: 9686162639 / 9686162637
RAMAN DEGREE COLLEGE — BBA | BCom | BCA
Contact: 9686162639 / 9686162637
RAMAN POLYTECHNIC & ITI
♦ Civil ♦ Mechanical ♦ Electrical ♦ Electronics ♦ Computer Science ♦ Automobile ♦ Fitter ♦ Electronic Mechanic ♦ Electrician
Contact: 6360903500 / 8050066771
CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255
RMN-26701

SARATHY NATIONAL PUBLIC SCHOOL
171/2A, 2B, Sarathy Nagar, Near HM World City, JP Nagar 8th Phase, Bangalore-83. M: 9606092102
Proves once again remarkable result with Distinctions and 100% First classes in 10th ICSE Examination
100% RESULTS
HITHESH GOWDA D Y 91% | PRATHAM M V 89% | SWATHI A 89%

SRI SARATHY ENGLISH HIGH SCHOOL
(RECOGNISED BY GOVERNMENT OF KARNATAKA)
171/2A, 2B, Sarathy Nagar, Near HM World City, JP Nagar 8th Phase, Bangalore-83. M: 7411065478
"CONGRATULATIONS" SSLC RESULT 2025-26
100% RESULTS
ASHWINI.K 93.76% | BHAVANA.B 91.52% | JABEEN TAJ 89.76%

CHANGE OF NAME
I, R Mohammadh Abbas S/o Abibulla, Residing at No.30, 3rd Cross, Raghuram Layout, Ramachandrapura Post, Jalahalli, Bangalore-560013, declare that my correct name is **MOHAMMED ABBAS** and my father's name is wrongly mentioned in some of my documents as **RAHOOB SAIT**. His correct name is **ABIBULLA,** vide affidavit dated 12-03-2026 before notary H.R Karunakara, Bengaluru.

CHANGE OF NAME
I, **CHRIS JOSHUA,** residing at No. 9/2, R.V Shetty Layout, Seshadripuram, Bangalore-560020, have changed my name to **CHRIS JOSHUA R** vide affidavit dated 05-05-2026 before notary C.K. Anupama, Bengaluru. Henceforth I shall be called **CHRIS JOSHUA R** only

CHANGE OF NAME
I, **Pradeep M** S/o Mahadev Residing at No.4, Near Forest Office Kaggalipura, Kanakapura Main Road, Bangalore-560082 have changed my son's name from **HANVITH P** to **HARSHITH P** vide affidavit dated 02.05.2026 sworn before notary Chethana S V, B'lore.

I, K RAMESHA residing No.65, Venkateshwara College Road, Classmate Enclave, Kadiganahalli Vidyanagara Cross, Bettahalsur Post, Bangalore-562157 have changed K RAMESH vide affidavit dated 01/04/2026 sworn before notary D.Sarala Kumari, Bangalore

ಜಮೀರ್ ಮನೆಯಲ್ಲಿ ಕಳ್ಳತನ: ಬಂಧನ

ಆರೋಪಿಗಳಿಂದ ₹1.13 ಕೋಟಿ ಮೌಲ್ಯದ 759 ಗ್ರಾಂ ಚಿನ್ನದ ಆಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ಮನೆಯಲ್ಲಿ ಚಿನ್ನದ ಆಭರಣ ದೋಚಿದ್ದ ಜಮೀರ್ ಸಂಬಂಧಿಯೂ ಸೇರಿದಂತೆ ಇಬ್ಬರನ್ನು ಶಿವಾಜಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗೋವಿಂದಪುರ ನಿವಾಸಿ, ಟ್ರಾವೆಲ್ ಏಜೆನ್ಸಿ ನಡೆಸುತ್ತಿದ್ದ ಅಮೀರ್ ಅಹಮದ್ (48) ಮತ್ತು ಸಹಚರ ಮತ್ತಿಕೆರೆ ನಿವಾಸಿ ಸೈಯದ್ ಅಮೀನ್ ಅಹಮದ್ (48) ಬಂಧಿತರು.

ಆರೋಪಿಗಳಿಂದ ₹1.13 ಕೋಟಿ ಮೌಲ್ಯದ 759 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ಆರೋಪಿಗಳು ಏಪ್ರಿಲ್ 15ರಂದು ಸಚಿವರ ಮನೆಯಲ್ಲಿ ಕಳ್ಳತನ ಮಾಡಿದ್ದರು. ಸಚಿವರ ತಾಯಿ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮದುವೆ ಸಮಯದಲ್ಲಿ ಉಡುಗೊರೆಯಾಗಿ ಬಂದಿದ್ದ ಆಭರಣ ಹಾಗೂ ಉಳಿತಾಯದ ಹಣದಿಂದ ಖರೀದಿಸಿದ್ದ ಆಭರಣಗಳನ್ನು ಸ್ಟೇಷನ್ ರಸ್ತೆಯ ಮನೆಯ ಕೊಠಡಿಯ ಬೀರುವಿನಲ್ಲಿ ಇಡಲಾಗಿತ್ತು. ಪರಿಶೀಲನೆ ನಡೆಸಿದಾಗ 1 ಕೆ.ಜಿ. 200 ಗ್ರಾಂ ಆಭರಣಗಳು ಕಳ್ಳತನ ಆಗಿರುವುದು ಕಂಡುಬಂದಿತ್ತು. ಮನೆಯಲ್ಲಿದ್ದ ಹಿರಿಯರ ಯೋಗಕ್ಷೇಮ ವಿಚಾರಿಸಲು ಸಂಬಂಧಿ ಅಮೀರ್ ಅಹಮದ್ ಆಗಾಗ್ಗೆ ಮನೆಗೆ ಬರುತ್ತಿದ್ದರು. ಅವರ ಮೇಲೆ ಅನುಮಾನವಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು. ಅಮೀರ್ ಇದ್ದ ಸ್ಥಳ ಪತ್ತೆಹಚ್ಚಿ ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದು ಗೊತ್ತಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಆಭರಣ

- 35 ಬಳೆಗಳು
- 3 ನೆಕ್ಲೇಸ್
- 2 ಉಂಗುರ
- 2 ಜೊತೆ ಕಿವಿಯೋಲೆ

ಅಮೀರ್ ಅಹಮದ್

ಸೈಯದ್ ಅಮೀನ್ ಅಹಮದ್

ಸೈಯದ್ ಅಮೀರ್ ಎಂಬುವವರು ಸಚಿವ ಜಮೀರ್ ಅಹಮದ್ ತಾಯಿಯ ಹತ್ತಿರದ ಸಂಬಂಧಿ. ಸೈಯದ್ ಅಮೀರ್ ಜೊತೆಗೆ ಸೈಯದ್ ಅಮೀನ್ ಅಹಮದ್ ಕೃತ್ಯದಲ್ಲಿ ಭಾಗಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಮೆಕ್ಕಾಗೆ ಹೋಗಲು ಹಣ ಕೊಡದಿದ್ದಕ್ಕೆ ಕೃತ್ಯ?: ಮೆಕ್ಕಾಗೆ ಹೋಗಲು ₹5 ಲಕ್ಷ ಕೊಡುವಂತೆ ಅಮೀರ್ ಅಹಮದ್ ಕೇಳಿದ್ದರು. ಆಗ ಜಮೀರ್ ಅವರ ತಾಯಿ ಸೊಗರ್ ಖಾನಮ್ ಕೊಟ್ಟಿರಲಿಲ್ಲ. ಈ ವೇಳೆ ಬೇಸರಗೊಂಡು ವಾಗ್ವಾದ ನಡೆಸಿ ಮನೆಯಿಂದ ತೆರಳಿದ್ದರು. ಆ ನಂತರವೂ ಒಂದೆರಡು ಬಾರಿ ಮನೆಗೆ ಬಂದು ಹೋಗಿದ್ದರು. ಈ ವೇಳೆ ಆರೋಪಿ, ಮನೆಯ ಬೀರುವಿನಲ್ಲಿದ್ದ ಚಿನ್ನಾಭರಣ ಕದ್ದು ಪರಾರಿ ಆಗಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಆಭರಣಗಳನ್ನು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಪರಿಶೀಲಿಸಿದರು

ಆತ್ಮೀಯವಾಗಿದ್ದ ಅಮೀರ್

'ಜಮೀರ್ ಮನೆಗೆ ಸೈಯದ್ ಅಮೀರ್ ಆಗಾಗ ಬಂದು ಹೋಗುತ್ತಿದ್ದರು. ಮನೆಯವರೊಂದಿಗೆ ಅತ್ಯಂತ ಆತ್ಮೀಯವಾಗಿ, ಒಳ್ಳೆಯವನಂತೆ ನಟಿಸುತ್ತಿದ್ದರು. ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡು, ಒಟ್ಟು 1 ಕೆ.ಜಿ 200 ಗ್ರಾಂ ಚಿನ್ನಾಭರಣ ಕಳ್ಳತನ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ಇಬ್ಬರೂ ಟ್ರಾವೆಲ್ ವ್ಯವಹಾರ ನಡೆಸುತ್ತಿದ್ದರು. ಕೋವಿಡ್ ಅವಧಿಯಲ್ಲಿ ನಷ್ಟಕ್ಕೆ ಒಳಗಾಗಿದ್ದರು. ಸಾಲ ತೀರಿಸಲು ವಿವಿಧೆಡೆ ನೆರವು ಕೇಳಿದ್ದರು. ಎಲ್ಲಿಯೂ ಹಣದ ವ್ಯವಸ್ಥೆ ಆಗಿರಲಿಲ್ಲ. ಸಾಲ ತೀರಿಸಲು ಸಚಿವರ ಮನೆಯಲ್ಲಿ ಚಿನ್ನದ ಆಭರಣ ಕಳ್ಳತನ ಮಾಡಲು ಸಂಚು ರೂಪಿಸಿದ್ದರು. ಸಾಲ ತೀರಿಸಿ ಉಳಿದ ಹಣದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲು ಯೋಜನೆ ರೂಪಿಸಿಕೊಂಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೇಳೆ ಕಾಳು ಕಾರ್ಯಾಗಾರಕ್ಕೆ ಚಾಲನೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಹಯೋಗದಲ್ಲಿ ಆಯೋಜಿಸಿರುವ ಮೂರು ದಿನಗಳ 'ಮುಂಗಾರಿನ ಬೇಳೆ ಕಾಳು ಬೆಳೆಗಳ ರಾಷ್ಟ್ರೀಯ ಕಾರ್ಯಾಗಾರ'ಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾನಿರ್ದೇಶಕ ಎಂ.ಎಲ್. ಜಾಟ್ ಮಾತನಾಡಿ, 'ರಾಷ್ಟ್ರದಲ್ಲಿ ಬೇಳೆ ಕಾಳು ಬೆಳೆಗಳ ಉತ್ಪಾದನೆ, ಬೆಳೆ ಪ್ರದೇಶ ಹಾಗೂ ಉತ್ಪಾದಕತೆ ಹೆಚ್ಚಿಸುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಬೇಳೆ ಕಾಳು ಆಧಾರಿತ ಕೃಷಿ ಆಹಾರ ವ್ಯವಸ್ಥೆಯನ್ನು ಸದೃಢಗೊಳಿಸಬೇಕು' ಎಂದು ಸಲಹೆ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಮಾತನಾಡಿ, 'ದ್ವಿದಳ ಧಾನ್ಯಗಳ ಕೃಷಿಯನ್ನು ಹೆಚ್ಚು ಲಾಭದಾಯಕಗೊಳಿಸಬೇಕು' ಎಂದರು.

'ಐಸಿಎಆರ್‌ನ ಉಪ ಮಹಾನಿರ್ದೇಶಕ ಡಿ.ಕೆ. ಯಾದವ್ ಮಾತನಾಡಿದರು.

ಕೇಂದ್ರ ಸರ್ಕಾರದ ರಾಷ್ಟ್ರೀಯ ದ್ವಿದಳ ಧಾನ್ಯ ಮಿಷನ್‌ನ ಜಂಟಿ ಕಾರ್ಯದರ್ಶಿ ಸಂಜಯ್ ಅಗರ್‌ವಾಲ್ ಉಪಸ್ಥಿತರಿದ್ದರು.

ಚಿತ್ರಾವಳಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದ ತೋಟಗೆರೆಯ ಬಿಜಿಎಸ್ ಯುನೈಟೆಡ್ ಶಾಲೆಯ ವಿದ್ಯಾರ್ಥಿನಿ ಯಶಸ್ವಿನಿ ಎನ್. ಅವರನ್ನು ಆದಿಚುಂಚನಗಿರಿ ಶಾಖಾ ಮಠದ ಮುಖ್ಯ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ಸನ್ಮಾನಿಸಿದರು. ಶಾಲೆಯ ಮುಖ್ಯ ಶಿಕ್ಷಕಿ ಪುಷ್ಪ ಜೈರಾಜ್ ಹಾಗೂ ವಿದ್ಯಾರ್ಥಿನಿಯ ಪೋಷಕರು ಹಾಜರಿದ್ದರು

ವಿಶೇಷ ಭತ್ಯೆ ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಪಶುವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಶಿಕ್ಷಕರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು. ಸಂಘಟನಾ ಕಾರ್ಯದರ್ಶಿ ಡಾ. ಎಚ್. ಧನಲಕ್ಷ್ಮಿ, ಕಾರ್ಯಕಾರಿ ಸಮಿತಿ ಸದಸ್ಯ ಡಾ.ವಿವೇಕ್ ಎಂ.ಪಾಟೀಲ್ ಹಾಗೂ ಇತರರು ಪಾಲ್ಗೊಂಡಿದ್ದರು

₹1.75 ಕೋಟಿ ಮೌಲ್ಯದ 692 ಮೊಬೈಲ್ ಪತ್ತೆ

11 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಜನರು ಕಳೆದುಕೊಂಡಿದ್ದ ಮೊಬೈಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಶಾನ್ಯ ವಿಭಾಗದ 11 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಳೆದುಕೊಂಡಿದ್ದ ಹಾಗೂ ಕಳ್ಳತನವಾಗಿದ್ದ 692 ಮೊಬೈಲ್ ಫೋನ್‌ಗಳನ್ನು 'ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್' (ಸಿಇಐಆರ್) ಪೋರ್ಟಲ್ ಸಹಾಯದಿಂದ ಪೊಲೀಸರು ಪತ್ತೆಹಚ್ಚುವಲ್ಲಿ ಯಶಸ್ವಿ ಆಗಿದ್ದಾರೆ.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು 'ಇ-ಲಾಸ್ಟ್' ಆ್ಯಪ್ ಹಾಗೂ ಕೇಂದ್ರ ಸರ್ಕಾರ ರೂಪಿಸಿರುವ 'ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್' ಪೋರ್ಟಲ್‌ನಲ್ಲಿ ದಾಖಲು ಮಾಡಲಾಗುತ್ತದೆ. ಈಶಾನ್ಯ ವಿಭಾಗದ ಪೊಲೀಸರು ತಾಂತ್ರಿಕ ಸುಳಿವು ಆಧರಿಸಿ, ತನಿಖೆ ನಡೆಸಿ ಮೊಬೈಲ್ ಪತ್ತೆ ಮಾಡಿ, ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.

ಯಲಹಂಕ, ಸಂಪಿಗೆಹಳ್ಳಿ ಹಾಗೂ ದೇವನಹಳ್ಳಿ ಉಪ ವಿಭಾಗದ ಪೊಲೀಸರು ಏಪ್ರಿಲ್‌ನಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಸಾರ್ವಜನಿಕರು ಕಳೆದುಕೊಂಡಿದ್ದ ಹಾಗೂ ಕಳ್ಳತನವಾಗಿದ್ದ ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಿದ್ದಾರೆ.

ಆರೋಪಿಗಳಿಂದ ಜಪ್ತಿ ಮಾಡಲಾದ ಮೊಬೈಲ್ ಫೋನ್

ಅಪರಾಧ ಸುದ್ದಿ

ಯಲಹಂಕ ಠಾಣೆಯ ಪೊಲೀಸರು 83, ಯಲಹಂಕ ನ್ಯೂಟೌನ್ 76, ಕೊಡಿಗೇಹಳ್ಳಿ 66, ವಿದ್ಯಾರಣ್ಯಪುರ 86, ಸಂಪಿಗೇಹಳ್ಳಿ 107, ಕೊತ್ತನೂರು 70, ಬಾಗಲೂರು 85, ಅಮೃತಹಳ್ಳಿ 66, ಚಿಕ್ಕಜಾಲ 34, ದೇವನಹಳ್ಳಿ 12, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಠಾಣೆಯ ಪೊಲೀಸರು 7 ಮೊಬೈಲ್ ಫೋನ್ ಜಪ್ತಿ ಮಾಡಿದ್ದಾರೆ.

ಸಾರ್ವಜನಿಕರು ಕಳೆದುಕೊಂಡ ಮೊಬೈಲ್ ಫೋನ್‌ನ ವಿವರವನ್ನು ಸಿಇಐಆರ್ ಪೋರ್ಟಲ್‌ನಲ್ಲಿ ದಾಖಲಿಸುವುದರಿಂದ ಅಥವಾ ಪೊಲೀಸ್ ಠಾಣೆಗಳಲ್ಲಿ ದೂರು ನೀಡುವುದರಿಂದ ಫೋನ್‌ಗಳನ್ನು ಪತ್ತೆ ಮಾಡಲು ಅನುಕೂಲ ಆಗಲಿದೆ ಎಂದು ಪೊಲೀಸರು ಮನವಿ ಮಾಡಿದರು. ಈಶಾನ್ಯ ವಿಭಾಗದ ಡಿಸಿಪಿ ಜಿ.ಕೆ.ಮಿಥುನ್ ಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಪೊಲೀಸರ ಕಾರ್ಯಾಚರಣೆ, ಆರು ಆರೋಪಿಗಳ ಬಂಧನ

₹20.10 ಕೋಟಿ ಮೌಲ್ಯದ ಡ್ರಗ್ಸ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ವಿಭಾಗದ ಯಶವಂತಪುರ ಹಾಗೂ ನಂದಿನಿ ಲೇಔಟ್ ಠಾಣೆಯ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಆರು ಪೆಡ್ಲರ್‌ಗಳನ್ನು ಬಂಧಿಸಿ ₹20.10 ಕೋಟಿ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಸೈಯದ್ ಸುಹೇಲ್ (27), ಮೊಹಮ್ಮದ್ ಸಮೀರ್ (23), ಸಾದಿಕ್ ಪಾಷಾ (21), ಮೊಹಮ್ಮದ್ ಅಜರುಲ್ ಹಕ್ (33) ಮತ್ತು ಕೇರಳದ ಸೌಗೇಶ್ (27) ಹಾಗೂ ಅಲ್ತಾಫ್ (25) ಬಂಧಿತರು. ಬಂಧಿತರಿಂದ 8 ಕೆ.ಜಿ. 58 ಗ್ರಾಂ ಎಂಡಿಎಂಎ, 5 ಕೆ.ಜಿ. 700 ಗ್ರಾಂ ಹೈಡ್ರೋ ಗಾಂಜಾ, ಕೃತ್ಯಕ್ಕೆ ಬಳಸಿದ್ದ ನಾಲ್ಕು ಮೊಬೈಲ್ ಫೋನ್, ಒಂದು ಕಾರು ವಶಕ್ಕೆ ಪಡೆಯಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದರು.

ನೈಜೀರಿಯಾದ ಪೆಡ್ಲರ್ ಸಂಪರ್ಕಿಸಿ, ಅಲ್ಲಿಂದ ವಿವಿಧ ಮಾದರಿ ಮಾದಕ ವಸ್ತುಗಳನ್ನು ಆರೋಪಿಗಳು ತರಿಸಿಕೊಳ್ಳುತ್ತಿದ್ದರು. ಆ ಡ್ರಗ್ಸ್ ಅನ್ನು ನಗರದಲ್ಲಿ ಮಾರಾಟ ಮಾಡುತ್ತಿದ್ದರು. ರೌಡಿ ಶೀಟರ್ ಪಟ್ಟಿಯಲ್ಲಿ ಪ್ರಮುಖ ಆರೋಪಿ ಸೈಯದ್ ಸುಹೇಲ್ ಹೆಸರಿದೆ. ಡ್ರಗ್ಸ್ ಸಾಗಣೆ ಹಾಗೂ ಪೂರೈಕೆ ಸಂಬಂಧ ಈತನ ಮೇಲೆ ಐದು ಪ್ರಕರಣಗಳಿವೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸೈಯದ್ ಸುಹೇಲ್


ಮೊಹಮ್ಮದ್ ಸಮೀರ್

ಸಾದಿಕ್ ಪಾಷಾ

ಮೊಹಮ್ಮದ್ ಅಜರುಲ್ ಹಕ್


ಸೌಗೇಶ್

ಅಲ್ತಾಫ್

ಕಳ್ಳತನ: ದಂಪತಿ ಬಂಧನ

ಕೆಲಸಕ್ಕಿದ್ದ ಮನೆಯಲ್ಲಿ ಕಳ್ಳತನ ಮಾಡಿದ್ದ ದಂಪತಿಯನ್ನು ಸಿ.ಕೆ. ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಐಶ್ವರ್ಯಾ (21) ಹಾಗೂ ಮಣಿಕಂಠ (26) ಬಂಧಿತ ದಂಪತಿ.

ಆರೋಪಿಗಳಿಂದ ₹14 ಲಕ್ಷ ನಗದು, 199 ಗ್ರಾಂ ಚಿನ್ನದ ಆಭರಣ, 730 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉದ್ಯಮಿ ಮಲ್ಲಿಕಾರ್ಜುನ್ ನಾಯ್ಡು ಮನೆಯಲ್ಲಿ ದಂಪತಿ ಕಳ್ಳತನ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಮಲ್ಲಿಕಾರ್ಜುನ್ ಅವರಿಗೆ ಒಂದೂವರೆ ವರ್ಷದ ಮಗುವಿದೆ. ಮಗು ನೋಡಿಕೊಳ್ಳಲು ಐಶ್ವರ್ಯಾ ಅವರನ್ನು ನೇಮಿಸಿಕೊಂಡಿದ್ದರು. ಮಾಲೀಕರ ನಂಬಿಕೆ ಗಳಿಸಿದ್ದ ಐಶ್ವರ್ಯಾ, ಪತಿ ಮಲ್ಲಿಕಾರ್ಜುನ್‌ನನ್ನು ಮನೆಗೆ ಕರೆಸಿಕೊಂಡು ಹಣ ಮತ್ತು ಒಡವೆ ದೋಚಿದ್ದರು.

ಐಶ್ವರ್ಯಾ

ಮಣಿಕಂಠ

ಏಪ್ರಿಲ್ 25ರಂದು ಬೀರು ತೆಗೆದು ಪರಿಶೀಲಿಸಿದಾಗ ಚಿನ್ನದ ಒಡವೆಗಳು ನಾಪತ್ತೆ ಆಗಿರುವುದು ಮನೆಯ ಮಾಲೀಕರಿಗೆ ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

ಮಾಲೀಕರು ನೀಡಿದ ದೂರು ಆಧರಿಸಿ ಕೆಲಸಕ್ಕಿದ್ದ ಐಶ್ವರ್ಯಾ ದಂಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಆಗ, ಪತಿಯ ಜತೆಗೆ ಸೇರಿಕೊಂಡು ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ನಕಲಿ ಕೀ ಬಳಸಿ ಕಳ್ಳತನ • ಹೆಬ್ಬಗೋಡಿ ಠಾಣೆ ಪೊಲೀಸರ ಕಾರ್ಯಾಚರಣೆ

501 ನಕಲಿ ಆರ್.ಸಿ ಕಾರ್ಡ್ ಜಪ್ತಿ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಎದುರು ಹಾಗೂ ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡುತ್ತಿದ್ದ ದ್ವಿಚಕ್ರ ವಾಹನಗಳನ್ನು ನಕಲಿ ಕೀ ಬಳಸಿ, ಕಳ್ಳತನ ಮಾಡುತ್ತಿದ್ದ ಹೊರರಾಜ್ಯದ ಇಬ್ಬರನ್ನು ಹೆಬ್ಬಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರ ಪ್ರದೇಶ ಶೇಖ್ ಶಫೀರ್ ಬಾಷಾ ಹಾಗೂ ಆನಂದ್ ಬಂಧಿತರು.

ಬಂಧಿತರಿಂದ ₹41.67 ಲಕ್ಷ ಮೌಲ್ಯದ 51 ದ್ವಿಚಕ್ರ ವಾಹನ, ಕಂಪ್ಯೂಟರ್, ಪ್ರಿಂಟರ್, ಮೊಬೈಲ್ ಫೋನ್ ಹಾಗೂ 501 ನಕಲಿ ಆರ್.ಸಿ ಕಾರ್ಡ್ ಜಪ್ತಿ ಮಾಡಲಾಗಿದೆ. ಠಾಣಾ ವ್ಯಾಪ್ತಿಯ ಗೊಲ್ಲಹಳ್ಳಿಯ ನಿವಾಸಿಯೊಬ್ಬರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಶೇಖ್ ಶಫೀರ್ ಬಾಷಾ

ಆನಂದ್

ನಗರದಲ್ಲಿ ಕದ್ದ ದ್ವಿಚಕ್ರ ವಾಹನಗಳನ್ನು ಆಂಧ್ರ ಪ್ರದೇಶಕ್ಕೆ ಕೊಂಡೊಯ್ಯುತ್ತಿದ್ದರು. ಉಳಿದ ವಾಹನಗಳನ್ನು ಮುಳಬಾಗಿಲು, ಚಿಂತಾಮಣಿ ಹಾಗೂ ಹೆಬ್ಬಗೋಡಿಯ ಖಾಲಿ ಪ್ರದೇಶದಲ್ಲಿ ನಿಲುಗಡೆ ಮಾಡಿದ್ದರು. ಆಂಧ್ರ ಪ್ರದೇಶದಲ್ಲಿ ಮಧ್ಯವರ್ತಿಯ ನೆರವು ಪಡೆದು ಸೈಬರ್ ಕೇಂದ್ರದಲ್ಲಿ ನಕಲಿ ಆರ್.ಸಿ ಕಾರ್ಡ್ ತಯಾರಿಸುತ್ತಿದ್ದರು. ಕಡಿಮೆ ಬೆಲೆಗೆ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಲಾಗುವುದೆಂದು ಫೇಸ್‌ಬುಕ್‌ನಲ್ಲಿ ಜಾಹೀರಾತು ನೀಡಿ ಕಳ್ಳತನ ಮಾಡಿದ್ದ ವಾಹನಗಳನ್ನು ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

'ಇಬ್ಬರ ಬಂಧನದಿಂದ ವಿವಿಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಒಟ್ಟು 27 ಕಳ್ಳತನ ಪ್ರಕರಣಗಳು ಪತ್ತೆ ಆಗಿವೆ. ಆರೋಪಿಗಳಿಂದ ಜಪ್ತಿ ಮಾಡಿಕೊಂಡ ವಾಹನಗಳನ್ನು ವಾರಸುದಾರರಿಗೆ ಹಸ್ತಾಂತರ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಸರಣಿ ಕಳ್ಳತನ: ಮೂವರ ಸೆರೆ

ನಗರದ ಹಲವು ಪ್ರದೇಶಗಳಲ್ಲಿ ಸರಣಿ ಕಳ್ಳತನ ನಡೆಸಿದ್ದ ಪ್ರಕರಣದಲ್ಲಿ ಮೂವರನ್ನು ಇಂದಿರಾನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದೇವನಹಳ್ಳಿಯ ಪ್ರಕಾಶ್ ಅಲಿಯಾಸ್ ಜಂಗ್ಲಿ (35), ಭಗೀರಥ್ ದಾಸ್ (50) ಹಾಗೂ ಶಶಾಂಕ್ (33) ಬಂಧಿತರು.

ಬಂಧಿತರಿಂದ ₹1.15 ಕೋಟಿ ಮೌಲ್ಯದ 855 ಗ್ರಾಂ ಚಿನ್ನಾಭರಣ, ಚಿನ್ನದ ಗಟ್ಟಿ ಹಾಗೂ ₹20 ಸಾವಿರ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಪ್ರಕಾಶ್ ವಿರುದ್ಧ ಬೆಂಗಳೂರು ನಗರ ಹಾಗೂ ಗ್ರಾಮಾಂತರ ವ್ಯಾಪ್ತಿಯಲ್ಲಿ 36 ಪ್ರಕರಣಗಳು, ತಮಿಳುನಾಡಿನಲ್ಲಿ 1 ಪ್ರಕರಣ, ಆಂಧ್ರ ಪ್ರದೇಶದಲ್ಲಿ 11 ಪ್ರಕರಣಗಳು ದಾಖಲಾಗಿದ್ದವು. ನಗರದ ವಿವಿಧ ಠಾಣೆಗಳಲ್ಲಿ ಹೊಸದಾಗಿ 18 ಪ್ರಕರಣಗಳೂ ಸೇರಿ ಆರೋಪಿಯ ವಿರುದ್ಧ ಒಟ್ಟು 66 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.



ರಾಮಕೃಷ್ಣ ಆಶ್ರಮದ ಬಳಿ ರಸ್ತೆಗೆ ಬಿದ್ದ ಮರವನ್ನು ತೆರವು ಮಾಡದೆ, ಪಾದಚಾರಿ ಮಾರ್ಗದಲ್ಲೇ ರಾಶಿಯಾಗಿ ಹಾಕಲಾಗಿದೆ (ಎಡಚಿತ್ರ). ಚಾಮರಾಜಪೇಟೆಯಲ್ಲಿ ತುಂತುರು ಮಳೆಯಲ್ಲಿ ಕೊಡೆ ಹಿಡಿದು ಸಾಗಿದ ವೃದ್ಧ

ಪ್ರಜಾವಾಣಿ ಚಿತ್ರಗಳು

ನಗರದ ಹಲವೆಡೆ ತುಂತುರು ಮಳೆ

ಬೆಂಗಳೂರು: ನಗರದ ಹಲವೆಡೆ ಮಂಗಳವಾರ ಸಂಜೆಯಿಂದ ಮಧ್ಯರಾತ್ರಿಯವರೆಗೆ ತುಂತುರು ಮಳೆಯಾಯಿತು.

ಮೋಡ ಕವಿದ ವಾತಾವರಣ ಹಾಗೂ ತುಂತುರು ಮಳೆಯಿಂದ ಉಷ್ಣಾಂಶ ಕಡಿಮೆಯಾಯಿತು. ಮಧ್ಯಾಹ್ನ 36 ಡಿಗ್ರಿ ಸೆಲ್ಸಿಯಸ್‌ನಷ್ಟಿದ್ದ ಉಷ್ಣಾಂಶ, ಸಂಜೆ ವೇಳೆಗೆ 22 ಡಿಗ್ರಿ ಸೆಲ್ಸಿಯಸ್‌ನಷ್ಟಾಯಿತು. ನಗರದ ಬಹುತೇಕ ಪ್ರದೇಶಗಳಲ್ಲಿ ತಲಾ 0.5 ಸೆಂ.ಮೀನಷ್ಟು ಮಳೆಯಾಯಿತು.

ನಗರದ ಹಲವೆಡೆ ಬಿದ್ದಿರುವ ಮರಗಳನ್ನು ಪೂರ್ಣವಾಗಿ ತೆರವು ಮಾಡದೆ, ಪಾದಚಾರಿ ಮಾರ್ಗಗಳಲ್ಲೇ ಬಿಟ್ಟಿರುವುದರಿಂದ ಪಾದಚಾರಿಗಳಿಗೆ ತೊಂದರೆಯಾಯಿತು. 507 ಮರಗಳು, 1256 ಕೊಂಬೆಗಳನ್ನು ತೆರವು ಮಾಡಲಾಗಿದೆ ಎಂದು ನಗರ ಪಾಲಿಕೆಗಳೂ ಹೇಳಿದ್ದರೂ, ಅವೆಲ್ಲ ಸಂಪೂರ್ಣವಾಗಿ ತೆರವಾಗದೆ, ಪಾದಚಾರಿ ಮಾರ್ಗಗಳಲ್ಲಿ ರಾಶಿಯಾಗಿವೆ.

ಮರ– ಕೊಂಬೆ ಬಿದ್ದ ವಿವರ (ಏಪ್ರಿಲ್ 29ರಿಂದ)

ನಗರ ಪಾಲಿಕೆ	ಮರ ಧರೆಗೆ	ತೆರವು	ಬಿದ್ದ ಕೊಂಬೆ	ತೆರವು
ಕೇಂದ್ರ	142	136	273	258
ಪೂರ್ವ	6	6	10	10
ಪಶ್ಚಿಮ	180	177	587	564
ದಕ್ಷಿಣ	147	146	317	309
ಉತ್ತರ	41	41	118	115
ಒಟ್ಟು	516	507	1,305	1,256

ಅಂಡರ್‌ಪಾಸ್ ಜಲಾವೃತ: ಸಿ.ಎಸ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಆರ್. ವೃತ್ತ ಅಂಡರ್ ಪಾಸ್‌ನಲ್ಲಿ ಮಳೆಯ ನೀರು ನಿಲ್ಲುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿ ಹಲವು ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಆದೇಶಿಸಿದ್ದಾರೆ.

ಏಪ್ರಿಲ್ 29ರಂದು ನಗರದಲ್ಲಿ ಸುರಿದ ಭಾರಿ ಮಳೆಯ ವೇಳೆ ಕೆ.ಆರ್.ವೃತ್ತದ ಅಂಡರ್‌ಪಾಸ್ ಸಂಪೂರ್ಣ ಜಲಾವೃತವಾಗಿತ್ತು. ಮರುದಿನವೂ ನೀರನ್ನು ತೆರವುಗೊಳಿಸಿರಲಿಲ್ಲ. ಸ್ಥಳಕ್ಕೆ ಭೇಟಿ ನೀಡಿದ್ದ ಲೋಕಾಯುಕ್ತರು, ಸ್ವಯಂಪ್ರೇರಿತ ಪ್ರಕರಣ ದಾಖಲಿಸಲು ಆದೇಶಿಸಿದ್ದರು.

'2023ರ ಮೇ 22ರಂದು ಸುರಿದಿದ್ದ ಮಳೆಯಿಂದಲೂ ಈ ಅಂಡರ್‌ಪಾಸ್ ಜಲಾವೃತವಾಗಿತ್ತು. ಹೀಗಿದ್ದೂ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದ ಕಾರಣ ಟ್ಯಾಕ್ಸಿಯೊಂದು ನೀರಿನಲ್ಲಿ ಮುಳುಗಿತ್ತು. ಆ ಅವಘಡದಲ್ಲಿ ಭಾನುರೇಖಾ ಎಂಬ ಸಾಫ್ಟ್‌ವೇರ್ ಎಂಜಿನಿಯರ್ ಮೃತಪಟ್ಟಿದ್ದರು. ಆ ಬಗ್ಗೆ ತನಿಖೆ ನಡೆಸಿ ಲೋಕಾಯುಕ್ತ ಪೊಲೀಸರು ವರದಿ ಸಲ್ಲಿಸಿದ್ದರು' ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

'ವರದಿಯ ಆಧಾರದಲ್ಲಿ ಕ್ರಮ ತೆಗೆದುಕೊಳ್ಳುವಂತೆ ಈ ಹಿಂದಿನ ಬಿಬಿಎಂಪಿಯ ನೀರುಗಾಲುವೆ ವಿಭಾಗಕ್ಕೆ ಲೋಕಾಯುಕ್ತರು ಸೂಚಿಸಿದ್ದರು. ಆದರೆ ನೀರುಗಾಲುವೆ ವಿಭಾಗದ ಎಂಜಿನಿಯರ್‌ಗಳು, 'ಇದು ರಸ್ತೆ ಮೂಲಸೌಕರ್ಯ ಅಭಿವೃದ್ಧಿ ವಿಭಾಗದ ಹೊಣೆ' ಎಂದು ತಿಳಿಸಿದ್ದರು. ಎರಡೂ ವಿಭಾಗದ ಅಧಿಕಾರಿಗಳು ಪರಸ್ಪರರ ಮೇಲೆ ಆರೋಪ ಮಾಡಿದ್ದಾರೆಯೇ ಹೊರತು ಲೋಪವನ್ನು ಸರಿಪಡಿಸಿಲ್ಲ' ಎಂದು ವಿವರಿಸಿದೆ.

'ಎರಡು ವರ್ಷವಾದರೂ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವ ಕಾರಣ, ಈಗ ಭಾರಿ ಮಳೆ ಸುರಿದಿದ್ದಕ್ಕೆ ಅಂಡರ್‌ಪಾಸ್ ಮತ್ತೆ ಜಲಾವೃತವಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಹೀಗಾಗಿದೆ. ಹೀಗಾಗಿ, ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಯುಕ್ತ ಮತ್ತು ಕೇಂದ್ರ ಪಾಲಿಕೆ ಆಯುಕ್ತರನ್ನು ಪ್ರತಿವಾದಿಗಳನ್ನಾಗಿಸಿ ಪ್ರಕರಣ ದಾಖಲಿಸಲು ಲೋಕಾಯುಕ್ತರು ಸೂಚಿಸಿದ್ದಾರೆ' ಎಂದು ತಿಳಿಸಿದೆ.

'ಲೋಕಾಯುಕ್ತರ ಆದೇಶದಂತೆ ಪ್ರಕರಣದ ದಾಖಲಿಸಿದ್ದು, ಮೇ 20ಕ್ಕೆ ವಿಚಾರಣೆ ನಿಗದಿಯಾಗಿದೆ' ಎಂದು ಮಾಹಿತಿ ನೀಡಿದೆ.

'ವೈದ್ಯಕೀಯ ನಿರ್ಲಕ್ಷ್ಯಕ್ಕೆ ಪುರಾವೆಯಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾಂಗ್ರೀನ್ ಮತ್ತು ಅನಿಯಂತ್ರಿತ ಮಧುಮೇಹದಿಂದ ಬಳಲುತ್ತಿದ್ದ 45 ವರ್ಷದ ವ್ಯಕ್ತಿಯ ಮರಣ ಪ್ರಕರಣದಲ್ಲಿ ಕುಟುಂಬಸ್ಥರು ಮಾಡಿರುವ ವೈದ್ಯಕೀಯ ನಿರ್ಲಕ್ಷ್ಯದ ಆರೋಪಕ್ಕೆ ಯಾವುದೇ ಪುರಾವೆಗಳಿಲ್ಲ. ಹಠಾತ್ ಹೃದಯಾಘಾತದಿಂದ ವ್ಯಕ್ತಿ ಮೃತಪಟ್ಟಿದ್ದಾರೆ' ಎಂದು ವಿಕ್ಟೋರಿಯಾ ಆಸ್ಪತ್ರೆ ರಚಿಸಿದ್ದ ಸ್ವತಂತ್ರ ತನಿಖಾ ಸಮಿತಿ ವರದಿ ನೀಡಿದೆ.

ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಶಾ ನವಾಜ್ (45) ಎಂಬವರು ಮಾ.15ರಂದು ಮೃತರಾಗಿದ್ದರು. ಮರ್ಮಾಂಗದಲ್ಲಿ ಗಡ್ಡೆ ಬೆಳೆದ ಕಾರಣ ಫೆ.19ರಂದು ಅವರು ವಿಕ್ಟೋರಿಯಾ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ದಾಖಲಾಗಿದ್ದರು. ಮಾ.3ರಂದು ಆಸ್ಪತ್ರೆಯಿಂದ ಮನೆಗೆ ತೆರಳಿದ್ದರು. ಅವರು ಮೃತಪಟ್ಟ ಕೆಲ ದಿನಗಳ ಬಳಿಕ ವ್ಯಕ್ತಿಯ ಸಾವಿಗೆ ವೈದ್ಯಕೀಯ ನಿರ್ಲಕ್ಷ್ಯವೇ ಕಾರಣವೆಂದು ಕುಟುಂಬಸ್ಥರು ದೂರಿದ್ದರು. ಇದರ ಬೆನ್ನಲ್ಲಿಯೇ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಯು ತನಿಖಾ ಸಮಿತಿ ರಚಿಸಿತ್ತು.

ಕುಟುಂಬಸ್ಥರು, ಚಿಕಿತ್ಸೆ ನೀಡಿದ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯಿಂದ ಅಭಿಪ್ರಾಯ ಪಡೆದ ಸಮಿತಿ, ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿ ವರದಿ ನೀಡಿದೆ.

'ವ್ಯಕ್ತಿಯು 'ಫೌರ್ನಿಯರ್ಸ್ ಗ್ಯಾಂಗ್ರೀನ್' ಮತ್ತು ಅನಿಯಂತ್ರಿತ ಮಧುಮೇಹದಿಂದ ಬಳಲುತ್ತಿದ್ದರು. ಆಸ್ಪತ್ರೆ ಅವಧಿಯಲ್ಲಿ ಅಗತ್ಯ ಚಿಕಿತ್ಸೆಯನ್ನು ಒದಗಿಸಲಾಗಿದೆ. ಮುಂದಿನ ಚಿಕಿತ್ಸೆಯ ಬಗ್ಗೆಯೂ ಅವರಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿತ್ತು. ಆಸ್ಪತ್ರೆಯಿಂದ ತೆರಳುವಾಗ ಅವರಲ್ಲಿ ಕಾಣಿಸಿಕೊಂಡಿದ್ದ ಸೋಂಕು ನಿಯಂತ್ರಣದಲ್ಲಿತ್ತು. ಚಿಕಿತ್ಸೆ ಹಾಗೂ ವ್ಯಕ್ತಿಯ ಸಾವಿಗೆ ಯಾವುದೇ ಸಂಬಂಧವಿಲ್ಲ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ನಗರದಲ್ಲಿ ಇಂದು

ಈಶ್ವರಮ್ಮ ದಿನಾಚರಣೆಯ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಬೆಳಿಗ್ಗೆ 8ರಿಂದ

ಕಾಲೇಜು ದಿನಾಚರಣೆ: ಅತಿಥಿ: ಶ್ರೀನಿವಾಸಪ್ರಭು, ಅಧ್ಯಕ್ಷತೆ: ವಿಷ್ಣು ಭರತ್ ಅಲಂಪಲ್ಲಿ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು ಎನ್.ಆರ್. ಕಾಲೊನಿ, ಬೆಳಿಗ್ಗೆ 10

'100 ವೆಲ್‌ನೆಸ್ ಆನ್ ವ್ಹೀಲ್ಸ್' ಸಮುದಾಯ ಆರೋಗ್ಯ ಶಿಬಿರ: ಅತಿಥಿಗಳು: ಶ್ರೀ ಶ್ರೀ ರವಿಶಂಕರ್ ಗುರೂಜಿ, ಡಾ. ದೇವಿಪ್ರಸಾದ್ ಶೆಟ್ಟಿ, ಕಮಲ್ ಬಾಲಿ, ಆಯೋಜನೆ: ನಾರಾಯಣ ಹೆಲ್ತ್ ಸಿಟಿ, ವೋಲ್ವೊ, ಸ್ಥಳ: ಅಗರ ಪಂಚಾಯಿತಿ, ಬೆಳಿಗ್ಗೆ 10

ರವಿಶಂಕರ್ ಗುರೂಜಿ

'ನಮ್ಮ ಆರ್ಟ್–ಬೆಂಗಳೂರು ರಾಷ್ಟ್ರೀಯ ಕಲಾ ಮೇಳ'ದ ಉದ್ಘಾಟನೆ: ಅತಿಥಿಗಳು: ಗೀತಾಂಜಲಿ ವಿಕ್ರಮ್ ಕಿರ್ಲೋಸ್ಕರ್, ಕೆ.ಜಿ ರಾಘವನ್, ಅಶ್ರಫಿ ಎಸ್. ಭಗತ್, ರಾಹುಲ್ ಬಸ್ವಾನಿ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ದ್ರೌಪತಮ್ಮ ಧರ್ಮರಾಯಸ್ವಾಮಿ ದೇವಾಲಯದ ಪ್ರಾಣ ಪ್ರತಿಷ್ಠಾಪನೆ, ಕುಂಬಾಭಿಷೇಕ: ಆಯೋಜನೆ ಮತ್ತು ಸ್ಥಳ: ದ್ರೌಪತಮ್ಮ ಧರ್ಮರಾಯಸ್ವಾಮಿ ದೇವಾಲಯ, ಕರಗದ ದೇವಸ್ಥಾನ, ಹೆಸರಘಟ್ಟ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಇಸ್ರೊ ಐಸ್ಯಾಟ್ ಕೇಂದ್ರದ ಮೇಲೆ ಡ್ರೋನ್ ಹಾರಾಟ–ಎಫ್‌ಐಆರ್

ಬೆಂಗಳೂರು (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಉಪಗ್ರಹ ಸಂಯೋಜನೆ ಹಾಗೂ ಪರೀಕ್ಷಾ ಸ್ಥಾಪನೆ (ಐಸ್ಯಾಟ್) ಆವರಣದ ಮೇಲೆ ಡ್ರೋನ್ ಹಾರಾಟ ನಡೆಸಿದವರ ವಿರುದ್ಧ ನಗರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಕೇಂದ್ರವು ಅತ್ಯಂತ ಸೂಕ್ಷ್ಮ, ನಿರ್ಬಂಧಿತ ಪ್ರದೇಶವಾಗಿರುವ ಕಾರಣ ಡ್ರೋನ್ ಹಾರಿಸುವುದನ್ನು ನಿಷೇಧಿಸಲಾಗಿದೆ. ಹೀಗಿದ್ದರೂ ಮೇ 2ರ ಬೆಳಿಗ್ಗೆ 8.16ರ ಸುಮಾರಿಗೆ 80ರಿಂದ 100 ಅಡಿ ಎತ್ತರದಲ್ಲಿ 10ರಿಂದ 12 ಸೆಕೆಂಡುಗಳ ಡ್ರೋನ್ ಹಾರಾಟ ನಡೆಸಿರುವುದು ಕಂಡುಬಂದಿದೆ. ಕೇಂದ್ರದ ಭದ್ರತೆಯ ಹೊಣೆ ಹೊತ್ತಿರುವ ಕೇಂದ್ರಿಯ ಕೈಗಾರಿಕಾ ರಕ್ಷಣಾ ಪಡೆಯ (ಸಿಐಎಸ್‌ಎಫ್) ಸಬ್ ಇನ್‌ಸ್ಪೆಕ್ಟರ್, ಅಪರಿಚಿತ ವ್ಯಕ್ತಿಯ ವಿರುದ್ಧ ಎಚ್‌ಎಎಲ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೊಲೀಸರು ತನಿಖೆ ಆರಂಭಿಸಿದ್ದು, ಆರೋಪಿಯ ಬಂಧನಕ್ಕೆ ಮಾಹಿತಿ ಕಲೆಹಾಕಿದ್ದಾರೆ.

ಮೇಲ್ಸೇತುವೆ ಬಂದ್: ಸವಾರರ ಪರದಾಟ

ಕೆಳರಸ್ತೆಯಲ್ಲಿ ವಾಹನ ದಟ್ಟಣೆ, ಪರ್ಯಾಯ ಮಾರ್ಗದಲ್ಲೂ ವಾಹನಗಳ ಸಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ–4ರ ಪೀಣ್ಯ ಮೇಲ್ಸೇತುವೆಯಲ್ಲಿ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಕೇಬಲ್ ಬದಲಾವಣೆ ಕಾರ್ಯ ಪೂರ್ಣಗೊಂಡಿದ್ದು, ಸಾಮರ್ಥ್ಯ ಪರೀಕ್ಷೆಗೆಂದು ವಾಹನ ಸಂಚಾರ ಬಂದ್ ಮಾಡಲಾಗಿದೆ. ಹೀಗಾಗಿ ಮಂಗಳವಾರ ದಿನವಿಡೀ ವಾಹನ ಚಾಲಕರು ಪರದಾಡಿದರು.

ಮೇಲ್ಸೇತುವೆಯ ಕೆಳರಸ್ತೆಯಲ್ಲಷ್ಟೇ ಎಲ್ಲ ಮಾದರಿಯ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಮಂಗಳವಾರದಿಂದ ಮೇ 8ರ ಬೆಳಿಗ್ಗೆ 11ರತನಕ ಕೆನ್ನಮೆಟಲ್ ವಿಡಿಯಾದ ಅಪ್ಪರ್ ರ್‍ಯಾಂಪ್‌ನಿಂದ ಎಸ್‌ಆರ್‌ಎಸ್ ಡೌನ್ ರ್‍ಯಾಂಪ್‌ವರೆಗೆ ಎರಡೂ ಕಡೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದೆ. ಇದರಿಂದ ಕೆಳರಸ್ತೆಯಲ್ಲಿ ನಗರದ ಒಳಕ್ಕೆ ಬರುವ ಹಾಗೂ ಹೊರಹೋಗುವ ಮಾರ್ಗದ ಉದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬೆಳಿಗ್ಗೆ–ಸಂಜೆ ವೇಳೆ ವಿಪರೀತ ದಟ್ಟಣೆ ಉಂಟಾಗಿ, ಸಾಕಷ್ಟು ಸಮಸ್ಯೆ ಎದುರಾಗುತ್ತಿದೆ ಎಂದು ಚಾಲಕರು ಅಳಲು ತೋಡಿಕೊಂಡರು.

ನಾಗಸಂದ್ರ, 8ನೇ ಮೈಲಿ, ಜಾಲಹಳ್ಳಿ ಕ್ರಾಸ್, ಪೀಣ್ಯ ಜಂಕ್ಷನ್ ಮೂಲಕ ಗೊರಗುಂಟೆಪಾಳ್ಯ ತಲುಪುವುದಕ್ಕೆ ವಾಹನ ಸವಾರರು ಪರದಾಡುವಂತಾಗಿತ್ತು. ನಗರ ಪ್ರವೇಶಿಸುವ ಮೊದಲು ಸಿಗುವ ಟೋಲ್‌ಗೇಟ್‌ನಿಂದಲೇ (ವಿಡಿಯಾ ಸಮೀಪ) ವಾಹನ ದಟ್ಟಣೆ ಆರಂಭವಾಗಿತ್ತು. ಕೆಲವು ವಾಹನಗಳು ದಾಸರಹಳ್ಳಿ ಒಳಭಾಗದ ರಸ್ತೆಯಿಂದ ಪೈಪ್‌ಲೈನ್ ರಸ್ತೆಯ ಮೂಲಕ ನಗರದ ಒಳಕ್ಕೆ ಬರುತ್ತಿದ್ದವು. ಇದರಿಂದ ಸಣ್ಣ ಪುಟ್ಟ ರಸ್ತೆಗಳಲ್ಲಿ ದಟ್ಟಣೆಯಿದ್ದು, ಅಲ್ಲಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

20ಕ್ಕೂ ಹೆಚ್ಚು ಜಿಲ್ಲೆ, ಹೊರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದ್ದು, ಸಾವಿರಾರು ವಾಹನಗಳು ಮೇಲ್ಸೇತುವೆ ಪಕ್ಕದ ಎನ್‌ಎಚ್‌–4 ರಸ್ತೆ, ಸರ್ವೀಸ್ ರಸ್ತೆಯಲ್ಲೇ ನಗರಕ್ಕೆ ಬರಬೇಕಾಗಿದೆ. ಆಂಬುಲೆನ್ಸ್‌ಗಳು ದಟ್ಟಣೆಯಲ್ಲಿ ಸಿಲುಕಿ ರೋಗಿಗಳು ಪರದಾಡಿದರು. ನಗರದಿಂದ ನೆಲಮಂಗಲ, ಹಾಸನ, ಮಂಗಳೂರು, ಚಿಕ್ಕಮಗಳೂರು, ಹುಬ್ಬಳ್ಳಿ, ದಾವಣಗೆರೆ, ತುಮಕೂರು ಕಡೆಗೆ ತೆರಳುವ ವಾಹನ ಸವಾರರು ಮಂಗಳವಾರ ತೊಂದರೆಗೆ ಸಿಲುಕಿದರು.

ಮೇಲ್ಸೇತುವೆಯ 1,422 'ಪ್ರಿಸ್ಟ್ರೆಸಿಂಗ್ ಕೇಬಲ್' ಬದಲಿಸಲಾಗಿದೆ. ಮೇಲ್ಸೇತುವೆಯಲ್ಲಿ ₹32 ಕೋಟಿ ವೆಚ್ಚದಲ್ಲಿ ಹೊಸ ಕೇಬಲ್‌ಗಳನ್ನು ಅಳವಡಿಸಿದ ಬಳಿಕ ಸೇತುವೆಯ ಸಾಮರ್ಥ್ಯ ಮತ್ತು ಸುರಕ್ಷತೆ ಖಚಿತಪಡಿಸಿಕೊಳ್ಳಲು ಭಾರ ತಾಳಿಕೆ ಪರೀಕ್ಷೆ ಅಗತ್ಯವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ತಲಾ 32 ಟನ್ ಭಾರ ಹೊತ್ತ ಎಂಟು ಟ್ರಕ್‌ಗಳನ್ನು ಆಯ್ಕೆ ಮಾಡಲಾದ ನಾಲ್ಕು ನಿರ್ದಿಷ್ಟ ಸ್ಪ್ಯಾನ್‌ಗಳ ಮೇಲೆ ನಿಲ್ಲಿಸಿ ಪರೀಕ್ಷೆ ಮಾಡಲಾಗುತ್ತಿದೆ. ಈ ವೇಳೆ ಸೇತುವೆಯ ರಚನಾತ್ಮಕ ಬದಲಾವಣೆಗಳನ್ನು ಗೇಜ್‌ಗಳ ಮೂಲಕ ಅಳೆಯಲಾಗುತ್ತಿದೆ. ಈ ರೀತಿ ನಾಲ್ಕು ದಿನ ಪರೀಕ್ಷೆ ನಡೆಸಲಾಗುವುದು. ಬಳಿಕ ಮೇಲ್ಸೇತುವೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ–4ರ ಪೀಣ್ಯ ಮೇಲ್ಸೇತುವೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದೆ (ಎಡಚಿತ್ರ) ಮೇಲ್ಸೇತುವೆ ಕೆಳರಸ್ತೆಯಲ್ಲಿ ಉಂಟಾಗಿರುವ ವಾಹನದಟ್ಟಣೆ ಚಿತ್ರಗಳು: ವಿ.ಪುಷ್ಕರ್

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

2ನೇ ಮಹಡಿ, ವನ ವಿಕಾಸ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003. ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/17/2026-27/305 ದಿನಾಂಕ: 05–05–2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವ್ಯವಸಾಯ'** ವಲಯದಿಂದ **'ವಾಣಿಜ್ಯ'** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ದಿವ್ಯ ಎ. ಕೋಂ. ಪ್ರಶಾಂತ್ ಕುಮಾರ್ ಕೆ., ಕರಿಯಪ್ಪನಪಾಳ್ಯ, ಹೆಚ್.ಎಂ. ರೋಡ್ ಇನ್‌ಬಿಟ್ವೀನ್ ಸ್ವೀಚ್ ಮತ್ತು ಹಿಯರಿಂಗ್, ಚಂದ್ರಿಕಾ ಸೋಪ್ ಫ್ಯಾಕ್ಟರಿ, ಬೆಂಗಳೂರು ಉತ್ತರ ಜಿಲ್ಲೆ.	ದೇವನಹಳ್ಳಿ	ಕುಂದಾಣ	ಸೋಲೂರು	79	2-04	ವ್ಯವಸಾಯ	ವಾಣಿಜ್ಯ

ಷರಾ:– ಪ್ರಸ್ತಾವನೆಯಲ್ಲಿನ ಸದರಿ ಪ್ರದೇಶದಲ್ಲಿ ವಾಣಿಜ್ಯ ಕಟ್ಟಡ ಕಾಮಗಾರಿ ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ವಾಣಿಜ್ಯ ಕಟ್ಟಡದಿಂದ ಹತ್ತಿರದಲ್ಲಿ ಧನೋಪಯೋಗಿ ವಸ್ತುಗಳು ಕಡಿಮೆ ದರದಲ್ಲಿ ಲಭ್ಯವಾಗುತ್ತದೆ ಮತ್ತು ವಾಣಿಜ್ಯ ಮಳಿಗೆಗಳು ದೊರಕುತ್ತದೆ. ಈ ಜಾಗದಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತವೆ ಹಾಗೂ ವಾಣಿಜ್ಯ ಚಟುವಟಿಕೆಗಳಿಂದ ಸ್ಥಳೀಯರಿಗೆ ನಿರಂತರವಾಗಿ ಉದ್ಯೋಗಗಳು ದೊರಕುತ್ತದೆ. ವಾಣಿಜ್ಯ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾ.ಪ್ರ/519/ಅಡ್ವರ್ಟೋರ್/2026–27

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ–561203. ದೂರವಾಣಿ: 080–29562046

ಸಂಖ್ಯೆ: DPA/TP/CLU/05/2026-27 ದಿನಾಂಕ: 05.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವ್ಯವಸಾಯ'** ವಲಯದಿಂದ **'ವಸತಿ'** ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳ ಅವಧಿಯೊಳಗೆ** ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು (RTC ರನ್ವಯ)	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ (ಎ–ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾ ಯೋಜನೋಯಲ್ಲಿನ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಪಂಕಜ್‌ಕುಮಾರ್ ಎಸ್ ಬಿನ್ ಸುಮೇರ್ ಮಲ್ ಶಾ	ದೊಡ್ಡಬಳ್ಳಾಪುರ	ಕಸಬಾ	ಅಮಾನಿಪಾಲನಕೆರೆ	12/8	00–01	ವ್ಯವಸಾಯ	ವಸತಿ
2		ದೊಡ್ಡಬಳ್ಳಾಪುರ	ಕಸಬಾ	ಅಮಾನಿಪಾಲನಕೆರೆ	13/1ಎ	00–32.50	ವ್ಯವಸಾಯ	ವಸತಿ
3		ದೊಡ್ಡಬಳ್ಳಾಪುರ	ಕಸಬಾ	ಅಮಾನಿಪಾಲನಕೆರೆ	13/2	00–27	ವ್ಯವಸಾಯ	ವಸತಿ
4		ದೊಡ್ಡಬಳ್ಳಾಪುರ	ಕಸಬಾ	ಅಮಾನಿಪಾಲನಕೆರೆ	13/4	00–05.50	ವ್ಯವಸಾಯ	ವಸತಿ
5		ದೊಡ್ಡಬಳ್ಳಾಪುರ	ಕಸಬಾ	ಅಮಾನಿಪಾಲನಕೆರೆ	29/20	00–06	ವ್ಯವಸಾಯ	ವಸತಿ

ಷರಾ:– ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಸತಿ'** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123
ಇ–ಮೇಲ್: nelamangala.pa@gmail.com Phone No: 96630 46622

ಸಂಖ್ಯೆ: ನೆಯೋಪ್ರಾ: CLU:115 :2025-26 ದಿನಾಂಕ: 05–05–2026

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13–02–2007 ರನ್ವಯ ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಬೈರನಾಯಕನಹಳ್ಳಿ ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ" ವಲಯದಿಂದ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ. ವರ್ಷ ಶ್ರೀ. ಎ ಕೋಂ ರಂಗನಾಥ.ಜೆ, ಮತ್ತು ಶ್ರೀಮತಿ. ಪದ್ಮ ಬಾಬು ಕೋಂ ಮುನಿಸ್ವಾಮಿ ವೆಂಕಟೇಶ್ ಬಾಬು	ನೆಲಮಂಗಲ / ತ್ಯಾಮಗೊಂಡ್ಲು/ ಬೈರನಾಯಕನಹಳ್ಳಿ	85/3ಎ	00–30	ವ್ಯವಸಾಯ	ವಸತಿ
2			85/4	01–08		
3			85/5	0–04		
4			85/6	00–05		
5			85/9	01–00		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾ.ಸಾ.ಸಂ.ಇ/ವಾಪ್ರ/521/ಆಕಾರ್/2026–27

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂಖ್ಯೆ 565/ಎಸ್‌ಟಿಬಿಎ/04–03/2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು, ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಕೆಳಗಿನ ರೈಲ್ವೆಲು ನಿಲ್ದಾಣದಲ್ಲಿ ಮೂರು (03) ವರ್ಷಗಳ ಅವಧಿಗೆ ಕಮಿಷನ್ ಆಧಾರದ ಮೇಲೆ ಕಾಯ್ದಿರಿಸದ ಟಿಕೆಟ್ ವ್ಯವಸ್ಥೆ (ಯುಟಿಎಸ್) ಮೂಲಕ ಕಾಯ್ದಿರಿಸದ/ಸಾಮಾನ್ಯ ಟಿಕೆಟ್‌ಗಳನ್ನು ವಿತರಿಸಲು ನಿಲ್ದಾಣ ಟಿಕೆಟ್ ಬುಕಿಂಗ್ ಏಜೆಂಟ್‌ಗಳ (ಎಸ್‌ಟಿಬಿಎ) ನೇಮಕಕ್ಕಾಗಿ ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ನಿಲ್ದಾಣದ ಹೆಸರು	ವಿಭಾಗ ಕೋಡ್	ನಿಲ್ದಾಣ ವರ್ಗ
1	ಮಾರಿಕುಪ್ಪಂ,	ಎಂಕೆಎಂ,	ಎನ್‌ಎಸ್‌ಜಿ–5
2	ಪಚ್ಚೂರು,	ಪಿಯು,	ಎನ್‌ಎಸ್‌ಜಿ–6
3	ಸೋಮನಾಯಕಪಟ್ಟಿ	ಎಸ್‌ಕೆಪಿಟಿ	

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05–06–2026 ರಂದು ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 15.00 ರವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.swr.indianrailways.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

ಪಿಯುಬಿ/87/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2026–27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ

ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562157
ಇ–ಮೇಲ್: itstaff_ulb_hmhalli@gmail.com ದೂ: 080–23901864

ಸಂ: ಪುಸಹು/ಕಲ್ಯಾಣ.ಶಾ/ಸಿ.ಆರ್/14/2026–27 ದಿನಾಂಕ: 04–05–2026

ಸಾರ್ವಜನಿಕ ಪ್ರಕಟಣೆ

ಹುಣಸಮಾರನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಪ.ಜಾತಿ ಮತ್ತು ಪ.ಪಂಗಡ, ಇತರೆ, ಹಿಂದುಳಿದ ಜನಾಂಗದ ಮತ್ತು ವಿಶೇಷ ಚೇತನರ ಅಭಿವೃದ್ಧಿಗೆ ಸರ್ಕಾರದ ಮಾರ್ಗಸೂಚಿಯಂತೆ 2026–27ನೇ ಸಾಲಿಗೆ ಎಸ್.ಎಫ್.ಸಿ. ಮುಕ್ತನಿಧಿ ಶೇ.24.10% ಮತ್ತು ಶೇ.5% ರ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಕ್ರಮ ಕೈಗೊಂಡಿದ್ದು, ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳು ಪುರಸಭಾ ಕಛೇರಿಯಲ್ಲಿ ಲಭ್ಯವಿರುವ ಉಚಿತ ಅರ್ಜಿಯೊಂದಿಗೆ ದಿನಾಂಕ: 10/06/2026 ರ ಸಂಜೆ 5.00 ಗಂಟೆಯ ಒಳಗಾಗಿ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಯಪಡಿಸಿದೆ. ಹೆಚ್ಚಿನ ಮಾಹಿತಿಗೆ ಪುರಸಭಾ ಕಛೇರಿಗೆ ಬೇಟಿ ಮಾಡಿ ಮಾಹಿತಿ ಪಡೆಯಬಹುದು ಅಥವಾ ಪುರಸಭಾ ಕಛೇರಿಯ ದೂರವಾಣಿ ಸಂಖ್ಯೆ: 080–23901684 ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/–
ಆಡಳಿತಾಧಿಕಾರಿ, ಹುಣಸಮಾರನಹಳ್ಳಿ ಪುರಸಭೆ
ಹಾಗೂ ಉಪ ವಿಭಾಗಾಧಿಕಾರಿಗಳು,
ಬೆಂಗಳೂರು ಉತ್ತರ ಉಪ ವಿಭಾಗ

ಸಹಿ/–
ಮುಖ್ಯಾಧಿಕಾರಿಗಳು,
ಪುರಸಭೆ, ಹುಣಸಮಾರನಹಳ್ಳಿ

DIPR/CP/SMCL/517/2026-27

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 17 ಏಪ್ರಿಲ್, 2026

S.O.1931(E)– ರೈಲ್ವೆ ಕಾಯ್ದೆ, 1989 (1989 ರ 24)ರ ಸೆಕ್ಷನ್ 20F ನ ಷರತ್ತು (6) ಮತ್ತು ಸೆಕ್ಷನ್ 2ರ ಷರತ್ತು 7A ನಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ರೈಲ್ವೆ ಸಚಿವಾಲಯ (ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) ಕೆಳಗಿನ ಕೋಷ್ಟಕದ ಕಾಲಮ್ (4) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ **'ಸಮರ್ಥ ಪ್ರಾಧಿಕಾರ'** ಎಂದು ಮತ್ತು ಕೆಳಗಿನ ಕೋಷ್ಟಕದ ಕಾಲಮ್ (5) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ **'ಮಧ್ಯಸ್ಥರು'** ಎಂದು ಅಧಿಕಾರ ನೀಡುತ್ತದೆ, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಗಿನ ಕೋಷ್ಟಕದ ಕಾಲಮ್ (3)ರಲ್ಲಿ ಉಲ್ಲೇಖಿಸಲಾದ ಜಿಲ್ಲೆಗೆ ಸಂಬಂಧಿಸಿದ ವಿಶೇಷ ರೈಲ್ವೆ ಯೋಜನೆಗಳಿಗೆ ಸಂಬಂಧಿಸಿದಂತೆ ಅಂತಹ ವಿಶೇಷ ರೈಲ್ವೆ ಯೋಜನೆಯ ಅನುಷ್ಠಾನ, ನಿರ್ವಹಣೆ, ನಿರ್ವಹಣೆ ಮತ್ತು ಕಾರ್ಯಾಚರಣೆಯ ಸಾರ್ವಜನಿಕ ಉದ್ದೇಶಕ್ಕಾಗಿ.

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಜಿಲ್ಲೆ	ಸಕ್ಷಮ ಪ್ರಾಧಿಕಾರ	ಮಧ್ಯಸ್ಥಗಾರ
1	ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು, ಕೊಪ್ಪ ಗ್ರಾಮ, ತುಮಕೂರು–ಅರಸೀಕೆರೆ (ಟಿಕೆ–ಎಎಸ್‌ಕೆ) ವಿಭಾಗದಲ್ಲಿ ಎಲ್‌ಸಿ ಸಂಖ್ಯೆ 81ರ ಬದಲಿಗೆ ಎಲ್‌ಎಚ್‌ಎಸ್ ಹೊಂದಿರುವ ರಸ್ತೆ ಮೇಲ್ಸೇತುವೆ ನಿರ್ಮಾಣ	ತುಮಕೂರು	ವಿಶೇಷ ಭೂಸ್ವಾಧೀನ ಅಧಿಕಾರಿ, ತುಮಕೂರು ರಾಯದುರ್ಗ ಯೋಜನೆ, ತುಮಕೂರು ರೈಲ್ವೆ	ಪ್ರಾದೇಶಿಕ ಆಯುಕ್ತರು, ಬೆಂಗಳೂರು

[F.No.W.271/CN/BNC/2026-27 Land SRP/1727]

ಹೆಚ್ಚಿನ ಮಾಹಿತಿಗಳಿಗಾಗಿ: https://egazette.gov.in ಲಾಗಿನ್ ಮಾಡಿ

ಪ್ರದೀಪ್ ಪುರಿ
ಮುಖ್ಯ ಅಭಿಯಂತರರು/ನಿರ್ಮಾಣ/ಬೆಂಗಳೂರು ದಂಡು

PUB/89/AAD360/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

'ಮನ್ವಂತರಕ್ಕೆ ಅಣಿಯಾಗಲಿ'

112ನೇ ಸಂಸ್ಥಾಪನಾ ದಿನ: ಇಬ್ಬರಿಗೆ ದತ್ತಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಥಿತ್ಯಂತರದ ಕಾಲಘಟ್ಟಗಳನ್ನು ದಾಟಿಕೊಂಡು ಬಂದ ಶತಮಾನದ ಹಿನ್ನೆಲೆಯ ಕನ್ನಡ ಸಾಹಿತ್ಯ ಪರಿಷತ್ತು ನವ ಮನ್ವಂತರಕ್ಕೆ ಅಣಿಯಾಗಬೇಕು' ಎಂದು ಸಾಹಿತಿ ಹಂ.ಪ.ನಾಗರಾಜಯ್ಯ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಂಗಳವಾರ ಆಯೋಜಿಸಿದ್ದ112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

'1915ರಲ್ಲಿ ಇದೇ ದಿನ ಆರಂಭಗೊಂಡ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಹೆಮ್ಮರವಾಗಿ ಬೆಳೆದಿದೆ. ಮೈಸೂರು ಮಹಾರಾಜರು, ದಿವಾನರ ಬೆಂಬಲ, ಹಲವು ವಿದ್ವಾಂಸರು, ಕನ್ನಡ ಕಟ್ಟಾಳುಗಳಿಂದ ಪರಿಷತ್ತು ನಿರಂತರವಾಗಿ ಕೆಲಸ ಮಾಡುತ್ತಾ ಬಂದಿದೆ. ಇಂತಹ ಸಂಸ್ಥೆ ಹೊಸ ಕಳೆಯನ್ನು ಪಡೆದು ತನ್ನ ಪ್ರಭಾವಳಿ, ವೈಭವವನ್ನು ಮುಂದುವರಿಸಿಕೊಂಡು ಹೋಗಲಿ' ಎಂದು ಹೇಳಿದರು.

'ಎ.ಆರ್.ಕೃಷ್ಣಶಾಸ್ತ್ರಿ, ಎಚ್.ವಿ. ನಂಜುಂಡಯ್ಯ, ಜಿ.ನಾರಾಯಣ ಸಹಿತ ಹಲವರು ಪರಿಷತ್ತಿನ ಪ್ರಗತಿಗೆ ಕೊಡುಗೆ ನೀಡಿದ್ದಾರೆ. ತನ್ನದೇ ಧ್ಯೇಯ ಹಾಗೂ ಅಂಗರಚನೆಯೊಂದಿಗೆ ಗಟ್ಟಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಪರಿಷತ್ತಿನ ಕನ್ನಡ–ಕನ್ನಡ ನಿಘಂಟು ಪ್ರಮುಖವಾದದ್ದು. 4 ಲಕ್ಷಕ್ಕೂ ಅಧಿಕ ಸದಸ್ಯರೊಂದಿಗೆ ಸಂಘಟನೆ, ಸಮ್ಮೇಳನಗಳೂ ಪರಿಷತ್ತಿನ ಕನ್ನಡ ಪರ ಚಟುವಟಿಕೆ ವಿಸ್ತರಣೆಗೆ ನೆರವಾಗಿವೆ' ಎಂದು ತಿಳಿಸಿದರು.

ಪರಿಷತ್ ಮಾಜಿ ಅಧ್ಯಕ್ಷ ಮನು ಬಳಿಗಾರ್ ಮಾತನಾಡಿ, 'ಹಲವು ಮೊದಲುಗಳನ್ನು ಕನ್ನಡ ಸಾಹಿತ್ಯ ಪರಿಷತ್ ಸಾಧಿಸಿದೆ. ದಲಿತ ಸಾಹಿತ್ಯ ಸಂಪುಟ, ಮಹಿಳಾ ಸಾಹಿತ್ಯ ಸಂಪುಟಗಳು, ಗೋವಾ, ಮುಂಬೈನಲ್ಲೂ ಪರಿಷತ್ ಘಟಕ ಸ್ಥಾಪನೆ, 140 ಪುಸ್ತಕಗಳ ಡಿಜಿಟಲೀಕರಣದಂತಹ ಕೆಲಸಗಳು ಆಗಿವೆ' ಎಂದು ಹೇಳಿದರು.

'ಮಹಾರಾಜರ ಬೆಂಬಲದ ನಂತರ, ಪ್ರಜಾಪ್ರಭುತ್ವ ಸರ್ಕಾರಗಳು ಪರಿಷತ್ತಿಗೆ ನೆರವು ನೀಡಿವೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಶತಮಾನೋತ್ಸವ ಭವನಕ್ಕೆ ₹4.50 ಕೋಟಿ ನೆರವು ನೀಡಿ ನಂತರ ಅವರೇ ಭವನ ಉದ್ಘಾಟಿಸಿದರು. ಸಾಹಿತ್ಯ ಸಮ್ಮೇಳನಕ್ಕೆ ಬಿ.ಎಸ್. ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯ ಸಹಿತ ಎಲ್ಲಾ ಮುಖ್ಯಮಂತ್ರಿಗಳು ಕೊರತೆಯಾಗದಂತೆ ಅನುದಾನ ಒದಗಿಸಿದ್ದಾರೆ' ಎಂದರು.

ಎಂ. ಜಿತೇಂದ್ರ ಅವರಿಗೆ 'ಎಸ್. ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ' ಮತ್ತು ಕೆ. ಸಿ. ಶಿವಸ್ವಾಮಿ ಅವರಿಗೆ 'ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಮಕ್ಕಳ ಸಿಬ್ಬಂದಿ ಸೇವಾದತ್ತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಾಸನ ತಜ್ಞ ಎಂ. ಜಿ. ನಾಗರಾಜ್, ಸಾಹಿತಿ ಆರ್. ಕೆ. ನಲ್ಲೂರು ಪ್ರಸಾದ್, ಹಂಪ ನಾಗರಾಜಯ್ಯ, ಕೆ.ಎ. ದಯಾನಂದ, ಮನು ಬಳಿಗಾರ್, ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶ್ ಮೂರ್ತಿ ಮತ್ತು ಲೇಖಕ ಜಗನ್ನಾಥ ಹೇಮಾದ್ರಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

> **ಕನ್ನಡದ ಕೆಲಸ ಏನಾಗಬೇಕು ಎಂದು ತಿಳಿಸಿದರೆ ಅದನ್ನು ಮಾಡಲು ಸಿದ್ಧನಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತು ಹೊಸ ಮನ್ವಂತರಕ್ಕೆ ತೆರೆದುಕೊಳ್ಳಬೇಕಾಗಿದೆ**
> **ಕೆ.ಎ. ದಯಾನಂದ**
> ಆಡಳಿತಾಧಿಕಾರಿ, ಕಸಾಪ

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
ಇ–ಮೇಲ್: smm.rwfblr@gmail.com

ಇ–ಟೆಂಡರ್ ಸೂಚನೆ:

ದಿನಾಂಕ: 30/04/2026

ಭಾರತ ಸರ್ಕಾರದ ಪರವಾಗಿ, ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಇವರು ಕೆಳಕಂಡ ಕಾರ್ಯಗಳಿಗೆ ಎರಡು ಹಂತದ (Two Packet System) ಇ–ಟೆಂಡರ್ ಅನ್ನು http://www.ireps.gov.in (Works) ಆನ್ಲೈನ್ ಮೂಲಕ ಆಹ್ವಾನಿಸಿದ್ದಾರೆ.

ಕೆಲಸದ ವಿವರ: ಒಟ್ಟು 1,80,000 ಆಕ್ಸಲ್‌ಗಳ ಫೋರ್ಜಿಂಗ್ ಲೈನ್ (ಕನ್ಸ್ಯೂಮೆಬಲ್ಸ್ ಒಳಗೊಂಡಂತೆ) ಕಾರ್ಯವನ್ನು 2 ವರ್ಷಗಳ ಅವಧಿಗೆ ಔಟ್‌ಸೋರ್ಸ್ ಮಾಡುವುದು.

ಟೆಂಡರ್ ವಿವರಗಳು: ಟೆಂಡರ್ ಸಂಖ್ಯೆ: ಆರ್ ಡಬ್ಲ್ಯೂ ಎಫ್/ಎಂ/ಓಟಿ /ಎ ಎಫ್ ಎಸ್/2026–27/07 **ಅಂದಾಜು ವೆಚ್ಚ:** ₹ 14,20,03,800, ಇ.ಎಂ.ಡಿ : ₹ 28,40,100, **ಟೆಂಡರ್ ಕೊನೆಗೊಳ್ಳುವ ದಿನಾಂಕ:** 22/05/2026 ಬೆಳಿಗ್ಗೆ 10.30 ಗಂಟೆ, **ಹಣಕಾಸು ಬಿಡ್ ತೆರೆಯುವ ದಿನಾಂಕ:** ನಂತರ ತಿಳಿಸಲಾಗುವುದು, **ಅವಧಿ:** 24 ತಿಂಗಳು, ಈ ಟೆಂಡರ್‌ಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಮತ್ತು ಅರ್ಹತಾ ಮಾನದಂಡಗಳನ್ನು www.rwf.indianrailways.gov.in ಅಧಿಕೃತ ವೆಬ್‌ಸೈಟ್‌ನಲ್ಲಿ ನೋಡಬಹುದು.

ಮಂಡ್ಯ ವಿ.ವಿ ಭವಿಷ್ಯ: ಸಂಪುಟದಲ್ಲಿ ತೀರ್ಮಾನ

ರಾಮನಗರ: 'ಮಂಡ್ಯ ವಿಶ್ವವಿದ್ಯಾಲಯ ಮುಚ್ಚುವ ಬಗ್ಗೆ ಸ್ಪಷ್ಟತೆ ಇಲ್ಲ. ಈ ಬಗ್ಗೆ ಅಧ್ಯಯನಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಿ ಚರ್ಚಿಸಲಾಗಿದೆ. ಸಮಿತಿಯ ಅಂತಿಮ ವರದಿ ಕುರಿತು ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಹೇಳಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ತುಮಕೂರು ವಿಭಾಗ, ತುಮಕೂರು

ಸಂ: ಕರಾಸಾ/ತುವಿ/ಸಂ/ವಾ/240/2026–27 ದಿನಾಂಕ: 29.04.2026

ಇ–ಟೆಂಡರ್ ಪ್ರಕಟಣೆ ಸಂಖ್ಯೆ : 01/2026–27
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ತುಮಕುರು ವಿಭಾಗಕ್ಕೆ ಸೇರಿದ ಡಿ. ದೇವರಾಜು ಅರಸು, ಅಮೃತೂರು, ಸಿ.ಎಸ್.ಪುರ, ಕಡಬ, ತಿಪಟೂರು, ಕೊರಟಗೆರೆ, ಸೋಲೂರು, ನಿಟ್ಟೂರು, ಕುಣಿಗಲ್, ಹುಲಿಯೂರುದುರ್ಗ, ಚಿಕ್ಕನಾಯಕರನಹಳ್ಳಿ, ಮಧುಗಿರಿ, ತುರುವೇಕರೆ ಮತ್ತು ಹೆಬ್ಬೂರು ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಖಾಲಿಯಾಗುವ ವಾಣಿಜ್ಯ ಸ್ಥಳಗಳಾದ ಮಳಿಗೆಗಳಲ್ಲಿ ವ್ಯಾಪಾರ ನಡೆಸಲು ಹಾಗೂ ವಿಭಾಗ ವ್ಯಾಪ್ತಿಯ ಬಸ್ ನಿಲ್ದಾಣ/ಘಟಕಗಳಲ್ಲಿನ ಖಾಲಿಯಿರುವ ಜಾಹೀರಾತು ಹೋರ್ಡಿಂಗ್ಸ್ ಪ್ಯಾಕೇಜ್‌ಗಳನ್ನು ನಿಗಮದ ನಿಯಮಾವಳಿಗಳನ್ವಯ ಪ್ರದರ್ಶಿಸಲು ಪರವಾನಗಿ ಆಧಾರದ ಮೇಲೆ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ, ದಿನಾಂಕ: 04/05/2026 ರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ದಿ:– 25–05–2026 ರ 17.00 ಗಂಟೆಯೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ತುಮಕೂರು ವಿಭಾಗ, ಮಧುಗಿರಿ ಮುಖ್ಯ ರಸ್ತೆ, ಎ.ಪಿ.ಎಂ.ಸಿ ಮಾರ್ಕೆಟ್ ಹತ್ತಿರ, ಅಂತರಸನ ಹಳ್ಳಿ, ತುಮಕೂರು–572106 ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ಮೊಬೈಲ್ ಸಂಖ್ಯೆ:–7760990902 (ವಿಭಾಗೀಯ ಸಂಚಲನಾಧಿಕಾರಿಗಳು).

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ತುಮಕೂರು ವಿಭಾಗ, ತುಮಕೂರು

ವಾ.ಸಾ.ಸಂ.ಇ/ವಾಪ್ರ/516/ಆಕಾರ್/2026–27

ಮೇಲ್ಮನವಿ ಬುಡಕಟ್ಟು ಕಂದಾಯ ಇಲಾಖೆ, ಹಣಕಾಸು ಸಚಿವಾಲಯ, ಭಾರತ ಸರ್ಕಾರ

4ನೇ ಮಹಡಿ, ಲೋಕ ನಾಯಕ್ ಭವನ, ಖಾನ್ ಮಾರುಕಟ್ಟೆ, ನವದೆಹಲಿ–110003,
ದೂರವಾಣಿ ಸಂಖ್ಯೆ. 011–20819916, ಇ–ಮೇಲ್: registry-atfp@gov.in

(ಮೇಲ್ಮನವಿದಾರರ ಮೂಲಕ ತಲುಪಿಸಬೇಕು) FPA-PMLA-4551/BNG/2022

ಶಾಖಾ ವ್ಯವಸ್ಥಾಪಕರು, ಕೆನರಾ ಬ್ಯಾಂಕ್ ... ಅರ್ಜಿದಾರರು
ವಿರುದ್ಧ
ಉಪ ನಿರ್ದೇಶಕರು, ಇಡಿ, ಬೆಂಗಳೂರು ಮತ್ತು ಇತರರು. ...ಪ್ರತಿವಾದಿಗಳು

ನಿಯಮ 20 ರ ಆದೇಶ 5 ರ ಅಡಿಯಲ್ಲಿ ಪ್ರಕಟಣೆ ಸೂಚನೆ.

1. **ಪ್ರತಿವಾದಿ–2 :** ಮೆ. ಶ್ರೀ ಕಣ್ವ ಸೌಹಾರ್ದ, ಕೋ–ಆಪರೇಟಿವ್ ಕ್ರೆಡಿಟ್ ಲಿಮಿಟೆಡ್, ಸಂಖ್ಯೆ 861, ಕಣ್ವ ಶ್ರೀ ಸಾಯಿ ಕಾಂಪ್ಲೆಕ್ಸ್, ಮೋದಿ ಆಸ್ಪತ್ರೆ ಎದುರು, ವೆಸ್ಟ್ ಆಫ್ ಕಾರ್ಡ್ ರೋಡ್, ರಾಜಾಜಿನಗರ, ಬೆಂಗಳೂರು–560086.
2. **ಪ್ರತಿವಾದಿ–3 :** ಶ್ರೀ ಎನ್ ನಂಜುಂಡಯ್ಯ, ಮೆ. ಶ್ರೀ ಕಣ್ವ ಸೌಹಾರ್ದದ ಸ್ಥಾಪಕರು ಮತ್ತು ನಿರ್ದೇಶಕರು, ನಂ. 408, ಎ ಬ್ಲಾಕ್, ಬ್ರಿಗೇಡ್ ಗೇಟ್ ವೇ ಅಪಾರ್ಟ್‌ಮೆಂಟ್. ಡಾ. ರಾಜ್ ಕುಮಾರ್ 2ನೇ ಹಂತ. ರಾಜಾಜಿನಗರ, ಬೆಂಗಳೂರು, ಉತ್ತರ ಮಲ್ಲೇಶ್ವರಂ.
3. **ಪ್ರತಿವಾದಿ–4 :** ಮೆ. ಕಣ್ವ ಫ್ಯಾಷನ್ಸ್ ಲಿಮಿಟೆಡ್, ಸಂಖ್ಯೆ 861, ಕಣ್ವ ಶ್ರೀ ಸಾಯಿ ಕಾಂಪ್ಲೆಕ್ಸ್, ಮೋದಿ ಆಸ್ಪತ್ರೆ ಎದುರು, ವೆಸ್ಟ್ ಆಫ್ ಕಾರ್ಡ್ ರೋಡ್, ರಾಜಾಜಿನಗರ, ಬೆಂಗಳೂರು–560086.
4. **ಪ್ರತಿವಾದಿ–5 :** ಶ್ರೀ ಹರೀಶ್ ಎಸ್. ಶ್ರೀ ಕಣ್ವ ಸೌಹಾರ್ದದ ಅಧ್ಯಕ್ಷರು, ನಂ. 456, ಜನತಾ ಕಾಲೋನಿ, ಜೆ.ಆರ್.ನಗರ, ಅಂಚೆ ಕಚೇರಿ ಹತ್ತಿರ, ಬನ್ನೇರುಘಟ್ಟ, ಬೆಂಗಳೂರು.
5. **ಪ್ರತಿವಾದಿ–6 :** ಶ್ರೀಮತಿ. ಪ್ರವೀಣ ಎನ್. ಕೋಂ ಶ್ರೀ ಎನ್. ನಂಜುಂಡಯ್ಯ, ನಂ. 408, ಎ ಬ್ಲಾಕ್ ಬ್ರಿಗೇಡ್ ಗೇಟ್ ವೇ ಅಪಾರ್ಟ್‌ಮೆಂಟ್, ಡಾ.ರಾಜ್ ಕುಮಾರ್, 2ನೇ ಹಂತ ರಾಜಾಜಿನಗರ, ಬೆಂಗಳೂರು, ಉತ್ತರ ಮಲ್ಲೇಶ್ವರಂ.
6. **ಪ್ರತಿವಾದಿ–7 :** ಶ್ರೀ ಕಿಶೋರ್ ಕುಮಾರ್ ಬಿನ್ ಶ್ರೀ ಎನ್. ನಂಜುಂಡಯ್ಯ, ನಂ. 408, ಎ ಬ್ಲಾಕ್ ಬ್ರಿಗೇಡ್ ಗೇಟ್ ವೇ ಅಪಾರ್ಟ್‌ಮೆಂಟ್, ಡಾ.ರಾಜ್ ಕುಮಾರ್, 2ನೇ ಹಂತ ರಾಜಾಜಿನಗರ, ಬೆಂಗಳೂರು, ಉತ್ತರ ಮಲ್ಲೇಶ್ವರಂ.

ಮೇಲ್ಮನವಿ ನಂ. FPA-PMLA-4551/BNG/2022 ಅನ್ನು ಮೇಲ್ಮನವಿ ನ್ಯಾಯಮಂಡಳಿ, 4ನೇ ಮಹಡಿ, ಸಿ–ವಿಂಗ್, ಲೋಕನಾಯಕ್ ಭವನ, ಖಾನ್ ಮಾರ್ಕೆಟ್, ನವದೆಹಲಿಯಲ್ಲಿರುವ ಗೌರವಾನ್ವಿತ ಪೀಠದ ನಿರ್ದೇಶನದ ಮೇರೆಗೆ ನೀಡಲಾಗಿದೆ. ಮೇಲೆ ಹೆಸರಿಸಲಾದ ಪ್ರತಿವಾದಿಗಳಿಗೆ ಸಾಮಾನ್ಯ ಸೇವೆ ಸಲ್ಲಿಸಲು ಸಾಧ್ಯವಿಲ್ಲ ಎಂದು ಗೌರವಾನ್ವಿತ ಪೀಠದ ತೃಪ್ತಿಗೆ ಸಾಬೀತಾಗಿದೆ.

ಆದ್ದರಿಂದ, ಸಿಪಿಸಿ ಯ ಆದೇಶ 5 ನಿಯಮ 20 ರ ಅಡಿಯಲ್ಲಿ ಈ ಘೋಷಣೆಯನ್ನು ಅವರ ವಿರುದ್ಧ ಹೊರಡಿಸಲಾಗಿದೆ ಮತ್ತು ಅವರು ವೈಯಕ್ತಿಕವಾಗಿ ಅಥವಾ ಅವರ ವಕೀಲರ ಮೂಲಕ **ದಿನಾಂಕ 06.05.2026 ರಂದು ಬೆಳಿಗ್ಗೆ 11:00 ಗಂಟೆಗೆ** ಮೇಲ್ಮನವಿ ನ್ಯಾಯಮಂಡಳಿಯ ಮುಂದೆ ಹಾಜರಾಗಬೇಕು.

ಹಿಂದಿನ ದಿನ ಹಾಜರಾಗದಿದ್ದರೆ, ಮೇಲೆ ಹೇಳಲಾದ ಪ್ರಕರಣವನ್ನು ಅವರ ಅನುಪಸ್ಥಿತಿಯಲ್ಲಿ ವಿಚಾರಣೆ ಮಾಡಿ ನಿರ್ಧರಿಸಲಾಗುತ್ತದೆ ಎಂಬುದನ್ನು ಗಮನಿಸುವುದು.

ಆದೇಶದ ಮೇರೆಗೆ

cbc19119/11/0001/2627

गृह मंत्रालय MINISTRY OF HOME AFFAIRS

National Forensic Sciences University
Goa Campus
(An Institution of National Importance under Ministry of Home Affairs Government of India)



ADMISSION OPEN

ACADEMIC YEAR 2026-2027

COURSES OFFERED
- M. Sc. Forensic Science (2 Years)
- Integrated B. Sc. - M. Sc. Forensic Science (5 Years)
- M. Tech. Artificial Intelligence & Data Science (Specialization in Cyber Security) (2 Years)
- M. Sc. Digital Forensics & Information Security (2 Years)
- M. Sc. Cyber Security (2 Years)
- Professional Diploma in Crime Scene Management (6 Months)

For eligibility criteria, application and other information please visit https://nfsu.ac.in/admission

LAST DATE TO APPLY 10 JUNE 2026

Contact Us 083223 13032, 96420 33941 info_goa@nfsu.ac.in

ಚಟಿಕೆ ಸುದ್ದಿ

ಕೃಷ್ಣಮೂರ್ತಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ



ಪ್ರೊ. ಎಂ. ಕೃಷ್ಣಮೂರ್ತಿ

ಬೆಂಗಳೂರು: ಭಾರತೀಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಾಪಕರ ಸಂಘ (ಐಎಟಿಎಲ್ಐಎಸ್) ನೀಡುವ ಪ್ರೊ.ಎ.ಜಿ. ಮೋತಿವಾಲೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಬೆಂಗಳೂರಿನಲ್ಲಿ ಇರುವ ಭಾರತೀಯ ಸಾಂಖ್ಯಿಕ ಸಂಸ್ಥೆಯ ಪ್ರೊ. ಎಂ. ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ.

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದಲ್ಲಿ ಕೃಷ್ಣಮೂರ್ತಿ ಅವರ ನೀಡಿದ ವಿಶಿಷ್ಟ ಕೊಡುಗೆಗಳನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮೇ 7ರಿಂದ 9ರವರೆಗೆ ತಿರುಚಿರಾಪಳ್ಳಿಯ ಭಾರತಿದಾಸನ್ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಹಯೋಗದಲ್ಲಿ ನಡೆಯುವ ಐಎಟಿಎಲ್ಐಎಸ್‌ನ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ರಾಮೋಹಳ್ಳಿ ಮೇಲ್ಸೇತುವೆ: ಶೀಘ್ರ ಪೂರ್ಣ

ಬೆಂಗಳೂರು: ಮೈಸೂರು ರಸ್ತೆಯ ರಾಮೋಹಳ್ಳಿ ರೈಲ್ವೆ ಕೆಳಸೇತುವೆ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದ್ದು, 2 ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ರೈಲ್ವೆ ಗೇಟ್ ರಸ್ತೆ ಬಂದ್ ಆಗಿರುವುದರಿಂದ ವಾಹನಗಳ ಸಂಚಾರಕ್ಕೆ ಪರ್ಯಾಯ ಮಾರ್ಗದ ವ್ಯವಸ್ಥೆ ಮಾಡಲಾಗಿದೆ. ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದ್ದು, ಸಾರ್ವಜನಿಕರಿಗೆ ತೊಂದರೆ ಆಗದಂತೆ ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ರಾಜ್ಯದ ಹಲವು ಕಡೆ ರೈಲ್ವೆ ಮೇಲ್ಸೇತುವೆ ಕಾಮಗಾರಿಗಳು ನಡೆಯುತ್ತಿದ್ದು, ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿವೆ ಎಂದರು.

ತತ್ವಪದ ವಿಮರ್ಶಾ ಲೇಖನ ಆಹ್ವಾನ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ರಾಜ್ಯಮಟ್ಟದ 'ತತ್ವಪದ ವಿಮರ್ಶಾ ಲೇಖನ ಸ್ಪರ್ಧೆ'ಗೆ ಲೇಖನಗಳನ್ನು ಆಹ್ವಾನಿಸಿದೆ. 18ರಿಂದ 40 ವರ್ಷದೊಳಗಿನವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಸ್ಪರ್ಧೆಯ ವಿಷಯ ಹಾಗೂ ಅರ್ಜಿ ನಮೂನೆ https://kanakadasaresearchcenter.karnataka.gov.in/ನಲ್ಲಿ ಲಭ್ಯವಿದೆ. ಆಸಕ್ತರು ಯಾವುದಾದರೂ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು, ವಿಮರ್ಶಾ ಲೇಖನವನ್ನು ಜೂನ್ 5ರೊಳಗೆ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9743545865

ಉಚಿತ ಪ್ಲಾಸ್ಟಿಕ್ ಸರ್ಜರಿ ಶಿಬಿರ

ಬೆಂಗಳೂರು: ಸುಟ್ಟ ಗಾಯಗಳು, ಅಪಘಾತ, ಆಸಿಡ್ ದಾಳಿಗೆ ತುತ್ತಾದ ಸಂತ್ರಸ್ತರಿಗೆ ಫ್ರೆಂಡ್ಸ್ ವೆಲ್‌ಫೇರ್ ಆರ್ಗನೈಸೇಷನ್ ಇದೇ 12ರಿಂದ 22ರವರೆಗೆ ಗಿರಿನಗರದಲ್ಲಿರುವ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಉಚಿತ ಪ್ಲಾಸ್ಟಿಕ್ ಸರ್ಜರಿ ಶಿಬಿರ ಆಯೋಜಿಸಿದೆ. ಸುಟ್ಟ ಗಾಯಗಳಿಂದ ಬಳಲುತ್ತಿರುವ ರೋಗಿಗಳಿಗೆ ಜೀವನ ಬದಲಿಸುವ ಚಿಕಿತ್ಸೆ ಒದಗಿಸುವ ಉದ್ದೇಶವನ್ನು ಈ ಶಿಬಿರ ಹೊಂದಿದೆ. 4,500ಕ್ಕೂ ಹೆಚ್ಚು ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಗಿದೆ.

ಶಿಬಿರದಲ್ಲಿ ಶಸ್ತ್ರಚಿಕಿತ್ಸೆ, ಆಸ್ಪತ್ರೆಗೆ ದಾಖಲು, ಔಷಧ, ಆಹಾರ ಮತ್ತು ಪ್ರಯಾಣ ಸಹಾಯ ಸೇರಿದಂತೆ ಎಲ್ಲವನ್ನು ಉಚಿತವಾಗಿ ಒದಗಿಸಲಾಗುತ್ತದೆ. ನೋಂದಣಿಗೆ ಮೊ.ಸಂಖ್ಯೆ 98803 07780 ಅಥವಾ 9148741707 ಸಂಪರ್ಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಜಲಮಂಡಳಿ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿ ವಿವಿಧ ಉಪವಿಭಾಗಗಳಲ್ಲಿ ನೀರಿನ ಅದಾಲತ್ ಅನ್ನು ಮೇ 7ರಂದು ಹಮ್ಮಿಕೊಳ್ಳಲಾಗಿದೆ.

ಪೂರ್ವ 1-1ರ ಉಪವಿಭಾಗದ ಅದಾಲತ್ ಬಿಇಎಂಎಲ್ ಲೇಔಟ್ ಕುಂದಲಹಳ್ಳಿ ಮುಖ್ಯರಸ್ತೆ, ಪೂರ್ವ 2-1 ಕಲ್ಯಾಣ ನಗರ, ಆಗ್ನೇಯ-1 ಹಲಸೂರು, ಆಗ್ನೇಯ-4 ಎಚ್ಎಎಲ್ 2ನೇ ಹಂತ, ಪಶ್ಚಿಮ 1-1 ವಿಜಯನಗರ 2ನೇ ಹಂತ, ಪಶ್ಚಿಮ 2-1 ರಾಜರಾಜೇಶ್ವರಿನಗರ, ವಾಯವ್ಯ-1 ಎಂಇಐ ಲೇಔಟ್, ಕೇಂದ್ರ 1-1 ಹೈಗ್ರೌಂಡ್ಸ್, ಈಶಾನ್ಯ-1 ಮಲ್ಲೇಶ್ವರಂ, ಉತ್ತರ 1-1 ಉಪವಿಭಾಗದ ಅದಾಲತ್ ಜಕ್ಕೂರಿನಲ್ಲಿ ನಡೆಯಲಿದೆ.

1916ಕ್ಕೆ ಕರೆ ಮಾಡಿ ದೂರು ದಾಖಲಿಸಬಹುದು. 8762228888 ಗೆ ವಾಟ್ಸ್ ಆ್ಯಪ್ ಮೂಲಕವೂ ದೂರು ನೀಡಬಹುದು.

'ಬೆಂಗಳೂರು ಪ್ರಗತಿಯ ಹಬ್'

ವಿಶ್ವದ ನಗರಗಳ ಜತೆ ಸ್ಪರ್ಧಿಸುವಂತೆ ಮಾಡಲು ಮಾಸ್ಟರ್ ಪ್ಲಾನ್: ಡಿ.ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರನ್ನು ವಿಶ್ವದರ್ಜೆಯ ಪ್ರಗತಿಯ ಹಬ್ ಆಗಿ ಪರಿವರ್ತಿಸಲು ಅಗತ್ಯವಿರುವ 'ಆರ್ಥಿಕ ಮಾಸ್ಟರ್ ಪ್ಲಾನ್' ರೂಪಿಸಲು ಸುಸ್ಥಿರ ಉದ್ಯೋಗ ಮತ್ತು ಅಭಿವೃದ್ಧಿ ದತ್ತಿ (ಐಎಸ್ಇಜಿ) ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಹಾಗೂ ಐಎಸ್ಇಜಿಯ ನಿರ್ದೇಶಕ ಶಿರೀಶ್ ಸಂಖೆ ಅವರು ಮಂಗಳವಾರ ಪರಸ್ಪರ ಸಹಿ ಹಾಕಿ ಪತ್ರ ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಡಿ.ಕೆ. ಶಿವಕುಮಾರ್ ಅವರು ಒಡಂಬಡಿಕೆಯ ಉದ್ದೇಶದ ಬಗ್ಗೆ ವಿವರಿಸಿದರು.

'ಬೆಂಗಳೂರನ್ನು ವಿಶ್ವದರ್ಜೆಯ ಪ್ರಗತಿಯ ಹಬ್ ಮಾಡಲು 3 ವರ್ಷಗಳಿಂದ ಪ್ರಯತ್ನ ಮಾಡುತ್ತಲೇ ಇದ್ದೇವೆ. ನಗರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ದಾಖಲೆ ಪ್ರಮಾಣದಲ್ಲಿ ಆರ್ಥಿಕ ಶಕ್ತಿ ನೀಡಿದ್ದೇವೆ. ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದಲ್ಲಿ ತಲಾ ಆದಾಯ 8,850 ಡಾಲರ್‌ನಷ್ಟಿದ್ದು ರಾಜ್ಯದ ಸರಾಸರಿಗಿಂತ ದುಪ್ಪಟ್ಟಿದೆ. 8 ಸಾವಿರ ಚದರ ಕಿ.ಮೀಗಿಂತ ಹೆಚ್ಚು ಪ್ರದೇಶದಲ್ಲಿ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ದಕ್ಷಿಣ ಜಿಲ್ಲೆಗಳು ಹರಡಿದ್ದು, 1.6 ಕೋಟಿ ಜನ ಇಲ್ಲಿದ್ದಾರೆ' ಎಂದರು.

'ಭಾರತದ ಸಾಫ್ಟ್‌ವೇರ್ ರಫ್ತಿನಲ್ಲಿ ಶೇ 42ರಷ್ಟು ಕೊಡುಗೆ ಬೆಂಗಳೂರು ನೀಡುತ್ತಿದೆ. ನಗರಕ್ಕೆ 500 ವರ್ಷಗಳು ಪೂರ್ಣಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ 2032ರಿಂದ 2037ರ ಅವಧಿಯಲ್ಲಿ ಕೈಗೊಳ್ಳಬೇಕಾದ 'ಆರ್ಥಿಕ ಮಾಸ್ಟರ್ ಪ್ಲಾನ್' ಅನ್ನು ರೂಪಿಸಲಾಗುತ್ತಿದೆ. ಬೆಂಗಳೂರಿಗೆ ಹೊಸ ರೂಪ, ಶಕ್ತಿ ನೀಡಲು ತೀರ್ಮಾನಿಸಿದ್ದೇವೆ' ಎಂದು ತಿಳಿಸಿದರು.

'ಎಲ್ಲಿ ಉದ್ಯೋಗ ಸೃಷ್ಟಿಸಬೇಕು, ಎಲ್ಲಿ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಬೇಕು, ಎಲ್ಲಿ ವಸತಿ ಯೋಜನೆಗಳನ್ನು ತರಬೇಕು ಎಂದು ಯೋಚಿಸಿ ಸಂಚಾರ ದಟ್ಟಣೆ ನಿವಾರಣೆಗೆ ಸಂಬಂಧಿಸಿದಂತೆ ನಕ್ಷೆ ರೂಪಿಸಲಾಗುವುದು. ದೇಶದ ಇತರೆ ನಗರಗಳಾದ ಮುಂಬೈ, ದೆಹಲಿ, ಕೋಲ್ಕತ್ತದಲ್ಲಿ ಇಲ್ಲಿಗಿಂತ ಹೆಚ್ಚು ಸಂಚಾರ ದಟ್ಟಣೆ ನೋಡಿದ್ದೇನೆ. ಸಂಚಾರ ದಟ್ಟಣೆ ನಿವಾರಣೆಗೆ ಯೋಜನೆ ರೂಪಿಸಿದ್ದೇವೆ. ಸುಮಾರು ₹2 ಲಕ್ಷ ಕೋಟಿ ವೆಚ್ಚದ ಯೋಜನೆ ರೂಪಿಸಿದ್ದು, ಹಂತ ಹಂತವಾಗಿ ಇದನ್ನು ಕಾರ್ಯಗತಗೊಳಿಸಲಾಗುತ್ತಿದೆ' ಎಂದು ವಿವರಿಸಿದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಉಪಸ್ಥಿತರಿದ್ದರು.

ಒಡಂಬಡಿಕೆ ಪತ್ರ ವಿನಿಮಯ ಸಂದರ್ಭದಲ್ಲಿ ಶಿರೀಶ್ ಸಂಖೆ, ತುಷಾರ್ ಗಿರಿನಾಥ್, ಡಿ.ಕೆ. ಶಿವಕುಮಾರ್, ಶಾಲಿನಿ ರಜನೀಶ್, ಗೌರವ್ ಗುಪ್ತ, ಮಹೇಶ್ವರ ರಾವ್ ಉಪಸ್ಥಿತರಿದ್ದರು

'ನಾಲ್ಕು ತಿಂಗಳಲ್ಲಿ ನಕ್ಷೆ'

'ದತ್ತಾಂಶ ಆಧಾರಿತ 'ಆರ್ಥಿಕ ಮಾಸ್ಟರ್ ಪ್ಲಾನ್' ರೂಪಿಸಲಾಗುತ್ತದೆ. ಇದಕ್ಕೆ ಆರ್ಥಿಕ ಹೊರೆ ಇರುವುದಿಲ್ಲ. ಇಂಧನ, ಪಾಲಿಕೆ, ಜಲ, ನಗರಾಭಿವೃದ್ಧಿ, ಮಾಹಿತಿ ತಂತ್ರಜ್ಞಾನ, ಕೈಗಾರಿಕೆ ಕ್ಷೇತ್ರದ ತಜ್ಞರು, ಪ್ರಮುಖ ನಾಗರಿಕರ ಅಭಿಪ್ರಾಯ, ಸಲಹೆ ಪಡೆಯಲಾಗುವುದು. ಬೆಂಗಳೂರನ್ನು ವಿಶ್ವದರ್ಜೆ ಪ್ರಗತಿ ಹಬ್ ಮಾಡಲು ಕೈಗೊಳ್ಳಲಾಗಿರುವ ತೀರ್ಮಾನಕ್ಕೆ ಹೊಸರೂಪ ನೀಡುತ್ತಿದ್ದೇವೆ. ಜಾಗತಿಕ ನಗರಗಳ ಜೊತೆ ಸ್ಪರ್ಧೆ ಮಾಡಲಾಗುತ್ತಿದೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ನಮ್ಮ ಜತೆ ಒಡಂಬಡಿಕೆ ಮಾಡಿಕೊಂಡಿರುವ ಐಎಸ್ಇಜಿ ಫೌಂಡೇಷನ್ ಸಂಸ್ಥೆ, ಮುಂಬೈ, ವಿಶಾಖಪಟ್ಟಣ, ಪುಣೆ, ವಾರಾಣಸಿಯಲ್ಲಿ ಈ ಯೋಜನೆ ರೂಪಿಸಿದೆ. ಅವರಿಗೆ ನಾಲ್ಕು ತಿಂಗಳ ಅವಕಾಶ ನೀಡಿದ್ದು, ಈ ಅವಧಿಯಲ್ಲಿ ಅವರು ನಕ್ಷೆ ರೂಪಿಸಲಿದ್ದಾರೆ. ಇವರಿಗೆ ಅಗತ್ಯವಿರುವ ಸಹಕಾರವನ್ನು ನೀಡಬೇಕು ಎಂದು ನಮ್ಮ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಗರದ ನಾಗರಿಕರು, ಡೆವಲಪರ್‌ಗಳು, ಉದ್ದಿಮೆದಾರರು, ಶೈಕ್ಷಣಿಕ ಸಂಸ್ಥೆಗಳನ್ನು ವಿಶ್ವಾಸಕ್ಕೆ ಪಡೆದು ದೊಡ್ಡ ಮಾಸ್ಟರ್ ಪ್ಲಾನ್ ರೂಪಿಸಬೇಕು' ಎಂದರು.

ಕ್ಯಾಬ್ ಚಾಲಕರಿಗೆ ಕನ್ನಡ ಕಲಿಸಿ: ಬಿಳಿಮಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡೇತರ ಕ್ಯಾಬ್ ಚಾಲಕರಿಗೆ ಕನ್ನಡ ಕಲಿಸಬೇಕು. ಈ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡಲಾಗುವುದು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

ಸಾರಿಗೆ ಇಲಾಖೆ ಆಯುಕ್ತರಿಗೆ ಈ ಬಗ್ಗೆ ಪತ್ರ ಬರೆದಿರುವ ಅವರು, 'ಸಾರ್ವಜನಿಕ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುವ ವ್ಯಕ್ತಿಗಳು ಸ್ಥಳೀಯ ಭಾಷೆಯ ಕನಿಷ್ಠ ಜ್ಞಾನವನ್ನು ಹೊಂದಿರುವುದು ಕಡ್ಡಾಯ. ಈ ಬಗ್ಗೆ ನಿಯಮಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡದ ಕಾರಣ ಅನ್ಯಭಾಷಿಕ ವಾಹನ ಚಾಲಕರು ಮತ್ತು ಕನ್ನಡಿಗ ಪ್ರಯಾಣಿಕರ ನಡುವೆ ವಾಗ್ವಾದಗಳು ಸಂಭವಿಸುತ್ತಿವೆ' ಎಂದು ಹೇಳಿದ್ದಾರೆ.

ಪುರುಷೋತ್ತಮ ಬಿಳಿಮಲೆ

'ಸಾರಿಗೆ ಇಲಾಖೆಯ ಮೋಟಾರು ವಾಹನ ಕಾಯ್ದೆಯಡಿ 2016ರಲ್ಲಿ ಜಾರಿಗೆ ಬಂದಿರುವ ಅಗತ್ಯ ಸೇವೆಗಳ ನಿಯಮಾವಳಿ ಪ್ರಕಾರ, ಕರ್ನಾಟಕದಲ್ಲಿ ವಾಹನ ಚಾಲನೆ ಮಾಡುವ ಚಾಲಕ ಈ ನಾಡಿನಲ್ಲಿ ಕನಿಷ್ಠ ಎರಡು ವರ್ಷಗಳು ವಾಸವಿರಬೇಕು. ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಮಾತನಾಡಬೇಕು. ಇಲ್ಲಿನ ನಾಗರಿಕರೊಂದಿಗೆ ಸಂಯಮದಿಂದ ವರ್ತಿಸುವ ವ್ಯಕ್ತಿಯಾಗಿರಬೇಕು. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಮೂಲಕ ಬೆಂಗಳೂರು ನಗರದ ಕನ್ನಡಿಗರು ಎದುರಿಸುತ್ತಿರುವ ಸಮಸ್ಯೆಗೆ ಸಾರಿಗೆ ಇಲಾಖೆ ಪರಿಹಾರ ದೊರಕಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಕನ್ನಡ ಬಾರದ ವಾಹನ ಚಾಲಕರನ್ನು ಒಂದೆಡೆ ಸೇರಿಸಿ, ಅವರಿಗೆ ಕನ್ನಡ ಕಲಿಸುವ ಪ್ರಯತ್ನವನ್ನು ಸಹ ಸಾರಿಗೆ ಇಲಾಖೆ ಮಾಡಬಹುದಾಗಿದೆ. ಇದಕ್ಕೆ ಪ್ರಾಧಿಕಾರದ ಸಹಕಾರ ಇರುತ್ತದೆ' ಎಂದು ಹೇಳಿದ್ದಾರೆ.

ಕನ್ನಡ ಮಾಧ್ಯಮ ಆಯ್ಕೆ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮದ ಹೆಸರಿನಲ್ಲಿ ಕಡ್ಡಾಯ ಇಂಗ್ಲಿಷ್ ಮಾಧ್ಯಮ ಜಾರಿಗೊಳಿಸುತ್ತಿರುವುದನ್ನು ವಿರೋಧಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ನೇತೃತ್ವದಲ್ಲಿ ವಿದ್ಯಾರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

'ಇಂಗ್ಲಿಷ್ ಮಾಧ್ಯಮ ಕಡ್ಡಾಯ ಎಂದು ಹೇರುವ ಬದಲು ಕನ್ನಡ ಮಾಧ್ಯಮ ಆಯ್ಕೆ ಸ್ವಾತಂತ್ರ್ಯವನ್ನು ಉಳಿಸಬೇಕು. ಇದು ಸ್ಥಗಿತಗೊಳಿಸುವವರೆಗೂ ಹೋರಾಟ ಮುಂದುವರಿಯಲಿದೆ' ಎಂದು ಆಗ್ರಹಿಸಿದರು.

ಎಐಡಿಎಸ್‌ಒ ರಾಜ್ಯ ಸಮಿತಿ ಸದಸ್ಯ ಎನ್.ಕೆ. ತುಳಜಾರಾಮ್ ಮಾತನಾಡಿ, 'ನಾವು ಇಂಗ್ಲಿಷ್ ಮಾಧ್ಯಮ ವಿರೋಧಿಗಳಲ್ಲ. ಆದರೆ, ಕನ್ನಡ ಭಾಷೆ ಕಸಿದು ಇಂಗ್ಲಿಷ್ ಮಾಧ್ಯಮ ಕಡ್ಡಾಯಗೊಳಿಸುವುದನ್ನು ಒಪ್ಪುವುದಿಲ್ಲ' ಎಂದರು.

'ದಶಕಗಳ ಕಾಲ ಕನ್ನಡದಲ್ಲಿ ಬೋಧಿಸಿದ ಶಿಕ್ಷಕರಿಗೆ ಕೇವಲ ಐದು ದಿನಗಳ ಅರೆಬರೆ ಆನ್‌ಲೈನ್ ತರಬೇತಿ ನೀಡಿ ಇಂಗ್ಲಿಷ್‌ನಲ್ಲಿ ಪಾಠ ಮಾಡಲು ಸೂಚಿಸುವುದು ಅವೈಜ್ಞಾನಿಕ. ಇದು ಖಾಸಗಿ ಶಾಲೆಗಳ ಮುಂದೆ ಸರ್ಕಾರಿ ಶಾಲಾ ಮಕ್ಕಳನ್ನು ದುರ್ಬಲರನ್ನಾಗಿಸುವ ತಾರತಮ್ಯದ ನಡೆಯಾಗಿದೆ' ಎಂದು ಟೀಕಿಸಿದರು.

ಸಂಘಟನೆ ರಾಜ್ಯ ಅಧ್ಯಕ್ಷೆ ಅಶ್ವಿನಿ ಕೆ.ಎಸ್, ಕಾರ್ಯದರ್ಶಿ ಅಜಯ್ ಕಾಮತ್, ಸದಸ್ಯೆ ಶಿಲ್ಪಾ ಬಿ.ಕೆ ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಎಐಡಿಎಸ್‌ಒ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟಿಸಿದರು

ಶುದ್ಧೀಕರಣ ಘಟಕ ಸಮರ್ಪಕ ನಿರ್ವಹಣೆಗೆ ಮನವಿ

ಕೆ.ಆರ್.ಪುರ: ಶುದ್ಧ ಕುಡಿಯುವ ನೀರಿನ ಘಟಕಗಳ ಸಮರ್ಪಕ ನಿರ್ವಹಣೆ, ಸ್ವಚ್ಛತೆ ಹಾಗೂ ಅಕ್ರಮಗಳನ್ನು ತಡೆಯುವಂತೆ ಆಗ್ರಹಿಸಿ ಕೆ.ಆರ್.ಪುರ ಜೆಡಿಎಸ್ ಪಕ್ಷದ ಪದಾಧಿಕಾರಿಗಳು ಬೆಂಗಳೂರು ಪೂರ್ವ ವಲಯ ಕೆ.ಆರ್.ಪುರ ಜಿಬಿಎ ಜಂಟಿ ಆಯುಕ್ತೆ ಸುಧಾ ಅವರಿಗೆ ಮನವಿ ಸಲ್ಲಿಸಿದರು.

ಕೆ.ಆರ್.ಪುರ ಜೆಡಿಎಸ್ ಘಟಕ ಅಧ್ಯಕ್ಷ ಲಕ್ಷ್ಮಣ್ ಮಾತನಾಡಿ, 'ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಸ್ವಚ್ಛತೆ ಇಲ್ಲವಾಗಿದೆ. 10 ವರ್ಷಗಳ ಹಿಂದೆ ಗುತ್ತಿಗೆ ಪಡೆದಿದ್ದು, ನವೀಕರಣಗೊಳಿಸಿಲ್ಲ. ಮರು ಟೆಂಡರ್ ಪ್ರಕ್ರಿಯೆಯೂ ಆಗಿಲ್ಲ. ಅಧಿಕಾರಿಗಳು ಇದರ ಬಗ್ಗೆ ಗಮನಹರಿಸುತ್ತಿಲ್ಲ' ಎಂದರು.

PUBLIC NOTICE

NOTICE is hereby given that, my client intends to transact with the lands situated in Pandithana Agrahara Village, Sarjapura Hobli, Anekal Taluk, Bangalore Urban District from its respective owners and the Agreement and General Power of Attorney Holders, which is more fully described in the Schedule hereunder and hereinafter referred to as the **"Schedule Property"**.

Any person having any subsisting claim, right, title or interest, in respect of the Schedule Property or any part thereof, in any manner including by way of easement, beneficial interest or pre-emption or under any agreement or other disposition or under any suit or award passed by any Court or Authority, arbitrator, lis-pendens, power of attorney, bequest, FSI, development rights, partnership, family arrangement or settlement or otherwise encumbrance howsoever or against the owners and the Agreement and POA Holders or to the transaction ("Claim"), are hereby requested to respond with documentary proof to the undersigned within 15 (Fifteen) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

Sl No	Sy No	Owner's Name	Agreement and General Power of Attorney holder	Extent (kharabh excluded) Acre	Gunta	Kharabh	Boundaries East By	West By	North By	South By
1	43/2	Ms Nagamma wife of Late Mr Mariyappa	Mr Pabba Reddy Kodandarami Reddy, son of Mr Ranga Reddy	0	26	0	Land in Survey No 36	Land in Survey No 44/6	Land in Survey No 43/3	Land in Survey No 43/1
2	43/3	Ms Jayalakshmi wife of Mr Krishnappa	Mr Pabba Reddy Kodandarami Reddy, son of Mr Ranga Reddy	0	26	0	Land in Survey No 36	Land in Survey No 44/6	Land in Survey No 43/4	Land in Survey No 43/2
3	43/4	Ms Rathnamma wife of Late Mr Sampangi Ramaiah	Mr Pabba Reddy Kodandarami Reddy, son of Mr Ranga Reddy	0	20	0	Land in Survey No 36	Land in Survey No 44/6	Land in Survey No 43/5	Land in Survey No 43/3
4	43/5	Mr Rajappa son of Late Mr Abbagappa	Mr Pabba Reddy Kodandarami Reddy, son of Mr Ranga Reddy	0	8	0	Land in Survey No 36	Land in Survey No 44/6	Land in Survey No 43/6	Land in Survey No 43/4
5	43/6	Mr Krishnappa son of Late Mr Kenchappa	Mr Pabba Reddy Kodandarami Reddy, son of Mr Ranga Reddy	0	23	0	Land in Survey No 36	Land in Survey Nos 44/6 and 44/9	Land in Survey No 43/7	Land in Survey No 43/5
6	43/7	Mr Venkataswamy son of Late Mr Kenchappa	Mr Pabba Reddy Kodandarami Reddy, son of Mr Ranga Reddy	0	22	0	Land in Survey No 36	Land in Survey No 44/9	Land in Survey No 43/8	Land in Survey No 43/6
7	43/8	Mr Mariyappa son of Late Mr Kenchappa	Mr Pabba Reddy Kodandarami Reddy, son of Mr Ranga Reddy	0	10	0	Land in Survey No 36	Land in Survey No 44/9	Land in Survey No 43/9	Land in Survey No 43/7
			Mr Pabba Reddy Kodandarami Reddy, son of Mr Ranga Reddy	0	6	0				
			-	0	14	0				
8	43/9	Mr Muniyappa son of Late Mr Kenchappa	Mr Pabba Reddy Kodandarami Reddy, son of Mr Ranga Reddy	0	22	0	Land in Survey No 36	Land in Survey No 44/2	Land in Survey No 43/10	Land in Survey No 43/8
		Mr Muniyappa son of Late Mr Kenchappa	-	0	20	0				
9	43/10	Ms Chowdamma alias Ms Akkamma wife of Late Mr Lakshmaiah	Mr Pabba Reddy Kodandarami Reddy, son of Mr Ranga Reddy	0	37	0	Land in Survey No 36	Land in Survey No 44/2	Land in Survey No 42	Land in Survey No 43/9
10	44/2	Mr Sardar Saab son of Mr Abba Saab	-	0	25	0	Land in Survey Nos 43/9 and 10	Land in Survey No 44/1	Land in Survey No 96/2	Land in Survey Nos 44/3 and 9
11	44/3	Mr Iqbal Baig and Mr Javid Baig, both sons of Mr Ameer Jaan	Mr Pabba Reddy Kodandarami Reddy, son of Mr Ranga Reddy	0	12.5	0	Land in Survey No 44/9	Land in Survey No 96/3	Land in Survey No 44/2	Land in Survey No 44/6
12	44/9	Mr Mukhtiyar Baig son of Mr Zabbar Baig	Mr Pabba Reddy Kodandarami Reddy, son of Mr Ranga Reddy	0	12.5	0	Land in Survey Nos 43/6,43/7, and 43/8	Land in Survey No 44/3	Land in Survey No 44/2	Land in Survey No 44/6
13	44/5	Ms Zareena	-	0	14	2	Land in Survey Nos 44/6 and 43/7	Land in Survey No 44/4	Land in Survey No 44/8	Land in Survey No 45
		Mr Syed Amanulla	-	1	0					
		Mr Inayatullah Khan	-	0	14					
14	44/7	Ms Haseena wife of Late Mr Afsar Pasha	Mr Pabba Reddy Kodandarami Reddy, son of Mr Ranga Reddy	0	14	0	Land in Survey No 44/6	Land in Survey No 44/5	Land in Survey No 44/8	Land in Survey No 44/5
15	44/8	Mr Syed Saifulla son of Late Mr Syed Yusuf	Mr Pabba Reddy Kodandarami Reddy, son of Mr Ranga Reddy	0	38	0	Land in Survey No 44/6	Land in Survey No 44/4	Land in Survey No 96/3	Land in Survey Nos 44/5 and 44/7
16	44/6	Mr Iqbal Baig and Mr Javid Baig, both sons of Mr Ameer Jaan	-	1	27	4	Land in Survey Nos 43/1 to 43/6	Land in Survey Nos 44/5, 44/7 and 44/8	Land in Survey Nos 96/3, 44/3 and 44/9	Land in Survey Nos 45,47, 48 and 49
17		Mr Mukhtiyar Baig son of Mr Zabbar Baig	Mr Pabba Reddy Kodandarami Reddy, son of Mr Ranga Reddy	1	27					
18	67 (converted)	Global Developers	Mr Pabba Reddy Kodandarami Reddy, son of Mr Ranga Reddy	3	31	4	Land in Survey No 45	Land in Survey No 72	Land in Survey Nos 68 and 44	Land in Survey No 66
19	96/2	Mr Ayub Baig, Ms Yunis Baig, Mr Ani Baig, Ms Kauser Begum, children of Mr Waheed Baig	Mr Pabba Reddy Kodandarami Reddy son of Mr Ranga Reddy And Mr Gagan Reddy	2	1	0	Land in Survey No 42	Land in Survey No 96/1	Private property	Land in Survey Nos 44/1 and 44/2
20	92 (portion)	Mr Syed Safiullah son of Mr Syed Yusuf	-	0	10	0	Land in Survey No 70	Road	Remaining portion of land in Survey No 92	Remaining portion of land in Survey No 92

Date:06.05.2026
Bangalore

Pavithra Thammaiah
Khaitan & Co LLP Indiqube Symphony,
4th Floor, Tower 2,25, MG Road,Bengaluru-560 001
T: +91 80 43397000

PUBLIC NOTICE

NOTICE is hereby given that, my client intends to transact with the lands situated in Pandithana Agrahara Village, Sarjapura Hobli, Anekal Taluk, Bangalore Urban District from its respective owners which is more fully described in the Schedule hereunder and hereinafter referred to as the **"Schedule Property"**.

Any person having any subsisting claim, right, title or interest, in respect of the Schedule Property or any part thereof, in any manner including by way of easement, beneficial interest or pre-emption or under any agreement or other disposition or under any suit or award passed by any Court or Authority, arbitrator, lis-pendens, power of attorney, bequest, FSI, development rights, partnership, family arrangement or settlement or otherwise encumbrance howsoever or against the owners and the Agreement and POA Holders or to the transaction ("Claim"), are hereby requested to respond with documentary proof to the undersigned within 15 (Fifteen) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim and my client will proceed with the transaction.

SCHEDULE PROPERTY

Sl No	Sy No	Owner's Name	Extent (kharabh excluded) Acre	Gunta	Kharabh	Boundaries East By	West By	North By	South By
1	45	Ms Uma Devi wife of Mr N Venugopal	0	34	4	Land in Survey No 47	Land in Survey No 67	Land in Survey No 44	Land in Survey No 66 and 46
		Ms Roopa daughter of Mr N Venugopal	3	0					
2	46	Mr Venugopal son of Late Mr Narayanappa	0	31	3	Land in Survey No 47	Land in Survey No 66	Land in Survey No 45	Land in Survey No 107/2
3	66	Ms Nagarathna, Ms N Sumithra, Ms N Anasuya, Ms Mokshalakshmi, Ms N Lalitha all daughters of Late Mr Narayanappa.	3	9	0	Land in Survey Nos 46 and 107/2	Nala	Land in Survey Nos 67 and 45	Land in Survey Nos 65, 107/1 and 107/2

Date:06.05.2026
Bangalore

Pavithra Thammaiah
Khaitan & Co LLP Indiqube Symphony,
4th Floor, Tower 2, 25, MG Road, Bengaluru-560 001
T: +91 80 43397000

PUBLIC NOTICE

NOTICE is hereby given that, my client intends to transact with the property situated in Pandithana Agrahara Village, Sarjapura Hobli, Anekal Taluk, Bangalore Urban District from its respective owners and the Agreement and General Power of Attorney Holders, which is more fully described in the Schedule hereunder and hereinafter referred to as the **"Schedule Property"**.

Any person having any subsisting claim, right, title or interest, in respect of the Schedule Property or any part thereof, in any manner including by way of easement, beneficial interest or pre-emption or under any agreement or other disposition or under any suit or award passed by any Court or Authority, arbitrator, lis-pendens, power of attorney, bequest, FSI, development rights, partnership, family arrangement or settlement or otherwise encumbrance howsoever or against the owners and the Agreement and POA Holders or to the transaction ("Claim"), are hereby requested to respond with documentary proof to the undersigned within 15 (Fifteen) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

Sl No	Site Number	Owner's Name	Agreement and General Power of Attorney holder	Extent in Square Feet	Boundaries East By	West By	North By	South By
1	47	Mr Pabba Reddy Kodandarami Reddy, Mr Muniyappa, Mr Shamaiah, Mr Ramakrishna	Mr Pabba Reddy Kodandarami Reddy	1494.36	Site Nos 72 and 73	Road	Site No 48	Road
2	73	Mr Pabba Reddy Kodandarami Reddy, Mr Muniyappa, Mr Shamaiah, Mr Ramakrishna	Mr Pabba Reddy Kodandarami Reddy	1303.51	Road	Site No 47	Site No 72	Road
3	74	Mr Ritesh Prasad and Ms Nidhi Sardana	-	2508.3	Site Nos 103 and 104	Road	Site No 75	Road

Date:06.05.2026
Bangalore

Pavithra Thammaiah
Khaitan & Co LLP Indiqube Symphony,
4th Floor, Tower 2, 25, MG Road, Bengaluru-560 001
T: +91 80 43397000

DIAGEO
India

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಟಿ ನಂಬರ್: L01551KA1999PLC024991
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು-560 001, ಕರ್ನಾಟಕ, ಭಾರತ.
ಫೋನ್: +91 80 22210705; ಫ್ಯಾಕ್ಸ್: +91 80 2224 5253
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com

'ಸಕ್ಷಮ್ ನಿವೇಶಕ್' ಅಡಿಯಲ್ಲಿ ಐಇಪಿಎಫ್‌ನ ಎರಡನೇ 100-ದಿನಗಳ ಅಭಿಯಾನದ ಕುರಿತು ಸೂಚನೆ

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ (ಎಂಸಿಎ) ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (IEPFA), ಏಪ್ರಿಲ್ 1, 2026 ರಿಂದ ಜುಲೈ 9, 2026 ರವರೆಗೆ 'ಸಕ್ಷಮ್ ನಿವೇಶಕ್'ನ ಎರಡನೇ 100-ದಿನಗಳ ಅಭಿಯಾನವನ್ನು ಪ್ರಾರಂಭಿಸಿದೆ, ಇದು ಲಾಭಾಂಶವನ್ನು ಕ್ಲೈಮ್ ಮಾಡದ/ಪಾವತಿಸದ ಉಳಿದಿರುವ ಷೇರುದಾರರನ್ನು ತಲುಪುವ ಗುರಿಯನ್ನು ಹೊಂದಿದೆ. KYC ನವೀಕರಣ ಮತ್ತು ಸಂಬಂಧಿತ ಅನುಸರಣೆ ಕ್ರಮಗಳ ಮೇಲೆ ಕೇಂದ್ರೀಕರಿಸಿ, ಕ್ಲೈಮ್ ಮಾಡದ/ಪಾವತಿಸದ ಲಾಭಾಂಶವನ್ನು ಸರಿಯಾದ ಷೇರುದಾರರಿಗೆ ನೇರವಾಗಿ ಪಾವತಿಸಲು ಅನುಕೂಲವಾಗುವಂತೆ, ಲಾಭಾಂಶವನ್ನು ಕ್ಲೈಮ್ ಮಾಡದೆ ಉಳಿದಿರುವ ಷೇರುದಾರರನ್ನು ತಲುಪಲು ಕಂಪನಿಗಳನ್ನು ಪ್ರೋತ್ಸಾಹಿಸುವುದು ಈ ಅಭಿಯಾನದ ಉದ್ದೇಶವಾಗಿದೆ.

ಮೇಲಿನದನ್ನು ಗಮನದಲ್ಲಿಟ್ಟುಕೊಂಡು, ಕಂಪನಿಯು ತನ್ನ ಷೇರುದಾರರು ತಮ್ಮ KYC ವಿವರಗಳಾದ ಪ್ಯಾನ್, ವಿಳಾಸ, ಮೊಬೈಲ್ ಸಂಖ್ಯೆ, ಇಮೇಲ್ ಐಡಿ ಮುಂತಾದ ಸಂಪರ್ಕ ವಿವರಗಳು, ಬ್ಯಾಂಕ್ ಖಾತೆ ವಿವರಗಳು, ಮಾದರಿ ಸಹಿಗಳು, ನಾಮನಿರ್ದೇಶನ (ಐಚ್ಛಿಕ) ಗಳನ್ನು ನವೀಕರಿಸಲು ಈ ಅವಕಾಶವನ್ನು ಬಳಸಿಕೊಳ್ಳುವಂತೆ ಒತ್ತಾಯಿಸುತ್ತದೆ. ಇದು ಷೇರುದಾರರು ಯಾವುದೇ ಪಾವತಿಸದ/ಕ್ಲೈಮ್ ಮಾಡದ ಲಾಭಾಂಶವನ್ನು ಪಡೆಯಲು ಅನುವು ಮಾಡಿಕೊಡುತ್ತದೆ, ಇದರಿಂದಾಗಿ ಅವರು IEPFAಗೆ ವರ್ಗಾವಣೆಯಾಗುವುದನ್ನು ತಪ್ಪಿಸುತ್ತದೆ ಮತ್ತು ಭವಿಷ್ಯದ ಲಾಭಾಂಶಗಳು ಯಾವುದಾದರೂ ಇದ್ದರೆ, ಅವುಗಳನ್ನು ಅವರ ನೋಂದಾಯಿತ ಬ್ಯಾಂಕ್ ಖಾತೆಗಳಿಗೆ ಸರಾಗವಾಗಿ ನೇರ ಜಮಾ ಮಾಡಲು ಅನುಕೂಲವಾಗುತ್ತದೆ. ಅಂತೆಯೇ, ಷೇರುದಾರರು ತಮ್ಮ KYC ವಿವರಗಳನ್ನು ಈ ಕೆಳಗಿನ ರೀತಿಯಲ್ಲಿ ನವೀಕರಿಸಲು ವಿನಂತಿಸಲಾಗಿದೆ:

ಎ) ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ: ಷೇರುದಾರರು ತಮ್ಮ KYC ವಿವರಗಳು ಮತ್ತು ನಂತರದ ಯಾವುದೇ ಬದಲಾವಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು ತಮ್ಮ ಸಂಬಂಧಿತ ಠೇವಣಿ ಭಾಗವಹಿಸುವವರೊಂದಿಗೆ ("DP") ನವೀಕರಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳುವಂತೆ ವಿನಂತಿಸಲಾಗಿದೆ.

ಬಿ) ಭೌತಿಕ ರೂಪದಲ್ಲಿ ಹೊಂದಿರುವ ಷೇರುಗಳಿಗೆ: ಷೇರುದಾರರು ತಮ್ಮ KYC ವಿವರಗಳನ್ನು ಸರಿಯಾಗಿ ಭರ್ತಿ ಮಾಡಿ ಸಹಿ ಮಾಡಿದ ನಿಗದಿತ ISR ಫಾರ್ಮ್‌ಗಳನ್ನು ಕೆಳಗೆ ನೀಡಲಾದ ವಿಳಾಸದಲ್ಲಿ ಕಂಪನಿಯ RTAಗೆ ಭೌತಿಕ ರೂಪದಲ್ಲಿ ಸಲ್ಲಿಸುವ ಮೂಲಕ ನವೀಕರಿಸಲು ವಿನಂತಿಸಲಾಗಿದೆ. ಹೆಚ್ಚುವರಿಯಾಗಿ, ಸಲ್ಲಿಸಿದ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಕೆಳಗೆ ನೀಡಲಾದ ಇಮೇಲ್ ID ನಲ್ಲಿ RTAಗೆ ಇಮೇಲ್ ಮಾಡಲು ಷೇರುದಾರರನ್ನು ವಿನಂತಿಸಲಾಗಿದೆ:

ರವರಿಗೆ
ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ
ಮಲ್ಲೇಶ್ವರಂ, ಬೆಂಗಳೂರು 560 003, ಕರ್ನಾಟಕ, ಭಾರತ.
ದೂರವಾಣಿ: +91 80 2346 0815 ರಿಂದ 818| ಫ್ಯಾಕ್ಸ್:+91-80-2346 0819
ಇಮೇಲ್: bglsta@integratedindia.in

ಇದರೊಂದಿಗೆ ಒದಗಿಸಲಾದ QR ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಸಂಬಂಧಿತ ISR ಫಾರ್ಮ್‌ಗಳನ್ನು ಡೌನ್‌ಲೋಡ್ ಮಾಡಬಹುದು. ಡಿಮೆಟೀರಿಯಲೈಸೇಶನ್‌ನಲ್ಲಿ ಸಹಾಯ ಸೇರಿದಂತೆ ಯಾವುದೇ ಪ್ರಶ್ನೆಗಳಿಗೆ, ಷೇರುದಾರರು ನಮ್ಮ RTA ಅನ್ನು bglsta@integratedindia.in ನಲ್ಲಿ ಸಂಪರ್ಕಿಸಬಹುದು.

ಎಲ್ಲಾ ಷೇರುದಾರರು ಯಾವುದೇ ಪಾವತಿಸದ ಅಥವಾ ಕ್ಲೈಮ್ ಮಾಡದ ಲಾಭಾಂಶವನ್ನು ಪಡೆಯಲು ಈ ಅವಕಾಶವನ್ನು ಬಳಸಿಕೊಳ್ಳುವಂತೆ ನಾವು ಕೋರುತ್ತೇವೆ, ಇದರಿಂದಾಗಿ ಅವರು IEPFA ಗೆ ವರ್ಗಾವಣೆಯಾಗುವುದನ್ನು ತಪ್ಪಿಸಬಹುದು. ಭವಿಷ್ಯದ ಲಾಭಾಂಶಗಳು, ಯಾವುದಾದರೂ ಇದ್ದರೆ, ಅವುಗಳ ಸರಾಗ ನೇರ ಕ್ರೆಡಿಟ್‌ಗೆ ಅನುಕೂಲವಾಗುವಂತೆ ಷೇರುದಾರರು ತಮ್ಮ ಬ್ಯಾಂಕ್ ವಿವರಗಳನ್ನು ನವೀಕರಿಸಲು ಸಹ ಪ್ರೋತ್ಸಾಹಿಸಲಾಗುತ್ತದೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಪ್ರಗ್ಯಾ ಕೌಲ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 5ನೇ ಮೇ 2026

‘ಟಿಎಸ್ಎಂಸಿ’ ಸೆಮಿಕಂಡಕ್ಟರ್ ಸಂಧಿ

• ವಿಕ್ರಮ ಜೋಶಿ

ಸೆಮಿಕಂಡಕ್ಟರ್ ಲೋಕದ ಹೊರ್ಮೋಜ್ ಜಲಸಂಧಿ ಯಾವುದು ಗೊತ್ತೇ? ‘ಟಿಎಸ್ಎಮ್‌ಸಿ’- ‘ಟೈವಾನ್ ಸೆಮಿಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ’.

ಇಂದು ನಾವು ಬಳಸುವ ಲ್ಯಾಪ್‌ಟಾಪ್, ಮೊಬೈಲ್, ಕಾರು, ಎ.ಐ. ಚಾಟ್‌ಬಾಟ್, ಟಿ.ವಿ. – ಎಲ್ಲದಕ್ಕೂ ಈ ಕಂಪನಿಯು ತಯಾರಿಸುವ ಸೆಮಿಕಂಡಕ್ಟರ್ ಚಿಪ್ ಬೇಕೇ ಬೇಕು. ಅಂದರೆ ಒಂದಲ್ಲಾ ಒಂದು ರೀತಿಯಲ್ಲಿ ಈ ಭೂಮಿಯ ಮೇಲೆ ಎಲ್ಲೆಲ್ಲಿ ಸೂರ್ಯನ ಕಿರಣವು ಮನುಷ್ಯನ ಮೇಲೆ ಸ್ಪರ್ಶವಾಗುತ್ತದೆಯೋ ಅಲ್ಲೆಲ್ಲ ಟಿಎಸ್ಎಂಸಿಯ ಉತ್ಪನ್ನಗಳಿವೆ ಎಂದಾಯಿತು!

ಭಾರತಕ್ಕಿಂತ ನೂರುಪಟ್ಟು ಚಿಕ್ಕ ದೇಶವಾದ ತೈವಾನಿನ ಈ ಕಂಪನಿಯು ನಮ್ಮ ಅರಿವಿಗೆ ಬಾರದೆಯೂ ನಮ್ಮೆಲ್ಲರ ಜೀವನದ ಭಾಗವಾಗಿದೆ ಎನ್ನುವುದು ಹುಬ್ಬೇರಿಸುವ ವಿಷಯವೇ. ಎರಡು ದಶಕಗಳ ಕಾಲ ಅಮೆರಿಕದಲ್ಲಿದ್ದು ಅಲ್ಲಿಯ ಹಲವಾರು ಸೆಮಿಕಂಡಕ್ಟರ್ ಹಾಗೂ ‘ಕನ್ಸ್ಯೂಮರ್ ಪ್ರಾಡಕ್ಟ್’ ಕಂಪನಿಗಳ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಿ ಅನುಭವವನ್ನು ಪಡೆದು ತೈವಾನಿಗೆ ತೆರಳಿದ ಮೊರಿಸ್ ಚಾಂಗ್, ಈ ಕಂಪನಿಯನ್ನು 1985ರಲ್ಲಿ ಸ್ಥಾಪಿಸಿದ್ದರು. ‘ತಾವು ಸೆಮಿಕಂಡಕ್ಟರ್ ಚಿಪ್‌ಗಳ ವಿನ್ಯಾಸವನ್ನು ಮಾಡುವುದಿಲ್ಲ, ತಮ್ಮದು ಕೇವಲ ತಯಾರಿಕಾ ಘಟಕ’ ಎನ್ನುವುದು ಶುರುವಾದಾಗಿನಿಂದಲೇ ಟಿಎಸ್ಎಂಸಿಯು ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬಂದ ವ್ಯಾಪಾರನೀತಿ. ಈ ಕಂಪನಿಯು ಇಲ್ಲದಿದ್ದರೆ ಬಹುಶಃ ಆ್ಯಪಲ್, ಎನ್ವಿಡಿಯಾ, ಓಪನ್‌ಎಐ, ಅಮೇಜಾನ್, ಮೆಟಾ, ಗೂಗಲ್ ಮುಂತಾದ ಯಾವುದೇ ಕಂಪನಿಗಳು ಇಷ್ಟು ದೊಡ್ಡದಾಗಿ ಬೆಳೆಯುತ್ತಿರಲಿಲ್ಲವೇನೋ? ಇಂಟೆಲ್, ಎಎಮ್‌ಡಿ, ಎನ್ವಿಡಿಯಾ, ಆ್ಯಪಲ್, ಇವರೆಲ್ಲರ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಚಿಪ್‌ಗಳನ್ನು ತಯಾರಿಸುವವರು ಯಾರು? ಇದೇ ಕಂಪನಿ. ಇನ್ನೊಂದು ದೃಷ್ಟಿಕೋನದಿಂದ ನೋಡಿದರೆ ನಮ್ಮ ಮೊಬೈಲ್, ಲ್ಯಾಪ್‌ಟಾಪ್, ಡೇಟಾ ಸೆಂಟರ್ – ಎಲ್ಲವೂ ದಿನದಿಂದ ದಿನಕ್ಕೆ ಮೂರು-ನಾಲ್ಕು ಪಟ್ಟು ವೇಗವನ್ನು ಪಡೆಯುವುದಕ್ಕೆ, ಜಗತ್ತು 2G, 3G, 4G; ಈಗ 5G ಕಾಣುವುದಕ್ಕೆ ಸಾಧ್ಯವಾಗಿದ್ದು ಇವರಿಂದಲೇ ಎನ್ನಬೇಕು. ಈ ಕಂಪನಿಗೆ ಏನಾದರೂ ಆದರೆ, ಅಂದು ಹಸಿಹಗಲಲ್ಲೇ ಸೂರ್ಯಾಸ್ತವಾದಂತೆ!



ನಮ್ಮ ಕೂದಲೆಳೆಯು 20,000-80,000 ನ್ಯಾನೊ ಮೀಟರ್ ಇರುತ್ತದೆ. ಅದೇ ಈ ಕಂಪನಿಯು ತಯಾರಿಸುವ ಟ್ರಾನ್ಸಿಸ್ಟರ್ ಗಾತ್ರವೆಷ್ಟು ಗೊತ್ತೆ? ಸುಮಾರು 10-15 ನ್ಯಾನೋ ಮೀಟರ್! ವಿಚಾರ ಮಾಡಿ ಅಷ್ಟು ಸೂಕ್ಷ್ಮ ಗಾತ್ರದ ಅತ್ಯಾಧುನಿಕ ಚಿಪ್ ಅನ್ನು ತಯಾರಿಸಲು ಎಷ್ಟು ದುಬಾರಿ ಸಾಧನಗಳು ಬೇಕಾಗಬಹುದು? ಅಲ್ಲಿರುವ ಒಂದೊಂದು ಯಂತ್ರವೂ ನೂರಾರು ಕೋಟಿ ರೂಪಾಯಿಗಳಷ್ಟು ಮೌಲ್ಯದ್ದು. ಅಲ್ಲಿ ಸೂಕ್ಷ್ಮಾತಿ ಸೂಕ್ಷ್ಮವಸ್ತುಗಳಿಗೂ ಪ್ರವೇಶಕ್ಕೆ ಆಸ್ಪದವಿಲ್ಲ. ಅಲ್ಲಿಯ ಸ್ವಚ್ಛತೆಯು ಹೇಗೆ, ಎಂದರೆ ಅದಕ್ಕೆ ಹೋಲಿಸಿದರೆ ಆಸ್ಪತ್ರೆಯ ಆಪರೇಷನ್ ಥಿಯೇಟರ್ ದೂಳು ತುಂಬಿದ ಬೀದಿಯ ಹಾಗೆ ಕಾಣುತ್ತದೆ. ಇಂತಹ ನೂರಾರು ಕೋಟಿಗಳ ಸಾವಿರಾರು ಮಷಿನ್‌ಗಳನ್ನು ಖರೀದಿಸುವುದು, ಅಷ್ಟು ಸ್ವಚ್ಛತೆಯನ್ನು ಕಾಪಾಡಿಕೊಂಡು, ಅಣುಗಾತ್ರದ ಚಿಪ್‌ಗಳನ್ನು ತಯಾರಿಸುವುದು ಎಂದರೆ ಲಕ್ಷಾಂತರ ಕೋಟಿಗಳ ವ್ಯವಹಾರ. ಇಷ್ಟು ಹಣವ್ಯಯ ಮಾಡುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಹೀಗಾಗಿ ಇಡೀ ಜಗತ್ತು ಇವರ ಮೇಲೆ ಅವಲಂಬಿಸಿದೆ. 7 ನ್ಯಾನೋ ಮೀಟರ್‌ಗೂ ಕಡಿಮೆ ಶ್ರೇಣಿಯ ಚಿಪ್‌ಗಳನ್ನು ಸರಬರಾಜು ಮಾಡುವುದರಲ್ಲಿ ಟಿಎಸ್ಎಂಸಿಯ ಪಾಲು ಶೇ 90ಕ್ಕಿಂತ ಹೆಚ್ಚು. (7nm, 2nm – ಎನ್ನುವುದು ಟ್ರಾನ್ಸಿಸ್ಟರ್ ಗಾತ್ರವಲ್ಲ, ಅದು ಶ್ರೇಣಿಯ ಹೆಸರು; ಉದಾಹರಣೆಗೆ ಐಫೋನ್ 15, 16, 17 ಇದ್ದ ಹಾಗೆ.)

ಟಿಎಸ್ಎಂಸಿಯ ಪಯಣ ತಂತ್ರಜ್ಞಾನದ ಸುನಾಮಿಯ ಮೇಲೆ ತೇಲಿ ಬಂದಿದ್ದು. ಅವರು ಬಳಸಿದ ಒಂದೊಂದು ತಂತ್ರಜ್ಞಾನವೂ ಆ ಕಾಲಕ್ಕೆ ಹತ್ತು ವರ್ಷಗಳಷ್ಟು ಮುಂದಿದ್ದವು. ಶುರುವಿನಲ್ಲಿ ತಮ್ಮ ಫೌಂಡ್ರಿಯಲ್ಲಿ 3ರಿಂದ 1 ಮೈಕ್ರಾನ್ ಗಾತ್ರದ ಚಿಪ್ ತಯಾರಿಸುತ್ತಿದ್ದ ಈ ಕಂಪನಿಯು ‘ಇಮ್ಮರ್ಷನ್ ಲಿಥೋಗ್ರಾಫಿ’ ತಂತ್ರಜ್ಞಾನವನ್ನು ಸೆಮಿಕಂಡಕ್ಟರ್ ತಯಾರಿಕೆಗೆ ಬಳಸಲು ಶುರುಮಾಡಿದ್ದು 2000ನೆಯ ಇಸ್ವಿಯ ಹೊತ್ತಿಗೆ. ಅದೇ ಸಮಯದಲ್ಲಿ ಮೊತ್ತಮೊದಲ ಬಾರಿಗೆ ಚಿಪ್‌ಗಳಲ್ಲಿ ಅಲ್ಯುಮಿನಿಯಮ್ ಬದಲು ಹೆಚ್ಚಿನ ವಿದ್ಯುತ್ ಸಂವಹನಕ್ಕೆ ತಾಮ್ರದ ಬಳಕೆಯನ್ನು ಕೂಡ ಇದೇ ಕಂಪನಿ ಆರಂಭಿಸಿತ್ತು. ಲಿಥೋಗ್ರಾಫಿಯ ಸಹಾಯದಿಂದ ನ್ಯಾನೋ ಮೀಟರ್ ಗಾತ್ರದ ಸೆಮಿಕಂಡಕ್ಟರ್ ಫ್ಯಾಬ್ ತಯಾರಿಕೆಯು ಸಾಧ್ಯವಾಯಿತು. HKMG (High-K metal gate) ಹಾಗೂ Fin FET (Fin Field Effect Transistor) ತಂತ್ರಜ್ಞಾನವನ್ನು ಬಳಸಿಕೊಂಡು ಟಿಎಸ್ಎಂಸಿಯು ಜಗತ್ತಿಗೆ 10 ನ್ಯಾನೋ ಮೀಟರ್ ಶ್ರೇಣಿಯ ಸೂಕ್ಷ್ಮವಾದ ಸೆಮಿಕಂಡಕ್ಟರನ್ನು ತಯಾರಿಸಿ ಕೊಟ್ಟಿತು. ಇನ್ನೂ ಚಿಕ್ಕ ಗಾತ್ರದ ತಯಾರಿಕೆಗೆ ಬೇಕಾಗಿದ್ದು ‘ಎಕ್ಸ್ಟ್ರೀಮ್ ಅಲ್ಟ್ರಾ ವೈಲೆಟ್ ಲಿಥೋಗ್ರಾಫಿ’ ಅಥವಾ ‘ಇಯುವಿ ಲಿಥೋಗ್ರಾಫಿ’.

ಮನುಷ್ಯ ತಯಾರಿಸಿದ ಅತ್ಯಂತ ಸಂಕೀರ್ಣ ತಂತ್ರಜ್ಞಾನವೆಂದರೆ ಅದು ‘ಇಯುವಿ ಲಿಥೋಗ್ರಾಫಿ’ ಎನ್ನುವ ಮಾತಿದೆ. ಈ ತಂತ್ರಜ್ಞಾನವನ್ನು ಬಳಸಿ 7ರಿಂದ 3 ನ್ಯಾನೋ ಮೀಟರ್ ಸರಣಿಯ (12-50 nm) ಅತಿ ಸೂಕ್ಷ್ಮ ಸೆಮಿಕಂಡಕ್ಟರ್ ಫ್ಯಾಬ್ ತಯಾರಿಸಿದ್ದು ಟಿಎಸ್ಎಂಸಿ. ಇದರ ಮೂಲಕ ಸ್ಯಾಮ್‌ಸಂಗ್, ಇಂಟೆಲ್ ಎಲ್ಲರನ್ನೂ ಹಿಂದಕ್ಕೆ ತಳ್ಳಿ ಸೋಲಿಲ್ಲದ ಸರದಾರನಾಗಿ ಮೆರೆಯುತ್ತಿದೆ. ಚೀನಾವು ತೈವಾನ್ ಮೇಲೆ ದಾಳಿ ನಡೆಸದೇ ಇರಲು ಒಂದೇ ಒಂದು ಕಾರಣವೆಂದರೆ ಟಿಎಸ್ಎಂಸಿ. ಆದುದರಿಂದಲೇ ಇದನ್ನು ತೈವಾನಿನ ‘ಸಿಲಿಕಾನ್ ಶೀಲ್ಡ್’ ಎಂದೂ ಕರೆಯುತ್ತಾರೆ. ಈ ವರ್ಷದಿಂದ ಟಿಎಸ್ಎಂಸಿಯು 2 ನ್ಯಾನೋ ಮೀಟರ್ ಶ್ರೇಣಿಯ ಸೆಮಿಕಂಡಕ್ಟರ್‌ಗಳನ್ನು ಬಹುದೊಡ್ಡ ಪ್ರಮಾಣದಲ್ಲಿ ತಯಾರಿಸಲು ಶುರುಮಾಡಿದೆ. ಇದಕ್ಕೆ ಅವರು ನ್ಯಾನೋಶೀಟ್ ಎನ್ನುವ ಹೊಸ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ! ಟಿಎಸ್ಎಂಸಿಯ ಇತಿಹಾಸದಲ್ಲಿ ಬರುವ ಒಂದೊಂದು ತಂತ್ರಜ್ಞಾನವನ್ನು ಕೂಡ ಒಂದೊಂದು ಲೇಖನವನ್ನಾಗಿ ಮಾಡಬಹುದು. ನಾವಿರುವ ಎ.ಐ. ಲೋಕದ ಬೆನ್ನೆಲುಬು ಟಿಎಸ್ಎಂಸಿ.

ಎ.ಐ. ಕಂಪನಿಗಳ ಡೇಟಾ ಸೆಂಟರ್‌ಗಳು ಬಳಸುತ್ತಿರುವ ಜಿಪಿಯುವಿನಲ್ಲಿರುವ ಟ್ರಾನ್ಸಿಸ್ಟರ್‌ಗಳ ಸಾಂದ್ರತೆ ಎಷ್ಟು ಗೊತ್ತೇ? ಒಂದು ಸ್ಕ್ವಾರ್ ಮಿಲಿಮಿಟರ್‌ನಲ್ಲಿ ಹದಿನೈದು ಕೋಟಿ ಟ್ರಾನ್ಸಿಸ್ಟರ್‌ಗಳಿರುತ್ತವೆ! ಇದನ್ನು ಸರಳವಾಗಿ ವಿವರಿಸಬೇಕು ಎಂದರೆ, ಒಂದು ಟ್ರಾನ್ಸಿಸ್ಟರ್ ಒಂದು ಮಾರ್ಬಲ್‌ನ ಗಾತ್ರವೆಂದರೆ ಇಡೀ ಬೆಂಗಳೂರು ನಗರಕ್ಕೆ ಸಾಕಾಗುವಷ್ಟು ಟ್ರಾನ್ಸಿಸ್ಟರ್ ಒಂದು ಜಿಪಿಯುವಿನಲ್ಲಿರುತ್ತದೆ. ಅಷ್ಟು ಇಕ್ಕಟ್ಟಾದ ಜಾಗದಲ್ಲಿ, ಅಚ್ಚುಕಟ್ಟಾಗಿ, ಕೂದಲಿಗೂ ಲಕ್ಷಪಟ್ಟು ಚಿಕ್ಕದಾದ ಟ್ರಾನ್ಸಿಸ್ಟರ್‌ಗಳನ್ನು ತಯಾರಿಸಿ ಕೂರಿಸುವುದೇ ಟಿಎಸ್ಎಂಸಿಯ ಅದ್ಭುತ ಶಕ್ತಿ!

❖



ಪ್ರಾತಿನಿಧಿಕ ಚಿತ್ರ

ಉರುಳೆ ರೋಬೋ

• ಕೊಳ್ಳೇಗಾಲ ಶರ್ಮ

ರೋಬೋಗಳು ಎಂದರೆ ಥಟ್ಟನೆ ನೆನಪಿಗೆ ಬರುವುದು ನಿಧಾನವಾಗಿ ಕಾಲೆತ್ತಿ ಮುಂದೆ ಚಲಿಸುವ ಯಂತ್ರ; ಇಲ್ಲವೇ ಹೋಟೆಲುಗಳಲ್ಲಿ ಕಾಫಿ, ತಿಂಡಿ ಪರಿಚರಿಸುವ ಮಾಣಿ ರೋಬೋಗಳು. ನಡೆಯುವಾಗ ಇವು ನೇರವಾಗಿಯೇ ನಡೆಯಬೇಕು; ಮರಳಿ ಬಂದ ಹಾದಿಯಲ್ಲಿಯೇ ಹೋಗಬೇಕು ಎಂದರೂ ನಿಧಾನವಾಗಿ ಬಲಕ್ಕೋ ಎಡಕ್ಕೋ ತಿರುಗಿ, ಮತ್ತೆ ಬಲಕ್ಕೋ ಎಡಕ್ಕೋ ತಿರುಗಿ ನಡೆಯಬೇಕು. ಇದೋ ಇಂತಹ ರೋಬೋಗಳು ನಿಂತಲ್ಲೇ ರೊಯ್ಯನೆ ‘ಯೂ ಟರ್ನ್’ ತೆಗೆದುಕೊಳ್ಳುವಂತೆ ಮಾಡುವ ಚಕ್ರಗಳು ಬಂದಿವೆಯಂತೆ. ಗಾಳಿ ಬೀಸಿದಾಗ ಉರುಳಿಕೊಂಡು ಹೋಗುವ ‘ಟಂಬಲ್‌ವೀಡ್’ ಎನ್ನುವ ಪುರುಳೆ ಉಂಡೆಗಳಿಂದ ಪ್ರೇರಣೆ ಪಡೆದು ಎಲ್ಲ ದಿಕ್ಕುಗಳಲ್ಲಿಯೂ ಚಲಿಸಬಲ್ಲಂತಹ ‘ಟ್ವಿರ್ಲ್‌ಬಾಟ್’ ಎನ್ನುವ ಉರುಳೆಚಕ್ರ ಅಥವಾ ಗಾಲಿಗಳನ್ನು ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಲಾಸ್ ಏಂಜೆಲೀಸ್‌ನ ಮೆಕ್ಯಾನಿಕಲ್ ಎಂಜಿನಿಯರ್ ಶಿಮಿನ್ ಹಾ ಮತ್ತು ಸಂಗಡಿಗರು ರೂಪಿಸಿದ್ದಾರೆ.

‘ಟಂಬಲ್‌ವೀಡ್’ ಎನ್ನುವುದು ಹುಲ್ಲುಗಾವಲುಗಳಲ್ಲಿ ಬೆಳೆಯುವ ಹಲವು ಕುರುಚಲುಗಿಡಗಳಿಂದ ಹುಟ್ಟಿದ ವಸ್ತು. ಅಮೆರಿಕಖಂಡದಲ್ಲಿ ಇದು ಸಾಮಾನ್ಯ. ವರ್ಷದಲ್ಲಿ ಒಂದು ಋತುವಿನಲ್ಲಿಯಷ್ಟೆ ಬೆಳೆದು ಹೂತಳೆಯುವ ಈ ಗಿಡಗಳು ನಂತರ ಒಣಗಿಹೋಗುತ್ತವೆ. ಹೀಗೆ ಒಣಗಿದ ಪುರುಳೆ ದುಂಡಗಿನ ಉಂಡೆಯಂತಾಗಿ, ಗಾಳಿ ಬೀಸಿದತ್ತ ಉರುಳುತ್ತ ಸಾಗುತ್ತವೆ. ಹಾದಿಯಲ್ಲಿ ತಮ್ಮ ಮೈಯಲ್ಲಿ ಅಡಗಿರುವ ಬೀಜಗಳನ್ನು ಬಿತ್ತುತ್ತವೆ. ಗಿಡಗಳ ಬೀಜಪ್ರಸಾರ ಹೀಗೆ ಆಗುತ್ತದೆ. ಈ ಪುರುಳೆ ಉಂಡೆಗಳು ಗಾಳಿ ಎತ್ತ ಬೀಸುತ್ತದೆಯೋ ಅತ್ತ ಉರುಳಬಲ್ಲವು.

ಬೀಜಗಳನ್ನು ಬಿತ್ತಿ, ರೋಬೋಗಳು ಸೂರ್ಯಾಸ್ತದ ಸಮಯದಲ್ಲಿ ಮರಳಿ ತಮ್ಮ ನೆಲೆಗೆ ತೆರಳುವಂತಾದರೆ!

ಹೀಗಾಗಿ ನೆಲೆಯಿಂದ ಬಲು ದೂರ ಇವು ಸಾಗಬಲ್ಲವು. ಹಗುರವಾಗಿರುವುದರಿಂದ ಮೆಲುಗಾಳಿಯೂ ಇವನ್ನು ದೂಡಬಲ್ಲುದು. ಭಾರದಿಂದಾಗಿ ನೆಲ ಮುಟ್ಟುವ ತಳ ಒತ್ತಿ ಸಪಾಟಾದರೂ, ತುಸು ಸರಿದೊಡನೆ ಮರಳಿ ದುಂಡಗಾಗುತ್ತವೆ. ದುಂಡಗಿನ ಆಕಾರವನ್ನು ಹೀಗೆ ಕಾಯ್ದುಕೊಳ್ಳುವುದರಿಂದ ಎತ್ತ ಬೇಕಿದ್ದರೂ ಇವು ಚಲಿಸಬಲ್ಲುವು. ಇದೇ ತಂತ್ರವನ್ನು ಬಳಸಿ ಉರುಳುವ ರೋಬೋಗಳನ್ನು ಸಿದ್ಧಪಡಿಸಬಹುದಲ್ಲ ಎನ್ನುವುದು ಶಿಮಿನ್ ಹಾ ತಂಡದ ಯೋಚನೆ.

ಪುರುಳೆ ಉಂಡೆಯನ್ನು ದೂಡಲು ಗಾಳಿ ಬೇಕು. ಉರುಳು ರೋಬೋ ತನ್ನದೇ ಬಲದಿಂದ ಚಲಿಸುವಂತೆ ಮಾಡಬೇಕು – ಎನ್ನುವುದು ಶಿಮಿನ್ ಹಾ ಯೋಚನೆ. ಇದಕ್ಕಾಗಿ ಇವರು ಮಾಡಿದ ಉಪಾಯ ಇದು. ಶಾಖಕ್ಕೋ ಬೆಳಕಿಗೋ ವ್ಯತಿರಿಕ್ತವಾಗಿ ಪ್ರತಿಕ್ರಿಯಿಸುವ ವಸ್ತುಗಳನ್ನು ಜೋಡಿಸಿ, ಅವು ಬಾಗುವಂತೆ ಮಾಡಬಹುದು. ‘ಲಿಕ್ವಿಡ್ ಕ್ರಿಸ್ಟಲ್ ಪಾಲಿಮರ್‌ಗಳು’ ಎನ್ನುವ ವಸ್ತುಗಳು ಹೀಗೆ ಆಕಾರ ಬದಲಿಸಬಲ್ಲುವು. ಬೆಳಕಿಗೆ ಸ್ಪಂದಿಸುವ ಇಂತಹ ವಸ್ತುವಿನ ತೆಳುಪಟ್ಟಿಗಳನ್ನು ಮಾಡಿ, ಅವುಗಳಿಂದ ಟಂಬಲ್ ವೀಡಿನಂತಹ ಉಂಡೆಗಳನ್ನು ಹೆಣೆದರೆ, ಬೆಳಕು ಬಿದ್ದಾಗ ಅವು ಅತ್ತ ಬಾಗಬಹುದಲ್ಲವೇ? ಹೆಣಿಗೆ ಸರಿಯಾಗಿದ್ದರೆ, ಬೆಳಕು ಬಿದ್ದು ಬಾಗಿದ ಕಡೆ ಭಾರ ಹೆಚ್ಚಾಗಿ ಇವು ಉರುಳಬಹುದು. ಹೀಗೆ ಉರುಳುತ್ತ ಸಾಗಬಹುದು. ಇದು ತರ್ಕ; ಕಲ್ಪನೆ.

ಮಣಿಸಿನ ಕಾಯಿಯ ಬೀಜ ಬಿತ್ತುತ್ತ ಸಾಗುತ್ತಿರುವ ಉರುಳೆ ರೋಬೋ

ಈ ಕಲ್ಪನೆಯನ್ನು ಸಾಕಾರಗೊಳಿಸಲು ಶಿಮಿನ್ ಹಾ ತಂಡ ವಿಶೇಷವಾದೊಂದು ಲಿಕ್ವಿಡ್ ಕ್ರಿಸ್ಟಲಿನ ಪಟ್ಟಿಯನ್ನು ತಯಾರಿಸಿತು. ವಾಸ್ತವದಲ್ಲಿ ಇದು ಎರಡು ತೆಳುಪಟ್ಟಿಗಳನ್ನು ಅಂಟಿಸಿ ಮಾಡಿದ ವಸ್ತು. ಒಂದು ಪಟ್ಟಿ ಬೆಳಕಿಗೆ ಸ್ಪಂದಿಸಿ ಕುಗ್ಗುತ್ತಿತ್ತು. ಇನ್ನೊಂದು ಹಿಗ್ಗುತ್ತಿತ್ತು. ಕುಗ್ಗುವ ಪಟ್ಟಿಯನ್ನು ‘ಆರ್‌ಎಂ 257’ ಎನ್ನುವ ಪಾಲಿಮರಿನ ಜೊತೆಗೆ ಮೇಣದ ಬತ್ತಿಯಿಂದ ಹೆಕ್ಕಿದ ಮಸಿಯ ಪುಡಿಯನ್ನು ಬೆರೆಸಿ ತಯಾರಿಸಿದ್ದರು. ಮತ್ತೊಂದು ಪಾಲಿಮರ್ ‘ಪಿಡಿಎಂಎಸ್’ ಎನ್ನುವ ವಸ್ತು. ಇವೆರಡನ್ನೂ ಭದ್ರವಾಗಿ ಅಂಟಿಸಿದ್ದರು. ಹೀಗೆ ತಯಾರಾದ ಇಬ್ಬಂದಿ ವಸ್ತುವನ್ನು ತೆಳುವಾದ ರಿಬ್ಬನುಗಳಾಗಿ ಕತ್ತರಿಸಿದರು. ಆರು ಇಂತಹ ರಿಬ್ಬನುಗಳನ್ನು, ಬಿದಿರಿನ ಬುಟ್ಟಿಯನ್ನು ಹೆಣೆಯುವಂತೆ, ಹೆಣೆದು ಎರಡು ಸೆಂಟಿಮೀಟರ್ ವ್ಯಾಸದ ಚೆಂಡನ್ನು ರೂಪಿಸಿದರು. ಚೆಂಡಿನ ಬುಡದಲ್ಲಿ ಲೇಸರಿನಿಂದ ಹಾದಿಯೊಂದನ್ನು ಬೆಳಗಿದಾಗ, ಚೆಂಡು ಆ ಹಾದಿಗುಂಟ ಉರುಳುತ್ತ ಸಾಗಿತು. ಚೆಂಡನ್ನು ತಯಾರಿಸಲು ಬೇಕಾದ ಮಸಿಯ ಕಣಗಳ ಗಾತ್ರ, ಪಾಲಿಮರ್‌ಗಳ ರಚನೆ, ಉಷ್ಣತೆ, ಅದು ಉರುಳುವುದಕ್ಕೆ ತಕ್ಕುದಾದ ಲೇಸರಿನ ಪ್ರಖರತೆಯನ್ನೆಲ್ಲ ಇವರು ನಿಶ್ಚಯಿಸಿದ್ದಾರೆ. ‘ನೂರಾರು ಬಾರಿ ಉರುಳಿದರೂ, ಉರುಳೆ ರೋಬೋಗಳ ಆಕಾರ ಕೆಡಲಿಲ್ಲ’ ಎಂದು ಹಾ ವರದಿ ಮಾಡಿದ್ದಾರೆ.

ಅಷ್ಟೇ ಅಲ್ಲ, ಸರಳವಾದ ವಸ್ತುಗಳಿಂದಲೂ ಈ ಬಗೆಯ ವಿನ್ಯಾಸ ತಯಾರಿಸಬಹುದು ಎಂದು ಸಾಧಾರಣ ಸೆಲ್ಲೋಟೇಪು, ಕಾಗದ ಹಾಗೂ ವೈಟ್ ಬೋರ್ಡಿನ ಮೇಲೆ ಬರೆಯಲು ಬಳಸುವ ಕಪ್ಪುಶಾಯಿಯ ಪೆನ್ನನ್ನು ಬಳಸಿ ಉರುಳೆ ರೋಬೋಗಳನ್ನು ರೂಪಿಸಿದ್ದಾರೆ. ಇದರತ್ತ ಅರವತ್ತು ಡಿಗ್ರಿ ಶಾಖದ ಬಿಸಿ ತಗುಲಿದರೆ ಸಾಕು, ಉರುಳುತ್ತಾ ಸಾಗುತ್ತದೆ. ಈ ಉರುಳೆಗಳು ಏರುಗಳಲ್ಲಿ, ಮಣ್ಣಿನಂತಹ ಉಬ್ಬು ತಗ್ಗಿರುವ ಮೇಲ್ಮೈ ಮೇಲೆ, ಗಾಜಿನಂತಹ ನಯವಾದ ಜಾಗದಲ್ಲಿಯೂ ಯಾವುದೇ ಅಡೆತಡೆ ಇಲ್ಲದೆ ಉರುಳುತ್ತವೆ ಎಂದು ಹಾ ನಿರೂಪಿಸಿದ್ದಾರೆ. ಟಂಬಲ್ ವೀಡಿಯಂತೆಯೇ ಈ ಉರುಳೆ ರೋಬೋನೊಳಗೆ ಬೀಜಗಳನ್ನು ತುಂಬಿ, ಬಿಸಿಲಿಗೆ ಇಟ್ಟಿದ್ದಾರೆ. ಟ್ವಿರ್ಲ್‌ಬಾಟುಗಳು ತಮ್ಮಂತಾವೇ ಉರುಳುತ್ತ ಸಾಗಿ ಬೀಜಗಳನ್ನು ಬಿತ್ತಿವೆ. ಬೆಳಕು ಒಂದೆಡೆಯಿಂದ ಮತ್ತೊಂದೆಡೆಗೆ ಚಲಿಸುವಂತೆ ಮಾಡಿ, ಈ ಉರುಳೆಗಳು ಮರಳಿ ತಮ್ಮ ಸ್ವಸ್ಥಾನಕ್ಕೆ ಬರುವಂತೆಯೂ ಮಾಡಿ ತೋರಿಸಿದ್ದಾರೆ. ಅಂದರೆ ಸೂರ್ಯೋದಯದ ಸಮಯದಲ್ಲಿ ಉರುಳಲು ಆರಂಭಿಸಿದ ರೋಬೋಗಳು ಬೀಜಗಳನ್ನು ಬಿತ್ತಿ, ಸೂರ್ಯಾಸ್ತದ ಸಮಯದಲ್ಲಿ ಮರಳಿ ತಮ್ಮ ನೆಲೆಗೆ ತೆರಳಬಲ್ಲುವು ಎಂಬುದು ಇವರ ಆಶಯ.

ಈ ವಿನ್ಯಾಸವನ್ನೇ ಬಳಸಿ, ಇನ್ನೂ ಕಿರಿದಾದ, ತೆಳುವಾದ ಪಟ್ಟಿಗಳಿಂದ ದೊಡ್ಡದಾದ ಉರುಳೆಗಳನ್ನು ತಯಾರಿಸಬಹುದು. ಅವುಗಳಿಂದ ಟಂಬಲ್‌ವೀಡಿನಂತೆಯೇ ಹಲವು ಕೆಲಸಗಳನ್ನು ಮಾಡಿಸಬಹುದು ಎನ್ನುವುದು ಹಾ ಅವರ ಆಶಯ.

❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

6) ಒಂದೊಂದು ಉದಾಹರಣೆಯೊಂದಿಗೆ ಇವುಗಳನ್ನು ವಿವರಿಸಿ
ಅ) ನಶಿಸುವಿಕೆ ಬ) ಕಮಟುವಿಕೆ

ಉತ್ತರ:– **ನಶಿಸುವಿಕೆ:–** ಲೋಹಗಳು ತಮ್ಮ ಸುತ್ತಲಿನ ತೇವಾಂಶ, ಆಮ್ಲಗಳ ಪರಿಣಾಮ ತಮ್ಮ ಹೊಳಪನ್ನು ಕಳೆದುಕೊಂಡು ಕ್ರಮೇಣ ನಾಶವಾಗಲು ಆರಂಭಿಸುತ್ತವೆ ಈ ಪ್ರಕ್ರಿಯೆಗೆ ನಶಿಸುವಿಕೆ ಎನ್ನುವರು.
ಉದಾ:– ಕಬ್ಬಿಣ ತುಕ್ಕು ಹಿಡಿಯುವುದು

ಕಮಟುವಿಕೆ:– ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಉತ್ಕರ್ಷಣೆಗೆ ಒಳಗಾಗಿ ವಾಸನೆ ಮತ್ತು ರುಚಿಯಲ್ಲಿ ಬದಲಾವಣೆ ಹೊಂದುವುದನ್ನು ಕಮಟುವಿಕೆ ಎನ್ನುವರು. ಉದಾ:– ಹಲವು ದಿನಗಳಿಂದ ಸಂಗ್ರಹಿಸಿಟ್ಟ ಎಣ್ಣೆಯಿಂದ ತಯಾರಿಸಿದ ಪದಾರ್ಥಗಳು ಕಮಟುವಿಕೆಗೆ ಒಳಗಾಗಿ ತನ್ನ ಮೂಲ ರುಚಿ ಹಾಗೂ ವಾಸನೆಯನ್ನು ಕಳೆದುಕೊಂಡು ತಿನ್ನಲು ಯೋಗ್ಯವಲ್ಲದವುಗಳಾಗಿ ಬದಲಾಗುತ್ತದೆ

7) ಮೆಗ್ನೀಷಿಯಂ ಪಟ್ಟಿಯನ್ನು ಗಾಳಿಯಲ್ಲಿ ಉರಿಸುವ ಮೊದಲು ಸ್ವಚ್ಛಗೊಳಿಸಬೇಕು. ಏಕೆ?

ಉತ್ತರ:– ಮೆಗ್ನೀಷಿಯಂ ಪಟ್ಟಿಯನ್ನು ಗಾಳಿಗೆ ತೆರೆದಿಟ್ಟಾಗ ಆಕ್ಸಿಜನ್ನೊಡನೆ ವರ್ತಿಸಿ ಮೇಲ್ಪದರವು ಮೆಗ್ನೀಷಿಯಂ ಆಕ್ಸೈಡ್ ಆಗಿರುತ್ತದೆ. ಆದ್ದರಿಂದ ಅದನ್ನು ಸ್ವಚ್ಛಗೊಳಿಸಬೇಕು

8) ಕ್ಯಾಲ್ಸಿಯಂ ಆಕ್ಸೈಡ್ ನೀರಿನೊಂದಿಗೆ ವರ್ತಿಸಿದಾಗ ಉತ್ಪತ್ತಿಯಾಗುವ ಉತ್ಪನ್ನವನ್ನು ಹೆಸರಿಸಿ (ಜೂನ್ 2023)

ಉತ್ತರ:– ಕ್ಯಾಸಿಯಂ ಹೈಡ್ರಾಕ್ಸೈಡ್ ಅಥವಾ ಅರಳಿದ ಸುಣ್ಣ

9) $ZnO, + C \rightarrow Zn + CO,$ ಈ ಕ್ರಿಯೆಯಲ್ಲಿ ಉತ್ಕರ್ಷಿಸಲ್ಪಟ್ಟ ಪ್ರತಿವರ್ತಕ ಮತ್ತು ಅಪಕರ್ಷಿಸಲ್ಪಟ್ಟ ಪ್ರತಿವರ್ತಕಗಳನ್ನು ಬರೆಯಿರಿ (ಏಪ್ರಿಲ್– 2022)

ಉತ್ತರ:– ಉತ್ಕರ್ಷಿಸಲ್ಪಟ್ಟ ಪ್ರತಿವರ್ತಕ – C
ಮತ್ತು ಅಪಕರ್ಷಿಸಲ್ಪಟ್ಟ ಪ್ರತಿವರ್ತಕ – ZnO

10) ಒಂದು ಕಬ್ಬಿಣದ ಉಂಗುರಕ್ಕೆ ತಾಮ್ರದ ಲೇಪನ ಮಾಡಬೇಕಾಗಿದೆ ವಿದ್ಯುತ್ ಶಕ್ತಿಯನ್ನು ಉಪಯೋಗಿಸದೆ ಇದನ್ನು ನಾವು ಹೇಗೆ ಮಾಡಬಹುದು? (ಮಾರ್ಚ್–2020)

ಉತ್ತರ:– ಕಬ್ಬಿಣದ ಉಂಗುರವನ್ನು ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿಡಬೇಕು, ಕಬ್ಬಿಣವು ತಾಮ್ರದ ಸಲ್ಫೇಟ್ ದ್ರಾವಣದಿಂದ ತಾಮ್ರವನ್ನು ಸ್ಥಾನಪಲ್ಲಟಿಸುತ್ತದೆ ಮತ್ತು ತಾಮ್ರವು ಕಬ್ಬಿಣದ ಉಂಗುರುದ ಮೇಲೆ ಲೇಪನಗೊಳ್ಳುತ್ತದೆ.

11) ಸುಣ್ಣದ ಕಲ್ಲಿನಿಂದ ಸುಟ್ಟ ಸುಣ್ಣವನ್ನು ಪಡೆಯುವ ರಾಸಾಯನಿಕ ಕ್ರಿಯೆಯ ವಿಧ ಯಾವುದು? (ಜೂನ್ 2022)

ಉತ್ತರ:– ಉಷ್ಣ ವಿಭಾಜನಾ ಕ್ರಿಯೆ/ ಅಂತರುಷ್ಣಕ ಕ್ರಿಯೆ

12) ಚಪಾತಿಯನ್ನು ನಿಧಾನವಾಗಿ ಜಗಿದು ತಿಂದಾಗ ಸಿಹಿಯಾಗಿ ರುಚಿಸುತ್ತದೆ ಏಕೆ? (ಸೆಪ್ಟೆಂಬರ್– 2020)

ಉತ್ತರ:– ಚಪಾತಿಯು ಪಿಷ್ಟವನ್ನು ಹೊಂದಿದೆ, ಚಪಾತಿ ಜಗಿದಾಗ ಲಾಲಾರಸವು ಸ್ರವಿಸಲ್ಪಡುತ್ತದೆ, ಲಾಲಾರಸದಲ್ಲಿರುವ ಅಮೈಲೇಸ್ ಪಿಷ್ಟವನ್ನು ವಿಭಜಿಸಿ ಸರಳ ಸಕ್ಕರೆಯನ್ನಾಗಿಸುತ್ತದೆ. ಚಪಾತಿಯನ್ನು ನಿಧಾನವಾಗಿ ಜಗಿದು ತಿಂದಾಗ ಸಿಹಿಯಾಗಿ ರುಚಿಸುತ್ತದೆ

13) ಒಂದು ಜಮೀನಿಗೆ ಕೃಷಿ ತಜ್ಞರು ನಿರ್ದಿಷ್ಟ ಪ್ರಮಾಣದ ಸುಣ್ಣವನ್ನು ಸೇರಿಸಲು ಸಲಹೆ ನೀಡಿದ್ದಾರೆ ಇದಕ್ಕೆ ಕಾರಣಗಳೇನಿರಬಹುದು?

ಉತ್ತರ:– ಮಣ್ಣು ಆಮ್ಲೀಯವಾಗಿದ್ದರೆ ಕೃಷಿ ಭೂಮಿಯನ್ನು ಸರಿಪಡಿಸಲು ಕೃಷಿ ತಜ್ಞರು ನಿರ್ದಿಷ್ಟ ಪ್ರಮಾಣದ ಸುಣ್ಣವನ್ನು ಸೇರಿಸಲು ಹೇಳುತ್ತಾರೆ. ಇದರಿಂದ ಮಣ್ಣಿನಲ್ಲಿರುವ ಆಮ್ಲೀಯತೆ ಕಡಿಮೆಯಾಗುತ್ತದೆ. (ಕಾರಣ ಸುಣ್ಣವು ಪ್ರತ್ಯಾಮ್ಲೀಯವಾಗಿದೆ,)

14) ಸೀಸದ ನೈಟ್ರೇಟ್ ಅನ್ನು ಕಾಯಿಸಿದಾಗ ಬಿಡುಗಡೆಯಾಗುವ ಕಂದು ಬಣ್ಣದ ಧೂಮವನ್ನು ಹೆಸರಿಸಿ ಈ ಕ್ರಿಯೆಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣವನ್ನು ಬರೆಯಿರಿ (ಏಪ್ರಿಲ್ 2019)

ಉತ್ತರ:– ನೈಟ್ರೋಜನ್ ಡೈ ಆಕ್ಸೈಡ್

$$2Pb(NO_3)_2 \rightarrow 2PbO + 4NO_2 + O_2$$

15) ಪ್ರನಾಳ A ಮತ್ತು Bಗಳಲ್ಲಿ ಕ್ರಮವಾಗಿ ಸತುವಿನ ಸಲ್ಫೇಟ್ ಮತ್ತು ಸಿಲ್ವರ್ ನೈಟ್ರೇಟ್ ದ್ರಾವಣಗಳನ್ನು ತೆಗೆದುಕೊಳ್ಳಲಾಗಿದೆ, ತಾಮ್ರದ ಚೂರುಗಳನ್ನು ತೆಗೆದುಕೊಳ್ಳಲಾಗಿದೆ. ತಾಮ್ರದ ಚೂರುಗಳನ್ನು ಎರಡೂ ಪ್ರನಾಳಗಳಿಗೆ ಹಾಕಲಾಗಿದೆ. ಎರಡು ಪ್ರನಾಳಗಳ ಪೈಕಿ ಯಾವುದರಲ್ಲಿ ರಾಸಾಯನಿಕ ಕ್ರಿಯೆಯನ್ನು ಗಮನಿಸುವಿರಿ ನಿಮ್ಮ ಉತ್ತರವನ್ನು ವೈಜ್ಞಾನಿಕ ಕಾರಣಗಳೊಂದಿಗೆ ಸಮರ್ಥಿಸಿ (ಜೂನ್ 2018)

ಉತ್ತರ:– ಸಿಲ್ವರ್ ನೈಟ್ರೇಟ್ ದ್ರಾವಣ ಹೊಂದಿರುವ ಪ್ರನಾಳ Bಯಲ್ಲಿ ಏಕೆಂದರೆ ತಾಮ್ರವು ಬೆಳ್ಳಿಗಿಂತ ಹೆಚ್ಚು ಕ್ರಿಯಾಶೀಲ ಆದ್ದರಿಂದ ಸಿಲ್ವರ್ ನೈಟ್ರೇಟ್ ದ್ರಾವಣದಿಂದ ಬೆಳ್ಳಿಯನ್ನು ಸ್ಥಾನಪಲ್ಲಟಗೊಳಿಸುತ್ತದೆ

16) ಸತುವಿನ ಮೇಲೆ ಸಾರರಿಕ್ತ ಸಲ್ಫೋರಿಕ ಆಮ್ಲದ ವರ್ತನೆಯಿಂದ ಹೈಡ್ರೋಜನ ಅನಿಲ ಉಂಟಾಗುವಿಕೆಯ ಚಿತ್ರವನ್ನು ಬರೆದು ಭಾಗಗಳನ್ನು ಬರೆಯಿರಿ

ಉತ್ತರ:–



17) ರಾಸಾಯನಿಕ ಸಮೀಕರಣಗಳನ್ನು ಸರಿದೂಗಿಸುವಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ನಿಯಮವನ್ನು ಹೆಸರಿಸಿ ಮತ್ತು ನಿರೂಪಿಸಿ

ಉತ್ತರ:– ರಾಶಿ ಸಂರಕ್ಷಣಾ ನಿಯಮ ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸುವುದಾಗಲೀ ನಾಶಮಾಡುವುದಾಗಲೀ ಸಾಧ್ಯವಿಲ್ಲ

18) ಸತು, ಕಬ್ಬಿಣ, ಮೆಗ್ನೀಷಿಯಂ ಹಾಗೂ ತಾಮ್ರದ ಚೂರುಗಳನ್ನು A, B, C ಮತ್ತು D ಎಂಬ ಪ್ರನಾಳಗಳಲ್ಲಿ ಕ್ರಮವಾಗಿ ತೆಗೆದುಕೊಳ್ಳಲಾಗಿದೆ, ಈ ಪ್ರನಾಳಗಳಿಗೆ ಒಂದೇ ಪ್ರಮಾಣದ ಫೆರಸ್ ಸಲ್ಫೇಟ್ ದ್ರಾವಣವನ್ನು ಸೇರಿಸಲಾಗಿದೆ ಯಾವ ಪ್ರನಾಳದಲ್ಲಿ ರಾಸಾಯನಿಕ ಕ್ರಿಯೆ ನಡೆಯುತ್ತದೆ ಏಕೆ? ಇಲ್ಲಿ ನಡೆಯುವ ಕ್ರಿಯೆಗಳಿಗೆ ರಾಸಾಯನಿಕ ಸಮೀಕರಣ ಬರೆಯಿರಿ (ಸೆಪ್ಟೆಂಬರ್– 2020)

ಉತ್ತರ:– A ಮತ್ತು C ಪ್ರನಾಳಗಳಲ್ಲಿ ರಾಸಾಯನಿಕ ಕ್ರಿಯೆ ನಡೆಯುತ್ತದೆ. ಏಕೆಂದರೆ ಸತು ಮತ್ತು ಮೆಗ್ನೀಷಿಯಂ ಕಬ್ಬಿಣಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ, ಅಥವಾ ಲೋಹಗಳ ಕ್ರಿಯಾಶೀಲತೆಯ ಸರಣಿಯಲ್ಲು ಸತು ಮತ್ತು ಮೆಗ್ನೀಷಿಯಂ ಕಬ್ಬಿಣಕ್ಕಿಂತ ಮೇಲ್ಭಾಗದಲ್ಲಿ ಕಂಡು ಬರುತ್ತದೆ.

ಸತು+ ಕಬ್ಬಿಣದ ಸಲ್ಫೇಟ್ →ಸತುವಿನ ಸಲ್ಫೇಟ್ + ಕಬ್ಬಿಣ

19) ಒಂದು ಪ್ರನಾಳದಲ್ಲಿರುವ 5 *ml* ಸೋಡಿಯಂ ಸಲ್ಫೇಟ್ ದ್ರಾವಣಕ್ಕೆ ಅಷ್ಟೇ ಪ್ರಮಾಣದ ಬೇರಿಯಂ ಕ್ಲೋರೈಡ್ ದ್ರಾವಣ ಸೇರಿಸಿದಾಗ
(1) ಉತ್ಪತ್ತಿಯಾದ ಜಲವಿಲೀನಗೊಳ್ಳದ ಬಿಳಿಯ ಪ್ರಕ್ಷೇಪ ಯಾವುದು?
(2) ಬಿಳಿಯ ಪ್ರಕ್ಷೇಪ ಉಂಟಾಗಲು ಕಾರಣವಾದ ಅಯಾನುಗಳನ್ನು ಹೆಸರಿಸಿ (ಜೂನ್ 2023)
(3) ಇಲ್ಲಿ ಜರುಗಿದ ರಾಸಾಯನಿಕ ಕ್ರಿಯೆಯು ವಿಧವನ್ನು ತಿಳಿಸಿ

(ಮುಂದುವರಿಯುವುದು)

Types of Solutions

Multiple Choice Questions:-

10. Maximum amount of a solid solute that can be dissolved in a specified amount of a given liquid solvent does *not* depend upon ....
a) Temperature b) Nature of solute
c) Pressure d) Nature of solvent
Ans:- C

11. Low concentration of oxygen in the blood and tissues of people living at high altitude is due to ....
a) low temperature
b) low atmospheric pressure
c) high atmospheric pressure
d) both low temperature and high atmospheric pressure. **Ans:- b**

12. Considering the formation, breaking and strength of hydrogen bond, predict which of the following mixtures will show a positive deviation from Raoult's law?
a) Methanol and acetone
b) Chloroform and acetone
c) Nitric acid and water
d) Phenol and aniline. **Ans:- a**

13. Colligative properties depend on
a) the nature of the solute particles dissolved in solution.
b) the number of solute particles in solution.
c) the physical properties of the solute particles dissolved in solution.
d) the nature of solvent particles. **Ans:-b**

14. In comparison to a 0.01 M solution of glucose, the depression in freezing point of a 0.01M $MgCl_2$ solution is.........
a) the same b) about twice
c) about 3 times d) about 6 times **Ans:- C**

15. An unripe mango placed in a concentrated salt solution to prepare pickles, shrivels because............
a) it gains water due to osmosis.
b) it loses water due to reverse osmosis.
c) it gains water due to reverse osmosis.
d) it loses water due to osmosis.
Ans:- d

11. At a given temperature, osmotic pressure of a concentrated solution of a substance
a) is higher than that of a dilute solution.
b) is lower than that of a dilute solution.
c) is same as that of a dilute solution.
d) cannot compared with osmotic pressure of dilute solution. **Ans:- a**

Answer the following:-

1. What is the normality of two solutions mixed together?

Ans:- Normality of solution formed on mixing two solutions.

When volume V_1 of a solution of normality N_1 is mixed with the volume V_2 of another solution of normality N_2 then the normality N of the resulting solution of Volume V (Volume-$V = V_1 + V_2$) is given by the equation : $N_1 V_1 + N_2 V_2 = N (V_1 + V_2)$

Note :- Molality of a solution is considered better for expressing the concentration of the solution as completed to molarity.

2. What is meant by colligative properties?

Ans:- The properties of dilute solutions which depend only on the number of solute particles and not on the nature of solute particles are called colligative properties

3. Mention some of the colligative properties.

Ans:- Some of the colligative properties are as follows –
(1) Osmotic pressure
(2) Relative lowering of vapour pressure
(3) Elevation in boiling point
(4) Depression in freezing point

4. (A) Define ideal solutions and give an example.

Ans:- ***Ideal solution*** – it is the one where the intermolecular interactions between the components are of the same magnitude as the intermolecular interactions found in the pure components. **(or) the solution which obeys roaults law.**

Eg:- A mixture of benzene and toluene.

4.(B) Define Non - ideal solutions and give an example.

Ans:- ***Non - ideal solution*** – it is the one where the intermolecular interactions between the components are different from the intermolecular interactions found in between the molecules of the pure components. (or) the solution which doesn't obey roualts law.

Eg:- A mixture of benzene and acetone.

5. What is vapour pressure?

Ans:- Pressure exerted by the vapour above the liquid surface, in equilibrium with the liquid is called its vapour pressure, at the given temperature. The vapour pressure increases with the rise in temperature.

6. What is lowering of the vapour pressure?

Ans:- The difference between the vapour pressure of the pure solvent P^0 and that of the solution P, is called the lowering of the vapour pressure $P^0 - P$.

7. What is relative lowering of vapour pressure?

Ans:- The relative lowering of vapour pressure is the ratio of the lowering of vapour pressure for the solution to the vapour pressure of the pure solvent.

The relative lowering of vapour pressure is given by,

$$\frac{P^0 - P}{P^0}$$

1. ಭಾರತದಲ್ಲೇ ಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡನೆ.
2. ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಕೃಷಿ ಸಾಲ ವಿತರಣೆ.
3. ರೈತರ ಮಕ್ಕಳಿಗೆ 'ರೈತ ವಿದ್ಯಾನಿಧಿ' ವಿದ್ಯಾರ್ಥಿವೇತನ ಯೋಜನೆ ಜಾರಿ.
4. ಪಿಎಂ-ಕಿಸಾನ್ ಯೋಜನೆಯಡಿ ರಾಜ್ಯದಿಂದ ಹೆಚ್ಚುವರಿ ₹4,000 ನೆರವು.
5. ಹಸಿರು ಶಾಲು ಧರಿಸಿ, ರೈತರ ಹೆಸರಿನಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ.
6. ಹಾಲಿನ ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ಪ್ರೋತ್ಸಾಹಧನ ನೀಡುವ ಯೋಜನೆ ಆರಂಭ.
7. ಕಂದಾಯ ದಾಖಲೆಗಳಿಗೆ ಅಲೆಯುತ್ತಿದ್ದ ರೈತರಿಗೆ ಸುಗಮ ವ್ಯವಸ್ಥೆ ಜಾರಿ.
8. ರಾಜ್ಯದ ವಿವಿದೆಡೆ ಏತ ನೀರಾವರಿ ಯೋಜನೆಗಳಿಗೆ ಭಾರಿ ಅನುದಾನ.
9. ಸಕಾಲದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಕೆಗೆ ಕಟ್ಟುನಿಟ್ಟಿನ ಕ್ರಮ.
10. ಸಾವಯವ ಕೃಷಿ ಉತ್ತೇಜನಕ್ಕೆ ಪ್ರತ್ಯೇಕ ನೀತಿ ರೂಪಣೆ.
11. ಹೆಣ್ಣುಮಕ್ಕಳ ಭವಿಷ್ಯಕ್ಕಾಗಿ 'ಭಾಗ್ಯಲಕ್ಷ್ಮಿ' ಯೋಜನೆ ಜಾರಿ.
12. ಸ್ತ್ರೀಶಕ್ತಿ ಸಂಘಗಳಿಗೆ ಆರ್ಥಿಕ ನೆರವು ಮತ್ತು ಸಾಲ ಸೌಲಭ್ಯ.
13. ಹೆಣ್ಣುಮಕ್ಕಳಿಗೆ ಉಚಿತ ಸೈಕಲ್ ವಿತರಣೆ (ಗ್ರಾಮೀಣ ಭಾಗದ ಶಿಕ್ಷಣಕ್ಕೆ ಉತ್ತೇಜನ).
14. ವಿಧವಾ ವೇತನ ಮತ್ತು ಸಂಧ್ಯಾ ಸುರಕ್ಷಾ ಯೋಜನೆಯಡಿ ಮಾಸಾಶನ ಹೆಚ್ಚಳ.
15. ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಏರಿಕೆ.
16. ಬೆಂಗಳೂರಿನ ಅಭಿವೃದ್ಧಿಗೆ 'ನವ ನಗರೋತ್ಥಾನ' ಯೋಜನೆ.
17. ಶಿವಮೊಗ್ಗ ಮತ್ತು ಕಲ್ಬುರ್ಗಿಯಲ್ಲಿ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಚಾಲನೆ.
18. ರಾಜ್ಯದ ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ರಸ್ತೆಗಳ ದ್ವಿಪಥ ಮತ್ತು ಚತುಷ್ಪಥ ಅಭಿವೃದ್ಧಿ.
19. 'ಸುವರ್ಣ ಗ್ರಾಮೋದಯ' ಯೋಜನೆಯಡಿ ಹಳ್ಳಿಗಳ ಸಮಗ್ರ ಅಭಿವೃದ್ಧಿ.
20. ಕೈಗಾರಿಕಾ ನೀತಿಯಲ್ಲಿ ಬದಲಾವಣೆ ತಂದು ಹೂಡಿಕೆದಾರರನ್ನು ಆಕರ್ಷಿಸಿದ್ದು.
21. ರಾಜ್ಯದ ಧಾರ್ಮಿಕ ಕ್ಷೇತ್ರದ ಪ್ರಗತಿಗೆ ಮಠಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ನೀಡಿಕೆ.
22. ಅನುಭವ ಮಂಟಪ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಹಣ ಮೀಸಲು.



ಬಿ.ಎಸ್. ಯಡಿಯೂರಪ್ಪನವರು ತಮ್ಮ 5 ದಶಕಗಳ ರಾಜಕೀಯ ಜೀವನದಲ್ಲಿ ಹಲವಾರು ಸವಾಲುಗಳನ್ನು ಎದುರಿಸಿದ್ದಾರೆ. ಜತೆಗೆ, ಆಡಳಿತಾತ್ಮಕವಾಗಿ ಅನೇಕ ನಿರ್ಣಾಯಕ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಈ ಪೈಕಿ ಪ್ರಮುಖ 50 ದಿಟ್ಟ ನಡೆಗಳನ್ನಿಲ್ಲಿ ನೀಡಲಾಗಿದೆ.

23. ಕನಕದಾಸರು, ವಾಲ್ಮೀಕಿ ಮುಂತಾದ ಮಹಾಪುರುಷರ ಜಯಂತಿಗಳ ಸರ್ಕಾರಿ ಆಚರಣೆ.
24. ಪ್ರಮುಖ ಪ್ರವಾಸಿ ಮತ್ತು ಧಾರ್ಮಿಕ ತಾಣಗಳ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್.
25. ಕನ್ನಡ ಭಾಷೆ ಮತ್ತು ಸಂಸ್ಕೃತಿ ಇಲಾಖೆಗೆ ಹೆಚ್ಚಿನ ಬಲ ನೀಡಿದ್ದು.
26. ಕೋವಿಡ್-19 ಸಂಕಷ್ಟದ ಸಮಯದಲ್ಲಿ ಧೈರ್ಯದಿಂದ ಆಡಳಿತ ನಡೆಸಿದ್ದು.
27. ಲಾಕ್‌ಡೌನ್ ಅವಧಿಯಲ್ಲಿ ವಿವಿಧ ವರ್ಗದ ಜನರಿಗೆ ವಿಶೇಷ ಪ್ಯಾಕೇಜ್.
28. ಭೀಕರ ಪ್ರವಾಹ ಬಂದಾಗ ಕೇಂದ್ರದಿಂದ ಅನುದಾನ ಕಾಯದೆ ತಕ್ಷಣದ ಪರಿಹಾರ ಬಿಡುಗಡೆ.
29. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಅಗತ್ಯ ಕ್ರಮ.
30. ಕಂದಾಯ ಅದಾಲತ್‌ಗಳ ಮೂಲಕ ಹಳೆಯ ಭೂ ವಿವಾದಗಳ ಇತ್ಯರ್ಥ.
31. ಎಸ್‌ಸಿ/ಎಸ್‌ಟಿ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನ ದುರುಪಯೋಗ ತಡೆಗೆ ಕಾಯ್ದೆ.
32. ಬಡ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಸಂಖ್ಯೆ ಹೆಚ್ಚಳ.
33. ಹೊಸ ವಿಶ್ವವಿದ್ಯಾಲಯಗಳು ಮತ್ತು ವೈದ್ಯಕೀಯ ಕಾಲೇಜುಗಳ ಸ್ಥಾಪನೆ.
34. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸ್ವತಂತ್ರ ಅಸ್ತಿತ್ವ ಮತ್ತು ಹೆಚ್ಚಿನ ಅನುದಾನ.
35. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಆರ್ಥಿಕ ನೆರವು.
36. ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದು.
37. ಆಪರೇಷನ್ ಕಮಲದ ಮೂಲಕ ಸರ್ಕಾರ ರಚಿಸಿದ ರಾಜಕೀಯ ಚತುರತೆ.
38. ಕೆಜೆಪಿ ಪಕ್ಷ ಕಟ್ಟಿ ನಂತರ ಬಿಜೆಪಿಯೊಂದಿಗೆ ವಿಲೀನಗೊಳಿಸಿದ ನಿರ್ಧಾರ.
39. ಸಮ್ಮಿಶ್ರ ಸರ್ಕಾರದ ಪತನದ ನಂತರ ಏಕಾಂಗಿಯಾಗಿ ಪ್ರವಾಹ ಪರಿಸ್ಥಿತಿ ನಿಭಾಯಿಸಿದ್ದು.
40. ಪಕ್ಷದ ಸಂಘಟನೆಗಾಗಿ ರಾಜ್ಯಾದ್ಯಂತ ನಿರಂತರ ಪ್ರವಾಸ ಮತ್ತು ಹೋರಾಟ.
41. ನಮ್ಮ ಮೆಟ್ರೋ ಯೋಜನೆಯ ವೇಗವರ್ಧನೆ.
42. ಸೈಕಲ್ ಪಥಗಳು ಮತ್ತು ನಗರ ಸಾರಿಗೆ ಸುಧಾರಣೆ.
43. ಕೆರೆಗಳ ಪುನರುಜ್ಜೀವನಕ್ಕೆ ವಿಶೇಷ ಆದ್ಯತೆ.
44. ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಸುಧಾರಣೆ.
45. ಪ್ರವಾಸೋದ್ಯಮ ನೀತಿ-2020ರ ಜಾರಿ.
46. ಗ್ರಾಮ ಪಂಚಾಯತ್ ಮಟ್ಟದಲ್ಲಿ ಡಿಜಿಟಲೀಕರಣಕ್ಕೆ ಒತ್ತು.
47. ಮೀನುಗಾರರಿಗೆ ಸಬ್ಸಿಡಿ ದರದಲ್ಲಿ ಡೀಸೆಲ್ ಪೂರೈಕೆ.
48. ನೇಕಾರರ ಸಾಲ ಮನ್ನಾ ಮತ್ತು ನೇಕಾರ ಸಮ್ಮಾನ್ ಯೋಜನೆ.
49. ಕುಶಲಕರ್ಮಿಗಳಿಗೆ ಮತ್ತು ಕುಂಬಾರರಿಗೆ ಆರ್ಥಿಕ ಬೆಂಬಲ.
50. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವಾಗಲೂ ಪಕ್ಷದ ನಿಷ್ಠೆ ಮೆರೆದ ರೀತಿ.

ಶೂನ್ಯದಿಂದ ಶಿಖರಕ್ಕೇರಿದ ಶಿಕಾರಿಪುರದ ಮಾಸ್‌ಲೀಡರ್!

ಕರ್ನಾಟಕದಲ್ಲಿ ಕಮಲ ಚಿಹ್ನೆಗೆ ಬಲ ತಂದುಕೊಟ್ಟ ಬೂಕನಕೆರೆ ಕುಡಿ ಬಿ.ಎಸ್. ಯಡಿಯೂರಪ್ಪ, ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೇರಲು ಅವಿರತ ಶ್ರಮ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬೆಂಗಳೂರು: ಕರ್ನಾಟಕದ ರಾಜಕೀಯ ಇತಿಹಾಸವನ್ನು ಬಿ.ಎಸ್.ಯಡಿಯೂರಪ್ಪ (ಬಿಎಸ್‌ವೈ) ಅವರ ಉಲ್ಲೇಖವಿಲ್ಲದೆ ಬರೆಯಲು ಸಾಧ್ಯವಿಲ್ಲ. ಮಂಡ್ಯದ ಬೂಕನಕೆರೆಯ ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿ, ಶಿವಮೊಗ್ಗದ ಶಿಕಾರಿಪುರವನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡು, ದಕ್ಷಿಣ ಭಾರತದಲ್ಲಿ ಬಿಜೆಪಿಯ ಭದ್ರಕೋಟೆ ನಿರ್ಮಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಮೇ ತಿಂಗಳಿಗೆ ಬಿ.ಎಸ್.ಯಡಿಯೂರಪ್ಪನವರು ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆ ಮಾಡಿ 50 ವರ್ಷಗಳು ಕಳೆಯುತ್ತಿವೆ. ಈ 5ದಶಕಗಳ ಸುದೀರ್ಘ ಹಾದಿ ಸಾಮಾನ್ಯ ಕಾರ್ಯಕರ್ತನೋರ್ವ ರಾಜ್ಯಾಡಳಿತ ಶಕ್ತಿಕೇಂದ್ರದ ಚುಕ್ಕಾಣಿ ಹಿಡಿವ ಕಥೆಯಾಗಿ ಅನೇಕರಿಗೆ ಸ್ಫೂರ್ತಿಯ ಸ್ವರೂಪವಾಗಿದೆ. ಯಾವುದೇ ರಾಜಕೀಯದ ಹಿನ್ನೆಲೆಯಿಲ್ಲದೇ ಸಾಮಾನ್ಯ ಗುಮಾಸ್ತ ವೃತ್ತಿಯ ಓರ್ವ ವ್ಯಕ್ತಿ ರಾಜಕೀಯ ರಂಗದಲ್ಲಿ ಮಹತ್ತರ ಸ್ಥಾನಕ್ಕೇರುವ ಘಟ್ಟಗಳು ನಿಜಕ್ಕೂ ರೋಚಕ.

1943ರಲ್ಲಿ ಜನಿಸಿದ ಯಡಿಯೂರಪ್ಪನವರ ಜೀವನ ಸತತ ಸಂಘರ್ಷಗಳಿಂದಲೇ ಕೂಡಿತ್ತು. ಸಾಮಾನ್ಯ ಗುಮಾಸ್ತ ವೃತ್ತಿ ಜೀವನ ಆರಂಭಿಸಿದ ಅವರು, ನಂತರ ಅಕ್ಕಿ ಗಿರಣಿಯಲ್ಲಿ ಕೆಲಸ ಮಾಡಿದರು. ಕೊನೆಗೆ ಶಿಕಾರಿಪುರದಲ್ಲಿ ಹಾರ್ಡ್‌ವೇರ್ ಮಳಿಗೆಯನ್ನು ತೆರೆದರು. ಆದರೆ, ಅವರ ಮನಸ್ಸು ಸಮಾಜ ಸೇವೆಯತ್ತ ತುಡಿಯುತ್ತಿತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸಕ್ರಿಯ ಕಾರ್ಯಕರ್ತರಾಗಿ ಗುರುತಿಸಿಕೊಂಡ ಅವರು, 1972ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ಅಖಾಡಕ್ಕೆ ಧುಮುಕಿದರು. ತುರ್ತು ಪರಿಸ್ಥಿತಿಯ ಸಮಯದಲ್ಲಿ (1975-77) ಜೈಲುವಾಸ ಅನುಭವಿಸಿದ್ದು ಅವರ ರಾಜಕೀಯ ವ್ಯಕ್ತಿತ್ವಕ್ಕೆ ಹೊಸ ಆಯಾಮ ನೀಡಿತು.

80ರ ದಶಕದಲ್ಲಿ ಕರ್ನಾಟಕದಲ್ಲಿ ಬಿಜೆಪಿ ಕೇವಲ ಒಂದು ಸಣ್ಣ ಶಕ್ತಿಯಾಗಿತ್ತು. 1983ರಲ್ಲಿ ಮೊದಲ ಬಾರಿಗೆ ಶಿಕಾರಿಪುರದಿಂದ ಶಾಸಕರಾಗಿ ಆಯ್ಕೆಯಾದ ಯಡಿಯೂರಪ್ಪ, ಅಂದಿನಿಂದ ಆ ಕ್ಷೇತ್ರವನ್ನು ತಮ್ಮ ಅವಿಭಾಜ್ಯ ಅಂಗವನ್ನಾಗಿಸಿಕೊಂಡರು. ಹಳ್ಳಿ ಹಳ್ಳಿಗಳಲ್ಲಿ ಪಾದಯಾತ್ರೆ ನಡೆಸಿ, ರೈತರ ಪರವಾಗಿ ಧ್ವನಿ ಎತ್ತಿದ ಅವರು 'ರೈತ ನಾಯಕ'ನಾಗಿ ಬೆಳೆದರು. ಬಗರ್ ಹುಕುಂ ಸಾಗುವಳಿ ಹೋರಾಟ ಮತ್ತು ಬೆಂಬಲ ಬೆಲೆಗಾಗಿ ಅವರು ನಡೆಸಿದ ಹೋರಾಟಗಳು ಅವರಿಗೆ ಜನಸಾಮಾನ್ಯರ ಬೆಂಬಲ ತಂದುಕೊಟ್ಟವು.



2006ರಲ್ಲಿ ಜೆಡಿಎಸ್ ಜೊತೆಗೂಡಿ ಸಮ್ಮಿಶ್ರ ಸರ್ಕಾರ ರಚಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಉಪಮುಖ್ಯಮಂತ್ರಿಯಾಗಿ ಮತ್ತು ಹಣಕಾಸು ಸಚಿವರಾಗಿ ಅವರು ಮಂಡಿಸಿದ ಬಜೆಟ್‌ಗಳು ಜನಪ್ರಿಯವಾದವು. ವಿಶೇಷವಾಗಿ ಹೆಣ್ಣು ಮಕ್ಕಳಿಗಾಗಿ 'ಭಾಗ್ಯಲಕ್ಷ್ಮಿ' ಯೋಜನೆ ಮತ್ತು ಶಾಲಾ ಮಕ್ಕಳಿಗೆ 'ಸೈಕಲ್ ವಿತರಣೆ'ಯಂತಹ ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೆ ತಂದರು.

ಬಿಜೆಪಿಗೆ ದಕ್ಷಿಣದ ಹೆಬ್ಬಾಗಿಲು: 2008ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 110 ಸ್ಥಾನಗಳನ್ನು ಗೆದ್ದು, ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಸರ್ಕಾರ ರಚಿಸಿತು. ಯಡಿಯೂರಪ್ಪನವರು ಪೂರ್ಣ ಪ್ರಮಾಣದ ಮುಖ್ಯಮಂತ್ರಿಯಾದರು. ಈ ಅವಧಿಯಲ್ಲಿ ಅವರು ಕೃಷಿಗಾಗಿಯೇ ಪ್ರತ್ಯೇಕ ಬಜೆಟ್ ಮಂಡಿಸಿ ದಾಖಲೆ ಬರೆದರು. ಮಠ-ಮಾನ್ಯಗಳಿಗೆ ಅನುದಾನ ನೀಡುವುದರ ಮೂಲಕ ಸಾಂಸ್ಕೃತಿಕವಾಗಿಯೂ ಪ್ರಭಾವ ಬೀರಿದರು. ರಾಜಕೀಯ ಜೀವನವು ಸದಾ ಏಳುಬೀಳುಗಳಿಂದ ಕೂಡಿತ್ತು. ಲೋಕಾಯುಕ್ತ ವರದಿಯ ಹಿನ್ನೆಲೆಯಲ್ಲಿ 2011ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ನಂತರ ಬಿಜೆಪಿ ತೊರೆದು 'ಕರ್ನಾಟಕ ಜನತಾ ಪಕ್ಷ' (ಕೆಜೆಪಿ) ಸ್ಥಾಪಿಸಿದರು. 2013ರ ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ಇದು ಕಾರಣವಾಯಿತು. ಆದರೆ, 2014ರ ಲೋಕಸಭಾ ಚುನಾವಣೆಗೂ ಮುನ್ನ ನರೇಂದ್ರ ಮೋದಿಯವರ ನೇತೃತ್ವದ ಅಡಿಯಲ್ಲಿ ಮತ್ತೆ ಬಿಜೆಪಿಗೆ ಮರಳಿದರು. ಇದು ಬಿಜೆಪಿಗೆ ದಕ್ಷಿಣದಲ್ಲಿ ಹೊಸ ಚೈತನ್ಯ ನೀಡಿತು.

2019ರಲ್ಲಿ ಯಡಿಯೂರಪ್ಪನವರು ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾದರು. ಕೊರೊನಾ ಸಂಕಷ್ಟದ ಕಾಲದಲ್ಲಿ 70ರ ಹರೆಯದಲ್ಲೂ ರಾಜ್ಯಾದ್ಯಂತ ಓಡಾಡಿ ಆಡಳಿತ ನಡೆಸಿದರು. ಗೋಹತ್ಯೆ ನಿಷೇಧ ಕಾಯ್ದೆ ಮತ್ತು ತೃತೀಯ ಲಿಂಗಿಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡುವಂತಹ ಪ್ರಮುಖ ನಿರ್ಧಾರಗಳನ್ನು ಕೈಗೊಂಡರು. 2021ರಲ್ಲಿ ಬಿಎಸ್‌ವೈ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರೂ, ಅವರ ಪ್ರಭಾವ ಕುಂದಿಲ್ಲ. ಅವರ ಪುತ್ರ ಬಿ.ವೈ. ವಿಜಯೇಂದ್ರ ಈಗ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನಡೆಸುತ್ತಿದ್ದಾರೆ. ಪ್ರಸ್ತುತ ಚಿತ್ರದುರ್ಗದಲ್ಲಿ ನಡೆಯುತ್ತಿರುವ ಅವರ 50 ವರ್ಷಗಳ ಸಾರ್ವಜನಿಕ ಜೀವನದ ಸಂಭ್ರಮಕ್ಕೆ ಅಮಿತ್ ಶಾ ಸೇರಿದಂತೆ ರಾಷ್ಟ್ರೀಯ ನಾಯಕರು ಆಗಮಿಸುತ್ತಿರುವುದು ಅವರ ಶಕ್ತಿಗೆ ಸಾಕ್ಷಿ. ಲಿಂಗಾಯತ ಸಮುದಾಯದ ಪ್ರಶ್ನಾತೀತ ನಾಯಕನಾಗಿ ಮಾತ್ರವಲ್ಲದೆ, ರಾಜ್ಯದ ಸರ್ವ ಜನಾಂಗದ ಶಾಂತಿಯ ತೋಟದ ರಕ್ಷಕನಾಗಿ ಬಿಎಸ್‌ವೈ ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿದ್ದಾರೆ. ಅಧಿಕಾರವಿರಲಿ ಇಲ್ಲದಿರಲಿ, ಯಡಿಯೂರಪ್ಪ ಎಂಬ ಹೆಸರು ಕರ್ನಾಟಕ ಬಿಜೆಪಿಯ ಅಸ್ಮಿತೆಯಾಗಿ ಉಳಿಯಲಿದೆ.

ಸಂಘದ ಗರಡಿಯಿಂದ ರಾಜಕೀಯ ಪ್ರಗತಿ : ಕರ್ನಾಟಕದ ರಾಜಕೀಯ ವಲಯದಲ್ಲಿ ಪ್ರೀತಿಯಿಂದ 'ರಾಜಾಹುಲಿ' ಎಂದೇ ಕರೆಸಿಕೊಳ್ಳುವ ಬಿ.ಎಸ್. ಯಡಿಯೂರಪ್ಪ ಅವರ ಸುದೀರ್ಘ 50 ವರ್ಷಗಳ ರಾಜಕೀಯ ಪಯಣದ ಹಿಂದೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮಹತ್ತರ ಪಾತ್ರ ವಹಿಸಿದೆ. ಸ್ವತಃ ಯಡಿಯೂರಪ್ಪನವರೇ ಹಲವು ಬಾರಿ ಹೇಳಿಕೊಂಡಿರುವಂತೆ, ಅವರು ಇಂದು ಈ ಹಂತಕ್ಕೆ ತಲುಪಲು ಆರ್‌ಎಸ್‌ಎಸ್ ನೀಡಿದ ಶಿಸ್ತು ಮತ್ತು ತರಬೇತಿಯೇ ಮುಖ್ಯ ಕಾರಣ. ಮಂಡ್ಯ ಜಿಲ್ಲೆಯ ಬೂಕನಕೆರೆಯಲ್ಲಿ ಜನಿಸಿದ ಯಡಿಯೂರಪ್ಪನವರು ಶಿಕಾರಿಪುರಕ್ಕೆ ವಲಸೆ ಬಂದ ನಂತರ ಆರ್‌ಎಸ್‌ಎಸ್‌ನ ಸಕ್ರಿಯ ಕಾರ್ಯಕರ್ತರಾಗಿ ಗುರುತಿಸಿಕೊಂಡರು. 1970ರ ದಶಕದಲ್ಲಿ ಆರ್‌ಎಸ್‌ಎಸ್‌ನ ತಾಲೂಕು ಘಟಕದ ಜವಾಬ್ದಾರಿಯನ್ನು ಹೊತ್ತುಕೊಂಡು ಸಂಘಟನೆಯನ್ನು ಬಲಪಡಿಸಿದರು. ಆರ್‌ಎಸ್‌ಎಸ್ ಪ್ರೇರಣೆಯಿಂದ ಜನಸಂಘವನ್ನು ಸೇರಿದ ಇವರು, 1972ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಸಕ್ರಿಯ ಚುನಾವಣಾ ರಾಜಕೀಯಕ್ಕೆ ಕಾಲಿಟ್ಟರು.

1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ನಡೆದ ಕ್ರಮಗಳ ವಿರುದ್ಧ ಧ್ವನಿ ಎತ್ತಿದ ಯಡಿಯೂರಪ್ಪನವರು, ಸುಮಾರು 45 ದಿನಗಳ ಕಾಲ ಜೈಲುವಾಸ ಅನುಭವಿಸಿದರು. ಬಳ್ಳಾರಿ ಮತ್ತು ಶಿವಮೊಗ್ಗದ ಜೈಲುಗಳಲ್ಲಿ ಕಳೆದ ಈ ದಿನಗಳು ಅವರ ರಾಜಕೀಯ ವ್ಯಕ್ತಿತ್ವವನ್ನು ಮತ್ತಷ್ಟು ಗಟ್ಟಿಗೊಳಿಸಿದವು. ವಿಧಾನಸಭೆಯಲ್ಲಿ ತಮ್ಮ ವಿದಾಯದ ಭಾಷಣ ಮಾಡುವಾಗ ಯಡಿಯೂರಪ್ಪನವರು ಅತ್ಯಂತ ಭಾವುಕರಾಗಿ ಆರ್‌ಎಸ್‌ಎಸ್ ಕೊಡುಗೆಯನ್ನು ಸ್ಮರಿಸಿದ್ದರು. 'ನಾನು ಇಂದು ಈ ಮಟ್ಟಕ್ಕೆ ಬೆಳೆಯಲು ಆರ್‌ಎಸ್‌ಎಸ್ ನೀಡಿದ ತರಬೇತಿಯೇ ಕಾರಣ. ಸಂಘದ ಸಂಸ್ಕಾರವನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ನನ್ನ ಉಸಿರಿರುವ ತನಕ ಬಿಜೆಪಿಯನ್ನು ಕಟ್ಟಲು ಶ್ರಮಿಸುತ್ತೇನೆ' ಎಂದಿದ್ದರು. 1980ರಲ್ಲಿ ಬಿಜೆಪಿ ಸ್ಥಾಪನೆಯಾದಾಗ ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಜವಾಬ್ದಾರಿ ಹೊತ್ತು, ನಂತರ ರಾಜ್ಯದಾದ್ಯಂತ ಪಕ್ಷವನ್ನು ಕಟ್ಟಿ ಬೆಳೆಸಿದರು. ಅನಂತಕುಮಾರ್ ಮತ್ತು ಇತರ ನಾಯಕರೊಂದಿಗೆ ಸೇರಿ ಕರ್ನಾಟಕದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು.

BSY 50 ವಿಶೇಷತೆಗಳು...

1. ಛಲಬಿಡದ ಹೋರಾಟಗಾರ: ಶೂನ್ಯದಿಂದ ಬೆಳೆದು ಬಂದವರು.
2. ನಾಯಕತ್ವ: ಪಕ್ಷಕ್ಕಿಂತ ಮಿಗಿಲಾದ ಜನಪ್ರಿಯತೆ ಗಳಿಸಿದವರು.
3. ಜನಸಾಮಾನ್ಯರ ನಾಯಕ: ಸಾಮಾನ್ಯ ಜನರೊಂದಿಗೆ ಬೆರೆಯುವ ಗುಣ.
4. ದಣಿವರಿಯದ ಕೆಲಸ: 80ರ ಹರೆಯದಲ್ಲೂ ಸಕ್ರಿಯವಾಗಿ ಕಾರ್ಯನಿರ್ವಹಿಸುವ ಉತ್ಸಾಹ.
5. ಧೈರ್ಯವಂತಿಕೆ: ಎಂತಹ ಕಠಿಣ ಪರಿಸ್ಥಿತಿಯಲ್ಲೂ ಎದೆಗುಂದದ ಸ್ವಭಾವ.
6. ಆಧ್ಯಾತ್ಮಿಕ ಒಲವು: ಧಾರ್ಮಿಕ ಕೇಂದ್ರಗಳು ಮತ್ತು ಮಠ-ಮಾನ್ಯಗಳ ಮೇಲೆ ಅಪಾರ ಭಕ್ತಿ.
7. ಸಮಯ ಪಾಲನೆ: ಕಾರ್ಯಕ್ರಮಗಳಿಗೆ ನಿಗದಿತ ಸಮಯಕ್ಕೆ ಹಾಜರಾಗುವುದು.
8. ವಾಕ್ಪಟುತ್ವ: ಜನರನ್ನು ಸೆಳೆಯುವ ಅಪ್ಪಟ ದೇಸೀ ಶೈಲಿಯ ಭಾಷಣ.
9. ದೂರದೃಷ್ಟಿ: ರಾಜ್ಯದ ಅಭಿವೃದ್ಧಿಯ ಬಗ್ಗೆ ಸ್ಪಷ್ಟ ಕಲ್ಪನೆ.
10. ಕ್ಷಮಾಗುಣ: ರಾಜಕೀಯ ವಿರೋಧಿಗಳನ್ನೂ ಸ್ನೇಹದಿಂದ ನಡೆಸಿಕೊಳ್ಳುವ ಔದಾರ್ಯ.
11. ಪಕ್ಷದ ಸಂಘಟಕ: ಜನಸಂಘ ಕಾಲದಿಂದಲೂ ಬಿಜೆಪಿಯನ್ನು ಕಟ್ಟಿ ಬೆಳೆಸಿದವರು.
12. ಪಾದಯಾತ್ರೆಗಳ ಸರದಾರ: ಜನರ ಸಮಸ್ಯೆಗಳಿಗಾಗಿ ರಾಜ್ಯಾದ್ಯಂತ ನೂರಾರು ಕಿಲೋಮೀಟರ್ ನಡೆದವರು.
13. ರೈತ ನಾಯಕ: ಹಸಿರು ಶಾಲು ಧರಿಸಿ ರೈತರ ಪರ ಧ್ವನಿ ಎತ್ತಿದವರು.
14. ಸೈಕಲ್ ಸವಾರಿ: ಆರಂಭಿಕ ದಿನಗಳಲ್ಲಿ ಸೈಕಲ್ ಮೇಲೆ ಸಂಚರಿಸಿ ಪಕ್ಷ ಪ್ರಚಾರ ಮಾಡಿದ ಶ್ರಮಜೀವಿ.
15. ಚಾಣಾಕ್ಷ ತಂತ್ರಗಾರ: ರಾಜಕೀಯ ಏರಿಳಿತಗಳನ್ನು ಸಮರ್ಥವಾಗಿ ನಿಭಾಯಿಸುವ ಕಲೆ.
16. ತಳಮಟ್ಟದ ಸಂಪರ್ಕ: ಹಳ್ಳಿಗಳ ಮಟ್ಟದ ಕಾರ್ಯಕರ್ತರನ್ನೂ ಹೆಸರಿಡಿದು ಕರೆಯುವ ನೆನಪಿನ ಶಕ್ತಿ.
17. ನಿರ್ಧಾರ ತೆಗೆದುಕೊಳ್ಳುವಿಕೆ: ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂಜರಿಯದ ಸ್ವಭಾವ.
18. ಸಂಘರ್ಷ ಶೀಲತೆ: ಅನ್ಯಾಯದ ವಿರುದ್ಧ ಸದಾ ಹೋರಾಡುವ ಗುಣ.
19. ಧೀಮಂತ ನಾಯಕತ್ವ: ದಕ್ಷಿಣ ಭಾರತದಲ್ಲಿ ಬಿಜೆಪಿಯ ಮೊದಲ ಮುಖ್ಯಮಂತ್ರಿಯಾದ ಹೆಗ್ಗಳಿಕೆ.
20. ವಿಶ್ವಾಸಾರ್ಹತೆ: ನಂಬಿದವರಿಗಾಗಿ ಏನು ಬೇಕಾದರೂ ಮಾಡುವ ಗುಣ.
21. ಭಾಗ್ಯಲಕ್ಷ್ಮಿ ಯೋಜನೆ: ಹೆಣ್ಣುಮಕ್ಕಳ ಸಬಲೀಕರಣಕ್ಕೆ ನಾಂದಿ ಹಾಡಿದ್ದು.
22. ಸೈಕಲ್ ವಿತರಣೆ: ಶಾಲಾ ಮಕ್ಕಳಿಗೆ ಉಚಿತ ಸೈಕಲ್ ನೀಡಿದ ಮೊದಲ ಸಿಎಂ.
23. ಪ್ರತ್ಯೇಕ ಕೃಷಿ ಬಜೆಟ್: ಕೃಷಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸಿದ ಭಾರತದ ಮೊದಲ ಮುಖ್ಯಮಂತ್ರಿ.
24. ಮಠಗಳಿಗೆ ಅನುದಾನ: ಸಂಸ್ಕೃತಿ ರಕ್ಷಣೆಗಾಗಿ ಧಾರ್ಮಿಕ ಸಂಸ್ಥೆಗಳಿಗೆ ಬೆಂಬಲ.
25. ಮೂಲಸೌಕರ್ಯ: ಬೆಂಗಳೂರು ಹಾಗೂ ಇತರೆ ನಗರಗಳ ಅಭಿವೃದ್ಧಿಗೆ ಒತ್ತು.
26. ರೈತರಿಗಾಗಿ ಸಬ್ಸಿಡಿ: ಡೀಸೆಲ್ ಮತ್ತು ಗೊಬ್ಬರಕ್ಕೆ ವಿಶೇಷ ರಿಯಾಯಿತಿ.
27. ಸಂಧ್ಯಾ ಸುರಕ್ಷಾ: ವೃದ್ಧರಿಗೆ ಮಾಶಾಸನ ನೀಡುವ ಯೋಜನೆ.
28. ಬಡವರ ಪರ ಕಾಳಜಿ: ಬಿಪಿಎಲ್ ಕಾರ್ಡ್‌ದಾರರಿಗೆ ವಿಶೇಷ ಸವಲತ್ತುಗಳು.
29. ಕೈಗಾರಿಕಾ ಪ್ರೋತ್ಸಾಹ: ಹೂಡಿಕೆದಾರರ ಸಮಾವೇಶಗಳ ಮೂಲಕ ಉದ್ಯೋಗ ಸೃಷ್ಟಿ.
30. ದಕ್ಷ ಆಡಳಿತ: ಅಧಿಕಾರಿಗಳಿಂದ ಕೆಲಸ ತೆಗೆಯುವ ಚಾಕಚಕ್ಯತೆ.
31. ಅಚಲ ನಂಬಿಕೆ: ಸಿದ್ಧಗಂಗಾ ಶ್ರೀಗಳಂತಹ ಮಹಾನ್ ಸಂತರಲ್ಲಿ ಪರಮ ಭಕ್ತಿ.
32. ಸರಳತೆ: ಎಷ್ಟೇ ಎತ್ತರಕ್ಕೆ ಬೆಳೆದರೂ ಬಿಡದ ಸರಳ ಜೀವನಶೈಲಿ.
33. ಸಮೂಹ ನಾಯಕತ್ವ: ಜಾತಿ-ಮತ ಮೀರಿ ಎಲ್ಲ ವರ್ಗದವರನ್ನೂ ಸೆಳೆಯುವ ಶಕ್ತಿ.
34. ಪಕ್ಷನಿಷ್ಠೆ: ಕೆಲವು ಭಿನ್ನಾಭಿಪ್ರಾಯಗಳ ನಡುವೆಯೂ ಬಿಜೆಪಿಯ ಪರಮ ಭಕ್ತ.
35. ಕುಟುಂಬ ಪ್ರೀತಿ: ಕುಟುಂಬದವರ ಬಗ್ಗೆ ಅಪಾರ ಕಾಳಜಿ.
36. ಸಂಕಷ್ಟಕ್ಕೆ ಸ್ಪಂದನೆ: ನೆರೆ ಅಥವಾ ಬರ ಬಂದಾಗ ಜನರ ಮಧ್ಯೆ ಇರುತ್ತಾರೆ.
37. ಸಮತೋಲಿತ ವ್ಯಕ್ತಿತ್ವ: ಸೋಲು ಮತ್ತು ಗೆಲುವನ್ನು ಸಮನಾಗಿ ಸ್ವೀಕರಿಸುವುದು.
38. ದಾನಶೀಲತೆ: ಸದ್ದಿಲ್ಲದೆ ಅನೇಕರಿಗೆ ಸಹಾಯ ಮಾಡುವ ಗುಣ.
39. ಕನ್ನಡಾಭಿಮಾನ: ಕನ್ನಡ ನಾಡು-ನುಡಿ-ಜಲದ ವಿಷಯದಲ್ಲಿ ರಾಜಿ ಇಲ್ಲದ ನಿಲುವು.
40. ಸೃಜನಶೀಲತೆ: ಆಡಳಿತದಲ್ಲಿ ಹೊಸ ಯೋಜನೆಗಳ ಅನುಷ್ಠಾನ.
41. ಬೂಕನಕೆರೆಯ ಹೆಮ್ಮೆ: ಮಂಡ್ಯದ ಪುಟ್ಟ ಹಳ್ಳಿಯಿಂದ ಬಂದವರು.
42. ಶಿಕಾರಿಪುರದ ಧೀಮಂತ: ತಾವು ಪ್ರತಿನಿಧಿಸುವ ಕ್ಷೇತ್ರವನ್ನು ಮಾದರಿಯಾಗಿಸಿದ್ದು.
43. ನಾಲ್ಕು ಬಾರಿ ಸಿಎಂ: ಕರ್ನಾಟಕದ ಇತಿಹಾಸದಲ್ಲಿ ನಾಲ್ಕು ಬಾರಿ ಮುಖ್ಯಮಂತ್ರಿಯಾದ ಸಾಧನೆ.
44. ವಿರೋಧ ಪಕ್ಷದ ನಾಯಕನಾಗಿ ಯಶಸ್ಸು: ಸರ್ಕಾರದ ತಪ್ಪುಗಳನ್ನು ಎತ್ತಿ ತೋರಿಸುವಲ್ಲಿ ನಿಸ್ಸೀಮರು.
45. ಸಂಸದೀಯ ಪಟು: ವಿಧಾನಸಭೆಯಲ್ಲಿ ಗಂಟೆಗಟ್ಟಲೆ ವಿಷಯಾಧಾರಿತವಾಗಿ ಚರ್ಚಿಸುವ ಸಾಮರ್ಥ್ಯ.
46. ಅಭಿವೃದ್ಧಿಯ ಹರಿಕಾರ: ಹಳ್ಳಿಗಳ ರಸ್ತೆ ಸೌಲಭ್ಯ ಸುಧಾರಿಸಿದ ಕೀರ್ತಿ.
47. ಲಿಂಗಾಯತ ಸಮುದಾಯದ ಪ್ರಶ್ನಾತೀತ ನಾಯಕ: ಸಮುದಾಯದ ಮೇಲೆ ಅಪಾರ ಪ್ರಭಾವ.
48. ಸಾಂಸ್ಕೃತಿಕ ರಾಯಭಾರಿ: ನಾಡಹಬ್ಬ ದಸರಾವನ್ನು ವೈಭವದಿಂದ ಆಚರಿಸಲು ಒತ್ತು ನೀಡಿದ್ದು.
49. ರಾಜಕೀಯ ಮುತ್ಸದ್ದಿ: ಅನುಭವಿ ರಾಜಕಾರಣಿಯಾಗಿ ಎಲ್ಲರಿಗೂ ಮಾರ್ಗದರ್ಶಕ.
50. ಅಜಾತಶತ್ರುತ್ವದತ್ತ ಪಯಣ: ರಾಜಕೀಯ ಜೀವನದ ಸಂಜೆ ವೇಳೆಯಲ್ಲಿ ಸರ್ವಸಮ್ಮತ ನಾಯಕನಾಗಿ ಉದಯಿಸಿದ್ದು.

ಬಿಎಸ್‌ವೈ ಹಾದಿಯಲ್ಲಿ ರಾಘವೇಂದ್ರ, ವಿಜಯೇಂದ್ರ ಹೆಜ್ಜೆ!



ಬೆಂಗಳೂರು: ಕರ್ನಾಟಕ ರಾಜಕಾರಣದ ದಿಗ್ಗಜ, ಹೋರಾಟದ ಹರಿಕಾರ ಬಿ.ಎಸ್. ಯಡಿಯೂರಪ್ಪನವರ ಹಾದಿಯಲ್ಲೇ ಅವರ ರಾಜಕೀಯ ಪರಂಪರೆಯನ್ನು ಮುನ್ನಡೆಸುವ ಜವಾಬ್ದಾರಿಯನ್ನೀಗ ಅವರ ಇಬ್ಬರು ಪುತ್ರರು ಮುಂದುವರೆಸುತ್ತಿದ್ದಾರೆ. ಶಿವಮೊಗ್ಗದ ಸಂಸದರಾಗಿ ಹ್ಯಾಟ್ರಿಕ್ ಸಾಧನೆ ಮಾಡಿರುವ ಬಿ.ವೈ.ರಾಘವೇಂದ್ರ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನಡೆಸುತ್ತಿರುವ ಬಿ.ವೈ. ವಿಜಯೇಂದ್ರ ಇಂದು ರಾಜ್ಯ ರಾಜಕಾರಣದ ಅತಿ ಪ್ರಭಾವಿ ಶಕ್ತಿಗಳಾಗಿ ಹೊರಹೊಮ್ಮಿದ್ದಾರೆ. ರಾಘವೇಂದ್ರ ಮತ್ತು ವಿಜಯೇಂದ್ರ ಇಬ್ಬರೂ ತಮ್ಮ ಸಂಘಟನಾ ಚಾತುರ್ಯ ಮತ್ತು ಕಾರ್ಯವೈಖರಿಯ ಮೂಲಕ ತಾವೇನು ಎಂಬುದನ್ನು ಸಾಬೀತುಪಡಿಸುತ್ತಿದ್ದಾರೆ. ತಂದೆ ಕಟ್ಟಿದ ಭದ್ರ ಬುನಾದಿಯ ಮೇಲೆ ಈ ಇಬ್ಬರು ನಾಯಕರು ಇಂದು ಬಲಿಷ್ಠ ನಾಯಕತ್ವವನ್ನು ನಿರೂಪಿಸಿಕೊಂಡಿದ್ದಾರೆ.

ಯಶಸ್ವಿ ಸಂಸದ ಬಿ.ವೈ.ರಾಘವೇಂದ್ರ : ಬಿಎಸ್‌ವೈ ಹಿರಿಯ ಪುತ್ರ ಬಿ.ವೈ. ರಾಘವೇಂದ್ರ ಸಾರ್ವಜನಿಕ ವಲಯದಲ್ಲಿ ತಮ್ಮದೇ ಆದ ಪ್ರತ್ಯೇಕ ಛಾಪು ಮೂಡಿಸಿದ್ದಾರೆ. ಸಮಾಧಾನಿ ಮತ್ತು ಅಭಿವೃದ್ಧಿ ಪರ ರಾಜಕಾರಣಿ ಎಂದು ಗುರುತಿಸಿಕೊಂಡಿದ್ದಾರೆ. ಶಿವಮೊಗ್ಗ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅವರು, ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ನೀಡಿರುವ ಕೊಡುಗೆ ಅಪಾರ. ಶಿವಮೊಗ್ಗ ವಿಮಾನ ನಿಲ್ದಾಣದ ನಿರ್ಮಾಣ, ರೈಲ್ವೆ ಯೋಜನೆಗಳ ವೇಗವರ್ಧನೆ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಯಲ್ಲಿ ರಾಘವೇಂದ್ರ ಅವರ ಪಾತ್ರ ದೊಡ್ಡದಿದೆ. ತಂದೆಯಂತೆ ಅಬ್ಬರದ ಭಾಷಣಗಳ ಹೊರತಾಗಿ ಕೆಲಸದಿಂದಲೇ ಸದ್ದು ಮಾಡುತ್ತಿದ್ದಾರೆ. ವಿಶೇಷವಾಗಿ, ಜನರೊಂದಿಗೆ ಬೆರೆತು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಗುಣ ರಾಘವೇಂದ್ರ ಅವರಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ದೊಡ್ಡ ಅಭಿಮಾನಿ ಬಳಗವನ್ನು ತಂದುಕೊಟ್ಟಿದೆ. ದೆಹಲಿ ಮಟ್ಟದಲ್ಲಿ ಕರ್ನಾಟಕದ ಮತ್ತು ವಿಶೇಷವಾಗಿ ಮಲೆನಾಡು ಭಾಗದ ರೈತರ ಸಮಸ್ಯೆಗಳ ಬಗ್ಗೆ (ಅಡಿಕೆ ಬೆಳೆಗಾರರ ಸಮಸ್ಯೆ ಇತ್ಯಾದಿ) ಧ್ವನಿ ಎತ್ತುವ ಮೂಲಕ ಅವರು ದಕ್ಷ ಸಂಸದ ಎನಿಸಿಕೊಂಡಿದ್ದಾರೆ.

ಶಿವಮೊಗ್ಗ ಜನರ ಧ್ವನಿಯಾಗಿ ಬಿ.ವೈ. ರಾಘವೇಂದ್ರ, ರಾಜ್ಯ ಬಿಜೆಪಿ ಕಾರ್ಯಕರ್ತರ ಬಲವಾಗಿ ಬಿ.ವೈ.ವಿಜಯೇಂದ್ರ ಯಶಸ್ವೀ ಶ್ರಮ.

ಸಂಘಟನಾ ಚತುರ ಬಿ.ವೈ. ವಿಜಯೇಂದ್ರ: ಯಡಿಯೂರಪ್ಪನವರ ಕಿರಿಯ ಪುತ್ರ ಬಿ.ವೈ. ವಿಜಯೇಂದ್ರ ಅವರ ಬೆಳವಣಿಗೆ ರಾಜಕೀಯ ವಲಯದಲ್ಲಿ ಅಚ್ಚರಿ ಮೂಡಿಸುವಂತದ್ದು. ಕೇವಲ ಕೆಲವೇ ವರ್ಷಗಳಲ್ಲಿ ಅವರು ರಾಜ್ಯ ಬಿಜೆಪಿಯ ಸಾರಥ್ಯ ವಹಿಸುವ ಮಟ್ಟಕ್ಕೆ ಬೆಳೆದಿದ್ದಾರೆ. ಅನೇಕ ಟೀಕೆ, ಟಿಪ್ಪಣಿ ಸೇರಿದಂತೆ ರಾಜಕೀಯ ಏಳ್ಗೆಯ ಹಾದಿಯಲ್ಲಿ ಸಾಕಷ್ಟು ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿದ್ದಾರೆ. ಯುವ ನಾಯಕನ ಸಾರಥ್ಯ ಎಂದಾಗ ಕೆಲವರಲ್ಲಿ ಸಂದೇಹಗಳು, ಬಿಎಸ್‌ವೈ ಪ್ರಭಾವದಿಂದ ಅವಕಾಶ ಎನ್ನುವ ಆರೋಪಗಳೆಲ್ಲಾ ಬಿ.ವೈ.ವಿ ಎದುರಿಸಬೇಕಾಯಿತು. ಆದರೆ, ಕೆಲವೇ ದಿನಗಳಲ್ಲಿ ಈ ಆರೋಪಗಳಿಗೆ ತಮ್ಮ ಕೆಲಸದ ಮೂಲಕ ವಿಜಯೇಂದ್ರ ಉತ್ತರ ನೀಡಿದ್ದಾರೆ. ಜತೆಗೆ, ತಮ್ಮ ನಾಯಕತ್ವವನ್ನು ಸಾಬೀತುಪಡಿಸಿಕೊಂಡಿದ್ದಾರೆ ಕೆ.ಆರ್. ಪೇಟೆ ಮತ್ತು ಶಿರಾ ಉಪಚುನಾವಣೆಗಳಲ್ಲಿ ಬಿಜೆಪಿ ಎಂದೂ ಗೆಲ್ಲದ ಕ್ಷೇತ್ರಗಳಲ್ಲಿ ವಿಜಯೇಂದ್ರ ನಡೆಸಿದ ತಂತ್ರಗಾರಿಕೆ ಮತ್ತು ಜಯ ತಂದ ರೀತಿ ಹೈಕಮಾಂಡ್ ಗಮನ ಸೆಳೆಯಿತು. ಇದು ಅವರಿಗೆ 'ಯುವರಾಜ' ಎಂಬ ಪಟ್ಟದ ಜತೆಗೆ ದೊಡ್ಡ ಜವಾಬ್ದಾರಿಯನ್ನು ತಂದುಕೊಟ್ಟಿತು. ಯಡಿಯೂರಪ್ಪ ಅವರ ನಂತರ ಲಿಂಗಾಯತ ಸಮುದಾಯದ ಪ್ರಶ್ನಾತೀತ ನಾಯಕ ಯಾರು ಎಂಬ ಪ್ರಶ್ನೆಗೆ ವಿಜಯೇಂದ್ರ ಅವರು ಉತ್ತರದಂತೆ ಕಾಣುತ್ತಿದ್ದಾರೆ. ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುವ ಮೂಲಕ ಪಕ್ಷದ ಕಾರ್ಯಕರ್ತರಲ್ಲಿ ಹೊಸ ಹುರುಪು ತುಂಬುತ್ತಿದ್ದಾರೆ. ಪ್ರಸ್ತುತ ಕಾಂಗ್ರೆಸ್ ಸರ್ಕಾರದ ವಿರುದ್ಧ ಸದನದ ಒಳಗೆ ಮತ್ತು ಹೊರಗೆ ವಿಜಯೇಂದ್ರ ಅವರು ನಡೆಸುತ್ತಿರುವ ಹೋರಾಟಗಳು ಅವರನ್ನು ಒಬ್ಬ ಸಮರ್ಥ ನಾಯಕನನ್ನಾಗಿ ರೂಪಿಸಿವೆ. ಒಟ್ಟಾರೆ ರಾಜಕೀಯ ವಲಯದ ವಿಶ್ಲೇಷಕರ ಪ್ರಕಾರ ಬಿ.ಎಸ್.ಯಡಿಯೂರಪ್ಪನವರು ಹಾಕಿಕೊಟ್ಟ ಹಾದಿಯಲ್ಲಿ ರಾಘವೇಂದ್ರ ಮತ್ತು ವಿಜಯೇಂದ್ರ ಯಶಸ್ವಿಯಾಗಿ ಸಾಗುತ್ತಿದ್ದಾರೆ. ರಾಘವೇಂದ್ರ ಅವರು ಜಿಲ್ಲಾ ಮಟ್ಟದಲ್ಲಿ ಅಭಿವೃದ್ಧಿಯ ಮುಖವಾದರೆ, ವಿಜಯೇಂದ್ರ ಅವರು ರಾಜ್ಯ ಮಟ್ಟದಲ್ಲಿ ಸಂಘಟನೆಯ ಶಕ್ತಿಯಾಗಿದ್ದಾರೆ. ಮುಂಬರುವ ಚುನಾವಣೆಗಳಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವ ಮೂಲಕ ಈ ಸಹೋದರರು ತಮ್ಮ ತಂದೆಯ ರಾಜಕೀಯ ಘನತೆಯನ್ನು ಎತ್ತಿ ಹಿಡಿಯುತ್ತಾರೆಯೇ ಎಂಬುದು ಕುತೂಹಲಕಾರಿಯಾಗಿದೆ. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಯಡಿಯೂರಪ್ಪನವರ ಹೆಸರು ಹೇಗೆ ಶಾಶ್ವತವೋ, ಹಾಗೆಯೇ ಅವರ ಮಕ್ಕಳಾದ ರಾಘವೇಂದ್ರ ಮತ್ತು ವಿಜಯೇಂದ್ರ ಕೂಡ ತಮ್ಮದೇ ಆದ ಮುದ್ರೆಯನ್ನು ಒತ್ತಲು ಸಜ್ಜಾಗಿದ್ದಾರೆಂಬ ಅಭಿಪ್ರಾಯ ವ್ಯಕ್ತವಾಗಿದೆ.

ಸಿಇಟಿ: ಮೇ 11ರಿಂದ ದಾಖಲೆ ಪರಿಶೀಲನೆ

ಮೇ 7ರಿಂದ ತೆರೆದುಕೊಳ್ಳಲಿದೆ ಸ್ಲಾಟ್ ಬುಕ್ ಮಾಡುವ ಲಿಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ಯುಜಿಸಿಇಟಿ ಅರ್ಜಿಯಲ್ಲಿ ಅರ್ಹತಾ ಕಂಡಿಕೆ ಎ1, ಬಿ1, ಬಿ, ಸಿ, ಡಿ, ಇ, ಎಫ್, ಜಿ, ಎಚ್, ಐ, ಜೆ, ಕೆ, ಎಲ್, ಎಂ, ಎನ್ ಮತ್ತು ಒ ಎಂದು ಕ್ಲೇಮ್ ಮಾಡಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಮೇ 11ರಿಂದ 22ರ ವರೆಗೆ ನಡೆಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.



ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ನಡೆಯುವ ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳು ಬರುವ ಮುನ್ನ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ನಲ್ಲಿ ಸ್ಲಾಟ್ ಬುಕ್ ಮಾಡಿಕೊಂಡು ಬರಬೇಕು. ಮೇ 7ರಿಂದ ಸ್ಲಾಟ್ ಬುಕ್ ಮಾಡುವ ಲಿಂಕ್ ತೆರೆದುಕೊಳ್ಳಲಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದಾಖಲೆ ಪರಿಶೀಲನೆಗೆ ಅಭ್ಯರ್ಥಿಗಳೇ ಬರಬೇಕು. ಅವರ ಪರವಾಗಿ ಬೇರೆಯವರು ಬರುವಂತಿಲ್ಲ. ಪರಿಶೀಲನೆ ವೇಳೆ ಸಲ್ಲಿಸಬೇಕಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಇ-ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸಿಇಟಿ-2026ರ ಪ್ರವೇಶ ಪತ್ರ ಮತ್ತು ಅರ್ಜಿ, ಗುರುತಿನ ಚೀಟಿ (ಆಧಾರ್ ಕಾರ್ಡ್) 10 ಮತ್ತು 12ನೇ ತರಗತಿಯ ಅಂಕಪಟ್ಟಿ, ವ್ಯಾಸಂಗ ಪ್ರಮಾಣ ಪತ್ರ, ಪೋಷಕರ ಪ್ರಮಾಣ ಪತ್ರಗಳು, ಅರ್ಹತಾ ಖಂಡಿಕೆಗೆ ಅನುಗುಣವಾಗಿ ಅವಶ್ಯಕವಿರುವ ಇತರೆ ಎಲ್ಲ ಮೂಲ ದಾಖಲೆ ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡು ಬರಬೇಕು ಎಂದು ಅವರು ತಿಳಿಸಿದ್ದಾರೆ.

ಪರಿಶೀಲನೆಗೆ ಹಾಜರಾಗಿ ಅರ್ಹತೆ ಪಡೆಯುವ ಅಭ್ಯರ್ಥಿಗಳಿಗೆ ಮಾತ್ರ ಆನ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಹಾಗೂ ಆಯ್ಕೆಗಳನ್ನು ದಾಖಲಿಸಲು ಅವಕಾಶ ನೀಡಲಾಗುತ್ತದೆ. ವೈ ಅರ್ಹತಾ ಕಂಡಿಕೆಯ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕಿಲ್ಲ ಎಂದು ಅವರು ತಿಳಿಸಿದ್ದಾರೆ.

ಕೆಇಎ: 'ನೀಟ್' ಸಂಖ್ಯೆ ನೋಂದಣಿಗೆ ಅವಕಾಶ

ಬೆಂಗಳೂರು: ಸಿಇಟಿಗೆ ಅರ್ಜಿ ಸಲ್ಲಿಸಿ, 'ನೀಟ್' ಪರೀಕ್ಷೆ ಬರೆದಿರುವ ಅಭ್ಯರ್ಥಿಗಳು ತಮ್ಮ ರೋಲ್ ನಂಬರ್, ಅರ್ಜಿ ಸಂಖ್ಯೆ ಹಾಗೂ 'ನೀಟ್' ಪ್ರವೇಶ ಪತ್ರವನ್ನು ಅಪ್‌ ಲೋಡ್ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ಕಲ್ಪಿಸಿದೆ.

ಈ ಸಂಬಂಧ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ನೀಟ್' ಫಲಿತಾಂಶಕ್ಕೆ ಕಾದು, ನಂತರ ನೋಂದಣಿ ಪ್ರಕ್ರಿಯೆ ಆರಂಭಿಸುವುದರಿಂದ ಗಡಿಬಿಡಿ ಆಗುತ್ತಿತ್ತು. ಹೀಗಾಗಿ ಈ ಬಾರಿ 'ನೀಟ್' ಫಲಿತಾಂಶಕ್ಕೂ ಮುನ್ನವೇ ಅಭ್ಯರ್ಥಿಗಳ ಮಾಹಿತಿ ಸಂಗ್ರಹಿಸುವುದರಿಂದ ಕೊನೆ ಕ್ಷಣದ ಗೊಂದಲಗಳಿಗೆ ಅವಕಾಶ ಇರುವುದಿಲ್ಲ. ಹೀಗಾಗಿ 'ನೀಟ್' ಪರೀಕ್ಷೆ ಬರೆದ ಎಲ್ಲರೂ ಆ ರೋಲ್ ನಂಬರ್ ದಾಖಲಿಸಬೇಕು. ಫಲಿತಾಂಶ ಬಂದ ನಂತರ ಅರ್ಹರಿಗೆ ಮಾತ್ರ ಆಯ್ಕೆಗಳನ್ನು ದಾಖಲಿಸಲು ಅವಕಾಶ ನೀಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸುವುದಕ್ಕೂ ಅವಕಾಶ: ಕೇವಲ 'ನೀಟ್' ಪರೀಕ್ಷೆ ಬರೆದಿರುವ ಹಾಗೂ ಕೆಇಎ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಇದುವರೆಗೂ ಕೆಇಎಗೆ ಅರ್ಜಿ ಸಲ್ಲಿಸದೇ ಇದ್ದಲ್ಲಿ ಅಂತಹವರು ಕೂಡ ಅರ್ಜಿ ಸಲ್ಲಿಸಬೇಕು. ಇದಕ್ಕೂ ಒಂದೆರಡು ದಿನಗಳಲ್ಲಿ ಲಿಂಕ್ ಬಿಡುಗಡೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಒಳ ಮೀಸಲಾತಿ: ಮೇ 9, 10ರ ಪರೀಕ್ಷೆ ರದ್ದು

ಬೆಂಗಳೂರು: ಆರ್‌ಜಿಯುಎಚ್‌ಎಸ್, ಬೆಂಗಳೂರು ಜಲಮಂಡಳಿ, ಕೃಷಿ ಮಾರಾಟ ಇಲಾಖೆ ಹಾಗೂ ಕೆಎಸ್‌ಎಸ್‌ಐಡಿಸಿಯ ವಿವಿಧ ಹುದ್ದೆಗಳ ನೇಮಕಾತಿಗೆ ಇದೇ 9 ಮತ್ತು 10ರಂದು ನಡೆಯಬೇಕಿದ್ದ ಲಿಖಿತ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಪರೀಕ್ಷೆ ನಡೆಸದಿರುವ ಹುದ್ದೆಗಳಿಗೆ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಅಳವಡಿಸಿಕೊಂಡು ಹೊಸದಾಗಿ ಅಧಿಸೂಚನೆ ಹೊರಡಿಸಲು ಏ.4ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿರುವ ಕಾರಣ ಈ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪರೀಕ್ಷೆ ಇದೆ: ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು ಮತ್ತು ಸಹಾಯಕ ಎಂಜಿನಿಯರ್ (ವಿದ್ಯುತ್) ಹುದ್ದೆಗಳಿಗೆ ಏ.26 ಮತ್ತು 27ರಂದು ಪತ್ರಿಕೆ-2ರ (ನಿರ್ದಿಷ್ಟ ಪತ್ರಿಕೆ) ಪರೀಕ್ಷೆ ನಡೆಸಿದ್ದು ಅಂತಹವರಿಗೆ ಮೇ 9 ಮತ್ತು 10 ರಂದು ಸಾಮಾನ್ಯ ಜ್ಞಾನ ಪತ್ರಿಕೆಯ (ಪತ್ರಿಕೆ-1) ಪರೀಕ್ಷೆ ನಡೆಸಲಾಗುವುದು. ಇದಕ್ಕೆ ಪ್ರವೇಶ ಪತ್ರವನ್ನು ಕೆಇಎ ವೆಬ್‌ಸೈಟ್‌ನಿಂದ ಡೌನ್ ಲೋಡ್ ಮಾಡಿಕೊಳ್ಳಬೇಕು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಸುಳ್ಳು ಹೇಳುವುದರಲ್ಲಿ ಸಿ.ಎಂಗೆ ಡಾಕ್ಟರೇಟ್ ಕೊಡಬೇಕು'

ರಾಮನಗರ: 'ಸುಳ್ಳು ಹೇಳುವುದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಡಾಕ್ಟರೇಟ್ ಕೊಡಬೇಕು. ಶೃಂಗೇರಿ ಕ್ಷೇತ್ರದಲ್ಲಿ ಕೋರ್ಟ್ ಆದೇಶದಂತೆ ಮರುಎಣಿಕೆಯಾಗಿದೆ. ಹೀಗಿರುವಾಗ ಕ್ಷೇತ್ರದಲ್ಲಿ ಮತ ಡಕಾಯಿತಿ ಎಂದು ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ' ಎಂದು ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಮಂಗಳವಾರ ಆಕ್ರೋಶ ವ್ಯಕ್ತಪಡಿಸಿದರು.

'ಶೃಂಗೇರಿಯಲ್ಲಿ ಮತ ಡಕಾಯಿತಿ ಆಗಿದೆ' ಎಂಬ ಮುಖ್ಯಮಂತ್ರಿ ಹೇಳಿಕೆಗೆ ಇಲ್ಲಿ ಪ್ರತಿಕ್ರಿಯಿಸಿದ ಅವರು, 'ಇವಿಎಂ ಬದಲು ಮತಪತ್ರ ಬೇಕು ಎನ್ನುವ ಕಾಂಗ್ರೆಸ್‌ನವರಿಗೆ ಉಪ ಚುನಾವಣೆಯಲ್ಲಿ ಇವಿಎಂ ಬೇಕಾಯ್ತಾ?'. ಅವರಿಗೆ ಸಮಯಕ್ಕೆ ತಕ್ಕಂತೆ ಸುಳ್ಳು ಹೇಳಿ ಅಭ್ಯಾಸ' ಎಂದರು.



ಖರ್ಗೆ ವಿರುದ್ಧ ಕಿಡಿ: 'ಪಶ್ಚಿಮ ಬಂಗಾಳ, ಅಸ್ಸಾಂ ಗೆಲುವು ಚುನಾವಣಾ ಆಯೋಗದ ಗೆಲುವು' ಎಂಬ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ, 'ಪ್ರಿಯಾಂಕ್ ಅವರು ಕೈಲಾಗದವನು ಮೈ ಪರಚಿಕೊಂಡ ಎಂಬಂತೆ ಮಾತನಾಡುತ್ತಾರೆ' ಎಂದರು.

'ರಾಜಧಾನಿ ಬೆಂಗಳೂರು ಮತ್ತು ಮೈಸೂರು ಮಾರ್ಗದಲ್ಲಿ ನಾಲ್ಕು ಪಥದ ರೈಲು ಹಳಿ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲು ಕ್ರಮ ವಹಿಸಲಾಗುವುದು' ಎಂದು ಹೇಳಿದರು.

ಹೋಂಸ್ಟೇಗಳಿಗೆ ದಿಢೀರ್ ಭೇಟಿ, ತಪಾಸಣೆ: ಸಚಿವ ಸೂಚನೆ

ಮಡಿಕೇರಿ: 'ಕೊಡಗಿನ ಎಲ್ಲ ಹೋಂಸ್ಟೇಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು ಸೂಚಿಸಿದರು.

ಗಡಿ ಭಾಗ ಕುಟ್ಟ ಗ್ರಾಮದ ಹೋಂಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ಕಿರುಕುಳ ಪ್ರಕರಣದ ಕುರಿತು ಮಂಗಳವಾರ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಲ್ಲೇಖಿಸಿದ ಸಚಿವರು, 'ಅಧಿಕಾರಿಗಳು ಈ ವಿಷಯದಲ್ಲಿ ಕಟ್ಟೆಚ್ಚರ ವಹಿಸಬೇಕು' ಎಂದರು.

ಶಾಸಕ ಡಾ.ಮಂತರ್‌ಗೌಡ, 'ಕೆಲವೆಡೆ ನಿಯಮಗಳ ಉಲ್ಲಂಘನೆಯಾಗಿದೆ. ಪ್ರವಾಸೋದ್ಯಮ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ವರ್ಷಕ್ಕೊಮ್ಮೆಯಾದರೂ ಹೋಂಸ್ಟೇಗಳಲ್ಲಿ ನಿಯಮಗಳ ಪಾಲನೆ ಕುರಿತು ಪರಿಶೀಲಿಸಬೇಕು' ಎಂದರು.

'ಜಿಲ್ಲೆಯಲ್ಲಿ ಶೇ 20ಕ್ಕೂ ಅಧಿಕ ಹೋಂಸ್ಟೇಗಳು ನೋಂದಣಿ ಆಗಿಲ್ಲ. ಈಗ ಅವುಗಳ ಮೇಲೆ ದಾಳಿ ನಡೆಸಿ ಪರಿಶೀಲಿಸಲಾಗುತ್ತಿದೆ' ಎಂದು ಉಪವಿಭಾಗಾಧಿಕಾರಿ ನಿತಿನ್ ಚಕ್ಕಿ ತಿಳಿಸಿದರು.

'ಎಸ್‌ಡಿಪಿಐಗೆ ಮತ: ಪರಿಶೀಲನೆ'

ಬೆಂಗಳೂರು: 'ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಎಸ್ ಡಿಪಿಐಗೆ ಮತ ಬಿದ್ದಿದೆ. ನಾವು ಎಲ್ಲಿ ಎಡವಿದ್ದೇವೆ ಎಂಬುದನ್ನು ಪಕ್ಷದ ಮಟ್ಟದಲ್ಲಿ ಪರಿಶೀಲಿಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ದಾವಣಗೆರೆಯಲ್ಲಿ ಒಟ್ಟು 56 ಸಾವಿರ ಮುಸ್ಲಿಮರು ಮತ ಚಲಾಯಿಸಿದ್ದು, ಈ ಪೈಕಿ, ಕಾಂಗ್ರೆಸ್‌ಗೆ 35 ಸಾವಿರ ಮತ ಬಂದಿದೆ. ನಮ್ಮ ಲೆಕ್ಕಾಚಾರ ಮೀರಿ, ಎಸ್‌ಡಿಪಿಐಗೆ ಈ ಬಾರಿ ಹೆಚ್ಚು ಮತ ಬಿದ್ದಿದೆ. ನಮಗೆ ಏಕೆ ಕಡಿಮೆ ಮತ ಬಂದಿವೆ ಎಂದು ವಿಚಾರ ಮಾಡುತ್ತೇವೆ' ಎಂದರು.

'ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಈ ಎರಡೂ ಕ್ಷೇತ್ರಗಳನ್ನು ನಾವು ಗೆದ್ದಿದ್ದೇವೆ. ಬಿಜೆಪಿಯವರ ಪ್ರಕಾರ 2028ರಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದಾಯಿತು' ಎಂದರು. ತಮಿಳುನಾಡಿನ ಜನರು ಬದಲಾವಣೆ ಬಯಸಿದ್ದಾರೆ. ಯುವ ಜನಾಂಗ ನಟ ವಿಜಯ್‌ಗೆ ಮತ ಹಾಕಿದ್ದಾರೆ. ಇದು ಅಚ್ಚರಿಯ ಫಲಿತಾಂಶ. ಕೇರಳದಲ್ಲಿ ನಿರೀಕ್ಷೆಯಂತೆ ನಾವು ಗೆದ್ದಿದ್ದೇವೆ' ಎಂದರು.

'ಡಿಎಂಕೆ ಸ್ಥಿತಿ ಕಾಂಗ್ರೆಸ್‌ಗೆ ಬರಲಿದೆ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಉಚಿತ ಕೊಡುಗೆಗಳ ಮೂಲಕ ಮತದಾರರ ಸೆಳೆಯಲು ಪ್ರಯತ್ನಿಸಿದ ತಮಿಳುನಾಡಿನ ಡಿಎಂಕೆ ಪಕ್ಷಕ್ಕೆ ಬಂದಿರುವ ಸ್ಥಿತಿ 2028ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಬರಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಪಕ್ಷದ ಪರಾಜಿತ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿದ್ದ ಅವರು, ಸುದ್ದಿಗಾರರೊಂದಿಗೆ ಮಾತನಾಡಿದರು.

'ಗೃಹ ಲಕ್ಷ್ಮಿ' ಗ್ಯಾರಂಟಿ ಯೋಜನೆ ಚುನಾವಣಾ ಲಕ್ಷ್ಮಿಯಾಗಿದೆ. ಚುನಾವಣೆ ಸಂದರ್ಭದಲ್ಲಿ ಆಯಾ ಕ್ಷೇತ್ರದ ಮಹಿಳೆಯರ ಬ್ಯಾಂಕ್ ಖಾತೆಗೆ ಹಣ ಜಮೆ ಆಗುತ್ತದೆ. ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ಮುಂದಿನ ಕಂತು ಪಾವತಿ ಆಗಲಿದೆ. ಈ 'ಭಾಗ್ಯ'ಗಳೇ ಕಾಂಗ್ರೆಸ್‌ಗೆ ಮುಳುವಾಗಲಿವೆ' ಎಂದರು.

'ದಕ್ಷಿಣ ಕ್ಷೇತ್ರದಲ್ಲಿ ಪಕ್ಷ ಗೆಲ್ಲುವ ಅತೀವ ವಿಶ್ವಾಸವಿತ್ತು. ಕ್ಷೇತ್ರದಲ್ಲಿ 70,000 ಮತ ಗಳಿಸುವ ಗುರಿ ಹೊಂದಲಾಗಿತ್ತು. ಮತದಾನದ ದಿನ ಸಮೀಪಿಸಿದಾಗ ಇನ್ನಷ್ಟು ಪ್ರಯತ್ನ ಅಗತ್ಯವಿತ್ತು. ಕಾರ್ಯಕರ್ತರು ಧೃತಿಗೆಡುವ ಅಗತ್ಯವಿಲ್ಲ. ಕಮಲ ಅರಳುವ ಸಮಯ ಬರಲಿದೆ' ಎಂದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ಎಸ್.ವಿ. ರಾಮಚಂದ್ರಪ್ಪ, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಎನ್.ರಾಜಶೇಖರ ಮತ್ತಿತರರು ಇದ್ದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ನಿವಾಸಕ್ಕೆ ಬಿ.ವೈ.ವಿಜಯೇಂದ್ರ ಮಂಗಳವಾರ ಭೇಟಿ ನೀಡಿದ್ದರು. ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಜಿಲ್ಲಾ ಘಟಕದ ಅಧ್ಯಕ್ಷ ಎನ್.ರಾಜಶೇಖರ್ ಇದ್ದಾರೆ —ಪ್ರಜಾವಾಣಿ ಚಿತ್ರ

'ತಂಡವಾಗಿ ಕೆಲಸ ಮಾಡದಿದ್ದರಿಂದ ಸೋಲು'

ಬೆಂಗಳೂರು: 'ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿ ಒಂದು ತಂಡವಾಗಿ ಕೆಲಸ ಮಾಡಬೇಕಿತ್ತು. ನಾನು ಸೇರಿದಂತೆ ಕೆಲವರಿಂದ ಆಗಿರುವ ಸಣ್ಣ ಲೋಪದಿಂದ ಸ್ವಲ್ಪ ಹಿನ್ನಡೆಯಾಗಿದೆ' ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

'ಆಡಳಿತ ವಿರೋಧಿ ಅಲೆ ಇದೆ. ಸರ್ಕಾರ ಎಷ್ಟೇ ಹಣ ಖರ್ಚು ಮಾಡಿದರೂ ಮತದಾರರು ನಮ್ಮ ಕೈ ಹಿಡಿಯುತ್ತಾರೆ ಎಂಬ ಆತ್ಮವಿಶ್ವಾಸ ಇತ್ತು. ಸೋಲಿಗೆ ಯಾರನ್ನೂ ಹೊಣೆ ಮಾಡುವುದಿಲ್ಲ. ಮತ್ತೊಬ್ಬರನ್ನು ಹರಕೆಯ ಕುರಿ ಮಾಡುವುದಿಲ್ಲ. ತಪ್ಪುಗಳನ್ನು ಸರಿಪಡಿಸಿಕೊಂಡು, ನಾಯಕರ ಹಾದಿಯಲ್ಲಿ ಸಾಗುತ್ತೇವೆ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಎರಡೂ ಕ್ಷೇತ್ರಗಳಲ್ಲಿನ ಸೋಲು ನೋವು ಉಂಟು ಮಾಡಿದೆ. ಸರ್ಕಾರ ಹಣ ಖರ್ಚು ಮಾಡಿದ್ದು ಮತ್ತು ಅವರ ಪಾಪದ ವ್ಯವಸ್ಥೆಯಿಂದ ಅಭ್ಯರ್ಥಿಗಳು ಗೆದ್ದಿದ್ದಾರೆ. ನಾವು ತೆಗೆದುಕೊಂಡು ತೀರ್ಮಾನ ಒಳ್ಳೆಯ ಫಲಿತಾಂಶ ನೀಡಲಿಲ್ಲ' ಎಂದರು. 'ಕಾಂಗ್ರೆಸ್‌ನಲ್ಲಿ ಒಳ ಜಗಳವಿಲ್ಲ, ಹೊರ ಜಗಳ. ಕರ್ನಾಟಕ, ತೆಲಂಗಾಣದಲ್ಲಿ ಕಾಂಗ್ರೆಸ್ ಗೆದ್ದಾಗ ಇವಿಎಂ ಬಗ್ಗೆ ರಾಹುಲ್ ಗಾಂಧಿ ಮತ್ತು ಸಿದ್ದರಾಮಯ್ಯ ಪ್ರಶ್ನೆ ಮಾಡಲಿಲ್ಲ. ಸೋತ ಸಂದರ್ಭದಲ್ಲಿ ಮಾತ್ರ ಇವಿಎಂ ದೋಷ ಎನ್ನುತ್ತಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಬುದ್ಧಿ ಭ್ರಮಣೆಯಾಗಿದೆ' ಎಂದು ವ್ಯಂಗ್ಯವಾಡಿದರು.

'ಸೋಲಿಗೆ ಭಿನ್ನಾಭಿಪ್ರಾಯ ಕಾರಣ'

ಹಾವೇರಿ: 'ಬಾಗಲಕೋಟೆ, ದಾವಣಗೆರೆ ದಕ್ಷಿಣ ವಿಧಾನಸಭೆಯ ಉಪ ಚುನಾವಣೆಯಲ್ಲಿ ಬಿಜೆಪಿ ಸೋಲಲು, ಪಕ್ಷದ ರಾಜ್ಯಮಟ್ಟದ ಕೆಲ ಮುಖಂಡರ ನಡುವಿನ ಭಿನ್ನಾಭಿಪ್ರಾಯವೇ ಕಾರಣ' ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ದೂರಿದರು.

ಬಿ.ಸಿ.ಪಾಟೀಲ

'ಪಕ್ಷದ ಮುಖಂಡರು, ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಿನಿಂದ ಮುನ್ನಡೆಯಬೇಕು. ಆಗ ಮಾತ್ರ ಮುಂಬರುವ ದಿನಗಳಲ್ಲಿ ಬಿಜೆಪಿ ಬಲಿಷ್ಠವಾಗಲಿದೆ' ಎಂದು ಮಂಗಳವಾರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯಾವುದಾದರೂ ಕ್ಷೇತ್ರದಲ್ಲಿ ಬಿಜೆಪಿ ಗೆದ್ದರೆ, ಅದರ ಪ್ರಶಂಸೆ ಮತ್ತೊಬ್ಬರಿಗೆ ಹೋಗುತ್ತದೆ ಎಂಬ ಮನೋಭಾವ ಹಲವು ಮುಖಂಡರಲ್ಲಿ ಇದೆ. ಸೋಲಿನ ಬಗ್ಗೆ ಮುಖಂಡರು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದರು.

'ಬಿಜೆಪಿಗೆ ಬಂದ ಕೂಡಲೇ, ತಾವೇ ಮುಖ್ಯಮಂತ್ರಿ ಆಗುವುದಾಗಿ ಕನಸು ಇರಬಾರದು. ಎಲ್ಲರೂ ಸೇರಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದಷ್ಟೇ ಕೆಲಸವಾಗಬೇಕು. ನಮ್ಮ ಅಧ್ಯಕ್ಷರು ಸಮರ್ಥವಾಗಿದ್ದು, ಉಳಿದವರು ಅವರಿಗೆ ಸಹಕರಿಸಬೇಕು' ಎಂದರು.

ಕರ್ನಾಟಕ ಸರ್ಕಾರ

ರಾಜ್ಯ ಅಭಿಯಾನ ನಿರ್ದೇಶಕರು,

ಸ್ವಚ್ಛ ಭಾರತ್ ಮಿಷನ್ (ನಗರ) ಬೆಂಗಳೂರು.

10ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–560001.
ದೂರವಾಣಿ: 080– 22867172 / 22866302, ಫ್ಯಾಕ್ಸ್: 080–22863576 /22861665
ಇ–ಮೇಲ್: swmcelldma@gmail.com

ಸಂಖ್ಯೆ : 1515222/DMA/SWM/SBM2/319/2024 ದಿನಾಂಕ : 04.05.2026

ಟೆಂಡರ್ ಪ್ರಕಟಣೆ

ಸ್ವಚ್ಛ ಭಾರತ್ ಮಿಷನ್(ನಗರ)–2.0 ಯೋಜನೆಯ ಬಳಸಿದ ನೀರು ನಿರ್ವಹಣೆ (UWM)ಘಟಕದಡಿಯಲ್ಲಿ ರಾಜ್ಯದ 42 ನಗರ ಸ್ಥಳೀಯ ಸಂಸ್ಥೆಗಳಲ್ಲಿ Interception and Diversion works ಅನುಷ್ಠಾನಗೊಳಿಸುವ ಸಲುವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000ರ ಪ್ರಕಾರ, DBOT ಮಾದರಿಯಲ್ಲಿ ಈ ಕೆಳಕಂಡಂತೆ ಟೆಂಡರ್ ಕರೆಯಲು ಉದ್ದೇಶಿಸಲಾಗಿದೆ.

ಕ್ರ ಸಂ.	ಟೆಂಡರ್ ಕಾಮಗಾರಿಗಳ ಹೆಸರು & ಇಂಡೆಂಟ್ ಸಂಖ್ಯೆ	ಟೆಂಡರ್ ಮೊತ್ತ ರೂ.ಲಕ್ಷಗಳಲ್ಲಿ (Excluding GST)
1.	**Package No-3** Design, Build, Operate and Transfer (DBOT) of Interception and Diversion works in Nipani, Mugalakoda, Naaganura, Sadalga, Sankeshwar, Saundatti-yellamma, shedbaala and Examba ULBs of Belagavi District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WT/WORK_INDENT57759)**	2759.43
2.	**Package No-10** Design, Build, Operate and Transfer (DBOT) of Interception and Diversion works in Ron, Nargund, Gajendragadh, Lakshmeshwara, Naregal and Mundaragi ULBs of Gadag District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57760)**	1730.61
3.	**Package No-12** Design, Build, Operate and Transfer (DBOT) of Interception and Diversion works in Bankapura, Hanagal, Hirekerur and savanur ULBs of Haveri District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57761)**	1848.86
4.	**Package No-18** Design, Build, Operate and Transfer (DBOT) of Interception and Diversion works in Babaleshwar, Devarahipparagi, Indi, manuguli, Muddebihal, Sindgi and Thikota ULBs of Vijayapura District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57762)**	1762.90
5.	**Package No-5** Design, Build, Operate and Transfer (DBOT) of Interception and Diversion works in Chamarajanagar and Gundlupet ULBs of Chamarajanagara District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57763)**	615.34
6.	**Package No-11** Design, Build, Operate and Transfer (DBOT) of Interception and Diversion works in Channarayapatna and Sakleshpura ULBs of Hassan District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57764)**	852.79
7.	**Package No-13** Design, Build, Operate and Transfer (DBOT) of Interception and Diversion works in Chitpur, Kamalapura, Shahabad and yadrami ULBs of Kalburgi District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57766)**	947.70
8.	**Package No-20** Design, Build, Operate and Transfer (DBOT) of Interception and Diversion works in Hunsagi, kakkera and Kembavi ULBs of Yadagiri District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2026-27/WS/WORK_INDENT57767)**	1626.66
9.	**Package No-6** Design, Build, Operate and Transfer (DBOT) of Interception and Diversion works in Chintamani, Sidlaghatta, Chikkaballapura and Bagepalli ULBs of Chikkaballapura District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2025-26/WS/WORK_INDENT56797)**	1563.16
10	**Package No-15** Design, Build, Operate and Transfer (DBOT) of Interception and Diversion works in Sindhnur and Lingasugur ULBs of Raichur District with 5 years operation and maintenance(including 2 year Defect liability period) under Swachh Bharat Mission (Urban)2.0 fund **(DMA/2025-26/WS/WORK_INDENT56787)**	847.11

ಟೆಂಡರನ್ನು ಕೆಪಿಪಿ ಪೋರ್ಟಲ್ ನಲ್ಲಿ ದ್ವಿ– ಲಕೋಟೆ ಪದ್ಧತಿಯಲ್ಲಿ ಪ್ರಚುರಪಡಿಸಲಾಗಿದ್ದು, ಕೆಪಿಪಿ ಪೋರ್ಟಲ್ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಅರ್ಹ ಬಿಡ್ಡುದಾರರು/ಏಜೆನ್ಸಿದಾರರು ಭಾಗವಹಿಸಲು ಕೋರಲಾಗಿದೆ, ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.

ಸಹಿ/–
ಅಧೀಕ್ಷಕ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.

DIPR/CP/501/Zen/2026-27

ಲಕ್ಕುಂಡಿ: 50ಕ್ಕೂ ಅಧಿಕ ಪ್ರಾಚ್ಯ ಅವಶೇಷ ಪತ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದಲ್ಲಿ ನಡೆದಿರುವ ಪ್ರಾಚ್ಯ ಅವಶೇಷಗಳ ಅನ್ವೇಷಣೆ ಅಭಿಯಾನದಲ್ಲಿ ಮಂಗಳವಾರ 50ಕ್ಕೂ ಹೆಚ್ಚು ಪ್ರಾಚ್ಯ ಅವಶೇಷಗಳು ಸಿಕ್ಕಿವೆ.

ಮೇ 2ರಿಂದ ಅಭಿಯಾನ ಆರಂಭಗೊಂಡಿದೆ. ಲಕ್ಕುಂಡಿ ಗ್ರಾಮದ ಜಂತ್ಲಿ ಶಿರೂರ ರಸ್ತೆಯ ಬದಿಯ ಹೊಲಗಳಲ್ಲಿ ಈ ಪ್ರಾಚ್ಯ ಅವಶೇಷಗಳನ್ನು ಗುರುತಿಸಲಾಗಿದೆ.

'ಅವಶೇಷಗಳಿಗೆ ಸಂಖ್ಯೆ ನೀಡಲಾಗುತ್ತಿದೆ. ಅಭಿಯಾನಕ್ಕೂ ಮುನ್ನವೇ 900ಕ್ಕೂ ಹೆಚ್ಚು ಪ್ರಾಚ್ಯ ಅವಶೇಷಗಳು ಪತ್ತೆಯಾಗಿದ್ದು, ಅವುಗಳ ಬಗ್ಗೆಯೂ ಸಂಶೋಧನೆ ನಡೆದಿದೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಕುಣಿಯುವೆವು ನಾವು...

ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಮೈಸೂರಿನ ಕಿರು ರಂಗಮಂದಿರದಲ್ಲಿ ಅದಮ್ಯ ರಂಗಶಾಲೆಯು ಮಂಗಳವಾರ ಆಯೋಜಿಸಿದ್ದ ಬಾಲಂಗೋಚಿ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪದಲ್ಲಿ ಚಿಣ್ಣರು ನೃತ್ಯ ಪ್ರದರ್ಶಿಸಿದರು

ಸಚಿವ ದಿನೇಶ್ ಗುಂಡೂರಾವ್ ಭರವಸೆ, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಘಟಕ

'ಉಪಶಮನ ಆರೈಕೆ ವಿಸ್ತರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪಶಮನ ಆರೈಕೆಯನ್ನು ರಾಜ್ಯದಾದ್ಯಂತ ಪ್ರಾರಂಭಿಸುವ ಗುರಿ ಇದ್ದು, ಬೆಂಗಳೂರಿನಲ್ಲಿ ನಾಲ್ಕೈದು ಕಡೆ ಪ್ರಾರಂಭಿಸಿದ್ದೇವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸರನಂ ಇಂಡಿಯಾ ಸಂಸ್ಥೆಯ ಸಹಯೋಗದಲ್ಲಿ ಮಲ್ಲೇಶ್ವರದಲ್ಲಿರುವ ಕೆ.ಸಿ. ಜನರಲ್ ಆಸ್ಪತ್ರೆಯ ಆವರಣದಲ್ಲಿ ನಿರ್ಮಿಸಲಾಗಿರುವ ಉಪಶಮನ ಆರೈಕೆ ಕೇಂದ್ರವನ್ನು ಮಂಗಳವಾರ ಉದ್ಘಾಟಿಸಿದ ಬಳಿಕ ಅವರು ಮಾತನಾಡಿದರು.

ದಿನೇಶ್ ಗುಂಡೂರಾವ್ ಅವರು ಶುಶ್ರೂಷಕಿಯರ ಜತೆಗೆ ಸಮಾಲೋಚನೆ ನಡೆಸಿದರು

'ರೋಗಿಗಳ ನೋವು ನಿರ್ವಹಣೆಗೆ ಉಪಶಮನ ಆರೈಕೆ ಸಹಕಾರಿ. ಚಿಕಿತ್ಸೆಗೆ ಸ್ಪಂದಿಸದೆ ಅಸಾಧಾರಣ ನೋವು, ಮಾನಸಿಕ ಒತ್ತಡದಿಂದ ಬಳಲುತ್ತಿರುವವರಿಗೆ ಈ ಆರೈಕೆ ಒದಗಿಸಲಾಗುತ್ತದೆ. ರೋಗಿಗಳ ಮತ್ತು ಅವರ ಆರೈಕೆ ಮಾಡುತ್ತಿರುವ ಕುಟುಂಬ ವರ್ಗದವರಿಗೆ ಇದು ವರದಾನವಾಗಲಿದೆ' ಎಂದು ಅಭಿಪ್ರಾಯಪಟ್ಟರು.

'ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮೊದಲ ಹಂತದಲ್ಲಿ ಐದು ಹಾಸಿಗೆಗಳ ಒಂದು ವಾರ್ಡ್ ನಿರ್ಮಾಣ ಮಾಡಿದ್ದೇವೆ. ಮಾರಣಾಂತಿಕ ಅಥವಾ ಗಂಭೀರ ಕಾಯಿಲೆ ಎದುರಿಸುತ್ತಿರುವ ರೋಗಿಗಳಿಗೆ ಈ ಕೇಂದ್ರದಲ್ಲಿ ಆರೈಕೆ ಮಾಡಲಾಗುತ್ತದೆ. ಕ್ಯಾನ್ಸರ್, ಮೂತ್ರಪಿಂಡ ವೈಫಲ್ಯದಂತಹ ಅನಾರೋಗ್ಯ ಸಮಸ್ಯೆಗಳಿಗೆ ಒಳಗಾದವರು ಈ ಕೇಂದ್ರಕ್ಕೆ ಭೇಟಿ ನೀಡಬಹುದು' ಎಂದು ಹೇಳಿದರು.

'ರೋಗವನ್ನು ಗುಣಪಡಿಸಲು ಸಾಧ್ಯವಿಲ್ಲದ ಹಂತದಲ್ಲಿ, ರೋಗಿಯ ದೈಹಿಕ ನೋವು ಮತ್ತು ಮಾನಸಿಕ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಕೇಂದ್ರವನ್ನು ನಿರ್ಮಿಸಿದ್ದೇವೆ. ರೋಗಿಗಳ ಕುಟುಂಬದವರಿಗೂ ಆರೈಕೆ ಬಗ್ಗೆ ಸೂಕ್ತ ತರಬೇತಿ ನೀಡಲಾಗುತ್ತದೆ' ಎಂದರು.

'ಕೇಂದ್ರದಲ್ಲಿ ಹೊರರೋಗಿ ವಿಭಾಗ, ಡೇ ಕೇರ್ ವಿಭಾಗ (ಅತಿಯಾದ ನೋವು ನಿರ್ವಹಣೆ ಮತ್ತು ವೈಯಕ್ತಿಕ ಸಮಾಲೋಚನೆ) ಹಾಗೂ ಒಳರೋಗಿ ವಿಭಾಗ ಇರಲಿದೆ. ಕೆ.ಸಿ. ಜನರಲ್ ಆಸ್ಪತ್ರೆಯ ಸುತ್ತಮುತ್ತ 5 ರಿಂದ 8 ಕಿ.ಮೀ. ವ್ಯಾಪ್ತಿಯಲ್ಲಿ ಮನೆಗೆ ತೆರಳಿ ಆರೈಕೆ ಮಾಡುವ ಮತ್ತು ತರಬೇತಿ ನೀಡುವ ವಾಹನ ಸಹ ಇದೆ. ಮಾನವೀಯತೆ ದೃಷ್ಟಿಯಿಂದ ಈ ಸೇವೆ ನೀಡಲಾಗುತ್ತಿದೆ' ಎಂದು ಹೇಳಿದರು.

ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮೀಪತಿ ಉಪಸ್ಥಿತರಿದ್ದರು.

ಶಿಥಿಲ ಕಟ್ಟಡ: ರೋಗಿಗಳ ಸ್ಥಳಾಂತರಕ್ಕೆ ಸೂಚನೆ

ಬೆಂಗಳೂರು: ಶಿಥಿಲಾವಸ್ಥೆಯಲ್ಲಿರುವ ಆಸ್ಪತ್ರೆಗಳ ಕಟ್ಟಡ ಅಥವಾ ವಾರ್ಡ್‌ನಲ್ಲಿರುವ ರೋಗಿಗಳನ್ನು ಬೇರೆ ಕಡೆಗೆ ಸ್ಥಳಾಂತರಿಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಇಲಾಖೆ ಆಯುಕ್ತ ಗುರುದತ್ತ ಹೆಗಡೆ ಈ ಬಗ್ಗೆ ಸುತ್ತೋಲೆ ಹೊರಡಿಸಿದ್ದಾರೆ. ಇಲಾಖೆ ವ್ಯಾಪ್ತಿಗೆ ಬರುವ ಎಲ್ಲ ಹಳೆ ಕಟ್ಟಡಗಳನ್ನು ಪರಿಶೀಲಿಸಿ, 15 ದಿನಗಳೊಳಗೆ ವರದಿ ನೀಡುವಂತೆ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಶಿಥಿಲಗೊಂಡ ಕಟ್ಟಡಗಳಿಗೆ ಮಳೆ ಮತ್ತು ಗಾಳಿಯಿಂದ ಹಾನಿಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಜಿಲ್ಲಾ ಆರೋಗ್ಯಾಧಿಕಾರಿ, ತಾಲ್ಲೂಕು ಆರೋಗ್ಯಾಧಿಕಾರಿ ಮತ್ತು ನೋಡಲ್ ಅಧಿಕಾರಿಗಳು ತಮ್ಮ ಜಿಲ್ಲೆಯ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡದಿಂದ ರೋಗಿಗಳನ್ನು ಮತ್ತೊಂದು ಕಟ್ಟಡಕ್ಕೆ ಸ್ಥಳಾಂತರ ಮಾಡಬೇಕು ಎಂದು ಸೂಚಿಸಿದ್ದಾರೆ.

ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಎಂಜಿನಿಯರಿಂಗ್ ವಿಭಾಗದಿಂದ ಪರಿಶೀಲಿಸಿ, ದುರಸ್ತಿ ಕಾಮಗಾರಿ ಕೈಗೊಳ್ಳಲು ಕ್ರಮವಹಿಸಬೇಕು. ಪೂರ್ಣ ಪ್ರಮಾಣದಲ್ಲಿ ಶಿಥಿಲಾವಸ್ಥೆಯಲ್ಲಿರುವ ಖಾಲಿ ಕಟ್ಟಡವನ್ನು ಪರಿಶೀಲನೆ ಬಳಿಕ ನಿಯಮಾನುಸಾರ ನೆಲಸಮ ಮಾಡಬೇಕು. ವಿದ್ಯುತ್ ಸಂಪರ್ಕದ ಬಗ್ಗೆಯೂ ಗಮನಹರಿಸಬೇಕು. ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಮುಂದೆ ಅವಘಡವಾದಲ್ಲಿ ನೀವು ನೇರ ಜವಾಬ್ದಾರರಾಗುತ್ತೀರಿ ಎಂದು ಎಚ್ಚರಿಸಿದ್ದಾರೆ.

ಪಿಐಎಲ್ ದುರ್ಬಳಕೆ: 'ಸುಪ್ರೀಂ' ಕಿಡಿ

ಸಾರ್ವಜನಿಕ ಹಿತಾಸಕ್ತಿಯು ಪ್ರಚಾರ ಹಿತಾಸಕ್ತಿಯಾಗಿ ಬದಲಾಗಿದೆ: ನ್ಯಾಯಪೀಠ

ನವದೆಹಲಿ (ಪಿಟಿಐ): ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ದುರ್ಬಳಕೆ ಮಾಡಿಕೊಳ್ಳುತ್ತಿರುವ ಕುರಿತಂತೆ ಸುಪ್ರೀಂ ಕೋರ್ಟ್ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿದೆ.

'ಇವು ಈಗ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಾಗಿ ಉಳಿದಿಲ್ಲ. ಅವುಗಳು 'ಖಾಸಗಿ ಹಿತಾಸಕ್ತಿ ಅರ್ಜಿ', 'ಪ್ರಚಾರ ಹಿತಾಸಕ್ತಿ ಅರ್ಜಿ', 'ಪೈಸಾ ಆಸಕ್ತಿಯ ದಾವೆ' ಹಾಗೂ 'ರಾಜಕೀಯ ಹಿತಾಸಕ್ತಿ ವ್ಯಾಜ್ಯ'ಗಳಾಗಿವೆ' ಎಂದು ಹೇಳಿದೆ.

ಶಬರಿಮಲೆ ಸೇರಿ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧ ತಾರತಮ್ಯ ಮಾಡಲಾಗುತ್ತಿದೆ ಎಂದು ದೂರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಒಂಬತ್ತು ಸದಸ್ಯರ ಸಂವಿಧಾನ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಎಂ.ಎಂ.ಸುಂದ್ರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ ಕುಮಾರ್, ಆಗಸ್ಟೀನ್ ಜಾರ್ಜ್ ಮಸೀಹ್, ಪ್ರಸನ್ನ ಬಿ.ವರಾಳೆ, ಆರ್.ಮಹಾದೇವನ್ ಹಾಗೂ ಜಾಯ್‌ಮಾಲ್ಯಾ ಬಾಗ್ಚಿ ಈ ಪೀಠದಲ್ಲಿದ್ದಾರೆ.

'10ರಿಂದ 50 ವರ್ಷ ವಯೋಮಾನದ ಮಹಿಳೆಯರು ಕೇರಳದ ಶಬರಿಮಲೆ ದೇವಸ್ಥಾನ ಪ್ರವೇಶಿಸುವುದರ ಮೇಲಿನ ನಿಷೇಧ ಪ್ರಶ್ನಿಸಿ ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಷನ್ 2006ರಲ್ಲಿ ಪಿಐಎಲ್ ಸಲ್ಲಿಸಿದೆ. ಈ ಪಿಐಎಲ್‌ನ ಉದ್ದೇಶವಾದರೂ ಏನು' ಎಂದು ಪೀಠ ಇದೇ ವೇಳೆ ಪ್ರಶ್ನಿಸಿದೆ.

ಆಗ, ಇಂಡಿಯನ್ ಯಂಗ್ ಲಾಯರ್ಸ್ ಅಸೋಸಿಯೇಷನ್ ಪರ ಹಾಜರಿದ್ದ ವಕೀಲ ರವಿಪ್ರಕಾಶ್ ಗುಪ್ತ ಅವರು, '2006ರ ಜೂನ್‌ನಲ್ಲಿ ನಾಲ್ಕು ದಿನಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಲೇಖನಗಳ ಆಧಾರದಲ್ಲಿ ಈ ಪಿಐಎಲ್ ಸಲ್ಲಿಸಲಾಗಿದೆ' ಎಂದು ಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ,'ಈ ಪಿಐಎಲ್‌ಅನ್ನು ಸಾರಾಸಗಟಾಗಿ ತಿರಸ್ಕರಿಸಬೇಕಾಗಿತ್ತು' ಎಂದರು.

'ಒಂದು ಪಿಐಎಲ್ ಸಲ್ಲಿಸುವುದಕ್ಕೆ ಈ ಲೇಖನ ಹೇಗೆ ಆಧಾರವಾಗಬಲ್ಲದು? ಪಿಐಎಲ್ ಸಲ್ಲಿಸುವ ಉದ್ದೇಶಕ್ಕಾಗಿಯೇ ಲೇಖನಗಳನ್ನು ಬರೆಯುವುದು ಬಹಳ ಸುಲಭ' ಎಂದೂ ಹೇಳಿದರು.

'ಜನಸಾಮಾನ್ಯರ ಹಿತದೃಷ್ಟಿಯಿಂದ ಹೈಕೋರ್ಟ್‌ಗಳಲ್ಲಿ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸುವುದನ್ನು ನಾವು ಪುರಸ್ಕರಿಸುತ್ತಾ ಬಂದಿದ್ದೇವೆ. ಆದರೆ, ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಮುಂದಿಟ್ಟುಕೊಂಡು ಪಿಐಎಲ್ ಸಲ್ಲಿಸುವದನ್ನು ಒಪ್ಪುವುದಿಲ್ಲ' ಎಂದು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಹೇಳಿದರು.

'ಮುಖ್ಯ ನ್ಯಾಯಮೂರ್ತಿಗಳು ದಿನವೂ ನೂರಾರು ಪತ್ರಗಳನ್ನು ಸ್ವೀಕರಿಸುತ್ತಾರೆ. ಅವುಗಳನ್ನೆಲ್ಲ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನಾಗಿ ಪರಿಗಣಿಸಲು ಸಾಧ್ಯವೇ' ಎಂದು ಅವರು ಪ್ರಶ್ನಿಸಿದರು.

ನಂತರ ಪೀಠವು ಅರ್ಜಿಗಳ ವಿಚಾರಣೆಯನ್ನು ಮುಂದೂಡಿತು.

ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಳಕ್ಕೆ ಅಸ್ತು

ನವದೆಹಲಿ: ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳ ಸಂಖ್ಯೆಯನ್ನು 34ರಿಂದ 38ಕ್ಕೆ (ಮುಖ್ಯ ನ್ಯಾಯಮೂರ್ತಿ ಸೇರಿ) ಹೆಚ್ಚಿಸಲು ಕೇಂದ್ರ ಸಚಿವ ಸಂಪುಟ ಮಂಗಳವಾರ ನಿರ್ಧರಿಸಿದೆ.

ಸುಪ್ರೀಂ ಕೋರ್ಟ್‌ನಲ್ಲಿ ಪ್ರಸ್ತುತ 33 ನ್ಯಾಯಮೂರ್ತಿಗಳು ಮತ್ತು ಮುಖ್ಯ ನ್ಯಾಯಮೂರ್ತಿ ಇದ್ದಾರೆ. ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಿಸಲು ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು. ಮಸೂದೆಗೆ ಸಂಸತ್ತಿನಿಂದ ಅನುಮೋದನೆ ಸಿಕ್ಕ ಬಳಿಕ, ನ್ಯಾಯಮೂರ್ತಿಗಳ ಸಂಖ್ಯೆ 38ಕ್ಕೆ ಏರಲಿದೆ.

ಈ ಸಂಖ್ಯೆ ಹೆಚ್ಚಳವು ತ್ವರಿತ ನ್ಯಾಯವನ್ನು ಖಾತರಿಪಡಿಸುತ್ತದೆ ಎಂದು ಅವರು ಹೇಳಿದರು.

ರಸ್ತೆ ಅಪಘಾತ: ನಟ ಸಂತೋಷ್ ನಾಯರ್ ಸಾವು

ಸಂತೋಷ್ ನಾಯರ್

ಪತ್ತನಂತಿಟ್ಟ (ಕೇರಳ) (ಪಿಟಿಐ): ಜಿಲ್ಲೆಯ ಏನಾಥ್ ಬಳಿ ಮಂಗಳವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮಲಯಾಳ ಚಿತ್ರನಟ ಸಂತೋಷ್ ನಾಯರ್ ಮೃತಪಟ್ಟಿದ್ದಾರೆ.

ಬೆಳಿಗ್ಗೆ 6.30ರ ಸುಮಾರಿಗೆ ನಾಯರ್ ಪ್ರಯಾಣಿಸುತ್ತಿದ್ದ ಕಾರು ಲಾರಿಗೆ ಡಿಕ್ಕಿ ಹೊಡೆದಿದೆ. ಕಾರಿನ ಸ್ಟೀರಿಂಗ್ ನಾಯರ್ ಎದೆಗೆ ಬಡಿದಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಅಸುನೀಗಿದ್ದಾರೆ. ಅವರ ಪತ್ನಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

1982ರಲ್ಲಿ 'ಇತು ನಂಗಳುಡೆ ಕಥಾ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದ ನಾಯರ್, 100ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಅವರು ಇತ್ತೀಚೆಗೆ ಅಭಿನಯಿಸಿದ್ದ ಸಿನಿಮಾ 'ಮೋಹಿನಿಯಾಟ್ಟಂ' ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳುತ್ತಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ನಂ. ಸಿಎ–15:17, 1ನೇ ಮಹಡಿ, ಅಂಜನಾದ್ರಿ ಮುಖ್ಯರಸ್ತೆ, 2ನೇ ಫೇಸ್, 4ನೇ ಹಂತ, ವಿಜಯನಗರ ಮೈಸೂರು–570010. Phone: 0821-2543003, e-mail: dcpumysore@gmail.com

ಸಂ.ಈಮರಘಮೈ/ಪತ್ರಿಕಾ ಪ್ರಕಟಣೆ/2026–27 ದಿನಾಂಕ: 23.04.2026

ಬಾಲಕಿ ಅನನ್ಯ (ಸುಮಾರು 2 ತಿಂಗಳು) ಎಂಬ ಹೆಣ್ಣು ಮಗುವಿನ ಜೈವಿಕ ಪೋಷಕರ ಪತ್ತೆಗಾಗಿ ಪ್ರಕಟಣೆ

ಮಗುವಿನ ಮಾಹಿತಿ — ಮಗುವಿನ ಭಾವಚಿತ್ರ

1) ಬಾಲಕಿಯ ಹೆಸರು: ಅನನ್ಯ. 2) ಮಗು ಸಿಕ್ಕಿದ ಸ್ಥಳ: ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಹೆಬ್ಬಾಳು ಹೋಬಳಿಯಲ್ಲಿರುವ ಶ್ರೀ ಕ್ಷೇತ್ರ ಕಪ್ಪಡಿ ದೇವಸ್ಥಾನದ ಹತ್ತಿರ ದಿನಾಂಕ: 17.01.2026 ರಂದು 1 ರಿಂದ 2 ದಿನದ ನವಜಾತ ಹೆಣ್ಣು ಮಗು. 3) ಪ್ರಸ್ತುತ ವಿಳಾಸ: ಶ್ರೀ ಛಾಯಾದೇವಿ ದತ್ತು ಕೇಂದ್ರ, ಜಯನಗರ, ಮೈಸೂರು. 4) ವಯಸ್ಸು: ಸುಮಾರು 02 ತಿಂಗಳು. 5) ತೂಕ: 3.2 ಕೆ.ಜಿ. 6) ಎತ್ತರ: 51 ಸೆಂ.ಮೀ. 7) ಬಣ್ಣ: ಗೋಧಿ ಬಣ್ಣ. 8) ಸಂಪರ್ಕಿಸುವ ವಿಳಾಸ : ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ನಂ:15–17, 1ನೇ ಮಹಡಿ, ಅಂಜನಾದ್ರಿ ರಸ್ತೆ, 02ನೇ ಘಟ್ಟ, 04ನೇ ಹಂತ, ವಿಜಯನಗರ, ಮೈಸೂರು–570032, ದೂರವಾಣಿ ಸಂಖ್ಯೆ: 0821–2543003.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೈಸೂರು.
DIPR/MYS/136/SA/2025-26

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಾದೇಶಿಕ ಕಛೇರಿ: ಷೆಡ್ ನಂ. ಎ–99, 3ನೇ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು–560 058, ಇ–ಮೇಲ್: khdcsilk@gmail.com ದೂ: 9900306365
ಸಂಖ್ಯೆ: KHDCL/2026-27/IND0028 ದಿನಾಂಕ: 05.05.2026

ಇ–ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆಹೆಚ್‌ಡಿಸಿಎಲ್) ರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ಹಾಗೂ ನಿಯಮ 2000ದ ಅನ್ವಯ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ನೋಂದಾಯಿತ ಪ್ರತಿಷ್ಠಿತ ರೇಷ್ಮೆ ರೀಲರ್ಸ್, ಟ್ವಿಸ್ಟರ್ಸ್ ಮತ್ತು ರೇಷ್ಮೆ ಟ್ರೇಡರ್ಸ್‌ಗಳಿಂದ ವಿವಿಧ ನಮೂನೆಯ 2500 ಕೆ.ಜಿ. ರೇಷ್ಮೆ ನೂಲು ಸರಬರಾಜಿಗಾಗಿ ದ್ವಿ ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಕಮರ್ಷಿಯಲ್ ಬಿಡ್) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್‌ನ ಅಂತರ್ಜಾಲದಲ್ಲಿ (https://kppp.karnataka.gov.in) ದಡಿ ಆಹ್ವಾನಿಸಲಾಗಿದೆ. **ದಿನಾಂಕ 19.05.2026ರ ಸಂಜೆ 5.30 ಗಂಟೆಯೊಳಗೆ** ಟೆಂಡರುಗಳನ್ನು ಸಲ್ಲಿಸಬೇಕು. ಟೆಂಡರ್‌ಗಳನ್ನು ಯಾವುದೇ ಸೂಚನೆಯಿಲ್ಲದೆ ಪೂರ್ತಿ ಅಥವಾ ಭಾಗಶಃ ಪರಿಗಣಿಸುವ ಅಥವಾ ತಿರಸ್ಕರಿಸುವ ಪರಿಮಿತಿ/ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ಸಹಿ/– ವ್ಯವಸ್ಥಾಪಕರು, ಉತ್ಪಾದನೆ (ರೇಷ್ಮೆ)
ವಾಸಾಸಂಇ/ಸಿ.ಪಿ/ಕೆಎಸ್‌ಎಂಸಿಎ/508/2026–27.

ರಾಜ್ಯಸಭೆಯ ಆರು ಸಂಸದರ ಸದಸ್ಯತ್ವ ರದ್ದತಿಗೆ ಮಾನ್ ಆಗ್ರಹ

ಜನರ ನಿರೀಕ್ಷೆಯಂತೆ ಕಾರ್ಯನಿರ್ವಹಿಸಲು ವಿಫಲರಾಗುವ ಸದಸ್ಯರನ್ನು ಅಧಿಕಾರದಿಂದ ತೆಗೆದುಹಾಕುವ ಅವಕಾಶ ಇರಬೇಕು ಎಂದು ಚಡ್ಡಾ ಒತ್ತಾಯಿಸಿದ್ದರು. ಈಗ ಅಂಥ ಅವಕಾಶದ ಅಗತ್ಯವಿದೆ
ಭಗವಂತ ಮಾನ್, ಪಂಜಾಬ್ ಸಿ.ಎಂ

ಚಂಡೀಗಢ(ಪಿಟಿಐ): ಬಿಜೆಪಿಗೆ ಸೇರ್ಪಡೆಯಾಗಿರುವ ರಾಜ್ಯಸಭೆಯ ಆರು ಮಂದಿ ಎಎಪಿ ಸದಸ್ಯರ ಸದಸ್ಯತ್ವ ರದ್ದು ಮಾಡುವಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮಂಗಳವಾರ ಮನವಿ ಮಾಡಿದ್ದಾರೆ.

ಅಲ್ಲದೇ, ಪಕ್ಷಾಂತರ ಮಾಡಿದ ಸದಸ್ಯರನ್ನು ಅಧಿಕಾರದಿಂದ ತೆಗೆದುಹಾಕುವುದಕ್ಕೆ ಸಂಬಂಧಿಸಿದ ಅವಕಾಶವನ್ನು ಸಂವಿಧಾನದಲ್ಲಿ ಸೇರಿಸುವಂತೆಯೂ ಒತ್ತಾಯಿಸಿದ್ದಾರೆ.

ಆಮ್ ಆದ್ಮಿ ಪಕ್ಷದ(ಎಎಪಿ) ಶಾಸಕರೊಂದಿಗೆ ದೆಹಲಿಗೆ ತೆರಳಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ಈ ಕುರಿತು ಅವರು ಮನವಿ ಸಲ್ಲಿಸಿದ್ದಾರೆ.

ಮುರ್ಮು ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮಾನ್,'ಪಕ್ಷದ ಏಳು ಸಂಸದರು ಪಕ್ಷಾಂತರ ಮಾಡಿರುವುದು ಸಂವಿಧಾನದ ಹತ್ಯೆಯೇ ಸರಿ. ಈ ನಡೆ ಅಸಾಂವಿಧಾನಿಕ. ಈ ಕುರಿತು ರಾಷ್ಟ್ರಪತಿ ಅವರಿಗೆ ವಿವರಣೆ ನೀಡಿದ್ದೇವೆ' ಎಂದರು.

'ಪಂಜಾಬ್‌ನಲ್ಲಿ ಬಿಜೆಪಿ ಇಬ್ಬರು ಶಾಸಕರನ್ನು ಹೊಂದಿದೆ. ಆದರೆ, ಈ ಬೆಳವಣಿಗೆ ಬಳಿಕ ರಾಜ್ಯಸಭೆಯಲ್ಲಿ ಅದು ಆರು ಸಂಸದರನ್ನು ಹೊಂದಿದಂತಾಗಿದೆ. ಇದು ಹೇಗೆ ಸಾಧ್ಯ? ಇದು ಸಂವಿಧಾನದ ಅಣಕವಲ್ಲವೇ' ಎಂದು ಪ್ರಶ್ನಿಸಿದರು.

'ಬಿಜೆಪಿಗೆ ಸೇರಿರುವವರು ಕ್ರಾಂತಿಕಾರಿಗಳೇ ಆಗಿದ್ದಲ್ಲಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಿತ್ತು. ತೆರವಾದ ಸ್ಥಾನಗಳಿಗೆ ಪಕ್ಷವು(ಎಎಪಿ) ಬೇರೆಯವರನ್ನು ನಾಮನಿರ್ದೇಶನ ಮಾಡುತ್ತಿತ್ತು' ಎಂದರು.

ರಾಜ್ಯಸಭೆಯಲ್ಲಿ ಎಎಪಿಯ 10 ಸದಸ್ಯರು ಇದ್ದರು. ಈ ಪೈಕಿ ರಾಘವ್ ಚಡ್ಡಾ, ಅಶೋಕ್ ಮಿತ್ತಲ್, ಹರಭಜನ್ ಸಿಂಗ್, ಸಂದೀಪ್ ಪಾಠಕ್, ರಾಜೇಂದ್ರ ಗುಪ್ತ, ವಿಕ್ರಮಿತ್ ಸಾಹ್ನಿ ಹಾಗೂ ಸ್ವಾತಿ ಮಾಲಿವಾಲ್ ಇತ್ತೀಚೆಗೆ ಎಎಪಿ ತೊರೆದು ಬಿಜೆಪಿ ಸೇರಿದ್ದಾರೆ. ಇವರಲ್ಲಿ ಆರು ಸಂಸದರು ಪಂಜಾಬ್‌ನಿಂದ ಆಯ್ಕೆಯಾದವರು.

'ಎಎಪಿಯಿಂದ ಸೇಡಿನ ರಾಜಕಾರಣ'


ರಾಘವ್ ಚಡ್ಡಾ

ನವದೆಹಲಿ: 'ಪಂಜಾಬ್‌ನಲ್ಲಿರುವ ಆಮ್ ಆದ್ಮಿ ಪಕ್ಷ (ಎಎಪಿ) ನೇತೃತ್ವದ ಸರ್ಕಾರ ಸೇಡಿನ ರಾಜಕೀಯ ಮಾಡುತ್ತಿದೆ' ಎಂದು ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಮಂಗಳವಾರ ಆರೋಪಿಸಿದ್ದಾರೆ.

ತಮ್ಮೊಂದಿಗೆ ಬಿಜೆಪಿಗೆ ಸೇರ್ಪಡೆಯಾಗಿರುವ ಇತರ ಮೂವರು ಸಂಸದರೊಂದಿಗೆ ರಾಷ್ಟ್ರಪತಿ ಮುರ್ಮು ಅವರನ್ನು ಭೇಟಿಯಾಗಿ ಅವರು ಮನವಿ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಚಡ್ಡಾ,'ಎಎಪಿಗೆ ವಿಧೇಯರಾಗಿದ್ದಾಗ ನಮ್ಮನ್ನು ಸುಸಂಸ್ಕೃತರು ಎಂದು ಪರಿಗಣಿಸಲಾಗುತ್ತಿತ್ತು. ಈಗ ನಾವು ಪಕ್ಷ ತೊರೆದ ತಕ್ಷಣ ನಮಗೆ ಭ್ರಷ್ಟರು ಎಂಬ ಹಣೆಪಟ್ಟಿ ಹಚ್ಚಲಾಗುತ್ತಿದೆ. ಎಎಪಿ ಪ್ರತೀಕಾರದ ರಾಜಕಾರಣದಲ್ಲಿ ತೊಡಗಿದೆ' ಎಂದರು.

Directorate of Medical Education
BMC&RI (Old Building), 1st Floor, Fort, K.R. Road, Bengaluru - 560002. Phone: 080-22870060 Fax: 080-22875798
E-mail: dmekarnataka@yahoo.com
No: DME/KCMMR/FD-01/2026-27 Date: 04-05-2026

INVITATION FOR E-AUCTION
(Through E-Procurement Portal Only)

Directorate of Medical Education invites e-Auction from **Public Sector Banks for Investment of its Surplus Funds of KCMMR Society.**

Date of e-Auction Notification Dt: 05-05-2026

Last Date to Upload the Eligibility Criteria in Annexure-A and Declaration in Annexure-B in the e-Portal Dt: 12-05-2026 on or before 16.00 Hours.

Live Bidding Dt: 14-05-2026
Commences at 10.00 Hours and Concludes at 16.00 Hours.

Further details may be obtained from the above office and from Website: **https://kppp.karnataka.gov.in at Auctions.**

Sd/- Member Secretary
Karnataka Chief Minister's Medical Relief Society &
Director of Medical Education, Bengaluru.
DIPR/CP/506/Adverto/2026-27

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಕಾರ್ಯಪಾಲಕ ಅಭಿಯಂತರರು–2 ಕಛೇರಿ,
ಯೋಜನಾ ಅನುಷ್ಠಾನ ಘಟಕ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560011.
ಸಂಖ್ಯೆ:ಕಾಅ–2/ಗ್ರೇಬೆಂಪ್ರಾ/ಯೋಅಘ/ಟೆಂಡರ್/03/2025–26 ದಿನಾಂಕ: 05–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು–2, ಯೋಜನಾ ಅನುಷ್ಠಾನ ಘಟಕ, ಗ್ರೇಬೆಂಪ್ರಾ, ಬೆಂಗಳೂರು ಇವರು ಈ ಕೆಳಕಂಡ ಕೆಲಸಕ್ಕಾಗಿ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಗ್ರೇಬೆಂಪ್ರಾ (ಜಿಬಿಎ) ಕಛೇರಿ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ, ಬೆಂಗಳೂರು ಇಲ್ಲಿನ ಯೋಜನಾ ಅನುಷ್ಠಾನ ಘಟಕ (ಯೋಅಘ) ದ ಉನ್ನತೀಕರಣ. **ಕಾಮಗಾರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,50,000.00 (ರೂ. 1.00 ಲಕ್ಷ ಇ–ಪಾವತಿಯ ಮೂಲಕ ಮತ್ತು ರೂ. 3,50,000.00 ಬಾಕಿ ಬಿಜಿ ಮೂಲಕ ಪಾವತಿಸಬೇಕು).**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **11–05–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **15–05–2026 ರಂದು ಸಂಜೆ 4.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು–2 ರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560011 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **21–05–2026 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **22–05–2026 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–2,
ಯೋಜನಾ ಅನುಷ್ಠಾನ ಘಟಕ, ಗ್ರೇಬೆಂಪ್ರಾ.

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ
ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ
ಪರಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು–560100,
ಸಂ.: ಕೇಕಾಬೆಂ/ದರಖಾಸ್ತು/1466/2026–27 ದಿನಾಂಕ: 05.05.2026

ಅಲ್ಪಾವಧಿ ಇ–ಟೆಂಡರ್ ನೋಟಿಸ್

2026–27ನೇ ಸಾಲಿಗೆ ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಅವಶ್ಯವಿರುವ ಸಿ.ಸಿ.ಟಿ.ವಿ., ಎಕ್ಸ್–ರೇ ಬ್ಯಾಗೇಜ್ ಸ್ಕ್ಯಾನರ್‌ಗಳು, ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಖರೀದಿಸುವ ಸಲುವಾಗಿ ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮದನ್ವಯ ಅಲ್ಪಾವಧಿ ಇ–ದರಖಾಸ್ತು ಮೂಲಕ ಖರೀದಿಸಲು ನಿರ್ಧರಿಸಿದೆ.

ಕ್ರ. ಸಂ.	ಟೆಂಡರ್ ಇಂಡೆಂಟ್ ಸಂಖ್ಯೆ	ದರಖಾಸ್ತು ವಿವರ
1	ಇ–ಪೋರ್ಟಲ್‌ನಂತೆ PCSD/2026-27/ IND0267	ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಎ.ಐ ಸಾಮರ್ಥ್ಯದ ಐ.ಪಿ ಬೇಸಡ್ ಸಿ.ಸಿ.ಟಿ.ವಿ ಸಿಸ್ಟಮ್ ಅಳವಡಿಸುವ ಬಗ್ಗೆ.
2	ಇ–ಪೋರ್ಟಲ್‌ನಂತೆ PCSD/2026-27/ IND0268	ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಖರೀದಿಸುವ ಬಗ್ಗೆ.
3	ಇ–ಪೋರ್ಟಲ್‌ನಂತೆ PCSD/2026-27/ IND0269	ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಎಕ್ಸ್–ರೇ ಬ್ಯಾಗೇಜ್ ಸ್ಕ್ಯಾನರ್ ಖರೀದಿಸುವ ಬಗ್ಗೆ.

ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): ಇ–ಪೋರ್ಟಲ್‌ನಂತೆ. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ:** ಇ–ಪೋರ್ಟಲ್‌ನಂತೆ. ದರಖಾಸ್ತುದಾರರು ಹೆಚ್ಚಿನ ಮಾಹಿತಿಯನ್ನು **kppp.karnataka.gov.in or Helpline No. +91-8046010000, +91-8068948777** ಗಳಿಗೆ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಅಧೀಕ್ಷಕರು
ಕೇಂದ್ರ ಕಾರಾಗೃಹ, ಬೆಂಗಳೂರು.
DIPR/CP/503/SA/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ
ಜಿಲ್ಲಾ ಆಡಳಿತ ಭವನ, ಹೊಸಪೇಟೆ ರಸ್ತೆ, ಕೊಪ್ಪಳ, ದೂ.ಸಂ : 08539–225030.

ಕ್ರ.ಸಂ	ವಿವರ		ಭಾವಚಿತ್ರ
1	ಮಗುವಿನ ಹೆಸರು	ನವಜಾತ ಗಂಡು ಶಿಶು	
2	ವಯಸ್ಸು	1 ದಿನದ ಮಗು	
3	ಲಿಂಗ	ಗಂಡು	
4	ತೂಕ	2 ಕೆ.ಜಿ	
5	ಆರೋಗ್ಯದ ಸ್ಥಿತಿ	ಚೆನ್ನಾಗಿದೆ	
6	ಮಗು ದೊರೆತ ಸ್ಥಳ	ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕಿನ ದ್ಯಾಂಪೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಿಂಭಾಗದಲ್ಲಿ.	

ಈ ಮಗುವಿನ ಪಾಲಕರು ಅಥವಾ ಮಗುವಿನ ಪಾಲಕರ ಬಗ್ಗೆ ಮಾಹಿತಿಯುಳ್ಳ ಸಾರ್ವಜನಿಕರು ಇದ್ದಲ್ಲಿ ತಕ್ಷಣ ಮಾಹಿತಿಗಾಗಿ **ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಕೊಪ್ಪಳ. ದೂ. ಸಂ–08539–200755 ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ. ದೂ.ಸಂ–08539–225030** ಸಂದರ್ಶಿಸಲು ಕೋರಿದೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಕೊಪ್ಪಳ.
ವಾ.ಸಾ.ಸಂ.ಇ/ಕೊಪ್ಪಳ/63/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು 560079, ದೂರವಾಣಿ : +91–80–29619801 ಮಿಂಚ್ ಅಂಚೆ : md.ksmscl@gmail.com
No: KSMSCL/EQPT/HFW/CH/TND/47/2025-26 Date: 10.04.2026

ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:
1. KSMSCL/DRUGS/ RETND/PRGM/NVBDCP/2 DRUGS/01/2026-27, Dt: 05.05.2026 (IND-0384).
2. KSMSCL/DRUGS/RETND/PRGM/SHUCHI/SNP/ MYSURUDIVISION/09/2026-27, Dt: 05.05.2026 (IND-0392).
3. KSMSCL/DRUGS/RETND/PRGM/SHUCHI/SNP/ KALABURGIDIVISION/10/2026-27, Dt: 05.05.2026 (IND-0393).

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

1. **2025 ನೇ ಸಾಲಿಗೆ NHM-NVBDCP ಕಾರ್ಯಕ್ರಮಕ್ಕೆ ಅವಶ್ಯವಿರುವ Pyrethrum extract (2%) ಮತ್ತು Cyphenothrin (5%) EC ಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0384).**
2. **2025–26 ನೇ ಸಾಲಿಗೆ "ಶುಚಿ" ಕಾರ್ಯಕ್ರಮದಡಿ ಮೈಸೂರು ವಿಭಾಗಕ್ಕೆ ಅವಶ್ಯವಿರುವ ಸ್ಯಾನಿಟರಿ ನ್ಯಾಪ್ ಕಿನ್ ಪ್ಯಾಡ್ಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0392).**
3. **2025–26 ನೇ ಸಾಲಿಗೆ "ಶುಚಿ" ಕಾರ್ಯಕ್ರಮದಡಿ ಕಲಬುರ್ಗಿ ವಿಭಾಗಕ್ಕೆ ಅವಶ್ಯವಿರುವ ಸ್ಯಾನಿಟರಿ ನ್ಯಾಪ್ ಕಿನ್ ಪ್ಯಾಡ್ಗಳನ್ನು ಖರೀದಿಸಿ ಪೂರೈಸಲು ಮರುಟೆಂಡರ್ ಆಹ್ವಾನಿಸುವ ಕುರಿತು. (IND-0393).**

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ ದಿನಾಂಕ: **05.05.2026** ರಿಂದ ಟೆಂಡಗಳನ್ನು ದಾಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆ&ಸ)
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/511/ಅಕಾರ್/2026–27

ಟಿಸಿಎಸ್: ನಾಲ್ವರು ಆರೋಪಿಗಳು ನ್ಯಾಯಾಂಗ ವಶಕ್ಕೆ

ನಾಸಿಕ್ (ಪಿಟಿಐ): ಸಹೋದ್ಯೋಗಿಯನ್ನು ಬಲವಂತವಾಗಿ ಮತಾಂತರಿಸಿದ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿಸಿಎಸ್‌ನ ನಾಲ್ವರು ಉದ್ಯೋಗಿಗಳನ್ನು ಮೇ 18ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಮಹಾರಾಷ್ಟ್ರದ ನಾಸಿಕ್‌ನ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

ಆರೋಪಿಗಳಾದ ರಾಜಾ ರಫೀಕ್ ಮೆಮೋಮ್ (35), ತೌಸಿಫ್ ಬಿಲಾಲ್ ಅತ್ತರ್ (37), ಡ್ಯಾನಿಶ್ ಇಜಾಜ್ ಶೇಖ್ (32) ಮತ್ತು ಶಾರುಕ್ ಹುಸೇನ್ ಶೌಕತ್ ಖುರೇಶಿ (34) ಅವರ ಮೇಲೆ, ಕಚೇರಿಯಲ್ಲಿ ಮಹಿಳಾ ಸಹೋದ್ಯೋಗಿಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪವೂ ಇದೆ.

ಆರೋಪಿಗಳನ್ನು ಏ. 23ರಂದು ಎಸ್‌ಐಟಿ ಬಂಧಿಸಿತ್ತು. ನಂತರ ಅವರನ್ನು ಮೇ 5ರವರೆಗೆ ಪೊಲೀಸ್ ವಶಕ್ಕೆ ನೀಡಲಾಗಿತ್ತು. ಅವಧಿ ಮುಗಿದ ಕಾರಣ ಮಂಗಳವಾರ ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು.

ಬಿಹಾರ: ನಾಳೆ ಸಚಿವ ಸಂಪುಟ ವಿಸ್ತರಣೆ

ಪಟ್ನಾ (ಪಿಟಿಐ): ಸಾಮ್ರಾಟ್ ಚೌಧರಿ ನೇತೃತ್ವದ ರಾಜ್ಯ ಸರ್ಕಾರದ ಸಚಿವ ಸಂಪುಟ ವಿಸ್ತರಣೆಯು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಗುರುವಾರ (ಮೇ 7) ನಡೆಯಲಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಜೆಡಿಯು ರಾಷ್ಟ್ರೀಯ ಅಧ್ಯಕ್ಷ ನಿತೀಶ್ ಕುಮಾರ್, ಎಲ್‌ಜೆಪಿ (ಆರ್‌ವಿ) ಮುಖ್ಯಸ್ಥ ಚಿರಾಗ್ ಪಾಸ್ವಾನ್, ಎಚ್‌ಎಎಂ ಅಧ್ಯಕ್ಷ ಜಿತನ್ ರಾಮ್ ಮಾಂಝಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಬಿಹಾರ ರಾಜ್ಯ ಘಟಕದ ಅಧ್ಯಕ್ಷ ಸಂಜಯ್ ಸರೋಗಿ ತಿಳಿಸಿದ್ದಾರೆ.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಸಂಖ್ಯೆ: ಶಿಮನಪಾಶಿ/ಕಾ.ವಿ/ಟೆಂಡರ್/05/2026–27 ದಿನಾಂಕ: 02.05.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1) ಪರಿಶಿಷ್ಟ ಜಾತಿ (SC) ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: **INDENT 57571, 56849 & 57181**
2) ಪರಿಶಿಷ್ಟ ಪಂಗಡ (ST) ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: **INDENT 56697**
3) ಪ್ರವರ್ಗ – II (A) ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: **INDENT 57347**
4) ಇತರ ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: **INDENT 57286, 57538, 57472, 57565, 57537, 57145, 57511 & 56879**
5) ಇಂಡೆಂಟ್ ಸಂಖ್ಯೆ: 57286 & 57571 ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:08.05.2026 (ಸಂಜೆ: 4.00 ಗಂಟೆಗೆ) ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:11.05.2026 (ಅಪರಾಹ್ನ: 12.00 ಗಂಟೆಗೆ). ಇಂಡೆಂಟ್ ಸಂಖ್ಯೆ: 57286 ಕಾಮಗಾರಿಗೆ ಕೆಪಿಪಿ ಪೋರ್ಟಲ್ ಮೂಲಕ ಆರ್ಥಿಕ ಬಿಡ್ ತೆರೆಯುವ ದಿನಾಂಕ:12.05.2026 (ಅಪರಾಹ್ನ: 12.30 ಗಂಟೆಗೆ)
6) ಇಂಡೆಂಟ್ ಸಂಖ್ಯೆ: 57347, 57538, 57472, 56849, 57565, 56697, 57537, 57145, 57181, 57511 & 56879 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:16.05.2026 (ಸಂಜೆ: 4.00 ಗಂಟೆಗೆ) ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18.05.2026 (ಅಪರಾಹ್ನ: 12.00 ಗಂಟೆಗೆ)
7) ಇಂಡೆಂಟ್ ಸಂಖ್ಯೆ: 57347 & 57538 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಆರ್ಥಿಕ ಬಿಡ್ ತೆರೆಯುವ ದಿನಾಂಕ:19.05.2026 (ಅಪರಾಹ್ನ: 12.30 ಗಂಟೆಗೆ)
8) ಅನುದಾನ: 2026–27 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ ಹಾಗೂ ಪಾಲಿಕೆ ಉದ್ಯಮಿ ನಿಧಿ

ಸೂಚನೆ: ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ. ಹಾಗೂ ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ವಾ.ಸಾ.ಸಂ.ಇ./ಶಿ/ನಂ.13.05/
ಝೇಂಕಾರ್/2026–27
ಸಹಿ/–
ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬೆಳಗಾವಿ
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ ಜಿಲ್ಲೆ
ಮೌಲಾನಾ ಆಜಾದ್ ಅಲ್ಪಸಂಖ್ಯಾತರ ಭವನ ಕೆ.ಎಸ್.ಸಿ.ಎ ಕ್ರಿಕೇಟ್ ಕ್ರೀಡಾಂಗಣ ಎದುರುಗಡೆ ರಾಮತೀರ್ಥ ನಗರ, ಬೆಳಗಾವಿ–590016
Email: dombelagavi1@gmail.com Ph no. 0831-2950349
ಸಂ:ಅಸಂಕಇಬೆ/ಟೆಂಡರ್/ಆಹಾರ/ಸಿಆರ್–54/2025–26 ದಿನಾಂಕ:04.05.2026

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರಮೆಂಟ್ ಮೂಲಕ)

2026–27ನೇ ಸಾಲಿಗೆ ಬೆಳಗಾವಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವಸತಿ ಶಾಲೆ/ ವಸತಿ ಕಾಲೇಜು ಹಾಗೂ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಆಹಾರ ಸಾಮಗ್ರಿ ಮತ್ತು ಇತರೆ ಸಾಮಗ್ರಿಗಳ ಪೂರೈಕೆಗಾಗಿ ಏಜೆನ್ಸಿಗಳನ್ನು ಒಂದು ವರ್ಷದ ಮಟ್ಟಿಗೆ ಅಥವಾ ಮುಂದಿನ ಆದೇಶದ ವರೆಗೆ ಆಯ್ಕೆ ಮಾಡಲು ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತ ಅರ್ಜಿದಾರರು ದಿನಾಂಕ:05.05.2026 ರಿಂದ 03.06.2026 ರೊಳಗಾಗಿ https://kppp.karnataka.gov.in ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ.

ಕ್ರ.ಸಂ:1:ಜಿಲ್ಲೆ:ಬೆಳಗಾವಿ, ಟೆಂಡರ್‌ನ ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ): 1031.80, ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ):10.32, ಟೆಂಡರ್ ಸಲ್ಲಿಸುವ ದಿನಾಂಕ:05.05.2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.06.2026 ಸಂಜೆ: 5.30

ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂ::0831–2950349 ನ್ನು ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ.
DIPR/BGM/RO-NO-192/KSMCA/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–2/2026–27/1161–74 ದಿನಾಂಕ: 05.05.2026

ಕವಿಪ್ರನಿನಿಯು ಈ ಕೆಳಕಂಡ ವಿಚಾರಣಾ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಗಳ ವಿವರ
1.	**ಕೆಪಿಟಿಸಿಎಲ್/2026–27/ಎಸ್‌ಎಸ್/ವರ್ಕ್_ಇಂಡೆಂಟ್3686** **ಸಂಯೋಜಿತ ಪ್ಯಾಕೇಜ್:** **ವರ್ಕ್ ಎ:** ರಾಯಚೂರು ಜಿಲ್ಲೆ ಮಸ್ಕಿ ತಾಲ್ಲೂಕು, **ಪಮನಕಲ್ಲೂರಿನಲ್ಲಿ** 2x20 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ **0.05ಕಿ.ಮೀಗಳ** ಉದ್ದಕ್ಕೆ 110ಕೆ.ವಿ (LILO) ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು. **ವರ್ಕ್ ಬಿ:** ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು, **ಕ್ಯಾದಿಗೇರದಲ್ಲಿ** 2x20 ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ **7.989ಕಿ.ಮೀಗಳ** ಉದ್ದಕ್ಕೆ 110ಕೆ.ವಿ (LILO) ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು. **ವರ್ಕ್ ಸಿ:** ರಾಯಚೂರು ಜಿಲ್ಲೆ ಮತ್ತು ತಾಲ್ಲೂಕು, **ಕಾಡ್ಲೂರು ಗ್ರಾಮದಲ್ಲಿ** 2x20 ಎಂವಿಎ, 110/11ಕೆವಿ, 1x20 ಎಂವಿಎ, 110/33ಕೆವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ **18.156ಕಿ.ಮೀಗಳ** ಉದ್ದಕ್ಕೆ 110ಕೆ.ವಿ (DC) ಪ್ರಸರಣ ಮಾರ್ಗದೊಂದಿಗೆ ಸ್ಥಾಪಿಸುವುದು ಮತ್ತು 110/11ಕೆವಿ ಗೂಗಲ್ ಉಪ ಕೇಂದ್ರದಲ್ಲಿ ಟರ್ಮಿನಲ್ ಬೇಗಳನ್ನು ಸ್ಥಾಪಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "ಇ–ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ: **12.05.2026ರಂದು 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. **ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಬಿಡ್ ಸಲ್ಲಿಕೆಯ ಕೊನೆಯ ದಿನಾಂಕದ ವಿಸ್ತರಣೆ/ತಿದ್ದುಪಡಿ ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್(ವಿದ್ಯುತ್),
ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ,
9ನೇ ಮಹಡಿ, ಇಂಧನ ಭವನ, ಆನಂದರಾವ್ ವೃತ್ತ, ಬೆಂಗಳೂರು–560 009.

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು
ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–2/103/2026–27 ದಿನಾಂಕ: 05–05–2026

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ, ಪಾಲಿಕೆ ಅನುದಾನ ಹಾಗೂ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಅನುದಾನದಡಿ **KTPP** ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 4.30 ಗಂಟೆ ನಂತರ	ಬೆಳಿಗ್ಗೆ 11.30 ಗಂಟೆ	ಸಂಜೆ 4.00 ಗಂಟೆ	ಬೆಳಿಗ್ಗೆ 11.30 ಗಂಟೆ ನಂತರ
ಕ್ರ. ಸಂ.	ವಿವರ	ಸೇವಾ ಟೆಂಡರ್ / ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಕೆ.ಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್‌ನ ಪೂರ್ವಭಾವಿ ಸಭೆಯ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Kw-1, Kw-2 & Kw-3	14	318.07	07–05–2026	–	26–05–2026	29–05–2026
2	Kc-5	1	8.10	07–05–2026	–	26–05–2026	29–05–2026
3	Kw-4	2	680.00	06–05–2026	25–05–2026	06–06–2026	08–06–2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–
ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.
ಕುಲಸಚಿವರ ಕಛೇರಿ, ಜ್ಞಾನ–ಶಕ್ತಿ ಆವರಣ (ತೊರವಿ)
ದೂರವಾಣಿ: 08352–297068, ವೆಬ್‌ಸೈಟ್:www.kswu.ac.in
No:KSAWUV/EXAM/E-Tender/2026-27/323 Date: 30.04.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಪ್ರಕಟಣೆ

ಕರ್ನಾಟಕ ಸರ್ಕಾರದ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1992–2000ರ ಪ್ರಕಾರ ಅಧಿನಿಯಮ 2000ರ ನಿಯಮದಂತೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರಾಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ.
ಉಳಿದ ವಿವರಗಳನ್ನು ಗುತ್ತಿಗೆ ದಸ್ತಾವೇಜುಗಳಲ್ಲಿ ನೋಡಬಹುದು.

01. ಕಾಮಗಾರಿಯ ಹೆಸರು: Printing and Supply of Theory Answer Booklets to Karnataka State Akkamahadevi Womens University Vijayapura. ಟೆಂಡರ ಮೊತ್ತ ರೂ. 1,48,80,000/–. ಟೆಂಡರ್ ಸಂಖ್ಯೆ: KSWU/2025-26/IND 0024/Call-2. ಬಡ್ಡಿ ರಹಿತ ಇ.ಎಂ.ಡಿ ರೂ. 2,23,500/–. ಅವಧಿ: 365 ದಿನಗಳು.

ಹೆಚ್ಚಿನ ವಿವರ / ವಿಚಾರಣೆಗೆ ಇ–ಪ್ರಾಕ್ಯೂರ್‌ಮೆಂಟ್ http://kppp.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಏಜೆನ್ಸಿದಾರರ ಅರ್ಹತೆ / ಟೆಂಡರಿನ ನಿಯಮ/ ಟೆಂಡರ್ ಪ್ರೊಸೆಸ್ಸಿಂಗ್ ಶುಲ್ಕ, ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ http://kppp.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂಖ್ಯೆ:08352–297068, 8722116613 ರಿಂದ ಪಡೆಯಬಹುದು.

ಸಹಿ/– ಕುಲಸಚಿವರು,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
ವಾಸಾಸಂಇ/ವಿಜಯಪುರ/77/
ಕೆಎಸ್‌ಎಂಸಿಎ/2026–27

ಪ್ರಜಾವಾಣಿ ಬುಧವಾರ • ಮೇ 6, 2026
ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ

ಸುಭಾಷಿತ
ವಿದ್ಯೆ ಒಂದೊಂದು ಕಡೆ ಒಂದೊಂದು ಬಗೆಯ ಹಣ್ಣು ಕೊಡುತ್ತದೆ.
–ಪಂಜೆ ಮಂಗೇಶರಾವ್

ಸಂಪಾದಕೀಯ

ಶಾಲೆಗಳ ಬಲವರ್ಧನೆಗೆ ‘ಗ್ಯಾರಂಟಿ’ ಶೈಕ್ಷಣಿಕ ಸುಧಾರಣೆಯ ಆಕಾಂಕ್ಷೆ

ಸರ್ಕಾರಿ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳ ಬಲವರ್ಧನೆಗಾಗಿ ಎಂಟು ‘ಗ್ಯಾರಂಟಿ’ಗಳನ್ನು ಘೋಷಿಸಿರುವ ಕರ್ನಾಟಕ ಸರ್ಕಾರದ ನಡೆ, ಶಿಕ್ಷಣ ಕ್ಷೇತ್ರದ ಸಮಗ್ರ ಸುಧಾರಣೆಗೆ ಸಂಬಂಧಿಸಿದಂತೆ ಸ್ವಾಗತಾರ್ಹ. ಆಮೂಲಾಗ್ರ ಸುಧಾರಣೆಯ ಉದ್ದೇಶ ಹೊಂದಿರುವ ಈ ಮಹತ್ವಾಕಾಂಕ್ಷೆಯ ನಿರ್ಧಾರದ ಅನುಷ್ಠಾನಕ್ಕೆ ಕಾಲಮಿತಿಯನ್ನು ನಿಗದಿಪಡಿಸಿರುವುದು ಸರ್ಕಾರದ ಪ್ರಾಮಾಣಿಕ ಉದ್ದೇಶ ಮತ್ತು ಉತ್ತರದಾಯಿತ್ವದ ಸಂಕೇತದಂತಿದೆ. ಈ ಗ್ಯಾರಂಟಿಗಳು ಬಹುಕಾಲದಿಂದ ಬಾಕಿಯುಳಿದಿದ್ದ ಸಾಂಸ್ಥಿಕ ಕೊರತೆಗಳನ್ನು ನೀಗಿಸುವ ದೃಷ್ಟಿಯಿಂದ ಮಹತ್ವ ಪಡೆದಿವೆ. ಐದನೇ ತರಗತಿಯವರೆಗೆ ತರಗತಿಗೊಬ್ಬರು ಶಿಕ್ಷಕರು ಹಾಗೂ ನಂತರದ ಹಂತದಲ್ಲಿ ವಿಷಯವಾರು ಶಿಕ್ಷಕರನ್ನು ಲಭ್ಯವಾಗಿಸುವುದು ಸೇರಿದಂತೆ, ಶಿಕ್ಷಕರ ಕೊರತೆ ನೀಗಿಸುವ ಮೊದಲನೇ ಗ್ಯಾರಂಟಿಯು ಕಲಿಕೆಯಲ್ಲಿನ ಅತ್ಯಂತ ಮೂಲಭೂತವಾದ ಕೊರತೆಯನ್ನು ನೀಗಿಸುವಂತಹದ್ದು. ಮಕ್ಕಳು ಹಾಗೂ ಪೋಷಕರ ಇಚ್ಛೆಗೆ ಅನುಗುಣವಾಗಿ ಭಾಷಾ ಮಾಧ್ಯಮದ ಆಯ್ಕೆಯ ಅವಕಾಶ ಕಲ್ಪಿಸುವ ಹಾಗೂ ಕನ್ನಡದೊಂದಿಗೆ ಇಂಗ್ಲಿಷ್ ಅನ್ನೂ ಬೋಧಿಸಲು ಸಮರ್ಥರಾಗುವಂತೆ ಶಿಕ್ಷಕರನ್ನು ತರಬೇತುಗೊಳಿಸುವ ಎರಡನೇ ಗ್ಯಾರಂಟಿಯು ಆಶಯ ಮತ್ತು ವಾಸ್ತವ ಎರಡನ್ನೂ ಗುರ್ತಿಸುವ ಪ್ರಯತ್ನವಾಗಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (ಕೆಪಿಎಸ್) ಸುತ್ತಮುತ್ತಲಿನ ಊರುಗಳಿಂದ ಬರುವ ವಿದ್ಯಾರ್ಥಿಗಳಿಗೆ ವಾಹನ ಸೌಕರ್ಯ ಒದಗಿಸುವ ಮೂರನೇ ಗ್ಯಾರಂಟಿ, ಶಾಲೆಯಿಂದ ಹೊರಗುಳಿಯುವವರ ಸಂಖ್ಯೆಯನ್ನು ಕನಿಷ್ಠಗೊಳಿಸಲಿದೆ. ಒಂದನೇ ತರಗತಿಯಿಂದಲೇ ಕಂಪ್ಯೂಟರ್ ಕಲಿಕೆಗೆ ಅವಕಾಶ, ಕಂಪ್ಯೂಟರ್ ಶಿಕ್ಷಕರ ನೇಮಕಾತಿ ಮತ್ತು ಮೂರನೇ ತರಗತಿಯಿಂದ ಯಾಂತ್ರಿಕ ಬುದ್ಧಿಮತ್ತೆಯನ್ನು ಪರಿಚಯಿಸುವ ನಾಲ್ಕನೇ ಗ್ಯಾರಂಟಿಯು ಹೊಸಕಾಲಕ್ಕೆ ಮಕ್ಕಳನ್ನು ಸಜ್ಜುಗೊಳಿಸಲು ಅಗತ್ಯವಾದುದು. ಕಲೆ, ಸಂಗೀತ, ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಶಿಕ್ಷಕರನ್ನು ನೇಮಿಸುವ ಹಾಗೂ ಬೋಧನೇತರ ಕೆಲಸಗಳಿಗೆ ಪ್ರತ್ಯೇಕ ಸಿಬ್ಬಂದಿಯನ್ನು ಒದಗಿಸುವ ಐದು ಮತ್ತು ಆರನೇ ಗ್ಯಾರಂಟಿಗಳು ಬೋಧನೆ ಮತ್ತು ಆಡಳಿತಾತ್ಮಕ ಹೊಣೆಗಾರಿಕೆಯ ನಡುವೆ ಸಮತೋಲನ ಸಾಧಿಸುವ ಉದ್ದೇಶ ಹೊಂದಿವೆ. ಏಳನೇ ಗ್ಯಾರಂಟಿಯು ಪಾಠಗಳನ್ನು ಆಧರಿಸಿದ ಮೌಲ್ಯಮಾಪನ ಮತ್ತು ಎರಡು ತಿಂಗಳಿಗೊಮ್ಮೆ ಪೋಷಕ–ಶಿಕ್ಷಕರ ಸಭೆಯನ್ನು ಕಡ್ಡಾಯಗೊಳಿಸುವ ಮೂಲಕ ಶೈಕ್ಷಣಿಕ ವ್ಯವಸ್ಥೆಯನ್ನು ಹೆಚ್ಚು ಜವಾಬ್ದಾರಿಯುತಗೊಳಿಸುವ ಉದ್ದೇಶ ಹೊಂದಿದೆ. ಭವಿಷ್ಯದಲ್ಲಿ ಉದ್ಯೋಗ ದೊರೆಯುವುದಕ್ಕೆ ಪೂರಕವಾಗುವಂತೆ ಶಾಲಾ ಹಂತದಿಂದಲೇ ಮಕ್ಕಳಿಗೆ ಕೌಶಲಾಧಾರಿತ ತರಬೇತಿಯ ಭರವಸೆಯು ಸರ್ಕಾರದ ಕೊನೆಯ ಗ್ಯಾರಂಟಿಯಾಗಿದೆ. ಈ ಎಂಟು ಖಾತರಿಗಳ ಮೂಲಕ ರಾಜ್ಯದ ಸರ್ಕಾರಿ ಶಾಲೆಗಳನ್ನು ಮೂರು ವರ್ಷಗಳ ಅವಧಿಯಲ್ಲಿ ದೇಶದಲ್ಲೇ ಅತ್ಯುತ್ತಮ ಶಾಲೆಗಳನ್ನಾಗಿಸುವ ಗುರಿ ಸರ್ಕಾರದ್ದಾಗಿದೆ.

ಸರ್ಕಾರಿ ಶಾಲೆಗಳನ್ನು ಬಲಪಡಿಸಲು ರಾಜ್ಯ ಸರ್ಕಾರ ಎಂಟು ಗ್ಯಾರಂಟಿಗಳನ್ನು ಘೋಷಿಸಿದೆ. ಪ್ರಾಮಾಣಿಕ ಅನುಷ್ಠಾನ ಸಾಧ್ಯವಾದರೆ ಇಡೀ ದೇಶಕ್ಕೆ ಕರ್ನಾಟಕ ಮಾದರಿಯಾಗಲಿದೆ.

ಶೈಕ್ಷಣಿಕ ಸುಧಾರಣೆಗೆ ಸಂಬಂಧಿಸಿದಂತೆ ಈ ವರ್ಷದ ದಾಖಲೆ ಪ್ರಮಾಣದ ಫಲಿತಾಂಶಗಳು ಸರ್ಕಾರಕ್ಕೆ ಉತ್ಸಾಹ ತುಂಬಿದಂತಿವೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 94.10ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರೆ, ಪಿಯು ಫಲಿತಾಂಶ ಶೇ 86.48ರಷ್ಟಿದೆ. ವಿಶೇಷವಾಗಿ, ಸರ್ಕಾರಿ ಶಾಲಾ ಕಾಲೇಜು ವಿದ್ಯಾರ್ಥಿಗಳ ಸಾಧನೆ ಗಮನಾರ್ಹವಾಗಿದೆ. ಗ್ರಾಮೀಣ ಶಾಲೆಗಳು ನಗರ ಪ್ರದೇಶಗಳ ಶಾಲೆಗಳಿಗೆ ಸ್ಪರ್ಧೆಯೊಡ್ಡುವಂತೆ ಉತ್ತಮ ಪ್ರದರ್ಶನ ನೀಡಿವೆ. ಅತ್ಯಂತ ಹಿಂದುಳಿದ ವರ್ಗಗಳ ಮಕ್ಕಳಿಗೆ ಶಿಕ್ಷಣ ನೀಡುವ ವಸತಿ ಶಾಲೆಗಳು ಕೂಡ ಉತ್ತಮ ಸಾಧನೆ ಮಾಡಿವೆ. ಕಳೆದ ವರ್ಷ ಶೇ 57.11ರಷ್ಟು ಫಲಿತಾಂಶ ದಾಖಲಿಸಿದ್ದ ಸರ್ಕಾರಿ ಪದವಿಪೂರ್ವ ಕಾಲೇಜುಗಳು ಈ ಬಾರಿ ಶೇ 78.72ರಷ್ಟು ಗಮನಾರ್ಹ ಯಶಸ್ಸು ದಾಖಲಿಸಿವೆ. ನೂರಕ್ಕೆ ನೂರು ಫಲಿತಾಂಶ ಪಡೆದಿರುವ ಕಾಲೇಜುಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. ಬಹುಶಃ ಇದೇ ಮೊದಲ ಬಾರಿಗೆ ತನ್ನ ಶಾಲೆಗಳಿಗೆ ಸೇರುವಂತೆ ಮಕ್ಕಳನ್ನು ಆಹ್ವಾನಿಸಿ ಸರ್ಕಾರ ಪೂರ್ಣ ಪುಟದ ಮುಖಪುಟ ಜಾಹೀರಾತುಗಳನ್ನು ನೀಡಿದೆ. ಇಲ್ಲಿಯವರೆಗೆ ಇಂಥ ಜಾಹೀರಾತುಗಳು ಪ್ರತಿಷ್ಠಿತ ಖಾಸಗಿ ವಿದ್ಯಾಸಂಸ್ಥೆಗಳಿಗೆ ಸೀಮಿತವಾಗಿದ್ದವು.

ಶೈಕ್ಷಣಿಕ ಸುಧಾರಣೆಗೆ ಮುಂದಾಗಿರುವ ಸರ್ಕಾರದ ಹುಮ್ಮಸ್ಸು ಹಾಗೂ ಆತ್ಮವಿಶ್ವಾಸ ನಿರಂತರ ಅನುಷ್ಠಾನದ ಮೂಲಕ ಕಾರ್ಯರೂಪಕ್ಕೆ ಬರಬೇಕಾಗಿದೆ. ಈ ಯೋಜನೆಗೆ ಸಂಪನ್ಮೂಲಗಳ ಕೊರತೆ ಆಗದಂತೆ ನೋಡಿಕೊಳ್ಳಬೇಕಾಗಿದೆ. ಇದಕ್ಕಾಗಿ ರಾಜ್ಯ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮೊತ್ತವನ್ನು ಮೀಸಲಿಡಬೇಕಾಗಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಗಳು ಹಾಗೂ ಹಳೆಯ ವಿದ್ಯಾರ್ಥಿಗಳ ಮೂಲಕ ಶಾಲೆಗಳಲ್ಲಿನ ಮೂಲ ಸೌಕರ್ಯಗಳನ್ನು ಬಲಪಡಿಸುವ ಸಾಧ್ಯತೆಗಳನ್ನೂ ಅನ್ವೇಷಿಸಬೇಕಾಗಿದೆ. ಉಚಿತ ಪಠ್ಯಪುಸ್ತಕ, ಮಧ್ಯಾಹ್ನದ ಬಿಸಿಯೂಟ, ಸಮವಸ್ತ್ರದಂಥ ಜನಪ್ರಿಯ ಕಾರ್ಯಕ್ರಮಗಳಾಚೆಗೆ, ಶೈಕ್ಷಣಿಕ ವ್ಯವಸ್ಥೆಯನ್ನು ಬೇರುಮಟ್ಟದಲ್ಲಿ ಸುಧಾರಿಸಲು ಸರ್ಕಾರ ಮುಂದಾಗಿರುವುದು ಆಶಾದಾಯಕ ಸಂಗತಿ. ಮಹತ್ವಾಕಾಂಕ್ಷಿ ಗುರಿಗಳನ್ನು ಪ್ರಾಮಾಣಿಕವಾಗಿ, ಅಕ್ಷರಶಃ ಜಾರಿಗೊಳಿಸಿದರೆ, ರಾಜ್ಯವು ಅನುಕರಣೀಯ ಮಾದರಿಯೊಂದನ್ನು ದೇಶಕ್ಕೆ ನೀಡಿದಂತಾಗುತ್ತದೆ.

ಹಿಂದಿಗೆ ಇತಿಹಾಸವೇ ಭಾರವೇ?

ವಿಶ್ಲೇಷಣೆ
ಪುರುಷೋತ್ತಮ ಬಿಳಿಮಲೆ

ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ರಾಷ್ಟ್ರೀಯ ಒಕ್ಕೂಟಕ್ಕೆ ಶಕ್ತಿ ತುಂಬುವ ಭಾಷೆಯಾಗಿದ್ದ ಹಿಂದಿಯನ್ನು, ಸ್ವಾತಂತ್ರ್ಯಾನಂತರವೂ ಹಳೆಯ ರೂಪದಲ್ಲಿಯೇ ನೋಡಲಾಗದು. ಭಾಷಾ ಗುರುತುಗಳನ್ನು ಅಳಿಸಿ ಕಟ್ಟುವ ರಾಷ್ಟ್ರೀಯತೆ ಗಟ್ಟಿಯಾಗಿರಲು ಸಾಧ್ಯವಿಲ್ಲ.

2011ರ ಜನಗಣತಿಯ ಪ್ರಕಾರ ಹತ್ತು ಲಕ್ಷಕ್ಕಿಂತ ಹೆಚ್ಚು ಜನರು ಮಾತಾಡುವ 40 ಭಾಷೆಗಳು ಭಾರತದಲ್ಲಿವೆ. ಒಂದು ಲಕ್ಷಕ್ಕಿಂತ ಹೆಚ್ಚು ಜನರು ಮಾತಾಡುವ ಭಾಷೆಗಳ ಸಂಖ್ಯೆ 60 ಹಾಗೂ 10 ಸಾವಿರಕ್ಕಿಂತ ಹೆಚ್ಚು ಜನರು ಮಾತಾಡುವ ಭಾಷೆಗಳ ಸಂಖ್ಯೆ 122. ಭಾರತದಲ್ಲಿರುವ ಒಟ್ಟು ತಾಯ್ನುಡಿಗಳ ಸಂಖ್ಯೆ 19,569. ಇವುಗಳಲ್ಲಿ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿರುವ ಭಾಷೆಗಳ ಸಂಖ್ಯೆ 22. ಈಗ ಮನ್ನಣೆ ಪಡೆಯಲು ಹೋರಾಡುತ್ತಿರುವ ಸ್ವತಂತ್ರ ಭಾಷೆಗಳ ಸಂಖ್ಯೆ 99. ಈಚಿನ ಅನಧಿಕೃತ ಸುದ್ದಿಯ ಪ್ರಕಾರ, ಈ ಸಂಖ್ಯೆ 135ಕ್ಕೇರಿದೆ. ಆದರೆ, ದೇಶ ಮಾತಾಡುತ್ತಿರುವುದು ಕೇವಲ ಹಿಂದಿಯ ಬಗ್ಗೆ!

ಎಂಟನೇ ಪರಿಚ್ಛೇದಕ್ಕೆ ಸೇರಿರುವ ಭಾಷೆಗಳಲ್ಲಿ ಹಿಂದಿಯನ್ನು 52,83,47,193 ಜನರು ಮಾತಾಡುತ್ತಿದ್ದು (ಶೇ 43.63), ಅದು ಹೆಚ್ಚು ಜನರು ಮಾತಾಡುವ ಭಾಷೆಯಾಗಿದೆ. ಬಂಗಾಲಿ (ಶೇ 8.3), ಮರಾಠಿ (ಶೇ 6.86), ತೆಲುಗು (ಶೇ 6.7), ತಮಿಳು (ಶೇ 5.7), ಗುಜರಾತಿ (ಶೇ 4.58), ಉರ್ದು (ಶೇ 4.19) ಮತ್ತು ಕನ್ನಡ (ಶೇ 3.61) ಸಂಖ್ಯಾದೃಷ್ಟಿಯಿಂದ ಹಿಂದಿಗಿಂತ ಬಹಳ ಕೆಳಗಿವೆ. ಸಂಸ್ಕೃತವನ್ನು ಮಾತೃಭಾಷೆಯೆಂದು ದಾಖಲಿಸಿದವರ ಸಂಖ್ಯೆ 24,821. ಈಗ ನಡೆಯುತ್ತಿರುವ ಜನಗಣತಿಯ ಅಂಕಿ ಅಂಶಗಳು ಲಭಿಸಿದಾಗ ಮೇಲಿನ ಅಂಕಿ ಅಂಶಗಳಲ್ಲಿ ಸಾಕಷ್ಟು ಬದಲಾವಣೆಗಳಾಗಲಿವೆ. ಮುಖ್ಯವಾಗಿ ಸಂಸ್ಕೃತ ಮಾತಾಡುವವರ ಸಂಖ್ಯೆಯಲ್ಲಿ ಗಮನಾರ್ಹ ಏರಿಕೆ ಕಂಡರೆ, ಹಿಂದಿಯೇತರ ಭಾಷೆಗಳು ಅಲ್ಪ ಪ್ರಮಾಣದ ಏರಿಕೆಯನ್ನು ಕಾಣಲಿವೆ.

ಹಿಂದಿಯ ಜನಪ್ರಿಯತೆಗೆ ಅನೇಕ ಕಾರಣಗಳಿವೆ. ಅದನ್ನು ಗೃಹ ಇಲಾಖೆಯ ಅಡಿಯಲ್ಲಿ ತಂದು, ಉಳಿದ ಭಾಷೆಗಳನ್ನು ಮಾನವ ಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಇರಿಸಲಾಗಿದೆ. ಹಿಂದಿಗೆ ಸಂವಿಧಾನದ ಬಲವಾದ ಬೆಂಬಲವಿದ್ದು, 351ನೇ ವಿಧಿಯು ಭಾರತದ ಒಕ್ಕೂಟ ವ್ಯವಸ್ಥೆಯ ಅಭಿವ್ಯಕ್ತಿ ಮಾಧ್ಯಮವಾಗಿ ಹಿಂದಿಯನ್ನು ಉತ್ತೇಜಿಸಲು ಮತ್ತು ಅಭಿವೃದ್ಧಿಪಡಿಸಲು ಕೇಂದ್ರಕ್ಕೆ ನಿರ್ದೇಶನ ನೀಡುತ್ತದೆ. ಸಂವಿಧಾನದ ವಿಧಿ 343(1)ರ ಪ್ರಕಾರ, ಸಂಸತ್ತು ಕಾನೂನಿನ ಮೂಲಕ ಕೆಲವು ಉದ್ದೇಶಗಳಿಗೆ ಇಂಗ್ಲಿಷ್ ಜೊತೆಗೆ ಹಿಂದಿಯನ್ನು ಬಳಸಬಹುದು.

ಐತಿಹಾಸಿಕವಾಗಿ ಹಿಂದಿಯ ಬೆಳವಣಿಗೆ ಕುತೂಹಲಕರವಾಗಿದೆ. 19ನೇ ಶತಮಾನದ ಕೊನೆಯಲ್ಲಿ ಹಿಂದಿಯು ಭಾರತದ ಉತ್ತರ ಭಾಗದಲ್ಲಿ ಜನಪ್ರಿಯವಾಗಿದ್ದ ಉರ್ದು ಮತ್ತು ಇತರ ಭಾಷೆಗಳನ್ನು ಹಿಂದಿಕ್ಕಿ ರಾಷ್ಟ್ರೀಯ ಹೋರಾಟಕ್ಕೆ ಶಕ್ತಿ ತುಂಬುವ ಭಾಷೆಯಾಗಿ ಬೆಳೆಯಿತು. ಆ ಕಾಲದ ವಿದ್ಯಾವಂತರು ಇಂಗ್ಲಿಷ್ ಕಲಿತಿದ್ದರೂ, ಸ್ಥಳೀಯ ಸಾಂಸ್ಕೃತಿಕ ಗುರುತುಗಳನ್ನು ಮರಳಿ ಪಡೆಯುವ ಉದ್ದೇಶದಿಂದ ಹಿಂದಿಯನ್ನೇ ಬಳಸತೊಡಗಿದರು. ಇದರಿಂದಾಗಿ ಹಿಂದೂ ಪುನರುಜ್ಜೀವನವಾದಿ ಚಳವಳಿಗಳಲ್ಲಿಯೂ ಹಿಂದಿ ಸೇರಿಕೊಂಡಿತು.

1875ರಲ್ಲಿ ದಯಾನಂದ ಸರಸ್ವತಿಯವರು ಸ್ಥಾಪಿಸಿದ ಆರ್ಯ ಸಮಾಜವು, ಹಿಂದಿಯನ್ನು ವೈದಿಕ ಪುನರುಜ್ಜೀವನ ಮತ್ತು ಸಾಮಾಜಿಕ ಸುಧಾರಣೆಗಳ ಕೆಲಸಗಳೊಂದಿಗೆ ಜೋಡಿಸಿತು. ಶಿಕ್ಷಣ, ಧಾರ್ಮಿಕ ಪ್ರವಚನ ಮತ್ತು ಸಮುದಾಯ ಸಂಘಟನೆಗಳಲ್ಲಿ ಹಿಂದಿಯ ಬಳಕೆ ಹೆಚ್ಚಾಯಿತು. ಈ ಹಂತದಲ್ಲಿಯೇ ಆಧುನಿಕ ಹಿಂದಿ ಸಾಹಿತ್ಯದ ಪ್ರವರ್ತಕರಾದ ಭರತೇಂದು ಹರಿಶ್ಚಂದ್ರ (1850–85) ಅವರು ವಸಾಹತುಶಾಹಿ ಆಳ್ವಿಕೆಯನ್ನು ಟೀಕಿಸುವ ಮತ್ತು ದೇವನಾಗರಿ ಲಿಪಿಯಲ್ಲಿ ಭಾಷಾ ಶುದ್ಧತೆಯನ್ನು ಒತ್ತಿ ಹೇಳುವ ಕಾವ್ಯ, ನಾಟಕಗಳು ಮತ್ತು ಪ್ರಬಂಧಗಳನ್ನು ಬರೆದು ರಾಷ್ಟ್ರೀಯ ಜಾಗೃತಿಯನ್ನು ಮೂಡಿಸುತ್ತಾ ಹಿಂದಿಯನ್ನು ಮುನ್ನಡೆಸಿದರು. ಅದರ ಪರಿಣಾಮವಾಗಿ, ಆಗ ಶಿಕ್ಷಣ ಪದ್ಧತಿಯಲ್ಲಿ ಜನಪ್ರಿಯವಾಗಿದ್ದ ಪರ್ಷಿಯನ್ ಮತ್ತು ಉರ್ದು ಭಾಷೆಗಳು ಹಿಂದೆ ಸರಿದವು. ಈ ಬೆಳವಣಿಗೆಗಳು ಮೊಘಲ್ ಯುಗದ ಭಾಷಾ ಪರಂಪರೆಗಳು ಮತ್ತು ಬ್ರಿಟಿಷರ ಕಾಲದ ಇಂಗ್ಲಿಷ್, ಎರಡಕ್ಕೂ ಪ್ರತಿರೋಧದ ಸಂಕೇತವಾಗಿ ಹಿಂದಿಯನ್ನು ಬೆಳೆಸಿದವು. ಈ ಹಂತದಲ್ಲಿ ಹಿಂದಿಯನ್ನು ಒಂದು ಪ್ರಮಾಣೀಕೃತ ಭಾಷೆಯನ್ನಾಗಿ ರೂಪಿಸಲು ಸಂಸ್ಕೃತ ಪದಗಳನ್ನು ಹೇರಳವಾಗಿ ಆಮದು ಮಾಡಿಕೊಳ್ಳಲಾಯಿತು. ಅದೇ ಸಂದರ್ಭದಲ್ಲಿ ಭರತೇಂದು ಅವರು ‘ಹಿಂದಿ–ಹಿಂದೂ–ಹಿಂದೂಸ್ತಾನ್’ ಘೋಷಣೆಯನ್ನು ಚಾಲ್ತಿಗೆ ತಂದರು. 1900ರ ಹೊತ್ತಿಗೆ ಪ್ರಮುಖ ಹಿಂದಿ ಪತ್ರಿಕೆಗಳು ಬ್ರಿಟಿಷ್ ಆಳ್ವಿಕೆಯನ್ನು ಶೋಷಕ ಎಂದು ರೂಪಿಸುವ ಧಾರಾವಾಹಿಗಳು ಮತ್ತು ಲೇಖನಗಳನ್ನು ಬಹುವಾಗಿ ಪ್ರಕಟಿಸಿದವು. ಇವೆಲ್ಲವೂ ಇಂಗ್ಲಿಷ್ ಪ್ರವೇಶಿಸಲಾಗದ ಸ್ಥಳಗಳನ್ನು ಸರಾಗವಾಗಿ ಪ್ರವೇಶಿಸಿದವು. ಮಹಾತ್ಮ ಗಾಂಧೀಜಿ ತಮ್ಮ ಅಸಹಕಾರ ಚಳವಳಿಯ (1920–22) ಸಮಯದಲ್ಲಿ ತಮ್ಮ ಬರಹಗಳು ಮತ್ತು ಭಾಷಣಗಳಲ್ಲಿ ಹಿಂದಿಯನ್ನು ಬಳಸಿದರು. ಈ ಭಾಷಾ ಆಯ್ಕೆಯು ವೈವಿಧ್ಯಮಯ ಗುಂಪುಗಳ ನಡುವೆ ಸಮನ್ವಯವನ್ನು ಸಾಧಿಸಿತು. ‘ಕರೋ ಯಾ ಮರೋ’ (ಮಾಡು ಇಲ್ಲವೇ ಮಡಿ), ‘ಭಾರತ್ ಛೋಡೋ’ ಘೋಷಣೆಗಳು ದೇಶದಾದ್ಯಂತ ಪ್ರತಿಧ್ವನಿಸಿದವು. ಹೀಗೆ ಪ್ರಾದೇಶಿಕ ಉಪಭಾಷೆಯಾಗಿದ್ದ ಭಾಷೆಯೊಂದು ರಾಷ್ಟ್ರೀಯ ಭಾಷೆಯಾಗುವತ್ತ ಹೆಜ್ಜೆ ಇಟ್ಟಿತು.

ಸ್ವಾತಂತ್ರ್ಯಾನಂತರವೂ ಹಿಂದಿ ಭಾಷಿಕರು ಹಳೆಯ ಹಾದಿಯಲ್ಲಿ ಹೆಜ್ಜೆ ಇಟ್ಟರು. ಸಂವಿಧಾನದ ಆಶಯಗಳನ್ನು ಅರ್ಥಮಾಡಿಕೊಳ್ಳಲೇ ಇಲ್ಲ. ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಹಿಂದಿಯನ್ನು ಏಕೀಕೃತ ಭಾಷೆಯಾಗಿ ಪ್ರಚಾರ ಮಾಡುವುದು ಐತಿಹಾಸಿಕ ಅಗತ್ಯ ಆಗಿರಬಹುದು. ಆದರೆ, ಒಕ್ಕೂಟ ವ್ಯವಸ್ಥೆಯಲ್ಲಿ ಅದುವೇ ಧೋರಣೆ ಮುಂದುವರಿದಾಗ ಹಿಂದಿಯೇತರ ಭಾಷಾ ಗುಂಪುಗಳು ಸಹಜವಾಗಿ ಅಸಮಾಧಾನಗೊಂಡವು. ಹಿಂದಿಯವರಿಗೆ ಹೇಗೆ ಹಿಂದಿ ಭಾಷೆಯು ಅಸ್ಮಿತೆಯ ಪ್ರಶ್ನೆಯೋ, ಕನ್ನಡಿಗರಿಗೆ ಕನ್ನಡ, ತಮಿಳರಿಗೆ ತಮಿಳು, ಮಲಯಾಳಿಗರಿಗೆ ಮಲಯಾಳ ಎಂಬಂಥ ಸರಳ ಸತ್ಯವನ್ನು ಹಿಂದಿ ಭಾಷಿಕರು ಮರೆತುಬಿಟ್ಟರು. ಹಿಂದಿಯನ್ನು ಭಾರತದ ರಾಷ್ಟ್ರೀಯ ಭಾಷೆ ಎಂದು ಘೋಷಿಸಲಾಗಿಲ್ಲವಾದರೂ, ಅಂಥ ಸುಳ್ಳುಗಳನ್ನು ಹಿಂದಿಪ್ರೇಮಿಗಳು ಹರಿಯಬಿಟ್ಟರು. 2014ರಿಂದ ಈಚೆಗೆ ಇದು ಇನ್ನೂ ಹೆಚ್ಚಾಯಿತು. ಇಂಥ ಪ್ರಚಾರಗಳ ಪರಿಣಾಮವೇ ಹಿಂದಿ ಭಾಷಿಕರ ಸಂಖ್ಯೆ ತೀವ್ರವಾಗಿ ಏರುತ್ತಿರುವುದು.

ಭಾಷೆಯನ್ನು ಹೇರುವ ಅಪಾಯಗಳನ್ನು ನಾವಿನ್ನೂ ಗಂಭೀರವಾಗಿ ಅರ್ಥಮಾಡಿಕೊಂಡಿಲ್ಲ. ಅನ್ಯಭಾಷಾ ಮಾಧ್ಯಮಗಳಲ್ಲಿನ ಶಿಕ್ಷಣದಿಂದ ಮಕ್ಕಳ ಕಲಿಕಾ ಸಾಮರ್ಥ್ಯ ಕುಂಠಿತವಾಗುತ್ತದೆ ಎಂಬುದನ್ನು ಜಗತ್ತಿನ ಎಲ್ಲ ಶಿಕ್ಷಣ ತಜ್ಞರೂ ಒಪ್ಪಿಕೊಂಡಿದ್ದಾರೆ. ಅದು ಮಕ್ಕಳ ಆತ್ಮವಿಶ್ವಾಸದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದು ಇತರ ಭಾಷೆಗಳು ಮತ್ತು ಉಪಭಾಷೆಗಳನ್ನು ಅಪಾಯಕ್ಕೆ ತಳ್ಳುತ್ತವೆ ಮತ್ತು ಭಾಷಾ ವೈವಿಧ್ಯವನ್ನು ಕಡಿಮೆ ಮಾಡುತ್ತದೆ. ಜನರ ಭಾಷಾಗುರುತುಗಳನ್ನು ಅಳಿಸಿ ಕಟ್ಟುವ ರಾಷ್ಟ್ರೀಯತೆಯು ಟೊಳ್ಳಾಗಿರುತ್ತದೆ.

10ನೇ ತರಗತಿಯಲ್ಲಿ ಮೂರನೇ ಭಾಷೆಯಾಗಿದ್ದ ಹಿಂದಿಯನ್ನು ಗ್ರೇಡ್‌ಗೆ ಬದಲಿಸಿದ ಶಿಕ್ಷಣ ಇಲಾಖೆಯ ನಿರ್ಧಾರದಿಂದ ದೇಶದ ಕಣ್ಣು ಕರ್ನಾಟಕದತ್ತ ಹೊರಳಿದೆ. ಕರ್ನಾಟಕದಲ್ಲಿ ಕನ್ನಡಕ್ಕೆ ಕುತ್ತು ಬಂದಾಗ ಮೌನವಾಗಿದ್ದವರು ಹಿಂದಿಯ ಪರವಾಗಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಅಂತಹವರು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕೆಂದು ವಿನಂತಿ.

1. 1968ರಿಂದ ಕರ್ನಾಟಕ ತ್ರಿಭಾಷಾ ಸೂತ್ರವನ್ನು ಅಂಗೀಕರಿಸಿದ್ದರಿಂದ ರಾಜ್ಯಕ್ಕೆ ಏನು ಲಾಭವಾಗಿದೆ? 1968ರಿಂದ ದ್ವಿಭಾಷಾ ಸೂತ್ರವನ್ನು ಅಂಗೀಕರಿಸಿದ್ದರಿಂದ ತಮಿಳುನಾಡಿಗೆ ಏನು ನಷ್ಟವಾಗಿದೆ? ಅವರಿಗೆ ಏನಾದರೂ ಲಾಭವಾಗಿದ್ದರೆ, ನಮಗೆ ನಷ್ಟವಾಗಿರಬೇಕಲ್ಲ! ಈ ಕುರಿತು ವಿಶ್ಲೇಷಣೆ ಬೇಕು.
2. ಹಿಂದಿ ಕಲಿತದ್ದರಿಂದ ಎಷ್ಟು ಕನ್ನಡಿಗರಿಗೆ ಉದ್ಯೋಗ ದೊರಕಿದೆ? ಅಂಕಿ–ಅಂಶ ಬೇಕು.
3. 1968ರಿಂದಲೇ ಹಿಂದಿ ಓದುತ್ತಾ ಬಂದಿರುವ ಕನ್ನಡಿಗರು ಬ್ಯಾಂಕ್, ಅಂಚೆ ಕಚೇರಿ, ಯುಜಿಸಿ, ಎಚ್‌ಎಎಲ್, ಪ್ರಸಾರ ಭಾರತಿ ಮೊದಲಾದೆಡೆಗಳಲ್ಲಿ ಯಾಕಿಲ್ಲ? ಹಿಂದಿ ಪ್ರದೇಶಗಳಲ್ಲಿ ಅವರ ಸಂಖ್ಯೆ ಇಲ್ಲವೆಂಬಷ್ಟು ಕಡಿಮೆ ಯಾಕೆ?
4. 2011ರ ಜನಗಣತಿ ಪ್ರಕಾರ ಹಿಂದಿ ಮಾತಾಡುವ ಮುಖ್ಯ ರಾಜ್ಯಗಳಲ್ಲಿರುವ ಕನ್ನಡಿಗರ ಸಂಖ್ಯೆ 25 ಸಾವಿರ ಮೀರುವುದಿಲ್ಲ (ದೆಹಲಿಯಲ್ಲಿ 11,000, ಉತ್ತರ ಪ್ರದೇಶ 6,000, ಪಂಜಾಬ್ 3,900, ಹರಿಯಾಣ 3,000 ಇತ್ಯಾದಿ). ಉದ್ಯೋಗ ಕಾರಣವಾಗಿ ಅವರೆಲ್ಲ ಅಲ್ಲಿದ್ದಾರೆ, ಹಿಂದಿ ಕಲಿತಿದ್ದಾರೆ. 25,000 ಜನರಿಗಾಗಿ ಕರ್ನಾಟಕದ ಏಳೂವರೆ ಲಕ್ಷ ವಿದ್ಯಾರ್ಥಿಗಳು ಹಿಂದಿ ಕಲಿತು, ಅದರಲ್ಲಿ ಸುಮಾರು 1 ಲಕ್ಷ ಮಕ್ಕಳು ಫೇಲಾಗಬೇಕೆ?
5. ಆರಂಭಿಕ ಹಂತದಲ್ಲಿ ಹಿಂದಿ ಮೂರನೇ ಭಾಷೆಯಾಗಿದ್ದು, ಪಾಸಾಗುವುದು ಕಡ್ಡಾಯವಿರಲಿಲ್ಲ. ಆಮೇಲೆ ಕಡ್ಡಾಯ ಮಾಡಲಾಯಿತು. ಹಿಂದಿಯನ್ನು ಸರಾಸರಿ ಅಂಕಗಳಿಗೆ ಸೇರಿಸಲಾಯಿತು. ಇದರಿಂದ ಲಕ್ಷಾಂತರ ಮಕ್ಕಳ ಎಸ್‌ಎಸ್‌ಎಲ್‌ಸಿ ಅಂಕಗಳ ಸರಾಸರಿಯಲ್ಲಿ ಕುಸಿತ ಉಂಟಾಯಿತು. ಹಿಂದಿ ಪ್ರೇಮಿಗಳು ಆಗ ಯಾಕೆ ಮಕ್ಕಳ ರಕ್ಷಣೆಗೆ ಬರಲಿಲ್ಲ?
6. ದೆಹಲಿ, ಗುರುಗ್ರಾಮ, ನೋಯಿಡಾ ಮತ್ತು ಫರಿದಾಬಾದಲ್ಲಿರುವ ಖಾಸಗಿ ಕಂಪನಿಗಳಲ್ಲಿ ಸುಮಾರು 10 ಲಕ್ಷ ಉದ್ಯೋಗಿಗಳಿದ್ದಾರೆ. ಅದರಲ್ಲಿ ಸುಮಾರು ನಾಲ್ಕೂವರೆ ಲಕ್ಷ ತಮಿಳರಿದ್ದಾರೆ. ಅವರು ಶಾಲೆಗಳಲ್ಲಿ ಹಿಂದಿ ಕಲಿತಿಲ್ಲ. ಹಿಂದಿ ಕಲಿತ ಕನ್ನಡಿಗರ ಸಂಖ್ಯೆ ಕೇವಲ ಒಂದು ಸಾವಿರದಷ್ಟು. ಹಾಗಾದರೆ ನಾವೆಲ್ಲಿ ತಪ್ಪಿದ್ದೇವೆ?
7. ಕಲಿತು ಮರೆಯುವುದಕ್ಕೆ ಯಾವುದೇ ಭಾಷೆಯನ್ನು ಅಭ್ಯಾಸ ಮಾಡುವ ಅಗತ್ಯ ಇಲ್ಲ. ಅಗತ್ಯ ಇದ್ದವರು ಯಾವ ಭಾಷೆಯನ್ನಾದರೂ ಸ್ವತಂತ್ರವಾಗಿ ಕಲಿಯಲು ಇವತ್ತು ಅವಕಾಶ ಇದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ದೇಶಗಳ ಗಡಿಗಳು ದುರ್ಬಲವಾಗಿವೆ. ಯುವಕರು ಜಗತ್ತನ್ನು ಸುಲಭವಾಗಿ ಸುತ್ತುತ್ತಿದ್ದಾರೆ. ಸದ್ಯ ನಮ್ಮ ಮಕ್ಕಳು ಕನ್ನಡ ಮತ್ತು ಇಂಗ್ಲಿಷ್ ಚೆನ್ನಾಗಿ ಕಲಿಯಲಿ. ಅವರ ಕಾಲುಗಳು ನೆಲದಲ್ಲಿರಲಿ. ಬಾಹುಗಳು ಆಗಸದೆತ್ತರಕೆ ಚಾಚಿಕೊಳ್ಳಲಿ.

ವಾಚಕರ ವಾಣಿ

ಬದಲಾವಣೆಯೇ ಪ್ರಜಾತಂತ್ರದ ಉಸಿರು

ಪಂಚ ರಾಜ್ಯಗಳ ಚುನಾವಣೆಯು ಪ್ರಜಾಪ್ರಭುತ್ವದ ಶಕ್ತಿಯನ್ನು ಅಭಿವ್ಯಕ್ತಿಸಿದೆ. ಮತದಾರರು ಆಡಳಿತ ಪಕ್ಷದ ವೈಖರಿಗೆ ರೋಸಿ ಹೋಗಿದ್ದರೆನಿಸುತ್ತದೆ. ಹೊಸ ನಾಯಕತ್ವದ ನಿರೀಕ್ಷೆಯಲ್ಲಿ ಪ್ರಜೆಗಳು ಮತ ಚಲಾಯಿಸಿದ್ದಾರೆ. ಮತದಾನ ಪ್ರಜಾಪ್ರಭುತ್ವದ ಪ್ರಬಲ ಅಸ್ತ್ರವೆಂದು ಮತ್ತೊಮ್ಮೆ ಸಾಬೀತಾಗಿದೆ. ಜನರು ಪೂರ್ಣ ಪ್ರಮಾಣದಲ್ಲಿ ಮತದಾನ ಮಾಡಿದರೆ ಬೇರುಬಿಟ್ಟಿರುವ ರಾಜಕೀಯ ಪಕ್ಷಗಳಿಗೆ ನಡುಕ ಉಂಟಾದೀತು. ಹೊಸ ಪಕ್ಷಗಳ ಮೇಲೆ ಭರವಸೆ ಇಟ್ಟಿರುವ ಜನರ ನಂಬಿಕೆ ಉಳಿಸಿಕೊಂಡರಷ್ಟೇ ಗೆದ್ದವರಿಗೆ ಉಳಿಗಾಲ. ಚುನಾವಣೆ ಪ್ರತಿ ಸಲ ಏಕಮುಖವಾಗದೆ ವಿವಿಧ ಆಯಾಮಗಳಿಂದ ಹೊಸತನ ಹುಡುಕಿಕೊಳ್ಳಬೇಕೆಂಬುದಕ್ಕೆ ಈ ಚುನಾವಣೆ ಸಾಕ್ಷಿಯಾಗಿದೆ. ತಮಿಳುನಾಡಿನಲ್ಲಿ ಪ್ರಾದೇಶಿಕ ಪಕ್ಷವು ಗೆಲುವು ಸಾಧಿಸುವಂತೆ ಕರ್ನಾಟಕಕ್ಕೂ ಸಮರ್ಥ ಪ್ರಾದೇಶಿಕ ಪಕ್ಷದ ಕೊರತೆ ಇದೆ. ಕನ್ನಡಿಗರ ಪ್ರೇಮ ಸಾಹಿತ್ಯ, ಸಂಸ್ಕೃತಿಗೆ ಸೀಮಿತವಾಗದೆ ರಾಜ್ಯದಲ್ಲಿ ಹೊಸ ಪ್ರಾದೇಶಿಕ ಪಕ್ಷಕ್ಕೂ ಜನಮನ್ನಣೆ ಕೊಡುವಂತಾಗಲಿ. ಬದಲಾವಣೆ ಜನತಂತ್ರದ ಉಸಿರಾಗಲಿ.

ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ

ಅಂಗಾಂಗ ದಾನ: ಅಳಿದ ಮೇಲೆ ಉಳಿವು

‘ಗೋಲ್ಡನ್ ಗಳಿಗೆ’ಯ ಆಜೂಬಾಜು ಲೇಖನವು (ಲೇ: ನಾಗೇಶ ಹೆಗಡೆ, ಪ್ರ.ವಾ., ಮೇ 5) ಅಂಗಾಂಗ ದಾನದ ಮಹತ್ವವನ್ನು ತೆರೆದಿಟ್ಟಿದೆ. ನಮ್ಮ ಅಂಗಾಂಗಗಳಿಂದ ಹಲವು ಜೀವಗಳು ಬದುಕಬಲ್ಲವು. ದೇಹ ಪಂಚಭೂತಗಳಲ್ಲಿ ಲೀನವಾಗುವ ಬದಲು, ಮತ್ತೊಬ್ಬರ ಕಣ್ಣಲ್ಲಿ ಬೆಳಕಾಗಿ, ಹೃದಯದಲ್ಲಿ ಮಿಡಿತವಾಗಿ ಉಳಿಯುವುದು ನಿಜವಾದ ಪುನರ್ಜನ್ಮ. ದಾನದಿಂದ ಹಲವರಿಗೆ ಜೀವನ ನೀಡಲು ಸಾಧ್ಯವಿದ್ದು, ಸಮಾಜದಲ್ಲಿ ಈ ಕುರಿತು ಅರಿವು ಮೂಡಿ ತಪ್ಪುಕಲ್ಪನೆಗಳು ದೂರವಾಗಬೇಕು. ಹೆಚ್ಚಿನ ಜಾಗೃತಿ ಮೂಲಕ ಹೆಚ್ಚು ಜನರನ್ನು ದಾನಿಗಳಾಗಿ ನೋಂದಾವಣೆ ಮಾಡಲು ಪ್ರೇರೇಪಿಸಬೇಕು.

ರಮೇಶ್ ಪಾಟೀಲ್, ರಾಯಚೂರು

‘ಕೈ’ ನಿಲುವು ಮತ್ತು ಗೆದ್ದೆತ್ತಿನ ಬಾಲ

ತಮಿಳುನಾಡಿನ ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಹೊಂದಾಣಿಕೆ ಮಾಡಿಕೊಂಡಿದ್ದವು. ಕರ್ನಾಟಕಕ್ಕೆ ಅನುಕೂಲವಾಗುವ ಮೇಕೆದಾಟು ಯೋಜನೆಗೆ ವಿರುದ್ಧವಾಗಿದ್ದ ಡಿಎಂಕೆ ಪರ ಕಾಂಗ್ರೆಸ್ ಪ್ರಚಾರ ಮಾಡಿದ್ದು ಕನ್ನಡಿಗರ ಪಾಲಿಗೆ ಅಹಿತಕರ. ಈಗ ತಮಿಳುನಾಡಿನಲ್ಲಿ ನಟ ವಿಜಯ್ ಸಾರಥ್ಯದ ಟಿವಿಕೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈ ಪಕ್ಷಕ್ಕೆ ಬೆಂಬಲ ನೀಡುವುದಾಗಿ ಕಾಂಗ್ರೆಸ್ ಹೇಳಿದೆ. ಇದು ಗೆದ್ದೆತ್ತಿನ ಬಾಲ ಹಿಡಿದಂತೆ ಅಲ್ಲವೆ? ಕಾಂಗ್ರೆಸ್ ಅಲ್ಲದೆ ಬಹುತೇಕ ಪಕ್ಷಗಳು ಇದೇ ರೀತಿ ನಡೆದುಕೊಳ್ಳುತ್ತವೆ. ಯಾವುದೇ ಪಕ್ಷವಾದರೂ ತನ್ನ ಸಿದ್ಧಾಂತ ಮೀರಿ ನಡೆಯದಿರಲಿ; ಬೆಂಬಲ ನೀಡುವುದಾದರೆ ಚುನಾವಣೆಗೂ ಮೊದಲು ಘೋಷಿಸಿ ಅದರಂತೆ ನಡೆಯಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಆಡಳಿತಾಧಿಕಾರಿಗಳಿಂದ ಸಿಗದ ಸ್ಪಂದನ

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಸದಸ್ಯರ ಅಧಿಕಾರಾವಧಿ ಮುಕ್ತಾಯವಾಗಿದೆ. ಹಾಗಾಗಿ, ಜಿಲ್ಲಾಡಳಿತದಿಂದ ತಾತ್ಕಾಲಿಕವಾಗಿ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ. ಆದರೆ, ಈ ಅಧಿಕಾರಿಗಳು ಗ್ರಾ.ಪಂ. ಕಚೇರಿ ಕಡೆಗೆ ತಲೆಹಾಕುತ್ತಿಲ್ಲ. ಚುನಾಯಿತ ಪ್ರತಿನಿಧಿಗಳಿಲ್ಲದ ಈ ಮಧ್ಯಂತರ ಅವಧಿಯಲ್ಲಿ ಆಡಳಿತಾಧಿಕಾರಿಗಳ ಪಾತ್ರ ಹಿರಿದು. ಗ್ರಾಮದ ಜನರ ನಿತ್ಯದ ಹಲವಾರು ಸಮಸ್ಯೆಗಳಿಗೆ ಆಯಾ ಸಂದರ್ಭದಲ್ಲೇ ಪರಿಹಾರ ಒದಗಿಸುವುದು ಇವರ ಹೊಣೆಯಾಗಿದೆ. ಸದ್ಯ ಕುಡಿಯುವ ನೀರಿನ ಸಮಸ್ಯೆ ಹೆಚ್ಚಿದೆ. ಕೆಲವು ಗ್ರಾಮಗಳಲ್ಲಿ ಅನೈರ್ಮಲ್ಯೀಕರಣದಿಂದ ಸಾಂಕ್ರಾಮಿಕ ರೋಗಗಳ ಭೀತಿ ಆವರಿಸಿದೆ. ಆದರೆ, ಈ ಸಮಸ್ಯೆ ಕೇಳಿಸಿಕೊಳ್ಳುವವರೇ ಇಲ್ಲ. ಆಡಳಿತಾಧಿಕಾರಿಗಳು ನಿಯಮಿತವಾಗಿ ಗ್ರಾ.ಪಂ.ಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳಿಗೆ ಸ್ಪಂದಿಸುವಂತಿರಬೇಕು. ಹಾಗಾಗಿ ಜಿಲ್ಲಾಡಳಿತವು ತಕ್ಷಣ ಎಚ್ಚೆತ್ತುಕೊಂಡು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕಿದೆ.

ನಾಗಭೂಷಣ ಜೆ.ಟಿ., ಚಳ್ಳಕೆರೆ

ಜಾತೀಯತೆ ಸಮಾಜದ ದೊಡ್ಡ ಪಿಡುಗು

ಮಠಾಧೀಶರಾಗಿದ್ದುಕೊಂಡು ತಾವೂ ಜಾತೀಯತೆಯ ಸೋಂಕನ್ನು ಅನುಭವಿಸಿರುವುದಾಗಿ ಚಿತ್ರದುರ್ಗದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಅವರು ಹೇಳಿರುವುದು ವರದಿಯಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಏಳೂವರೆ ದಶಕವಾದರೂ ಇನ್ನೂ ಜಾತಿಯ ಸೋಂಕು ಜೀವಂತವಾಗಿದೆ. ಇದು ಕಾನೂನುಗಳು ಹಲ್ಲಿಲ್ಲದ ಹಾವಿನಂತೆ ಆಗಿರುವುದಕ್ಕೆ ಸಾಕ್ಷಿ. ತಮ್ಮದು ಜಾತ್ಯತೀತ ರಾಷ್ಟ್ರವೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಭಾರತೀಯರು, ಮುಖ್ಯವಾಗಿ ಪ್ರಬಲ ಸಮುದಾಯಗಳು ದುರ್ಬಲ ವರ್ಗದವರನ್ನು ಕೀಳಾಗಿ ನೋಡದೆ ಪ್ರೀತಿ, ವಿಶ್ವಾಸದಿಂದ ಕಾಣಬೇಕಿದೆ. ಜಾತೀಯತೆ ತೊಲಗದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ವಿಶಾಲ ದೃಷ್ಟಿಯಿಂದ ಸಮಾಜವನ್ನು ಒಂದುಗೂಡಿಸುವ ಪ್ರಯತ್ನ ಪ್ರಬಲ ಸಮುದಾಯಗಳಿಂದ ತುರ್ತಾಗಿ ಆಗಬೇಕಿದೆ.

ಡಿ. ಪ್ರಸನ್ನಕುಮಾರ್, ಬೆಂಗಳೂರು

ದ್ರಾವಿಡ ನೆಲದ ವರ್ಣರಂಜಿತ ರಾಜಕಾರಣ

ರಾಷ್ಟ್ರದ ರಾಜಕಾರಣದಲ್ಲಿ ತಮಿಳುನಾಡಿನ ರಾಜಕೀಯ ಇತಿಹಾಸ ವಿಶಿಷ್ಟ ಮತ್ತು ವಿಭಿನ್ನತೆಗೆ ಹೆಸರುವಾಸಿ. ಆಡಳಿತ ಪಕ್ಷವನ್ನು ಅಧಿಕಾರದಿಂದ ದೂರ ಇಡುವುದು ಮತ್ತು ರಾಜಕೀಯದಲ್ಲಿ ಎಂದಿಗೂ ಪಳಗದ ವ್ಯಕ್ತಿಯ ಕೈಗೆ ಅಧಿಕಾರ ನೀಡುವುದು ಸಾಮಾನ್ಯ ಸಂಗತಿಯಲ್ಲ. ತಮಿಳುನಾಡಿನ ಮತದಾರರು ಯಾವುದೇ ಆಸೆ, ಆಮಿಷಕ್ಕೆ ಬಲಿಯಾಗದೆ ಜಾತಿಯನ್ನು ಮೀರಿ ತಮ್ಮ ಜವಾಬ್ದಾರಿ ಅರಿತು ಟಿವಿಕೆ ಪಕ್ಷಕ್ಕೆ ಆಶೀರ್ವಾದ ಮಾಡಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಸಂದ ಗೆಲುವು. ಜೋಸೆಫ್ ವಿಜಯ್ ಅವರ ಈ ಸಾಧನೆ ಅಭೂತಪೂರ್ವವಾದುದು.

ಸೋಮನಾಥ ಎಚ್. ಜಂಪಾ, ಯಾದಗಿರಿ

ಚಾಟಿ

ಚೇತೋಹಾರಿ ಬೆಳವಣಿಗೆ

ಸ್ಥಾಪಿತ ಬಲಾಢ್ಯರ ನಡುವೆ ಹೊಸಬರು ರಾಜಕೀಯ ನೆಲೆ ಕಂಡುಕೊಳ್ಳುವುದು ಅಸಂಭವ ಎಂಬ ಅಭಿಪ್ರಾಯ ಜನಜನಿತ ಆಗಿರುವ ಹೊತ್ತಲ್ಲಿ ವಿಜಯ್ ಅವರ ಪಕ್ಷದ ಅದ್ಭುತ ಗೆಲುವು ಚೇತೋಹಾರಿ ಬೆಳವಣಿಗೆ. ನಮ್ಮಲ್ಲೂ ಹಾಗೇನಾದರೂ ಸಾಧ್ಯವೇ ಎಂದು ಆಸೆ ಕಣ್ಣುಗಳಿಂದ ಇತರ ರಾಜ್ಯಗಳವರು ನೋಡುವಂತೆ ಮಾಡಿದೆ.

ಕವಿರಾಜ್, ಚಿತ್ರಸಾಹಿತಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಬಿಜೆಪಿಯವರಿಗೆ ಪ್ರಜಾಪ್ರಭುತ್ವ, ಸಂವಿಧಾನದ ಮೇಲೆ ನಂಬಿಕೆ ಇಲ್ಲ. ನಿಷ್ಪಕ್ಷಪಾತವಾದ ಚುನಾವಣೆಯಲ್ಲೂ ನಂಬಿಕೆ ಇಲ್ಲ. ಕ್ರಿಮಿನಲ್ ಸಂಚು ಮಾಡಿ ವೋಟ್ ಚೋರಿಯಂತಹ ಅಪರಾಧ ಎಸಗಲು ಅವರು ಹಿಂಜರಿಯುವುದಿಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 6-5-2001

● ಮಹಾರಾಷ್ಟ್ರಕ್ಕೆ ಮತ್ತೆ ಮೊರೆ

ಬೆಂಗಳೂರು, ಮೇ 5– ವಿಜಾಪುರ, ಬಾಗಲಕೋಟೆ, ಕಲ್ಬುರ್ಗಿ ಜಿಲ್ಲೆಯ ಜನ ಮತ್ತು ಜಾನುವಾರುಗಳ ಕುಡಿಯುವ ನೀರಿನ ಅಗತ್ಯ ಪೂರೈಸಲು ಭೀಮಾ ನದಿಯ ಉಜನಿ ಬ್ಯಾರೇಜ್ ಮತ್ತು ಕೃಷ್ಣಾ ನದಿಯ ಕೊಯ್ನಾ ಅಣೆಕಟ್ಟೆಯಿಂದ ತಲಾ ಎರಡು ಟಿಎಂಸಿ ಅಡಿ ನೀರು ಬಿಡುವಂತೆ ಕರ್ನಾಟಕವು ಮಹಾರಾಷ್ಟ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ.

ಕೇರಳಕ್ಕೆ ತೆರಳುವ ಮಾರ್ಗದಲ್ಲಿ ಬೆಂಗಳೂರಿನಲ್ಲಿ ಕೆಲಕಾಲ ತಂಗಿದ್ದ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸರಾವ್ ದೇಶಮುಖ್ ಅವರಿಗೆ ತಾವು ಈ ಮನವಿ ಮಾಡಿಕೊಂಡಿದ್ದು, ಅವರು ಸಕಾರಾತ್ಮಕ ಪ್ರತಿಕ್ರಿಯೆ ತೋರಿದ್ದಾರೆ ಎಂದು ಜಲಸಂಪನ್ಮೂಲ ಸಚಿವ ಎಚ್.ಕೆ. ಪಾಟೀಲ್ ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

● ದಳ ಆಳ್ವಿಕೆಯಲ್ಲಿನ ಯುಕೆಪಿ ಅವ್ಯವಹಾರ ತನಿಖೆಗೆ ಸಮಿತಿ

ಬೆಂಗಳೂರು, ಮೇ 5– ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 1994ರಿಂದ 97ರ ನಡುವಣ ಅವಧಿಯಲ್ಲಿ ರಾಜ್ಯದಲ್ಲಿ ಜನತಾದಳ ಸರ್ಕಾರ ಅಧಿಕಾರದಲ್ಲಿ ಇದ್ದಾಗ ನಡೆದ ಭಾರಿ ಪ್ರಮಾಣದ ಅಕ್ರಮಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ನಿವೃತ್ತ ಮುಖ್ಯ ಕಾರ್ಯದರ್ಶಿ ಎ.ಬಿ. ದಾತಾರ್ ಅವರ ನೇತೃತ್ವದಲ್ಲಿ ಅಧಿಕಾರಿಗಳ ಸಮಿತಿಯೊಂದನ್ನು ಸರ್ಕಾರ ರಚಿಸಿದೆ.

75 ವರ್ಷಗಳ ಹಿಂದೆ

ಭಾನುವಾರ, 6-5-1951

● ಭಾರತದ ರಾಷ್ಟ್ರಾದಾಯ ತಲಾ 255 ರೂ.

ನವದೆಹಲಿ, ಮೇ 5– 1948–49ನೇ ಸಾಲಿನಲ್ಲಿ ಭಾರತದ ಪ್ರತಿ ಮನುಷ್ಯನ ತಲಾ ರಾಷ್ಟ್ರೀಯ ಆದಾಯವು 255 ರೂಪಾಯಿಗಳೆಂದು ರಾಷ್ಟ್ರಾದಾಯ ಸಮಿತಿಯು ಅಂದಾಜು ಮಾಡಿದೆ.

ಒಟ್ಟು 8,710 ಕೋಟಿ ರೂಪಾಯಿಗಳ ಅಂದಾಜು ರಾಷ್ಟ್ರಾದಾಯವನ್ನು ರಾಷ್ಟ್ರದ ಒಟ್ಟು 341.04 ದಶಲಕ್ಷ ಅಂದಾಜು ಪ್ರಜಾಸಂಖ್ಯೆಗೆ ಹಂಚುವ ಆಧಾರದ ಮೇಲೆ ರಾಷ್ಟ್ರಾದಾಯ ಸಮಿತಿಯು ಮೇಲ್ಕಂಡಂತೆ ಅಂದಾಜು ಮಾಡಿದೆ.

ಚುರುಮುರಿ

ವೋಟಾಟ

● ಮಣ್ಣೆ ರಾಜು

‘ಅಬ್ಬಾ! ಅಂತೂ ‘ವೋಟಾಟ ಟೂರ್ನಮೆಂಟ್’ ಮುಗಿಯಿತು, ಕುತೂಹಲ, ಕೋಲಾಹಲಕ್ಕೆ ತೆರೆ ಬಿತ್ತು...’ ನ್ಯೂಸ್ ಪೇಪರ್ ಓದುತ್ತಾ ಸುಮಿ ನಿಟ್ಟುಸಿರುಬಿಟ್ಟಳು.

‘ಕುತೂಹಲ ಮುಗಿದರೂ ಕೋಲಾಹಲ ಮುಗಿಯಲ್ಲ, ಗೆದ್ದವರು ತೊಡೆ ತಟ್ಟುತ್ತಾರೆ, ಸೋತವರು ಹೆಡೆ ಎತ್ತುತ್ತಾರೆ. ಹೀಗಾಗಿ ಕೂಗಾಟ, ಬೈದಾಟ ಮುಂದುವರಿಯುತ್ತದೆ’ ಅಂದ ಶಂಕ್ರಿ.

‘ವೆಸ್ಟ್ ಬೆಂಗಾಲ್ ಪಂದ್ಯ ಹೈ ವೋಲ್ಟೇಜ್ ಪಂದ್ಯ ಆಗಿತ್ತು. ಹಾಲಿ ಚಾಂಪಿಯನ್ ಕೋಲ್ಕತ್ತ ರೈಡರ್ಸ್ ವಿರುದ್ಧ ಎನ್‌ಡಿಎ ಟೈಗರ್ಸ್ ಡಬ್ಬಲ್ ಸೆಂಚುರಿ ಬಾರಿಸಿ ಭರ್ಜರಿ ಗೆಲುವು ಪಡೆದರು’.

‘ದೆಹಲಿ ಪರಿಣತ ಕೋಚ್‌ಗಳ ಕ್ರೀಡಾ ತಂತ್ರಗಾರಿಕೆ ಎನ್‌ಡಿಎ ಪಡೆ ಗೆಲುವಿಗೆ ಕಾರಣವಂತೆ. ಸಾಲದ್ದಕ್ಕೆ ಕೋಲ್ಕತ್ತ ರೈಡರ್ಸ್ ನಿಖರವಾದ ಬೌಲಿಂಗ್ ಮಾಡಲಿಲ್ಲವಂತೆ, ಕ್ಯಾಚುಗಳನ್ನು ಕೈಚೆಲ್ಲಿದರು, ಕ್ಷೇತ್ರ ರಕ್ಷಣೆಯಲ್ಲೂ ಎಡವಿದರಂತೆ’.

‘ತಮಿಳುನಾಡು ಟೂರ್ನಿಯಲ್ಲಿ ಅಚ್ಚರಿ ಫಲಿತಾಂಶ! ಪದಾರ್ಪಣೆ ಪಂದ್ಯದಲ್ಲೇ ದಳಪತಿ ತಂಡ ಅದ್ಭುತ ಯಶಸ್ಸು ಕಂಡಿದೆ. ಕ್ಯಾಪ್ಟನ್ ದಳಪತಿ ಆಲ್‌ರೌಂಡರ್ ಆಟವಾಡಿ ತಂಡವನ್ನು ಮೇಲೆತ್ತಿದ್ದಾರೆ’.

‘ಹೌದು. ದಳಪತಿಯನ್ನು ಕ್ರೀಡಾಕೂಸು ಅಂತ ನಿರ್ಲಕ್ಷ್ಯ ಮಾಡಿದ್ದ ಎದುರಾಳಿ ತಂಡದ ಘಟಾನುಘಟಿಗಳು ಮಣ್ಣು ಮುಕ್ಕಿದರು. ದಳಪತಿ ಬಾರಿಸಿದ ಎಲ್ಲಾ ಬಾಲ್‌ಗಳನ್ನು ಗ್ಯಾಲರಿಯ ಪ್ರೇಕ್ಷಕರು ಕ್ಯಾಚ್ ಹಿಡಿದು ಮ್ಯಾಚ್ ಗೆಲ್ಲಿಸಿದರಂತೆ’.

‘ಕೇರಳಂ ಟೂರ್ನಿಯಲ್ಲಿ ಕೈ ಪಡೆ ಕಪ್ ಗೆದ್ದಿದೆ. ಹಾಲಿ ಚಾಂಪಿಯನ್ ಜಾಗ ಖಾಲಿ ಮಾಡಿದೆ. ಅಸ್ಸಾಂ, ಪುದುಚೆರಿ ಪಂದ್ಯಾವಳಿ ಅಷ್ಟಾಗಿ ಕುತೂಹಲ ಕೆರಳಿಸಲಿಲ್ಲ’.

‘ಕುತೂಹಲವಿದ್ದ ಲೋಕಲ್ ಟೂರ್ನಿಯ ಎರಡೂ ಪಂದ್ಯಗಳನ್ನು ಕೈ ಪಡೆ ಗೆದ್ದಿದೆ. ಗೆದ್ದರೂ ಕಪ್ ಸಿಗೋದಿಲ್ಲ, ಕೇವಲ ಸರ್ಟಿಫಿಕೇಟ್ ಅಷ್ಟೆ ಎಂದು ಕಮಲ ಪಡೆ ಪಂದ್ಯವನ್ನು ಕೈ ಚೆಲ್ಲಿತೆ?’

‘ಏನನ್ನೂ ಚೆಲ್ಲಲಿಲ್ಲ, ಮುಂದಿನ ಮಹಾಟೂರ್ನಿ ಗೆಲ್ಲಲು ಪಿಚ್ ಸ್ಟಡಿ ಮಾಡಿಕೊಂಡು ಸಜ್ಜಾಗಿದ್ದೇವೆ ಎನ್ನಬಹುದು ಅಲ್ವಾ?’ ಅಂದ ಶಂಕ್ರಿ.

ಸಂಗತ

ರಾಜಕಾರಣದ ಕೊಳೆ ಮತ್ತು ವಿದ್ಯಾರ್ಥಿಶಕ್ತಿ!

ವಿದ್ಯಾರ್ಥಿ ಸಂಘಗಳ ಚುನಾವಣೆಗಳಿಂದ ಯುವಜನರಲ್ಲಿ ರಾಜಕೀಯ ಪ್ರಜ್ಞೆ ಮೂಡುತ್ತದೆ. ಕಾಲೇಜು ಕ್ಯಾಂಪಸ್‌ಗಳಿಂದ ರಾಜಕಾರಣಕ್ಕೆ ಬೌದ್ಧಿಕಸ್ಪರ್ಶ ಸಿಗಲಿ.

● ರಾಜಕುಮಾರ ಕುಲಕರ್ಣಿ

ವಿದ್ಯಾರ್ಥಿ ಸಂಘಗಳ ಚುನಾವಣಾ ಪ್ರಕ್ರಿಯೆಯನ್ನು ಪುನರಾರಂಭಿಸಲು ಸರ್ಕಾರ ಮುಂದಾಗಿದೆ. ರಾಜ್ಯದ ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ವಿವಿಧ ಪಕ್ಷಗಳ ವಿದ್ಯಾರ್ಥಿ ಪ್ರತಿನಿಧಿಗಳು, ವಿದ್ಯಾರ್ಥಿ ಘಟಕಗಳು ಮತ್ತು ಕಾಲೇಜುಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಚುನಾವಣೆ ನಡೆಸುವಂತೆ ವಿದ್ಯಾರ್ಥಿ ಸಂಘಗಳು ಒತ್ತಾಯಿಸಿರುವುದಾಗಿ ಹೇಳಲಾಗುತ್ತಿದೆ.

ಕರ್ನಾಟಕದಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು 1980ರ ದಶಕದ ಕೊನೆಯಲ್ಲಿ ನಿಷೇಧಿಸಲಾಯಿತು. ವಿದ್ಯಾರ್ಥಿ ಸಂಘಗಳ ಚುನಾವಣಾ ಕಣದಲ್ಲಿ ಹಣದ ಹರಿದಾಟ, ವಿದ್ಯಾರ್ಥಿ ಗುಂಪುಗಳ ಮಧ್ಯೆ ಹೊಡೆದಾಟ, ಸಾವು, ಮುಂತಾದ ಅಹಿತಕರ ಘಟನೆಗಳು ಸಂಭವಿಸಿದ್ದರ ಹಿನ್ನೆಲೆಯಲ್ಲಿ ಚುನಾವಣೆಯನ್ನು ಸ್ಥಗಿತಗೊಳಿಸಲಾಯಿತು. ಈ ನಾಲ್ಕು ದಶಕಗಳಲ್ಲಿ ರಾಜಕಾರಣ ಮತ್ತು ಶಿಕ್ಷಣ ಕ್ಷೇತ್ರ ಎರಡರಲ್ಲೂ ಸಾಕಷ್ಟು ನೀರು ಹರಿದುಹೋಗಿದೆ. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಚುನಾವಣಾ ವಾತಾವರಣ ಇಲ್ಲದ ಪರಿಣಾಮ ವಿದ್ಯಾರ್ಥಿ ಸಮೂಹದಲ್ಲಿ ರಾಜಕೀಯ ಪ್ರಜ್ಞೆ ಕುಂಠಿತಗೊಂಡಿದೆ. ಒಂದು ಕಾಲದಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಭವಿಷ್ಯದ ರಾಜಕೀಯ ನಾಯಕರನ್ನು ರೂಪಿಸಿರುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ.

ಹಣಬಲ, ತೋಳ್ಬಲ ಮತ್ತು ಜಾತಿಬಲದಿಂದ ಕಲುಷಿತಗೊಂಡಿರುವ ರಾಜಕಾರಣವನ್ನು ಶುದ್ಧಗೊಳಿಸುವುದು ತುರ್ತು ಅಗತ್ಯವಾಗಿದೆ. ರಾಜಕಾರಣ ಈಗ ಸಮಾಜ ಸೇವೆಯಾಗಿ ಉಳಿದಿಲ್ಲ. ಅದು ಬಂಡವಾಳ ಹೂಡಿ ಲಾಭಗಳಿಸುವ ಕ್ಷೇತ್ರ ಎನ್ನುವ ಭಾವನೆ ಬಲವಾಗಿದೆ. ಆರ್ಥಿಕವಾಗಿ ಬಲಾಢ್ಯರಿರುವವರು ಮಾತ್ರ ಚುನಾವಣೆಗೆ ಸ್ಪರ್ಧಿಸುವಂಥ ವಾತಾವರಣ ಸೃಷ್ಟಿಯಾಗಿದೆ. ರಾಜಕಾರಣಿಗಳ ಸ್ವಜನಪಕ್ಷಪಾತ ಮತ್ತು ಕುಟುಂಬ ರಾಜಕಾರಣದಿಂದ ಪ್ರಜಾಪ್ರಭುತ್ವ ವ್ಯವಸ್ಥೆಯು ಅರಸೊತ್ತಿಗೆಯಂತೆ ಭಾಸವಾಗುತ್ತಿದೆ. ಇಂಥ ವಿಷಮ ಸನ್ನಿವೇಶದಲ್ಲಿ ವಿದ್ಯಾವಂತರು, ವೈಚಾರಿಕ ಪ್ರಜ್ಞೆ ಉಳ್ಳವರು, ಸಾಮಾಜಿಕ ಕಾಳಜಿ ಇರುವವರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕಾರಣವನ್ನು ಪ್ರವೇಶಿಸಿ ಕಲುಷಿತಗೊಂಡಿರುವ ವಾತಾವರಣವನ್ನು ತಿಳಿಗೊಳಿಸಲು ಪ್ರಯತ್ನಿಸಬೇಕಾಗಿದೆ.



ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ಪುನರಾರಂಭಿಸುತ್ತಿರುವ ಹೊತ್ತಿನಲ್ಲಿ, ವಿದ್ಯಾರ್ಥಿ ಸಮೂಹ ಈ ಹೊಸ ಬೆಳವಣಿಗೆಗೆ ಹೇಗೆ ಸ್ಪಂದಿಸಬಲ್ಲದು ಎನ್ನುವುದು ಮುಖ್ಯ ಪ್ರಶ್ನೆಯಾಗಿದೆ. ಕಳೆದ ಮೂರೂವರೆ ದಶಕಗಳಿಂದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಚುನಾವಣಾ ವಾತಾವರಣವಿಲ್ಲ. ಎಂಬತ್ತರ ದಶಕದ ಶೈಕ್ಷಣಿಕ ಪರಿಸರಕ್ಕೂ ಸದ್ಯದ ವಾತಾವರಣಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಈಗ ಇತಿಹಾಸ, ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರದಂತಹ ಒಟ್ಟಾರೆ ಮಾನವಿಕ ಜ್ಞಾನಶಿಸ್ತುಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳ ಸಂಖ್ಯೆ ಕುಸಿದಿದೆ. ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವ ಇಂದಿನ ವಿದ್ಯಾರ್ಥಿಗಳಲ್ಲಿ ರಾಜಕಾರಣದ ಕುರಿತು ಆಸಕ್ತಿ ಇಲ್ಲ. ವೈದ್ಯರು ಇಲ್ಲವೇ ಎಂಜಿನಿಯರರಾಗಿ ಕಂಫರ್ಟ್ ಜೋನ್‌ನಲ್ಲಿ ಬದುಕಲು ಇಚ್ಛಿಸುವ ವಿದ್ಯಾರ್ಥಿಗಳು ಸಮಾಜದಲ್ಲಿನ ಆಗುಹೋಗುಗಳಿಗೆ ಕಣ್ಣಿದ್ದೂ ಕುರುಡರಂತಿದ್ದಾರೆ.

ಮಾನವಿಕ ವಿಷಯಗಳಿಗಿಂತ ವೃತ್ತಿಪರ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವ ಪರಿಣಾಮ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳ ಅರಿವು ವಿದ್ಯಾರ್ಥಿಗಳಲ್ಲಿ ಇಲ್ಲವಾಗುತ್ತಿದೆ. ಈ ಕ್ಷೇತ್ರಗಳ ಅರಿವು ವಿದ್ಯಾರ್ಥಿಗಳಲ್ಲಿ ಮೂಡಿಸಲು ವಿಜ್ಞಾನ, ವಾಣಿಜ್ಯ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಸಂವಿಧಾನವನ್ನು ಅಧ್ಯಯನದ ವಿಷಯವಾಗಿಸಿ ಪಠ್ಯಕ್ರಮ ರೂಪಿಸಲಾಗಿದೆ. ಆದರೆ, ವೃತ್ತಿಪರ ಕೋರ್ಸ್‌ಗಳಲ್ಲಿ ಸಂವಿಧಾನ ವಿಷಯದ ಬೋಧನೆ ಮತ್ತು ಅಧ್ಯಯನ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ. ವಿದ್ಯಾರ್ಥಿಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಸರ್ಕಾರ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ಪುನರಾರಂಭಿಸಲು ಮುಂದಾಗಿರುವುದು ಸ್ವಾಗತಾರ್ಹ. ಆದರೆ, ಈ ವಿಷಯದಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ಚುನಾವಣೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುಂಠಿತಗೊಳ್ಳಬಾರದು. ಚುನಾವಣೆಯನ್ನು ಕ್ರೀಡೆ ಮತ್ತು ಓದಿನಂತೆ ಶೈಕ್ಷಣಿಕ ಚಟುವಟಿಕೆಯ ಭಾಗವಾಗಿ ಪರಿಗಣಿಸುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಳ್ಳೆಯದು. ಚುನಾವಣೆಯು ಧನಬಲ, ತೋಳ್ಬಲ ಮತ್ತು ಜಾತಿಬಲದ ಪ್ರಭಾವಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು. ಈ ಪ್ರಕ್ರಿಯೆಯಿಂದ ಭವಿಷ್ಯದ ರಾಜಕೀಯ ನೇತಾರರು ರೂಪುಗೊಳ್ಳಬೇಕೇ ವಿನಾ ರಾಜಕೀಯ ಪಕ್ಷಗಳ ಅನುಯಾಯಿಗಳಲ್ಲ.

ಸಮಾಜದ ಸ್ವಾಸ್ಥ್ಯಕ್ಕಾಗಿ ರಾಜಕಾರಣದಲ್ಲಿ ಬೌದ್ಧಿಕ ನಾಯಕರ ಅಗತ್ಯವಿದೆ. ವಾಚಾಳಿತನವೇ ಬಂಡವಾಳವಾಗಿರುವ ಇಂದಿನ ರಾಜಕಾರಣದಲ್ಲಿ ಬೌದ್ಧಿಕಪ್ರಜ್ಞೆ ಗೋಚರಿಸುತ್ತಿಲ್ಲ. ವಿದ್ಯಾರ್ಥಿ ಚುನಾವಣೆಯ ಮೂಲಕವಾದರೂ ರಾಜಕಾರಣಕ್ಕೆ ಬೌದ್ಧಿಕ ನಾಯಕರು ದಕ್ಕುವಂತಾಗಲಿ.

ನೊಬೆಲ್ ಬಹುಮಾನ ಸ್ವೀಕರಿಸುವಾಗ ಕವಿ ಬ್ರಾಡ್‌ಸ್ಕೀ ಹೇಳಿದ್ದು ಹೀಗೆ: ‘ನಾವು ನಮ್ಮ ನಾಯಕರನ್ನು ಅವರ ರಾಜಕೀಯ ಕಾರ್ಯಸೂಚಿಗಿಂತ ಅವರ ಓದಿನ ಅನುಭವವನ್ನು ಆಧರಿಸಿ ಆಯ್ಕೆ ಮಾಡಿದಲ್ಲಿ ಭೂಮಿಯ ಮೇಲೆ ಅತ್ಯಂತ ಕಡಿಮೆ ದುಃಖವಿರುತ್ತಿತ್ತು’. ಈ ಮಾತು ರಾಜಕಾರಣದಲ್ಲಿರುವ ಬೌದ್ಧಿಕ ಕೊರತೆಯನ್ನು ಸ್ಪಷ್ಟವಾಗಿ ಧ್ವನಿಸುತ್ತದೆ. ಇಂಥ ಸಂದಿಗ್ಧ ಸನ್ನಿವೇಶದಲ್ಲಿ ರಾಜಕಾರಣಕ್ಕೆ ಬೌದ್ಧಿಕದೀಕ್ಷೆ ನೀಡಲು ವಿದ್ಯಾರ್ಥಿ ಚುನಾವಣೆಯನ್ನು ಬಳಸಿಕೊಳ್ಳಬಹುದು. ಆದರೆ, ಈ ಚುನಾವಣಾ ಪ್ರಕ್ರಿಯೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗಬಾರದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತಮಿಳುನಾಡಲ್ಲಿ ಟಿವಿಕೆ 'ವಿಜಯ' ದುಂದುಭಿ

ಸಿನಿಮಾ ರಂಗು ರಾಜಕಾರಣದ ಗುಂಗು

• ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

ಜಯಲಲಿತಾ ಅವರೇ ತಮಿಳುನಾಡಿನ ಮುಖ್ಯಮಂತ್ರಿ ಕುರ್ಚಿ ಮೇಲೆ ಕುಳಿತ ಕೊನೆಯ ಸಿನಿಮಾ ತಾರೆ ಎಂದು ಬಹುತೇಕರು ಭಾವಿಸಿದ್ದರು. ಅದರ ನಂತರ ರಜನಿಕಾಂತ್, ಕಮಲ್ ಹಾಸನ್ ಅವರಂಥ ತಾರೆಯರು ಪ್ರಯತ್ನ ನಡೆಸಿದರೂ ಅವರಿಂದ ರಾಜಕಾರಣದಲ್ಲಿ ಯಶಸ್ಸು ಗಳಿಸುವುದು ಸಾಧ್ಯವಾಗಲಿಲ್ಲ. ಆದರೆ, ಅವರಿಂದ ಆಗದೇ ಇದ್ದದ್ದನ್ನು ಅವರಿಗಿಂತ ವಯಸ್ಸು, ಅನುಭವದಲ್ಲಿ ಕಿರಿಯರಾದ ಜೋಸೆಫ್ ವಿಜಯ್ ಸಾಧಿಸಿದ್ದಾರೆ. ತಮಿಳುನಾಡಿನಲ್ಲಿ ಬಹುತೇಕ ಮುಗಿದೇಹೋಗಿದೆ ಎಂದು ಭಾವಿಸಲಾಗಿದ್ದ ಪರಂಪರೆಗೆ ಅವರು ಮರುಜೀವ ನೀಡಿದ್ದಾರೆ. ಹೊಸ ರಾಜಕೀಯ ಶೈಲಿಗೆ ನಾಂದಿ ಹಾಕಿದ್ದಾರೆ

ವಿಜಯ್

'ರಾಜಕಾರಣ ಮಾಡುವುದು ಸಿನಿಮಾ ಮಾಡಿದಷ್ಟು ಸುಲಭವಲ್ಲ'

ಹೀಗೆಂದು ಹೇಳಿದ್ದವರು ಕಮಲ ಹಾಸನ್. ಜಯಲಲಿತಾ ಅವರ ಸಾವಿನ ನಂತರದ ದಿನಗಳಲ್ಲಿ ರಾಜಕೀಯಕ್ಕೆ ಬಂದು, ಹೊಸ ಪಕ್ಷ (ಮಕ್ಕಳ್ ನೀದಿ ಮಯ್ಯಂ) ಸ್ಥಾಪಿಸಿ, ಒಂದೂ ಸ್ಥಾನ ಗೆಲ್ಲಲಾಗದೇ ನಿರಾಶೆ ಅನುಭವಿಸಿದವರು ಕಮಲ ಹಾಸನ್. 2021ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು. ಅವರ ಪಕ್ಷ ಕೇವಲ ಶೇ 2.6 ಮತ ಪ್ರಮಾಣ ಗಳಿಸಿತ್ತು. ಇದೇ ರೀತಿ ರಾಜಕೀಯಕ್ಕೆ ಬರಬೇಕೆಂಬ ಆಸೆ ಇದ್ದರೂ, ಅದರ ಕಷ್ಟನಷ್ಟದ ಬಗ್ಗೆ ಆಲೋಚಿಸಿ ಕೊನೆಯ ಕ್ಷಣದಲ್ಲಿ ಚುನಾವಣಾ ರಾಜಕೀಯದಿಂದ ದೂರ ಸರಿದವರು ರಜನಿಕಾಂತ್.

ಸಿನಿಮಾ ರಂಗದಲ್ಲಿ ರಜನಿ–ಕಮಲ್ ಸಾಧಿಸಲು ಆಗದ್ದನ್ನು ಅವರಿಗಿಂತ ಕಿರಿಯರಾದ (51 ವರ್ಷ) ದಳಪತಿ ವಿಜಯ್ ಸಾಧಿಸಿದ್ದಾರೆ. ದ್ರಾವಿಡ ರಾಜಕಾರಣದ ಹೆಸರಿನಲ್ಲಿ ರಾಜ್ಯದಲ್ಲಿ ಪಾರಮ್ಯ ಸಾಧಿಸಿದ್ದ ಡಿಎಂಕೆ, ಎಐಎಡಿಎಂಕೆ ಪಕ್ಷಗಳನ್ನು, ಅವುಗಳ ನುರಿತ ನಾಯಕರನ್ನು ಮಣಿಸಿ, ತಮಿಳುನಾಡಿನ ಮುಖ್ಯಮಂತ್ರಿ ಗಾದಿ ಏರಲು ಸಜ್ಜಾಗಿದ್ದಾರೆ. ಸುಮಾರು ಆರು ದಶಕಗಳಿಂದ ತಮಿಳುನಾಡನ್ನು ಇವೆರಡೇ ಪಕ್ಷಗಳು ಆಳುತ್ತಿದ್ದವು. ಆ ಪರಂಪರೆಯನ್ನು ತುಂಡರಿಸಿರುವ ವಿಜಯ್, ಹೊಸ ಪಕ್ಷವನ್ನು ಸ್ಥಾಪಿಸಿ, ಅದನ್ನು ಅಧಿಕಾರದ ಹೊಸ್ತಿಲಿಗೆ ತಂದು ನಿಲ್ಲಿಸಿರುವುದು ಕಡಿಮೆ ಸಾಧನೆಯೇನಲ್ಲ.

ಕೇವಲ ಎರಡು ವರ್ಷಗಳ ಹಿಂದೆ (2024ರಲ್ಲಿ) 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷ ಸ್ಥಾಪಿಸಿ ಪ್ರಸ್ತುತ ವಿಧಾನಸಭಾ ಚುನಾವಣೆಯಲ್ಲಿ ಎಲ್ಲ 234 ಕ್ಷೇತ್ರಗಳಲ್ಲಿ ಮೊದಲ ಬಾರಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ ಅವರು, ತಮ್ಮ ಮೊದಲ ಪ್ರಯತ್ನದಲ್ಲೇ ಅತ್ಯಂತ, ಅನಿರೀಕ್ಷಿತವಾದ ಗೆಲುವನ್ನು ದಕ್ಕಿಸಿಕೊಂಡಿದ್ದಾರೆ. ಇದು ಅಚ್ಚರಿಯ ಗೆಲುವು ಎಂದು ಜನರಿಗೆ ಅನ್ನಿಸಿದ್ದರೂ, ಇದರ ಹಿಂದೆ ವಿಜಯ್ ಅವರ ಸುಮಾರು ಎರಡು ದಶಕಗಳ ಪ್ರಯತ್ನ, ಪರಿಶ್ರಮ ಇದೆ.

ತಂದೆ, ಸಿನಿಮಾ ನಿರ್ದೇಶಕ ಎಸ್.ಎ.ಚಂದ್ರಶೇಖರ್ ಅವರ ನೆರಳಿನಲ್ಲಿ ಬಾಲನಟನಾಗಿ ಅಡಿಯಿಟ್ಟ ವಿಜಯ್, ಚಿತ್ರರಂಗದಲ್ಲಿ ಬಹುಬೇಗ ಸ್ಟಾರ್ ಆದರು. ಕಮಲ ಹಾಸನ್, ರಜನಿಕಾಂತ್ ಅವರಂಥ ತಾರೆಗಳ ನಡುವೆ ತಮ್ಮದೇ ವಿಭಿನ್ನ ನಟನಾ ಶೈಲಿ ರೂಢಿಸಿಕೊಂಡರು. ಆತ್ಮವಿಶ್ವಾಸ, ಹಾಸ್ಯ ಇರುವ ವಿಶಿಷ್ಟ ಮ್ಯಾನರಿಸಂನಿಂದ ಬಹಳ ಬೇಗ ತಮಿಳು ಅಭಿಮಾನಿಗಳ ಪ್ರೀತಿ ಗಳಿಸಿ 'ದಳಪತಿ' ಎಂದು ಬಿರುದು ಗಳಿಸಿದರು. ತಮಿಳು ಚಿತ್ರರಂಗದಲ್ಲಿ ರಜನಿಕಾಂತ್ ನಂತರದ ದೊಡ್ಡ ತಾರೆ ಎನ್ನಿಸಿಕೊಂಡರು.

ತಮ್ಮ ರಾಜಕೀಯ ಮಹತ್ವಾಕಾಂಕ್ಷೆಗೆ ಸಿನಿಮಾ ಜನಪ್ರಿಯತೆಯನ್ನೇ ಅಡಿಪಾಯ ಮಾಡಿಕೊಂಡ ವಿಜಯ್, 2009ರಲ್ಲಿ 'ವಿಜಯ್ ಮಕ್ಕಳ್ ಇಯಕ್ಕಂ' (ವಿಜಯ್ ಜನ ಚಳವಳಿ–ವಿಎಂಐ) ಎನ್ನುವ ಅಭಿಮಾನಿ ಸಂಘ ಸ್ಥಾಪಿಸಿದರು. ಅದರ 85 ಸಾವಿರ ಘಟಕಗಳು ರಾಜ್ಯಾದ್ಯಂತ ಆರಂಭವಾದವು. ಅವುಗಳ ಮೂಲಕ ವಿಜಯ್ ಅವರು ನೆರೆ, ಬರ, ಆರ್ಥಿಕ ನೆರವು, ರಕ್ತದಾನ ಮುಂತಾದ ಸೇವಾ ಕಾರ್ಯಗಳಲ್ಲಿ ತೊಡಗಿದರು. ಅವರ ಸಿನಿಮಾ ಕಾರ್ಯಕ್ರಮಗಳಲ್ಲಿ ರಾಜಕೀಯದ ಮಾತು–ಕತೆಗಳು ಕೇಳಿಬರತೊಡಗಿದುವು. 'ದಳಪತಿ', ನಿರುದ್ಯೋಗ, ಬಡತನದಂತಹ ಸಾಮಾಜಿಕ ಸಮಸ್ಯೆಗಳಿಂದ ಹಿಡಿದು ಜಿಎಸ್‌ಟಿ, ಪೌರತ್ವ ತಿದ್ದುಪಡಿ ಕಾಯ್ದೆಯಂಥ ರಾಷ್ಟ್ರೀಯ ವಿಚಾರಗಳನ್ನೂ ಟೀಕಿಸಿ, ತಮ್ಮದೇ ಶೈಲಿಯಲ್ಲಿ ವ್ಯಾಖ್ಯಾನಿಸುತ್ತಿದ್ದರು. 2011ರ ವಿಧಾನಸಭಾ ಚುನಾವಣೆಯಲ್ಲಿ ಎಐಎಡಿಎಂಕೆಗೆ ಬೆಂಬಲ ನೀಡುವ ಮೂಲಕ ಅಭಿಮಾನ ಮತವಾಗಿ ಪರಿವರ್ತನೆಯಾಗುವುದನ್ನು ತಮ್ಮದೇ ರೀತಿಯಲ್ಲಿ ಪರೀಕ್ಷಿಸಿದ್ದರು. 2021ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ 169 ವಾರ್ಡ್‌ಗಳಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ವಿಎಂಐನ 115 ಮಂದಿ ಗೆಲುವು ಸಾಧಿಸಿದ್ದರು.

2024ರ ಫೆಬ್ರುವರಿಯಲ್ಲಿ ಟಿವಿಕೆ ಸ್ಥಾಪಿಸಲು ವಿಜಯ್ ಅವರಿಗೆ ಅಡಿಪಾಯ ಆಗಿದ್ದು ಈ ಗೆಲುವು. ಈಗಿನ ವಿಧಾನಸಭಾ ಚುನಾವಣೆ ಗೆಲುವು ಅವರಿಗೆ ದೊಡ್ಡ ಜವಾಬ್ದಾರಿ ಹೊರಿಸಿದೆ. ದ್ರಾವಿಡ ತಾತ್ವಿಕತೆ ಹಿನ್ನೆಲೆ ಇಲ್ಲದ, ಅಧಿಕಾರ ರಾಜಕಾರಣದ ಅನುಭವ ಇಲ್ಲದ ವಿಜಯ್ ಹೊಸ ಸವಾಲನ್ನು ಹೇಗೆ ಎದುರಿಸಲಿದ್ದಾರೆ ಎಂಬುದಕ್ಕೆ ಕಾಲವೇ ಉತ್ತರ ಹೇಳಬೇಕಿದೆ.

ಆಧಾರ: ಪಿಟಿಐ, ಬಿಬಿಸಿ, ಮಾಧ್ಯಮ ವರದಿಗಳು

'ಸಿನಿಮಾ' ಸಿ.ಎಂ.ಗಳು

ಎಂಜಿಆರ್

ಸಿನಿಮಾದವರು ಮುಖ್ಯಮಂತ್ರಿ ಸ್ಥಾನಕ್ಕೇರುವುದು ದಕ್ಷಿಣ ಭಾರತದ ರಾಜಕಾರಣದಲ್ಲಿ ಕಂಡುಬರುವ ವೈಶಿಷ್ಟ್ಯ. ತಮಿಳುನಾಡು ರಾಜ್ಯ ಉದಯವಾದ ನಂತರ ಅದರ ಮೊದಲ ಮುಖ್ಯಮಂತ್ರಿಯಾಗಿ, ಭಾರತದಲ್ಲಿ ಪ್ರಾದೇಶಿಕ ಪಕ್ಷದ (ಡಿಎಂಕೆ) ರಾಜಕಾರಣ ಶಕೆಯನ್ನು ಆರಂಭಿಸಿದ ಅಣ್ಣಾದೊರೈ ಕೂಡ ಸಿನಿಮಾದವರೇ. ಡಿಎಂಕೆಯಿಂದಲೇ ರಾಜಕಾರಣ ಆರಂಭಿಸಿ, ನಂತರ ಅದರಿಂದ ಹೊರಬಂದು ಎಐಎಡಿಎಂಕೆ ಸ್ಥಾಪಿಸಿ, 1977ರಿಂದ 1987ರವರೆಗೆ ಮುಖ್ಯಮಂತ್ರಿ ಆಗಿದ್ದವರು ಖ್ಯಾತ ನಟ ಎಂಜಿಆರ್. ಸಿನಿಮಾ ಲೇಖಕರಾಗಿ ಜನಪ್ರಿಯತೆ ಗಳಿಸಿ, ನಂತರ ಡಿಎಂಕೆ ಮುಖಂಡರಾಗಿ, ಐದು ಬಾರಿ ಮುಖ್ಯಮಂತ್ರಿ ಆದವರು ಕರುಣಾನಿಧಿ. ಎಂಜಿಆರ್ ಉತ್ತರಾಧಿಕಾರಿಯಾಗಿ ರಾಜಕೀಯ ಪ್ರವೇಶಿಸಿ, ಆರು ಬಾರಿ ತಮಿಳುನಾಡಿನ ಮುಖ್ಯಮಂತ್ರಿ ಆಗಿದ್ದವರು ಜೆ.ಜಯಲಲಿತಾ. ಎಂ.ಕೆ.ಸ್ಟಾಲಿನ್ ಕೂಡ ರಾಜಕೀಯಕ್ಕೆ ಬರುವ ಮುನ್ನ ನಟರಾಗಿದ್ದರು. ತಮಿಳುನಾಡಿನಲ್ಲಿ ಹೊಸ ಪಕ್ಷ ಸ್ಥಾಪಿಸಿ ಗಣನೀಯ ಸಾಧನೆ ಮಾಡಿದವರು ನಟ ವಿಜಯಕಾಂತ್. 'ಕ್ಯಾಪ್ಟನ್' ಎಂದು ಕರೆಸಿಕೊಳ್ಳುತ್ತಿದ್ದ ಅವರು 2005ರಲ್ಲಿ ದೇಸೀಯ ಮೂರ್ಪೋಕ್ಕು ದ್ರಾವಿಡ ಕಳಗಂ (ಡಿಎಂಡಿಕೆ) ಸ್ಥಾಪಿಸಿ, 2011ರ ವಿಧಾನಸಭಾ ಚುನಾವಣೆಯಲ್ಲಿ 29 ಸ್ಥಾನ ಗೆದ್ದಿದ್ದರು. ವಿಜಯಕಾಂತ್ ತಮಿಳುನಾಡು ವಿಧಾನಸಭೆಯ ವಿರೋಧ ಪಕ್ಷದ ನಾಯಕರೂ ಆಗಿದ್ದರು. ನಂತರದ ದಿನಗಳಲ್ಲಿ ಪಕ್ಷ ಹಂತಹಂತವಾಗಿ ತನ್ನ ಪ್ರಾಬಲ್ಯ ಕಳೆದುಕೊಂಡಿತು.

ಮುಂದಿರುವ ಸವಾಲುಗಳು

- ಸರ್ಕಾರ ರಚನೆಗೆ ಅಗತ್ಯವಿರುವಷ್ಟು ಶಾಸಕರ ಬೆಂಬಲ ಪಡೆಯುವುದು
- ಆಡಳಿತದಲ್ಲಿನ ಅನನುಭವ. ಟಿವಿಕೆಯಲ್ಲಿ ರಾಜಕೀಯ ಮತ್ತು ಆಡಳಿತದಲ್ಲಿ ಹೆಚ್ಚು ಅನುಭವ ಇರುವವರ ಕೊರತೆ
- ಪ್ರಣಾಳಿಕೆಯಲ್ಲಿ ಘೋಷಿಸಿದ ಭರವಸೆಗಳನ್ನು ಜಾರಿಗೆ ತರುವುದು
- ಉಚಿತ ಕೊಡುಗೆಗಳ ನಂತರವೂ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಡದಂತೆ ನೋಡಿಕೊಳ್ಳುವುದು

ಗೆಲುವಿನ ಹಿಂದೆ ಇರುವವರು

ಈ ಚುನಾವಣೆಯಲ್ಲಿ ಟಿವಿಕೆ ಗೆಲುವಿನಲ್ಲಿ ವಿಜಯ್ ಅವರ ತಾರಾ ವರ್ಚಸ್ಸು ಕೆಲಸ ಮಾಡಿದ್ದರೂ, ಪಕ್ಷದ ಚುನಾವಣಾ ತಂತ್ರಗಾರಿಕೆಯಲ್ಲಿ ಪ್ರಮುಖ ಪಾತ್ರವಹಿಸಿರುವ ಸಲಹೆಗಾರರ ಕೊಡುಗೆಯೂ ಸಾಕಷ್ಟಿದೆ. ವಿಜಯ್ ಅವರು ಪಕ್ಷ ಸ್ಥಾಪಿಸಿದ್ದ ಸಂದರ್ಭದಲ್ಲಿ ಚುನಾವಣಾ ತಂತ್ರಗಾರಿಕಾ ನಿಪುಣ ಪ್ರಶಾಂತ್ ಕಿಶೋರ್, ವಿಜಯ್ ಜೊತೆಗಿದ್ದರು. ಆಗ ಸಂದರ್ಶನವೊಂದರಲ್ಲಿ ಮಾತನಾಡಿದ್ದ ಪ್ರಶಾಂತ್ ಕಿಶೋರ್ ಅವರು, 2026ರ ಚುನಾವಣೆಯಲ್ಲಿ ವಿಜಯ್ ಪಕ್ಷಕ್ಕೆ ಉತ್ತಮ ಸಾಧನೆ ಮಾಡುವ ಅವಕಾಶ ಇದೆ ಎಂದು ಹೇಳಿದ್ದರು. ಅವರ ಅಂದಿನ ಸಂದರ್ಶನದ ತುಣುಕು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪ್ರಶಾಂತ್ ಕಿಶೋರ್ ಅವರು ಟಿವಿಕೆಗೆ ಸಲಹೆಗಾರರು ಎಂದು ಹೇಳಲಾಗಿತ್ತು. ಆದರೆ, ಬಿಹಾರದಲ್ಲಿ ರಾಜಕೀಯ ಪಕ್ಷ ಹುಟ್ಟುಹಾಕಿದ್ದ ಕಿಶೋರ್ ಇದನ್ನು ನಿರಾಕರಿಸಿದ್ದರು.

ತಮಿಳುನಾಡಿನಲ್ಲಿ ಟಿವಿಕೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಬಳಿಕ, ಪಕ್ಷದ ಗೆಲುವಿನ ಹಿಂದೆ ಕಪಿಲ್ ಸಾಹು ಮತ್ತು ಜಾನ್ ಆರೋಗ್ಯಸ್ವಾಮಿ ಅವರ ಹೆಸರು ಕೇಳಿ ಬರುತ್ತಿದೆ. ಇವರಿಬ್ಬರು ಚುನಾವಣಾ ತಂತ್ರಗಾರಿಕೆಯಲ್ಲಿ ಕೆಲಸ ಮಾಡಿದ್ದರು ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.

ಕಪಿಲ್ ಸಾಹು: ದೆಹಲಿಯ ಕಪಿಲ್ ಸಾಹು ಅವರು ಚುನಾವಣಾ ತಂತ್ರಗಾರಿಕೆಯ ಕನ್ಸಲ್ಟೆನ್ಸಿ ಸಂಸ್ಥೆ ಐ–ಪ್ಯಾಕ್‌ನಲ್ಲಿ ಕೆಲಸ ಮಾಡಿದ್ದವರು. ಎರಡು ವರ್ಷಗಳ ಹಿಂದೆ ಅವರು, 12 ಜನರೊಂದಿಗೆ ಸಂಸ್ಥೆಯನ್ನು ತೊರೆದು, ತಮ್ಮದೇ ಆದ ರಾಜಕೀಯ ಸಲಹಾ ಸಂಸ್ಥೆಯನ್ನು ಕಟ್ಟಿ ರಾಜಕೀಯ ಪಕ್ಷಗಳಿಗೆ, ಅಭ್ಯರ್ಥಿಗಳಿಗೆ ಚುನಾವಣೆಗಳಲ್ಲಿ ಗೆಲ್ಲಲು ತಂತ್ರಗಾರಿಕೆ ರೂಪಿಸುವುದರಲ್ಲಿ ತೊಡಗಿಕೊಂಡಿದ್ದಾರೆ. ವಿವಿಧ ಚುನಾವಣೆಗಳಲ್ಲಿ ಅವರು ಕಾಂಗ್ರೆಸ್, ಎಎಪಿ, ಸಿಕ್ಕಿಂ ಡೆಮಾಕ್ರಟಿಕ್ ಫ್ರಂಟ್ ಮುಂತಾದ ರಾಜಕೀಯ ಪಕ್ಷಗಳ ಪರವಾಗಿ ಕೆಲಸ ಮಾಡಿದ್ದಾರೆ. ಟಿವಿಕೆ ಪಕ್ಷವು ಯುವಜನರನ್ನು ಆಧರಿಸಿದ ಯೋಜನೆಗಳನ್ನು ರೂಪಿಸಲು, ಪಕ್ಷದತ್ತ ಯುವ ಮತದಾರರನ್ನು ಹೆಚ್ಚು ಹೆಚ್ಚು ಸೆಳೆಯುವಲ್ಲಿ, ಡಿಜಿಟಲ್ ವೇದಿಕೆಗಳಲ್ಲಿ ಪಕ್ಷದ ವಿಚಾರಗಳನ್ನು ಹಂಚಿಕೊಳ್ಳುವಲ್ಲಿ, ಅಭಿಪ್ರಾಯ ರೂಪಿಸುವುದರಲ್ಲಿ ಮತ್ತು ಕ್ಷೇತ್ರವಾರು ಮನೆ ಮನೆಗಳಿಗೆ ಪಕ್ಷವನ್ನು ಕೊಂಡು ಹೋಗುವಲ್ಲಿ ಕಪಿಲ್ ಸಾಹು ಅವರ ಸಲಹೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿವೆ ಎಂದು ಹೇಳಲಾಗುತ್ತಿದೆ.

ಜಾನ್ ಆರೋಗ್ಯಸ್ವಾಮಿ: ಆಂಧ್ರಪ್ರದೇಶದ ಜಾನ್ ಆರೋಗ್ಯಸ್ವಾಮಿ, ಬೆಳೆದಿದ್ದು, ಶಿಕ್ಷಣ ಪಡೆದಿದ್ದು ತಮಿಳುನಾಡಿನ ಚೆನ್ನೈನಲ್ಲಿ. ಶಿಕ್ಷಣ ಮುಗಿಸಿದ ಬಳಿಕ ಅವರು ಹೊರಳಿದ್ದು, ಸಾರ್ವಜನಿಕ ಸಂಪರ್ಕ ಕ್ಷೇತ್ರಕ್ಕೆ. ಕೆಲವು ವರ್ಷ ಅಲ್ಲಿ ಕೆಲಸ ಮಾಡಿದ ನಂತರ ಚುನಾವಣಾ ಕ್ಷೇತ್ರ ಅವರನ್ನು ಆಕರ್ಷಿಸಿತು. 2021ರಲ್ಲಿ ಜೆಪಿಎಸಿಪರ್ಸೋನಾ ಎಂಬ ಚುನಾವಣಾ ಸಲಹಾ ಸಂಸ್ಥೆಯನ್ನು ಕಟ್ಟಿದರು. 2014ರ ಲೋಕಸಭಾ ಚುನಾವಣೆಯಲ್ಲಿ ಮತ್ತು 2017ರ ಮುಂಬೈ ಮಹಾನಗರಪಾಲಿಕೆ ಚುನಾವಣೆಯಲ್ಲಿ ಶಿವಸೇನಾ ಪರವಾಗಿ ಕೆಲಸ ಮಾಡಿದ್ದಾರೆ. ತಮಿಳುನಾಡಿನ ರಾಜಕೀಯವನ್ನು ಬಲ್ಲಂತಹ ಜಾನ್, ಟಿವಿಕೆಯ ಚುನಾವಣಾ ತಂತ್ರಗಾರಿಕೆಯಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ ಎನ್ನಲಾಗುತ್ತಿದೆ.

ಟಿವಿಕೆ ಗೆಲುವಿಗೆ ಕಾರಣಗಳು

- ವಿಜಯ್ ಅವರ ತಾರಾ ವರ್ಚಸ್ಸು
- 15 ವರ್ಷಗಳ ಹಿಂದಿನಿಂದಲೇ ಅಭಿಮಾನಿಗಳ ಸಂಘಗಳ ಮೂಲಕ ತಳಮಟ್ಟದಲ್ಲಿ ತಮ್ಮ ಬೆಂಬಲಿಗರ ಪಡೆಯನ್ನು ಕಟ್ಟುತ್ತಾ, ರಾಜಕೀಯ ಪ್ರವೇಶಕ್ಕೆ ವೇದಿಕೆ ಸಿದ್ಧಪಡಿಸಿದ್ದು
- ನವ ಮತದಾರರು ಸೇರಿದಂತೆ ಯುವ ಜನರು, ಮಹಿಳೆಯರನ್ನು ಗುರಿಯಾಗಿಸಿಕೊಂಡು ರಾಜಕೀಯ ತಂತ್ರ ಹೆಣೆದಿರುವುದು
- ಕರ್ನಾಟಕ ಮಾದರಿಯ ಹಲವು ಗ್ಯಾರಂಟಿ ಘೋಷಣೆಗಳು
- ಬಿಜೆಪಿ ಸೈದ್ಧಾಂತಿಕ ವೈರಿ, ಡಿಎಂಕೆ ರಾಜಕೀಯ ವೈರಿ ಎಂಬ ಘೋಷಣೆ
- ಜಾತ್ಯತೀತ ಧೋರಣೆಯ ಅಡಿಯಲ್ಲಿ ಪ್ರಚಾರ
- ಜಾತಿ, ಧರ್ಮ ಮೀರಿ ಎಲ್ಲ ವರ್ಗಗಳ ಬೆಂಬಲ ಮತವಾಗಿ ಪರಿವರ್ತನೆಯಾಗಿದ್ದು
- ಡಿಎಂಕೆ ಸರ್ಕಾರ ಎದುರಿಸುತ್ತಿದ್ದ ಆಡಳಿತ ವಿರೋಧಿ ಅಲೆ

ವಿಜಯ್ ಅವರು ಟಿವಿಕೆ ಸ್ಥಾಪಿಸಿದ ಬಳಿಕ ಆಯೋಜಿಸಿದ್ದ ಪ್ರತಿ ರ್‍ಯಾಲಿಯಲ್ಲಿಯೂ ಜನಸ್ತೋಮವೇ ನೆರೆಯುತ್ತಿತ್ತು

ಅಪ್ಪನ ವಿರುದ್ಧ ವಿಜಯ್ ದಾವೆ

ವಿಜಯ್ ಅವರ ತಂದೆ ಎಸ್.ಎ.ಚಂದ್ರಶೇಖರ್ ಮಗನ ಹೆಸರನ್ನು ಬಳಸಿಕೊಂಡು 'ಆಲ್ ಇಂಡಿಯಾ ದಳಪತಿ ವಿಜಯ್ ಮಕ್ಕಳ್ ಇಯಕ್ಕಂ' ಪಕ್ಷ ಸ್ಥಾಪನೆಗೆ ಸಿದ್ಧತೆ ನಡೆಸಿದ್ದರು. ಅದರ ಮಾಹಿತಿ ಪಡೆದ ವಿಜಯ್, 2021ರಲ್ಲಿ ಅಪ್ಪನ ವಿರುದ್ಧವೇ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ರಾಜಕೀಯ ಕಾರಣಕ್ಕಾಗಿ ತನ್ನ ಹೆಸರನ್ನು ಮತ್ತು ಅಭಿಮಾನಿ ಸಂಘಗಳನ್ನು ತನ್ನ ಪೋಷಕರು ಸೇರಿದಂತೆ ಯಾರೂ ಬಳಸಬಾರದು ಎಂದು ತಾಕೀತು ಮಾಡಿದ್ದರು. ಇದು ತಂದೆ–ಮಗನ ನಡುವೆ ಬಿರುಕು ಮೂಡಿಸಿತ್ತು. ಪ್ರಸ್ತುತ ಟಿವಿಕೆ ಮತ್ತು ವಿಜಯ್ ಅವರ ಗೆಲುವನ್ನು ಸ್ವಾಗತಿಸಿರುವ ಅವರ ತಂದೆ, ತಾವು ಮಗನೊಂದಿಗೆ ಉತ್ತಮ ಸಂಬಂಧ ಹೊಂದಿರುವುದಾಗಿ ಹೇಳಿಕೊಂಡಿದ್ದಾರೆ.

ಹೊಸ ಪಕ್ಷ ಕಟ್ಟಿ ಗದ್ದುಗೆ ಏರಿದವರು

ಹೊಸ ಪಕ್ಷ ಕಟ್ಟಿ ಚುನಾವಣೆ ಎದುರಿಸಿ ದಡ ಮುಟ್ಟುವುದು ಅತ್ಯಂತ ಅನಿಶ್ಚಿತವಾದ, ಕಷ್ಟಕರವಾದ, ಭಾರಿ ಸಂಪನ್ಮೂಲ, ಸಂಪರ್ಕ, ಜಾಣ್ಮೆ ಬೇಡುವ ಕೆಲಸ. ಚಿತ್ರರಂಗದಲ್ಲಿ ಪಡೆದ ಜನಪ್ರಿಯತೆ ಆಧಾರದಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಗಾದಿಗೇರಿದ ಕರುಣಾನಿಧಿ, ಎಂಜಿಆರ್, ಜಯಲಲಿತಾ ಅವರೂ ಪಕ್ಷ ಸ್ಥಾಪನೆ ಮಾಡಿದವರಲ್ಲ. ದ್ರಾವಿಡ ಅಸ್ಮಿತೆಯ ಹೆಸರಿನಲ್ಲಿ ಸ್ಥಾಪನೆಯಾಗಿದ್ದ ಡಿಎಂಕೆ ಮತ್ತು ಎಐಎಡಿಎಂಕೆ ಮೂಲಕ ರಾಜಕೀಯ ಅಧಿಕಾರ ಅನುಭವಿಸಿದವರು.

ಹೊಸ ಪಕ್ಷ ಕಟ್ಟಿದ ಕೆಲವೇ ತಿಂಗಳಲ್ಲಿ ಮುಖ್ಯಮಂತ್ರಿ ಗಾದಿಗೇರಿದ ದಾಖಲೆ ನಿರ್ಮಿಸಿದವರು ತೆಲುಗು ನಟ ಎನ್‌ಟಿಆರ್. ತೆಲುಗರ ಸ್ವಾಭಿಮಾನದ ಹೆಸರಿನಲ್ಲಿ ತೆಲುಗು ದೇಶಂ ಪಕ್ಷ ಕಟ್ಟಿ (1983), ಕೇವಲ ಒಂಬತ್ತು ತಿಂಗಳಲ್ಲಿಯೇ ಅವಿಭಜಿತ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ದೇಶದ ರಾಜಕಾರಣದಲ್ಲಿ ಸಂಚಲನ ಮೂಡಿಸಿದ್ದವರು ಅವರು. ಅವರದೇ ಹಾದಿಯಲ್ಲಿ ಮೆಗಾಸ್ಟಾರ್ ಎಂದು ಹೆಸರಾದ ಚಿರಂಜೀವಿ ಅವರೂ ಪ್ರಜಾರಾಜ್ಯಂ ಪಕ್ಷ ಕಟ್ಟಿದರೂ, ಅವರಿಗೆ ಗೆಲ್ಲಲು ಸಾಧ್ಯವಾಗಿದ್ದು 18 ಸ್ಥಾನಗಳನ್ನು ಮಾತ್ರ. ಅವರು ತಮ್ಮ ಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಿದವರು. ವಿಶೇಷ ಎಂದರೆ, ಚಿರಂಜೀವಿ ಕೈಯಲ್ಲಿ ಆಗದೇ ಇದ್ದುದನ್ನು ಅವರ ತಮ್ಮ ಪವನ್ ಕಲ್ಯಾಣ್ ಸಾಧಿಸಿದ್ದಾರೆ. ಜನಸೇನಾ ಪಕ್ಷ ಸ್ಥಾಪಿಸಿ, ಸತತ ಸೋಲುಗಳನ್ನು ಕಂಡರೂ ರಾಜಕೀಯದಲ್ಲಿಯೇ ಉಳಿದಿರುವ ಅವರು ಪ್ರಸ್ತುತ ಆಂಧ್ರಪ್ರದೇಶದ ಎನ್‌ಡಿಎ ಸರ್ಕಾರದ ಭಾಗವಾಗಿದ್ದಾರೆ; ಉಪಮುಖ್ಯಮಂತ್ರಿಯೂ ಆಗಿದ್ದಾರೆ.



ಎನ್‌ಟಿಆರ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣಾ ಫಲಿತಾಂಶ ಬಂದ ನಂತರ, ರಾಜ್ಯದಲ್ಲಿರುವ ರೋಹಿಂಗ್ಯಾ ಮುಸ್ಲಿಮರು ಗಂಟು ಮೂಟೆ ಕಟ್ಟಿಕೊಂಡು ಮತ್ತೆ ಬಾಂಗ್ಲಾದೇಶಕ್ಕೆ ಹೋಗುತ್ತಿದ್ದಾರೆ' ಎಂದು ಹೇಳುತ್ತಾ, ಭಾರಿ ಸಂಖ್ಯೆಯ ಮುಸ್ಲಿಮರು ಸರಕು ಸರಂಜಾಮುಗಳನ್ನು ಹಿಡಿದು ಕಣಿವೆಯಂತಹ ಜಾಗವನ್ನು ಮರದ ಹಲಗೆಯಿಂದ ಮಾಡಿದ ಮೆಟ್ಟಿಲುಗಳ ಮೂಲಕ ದಾಟುತ್ತಿರುವ ವಿಡಿಯೊವೊಂದನ್ನು ಎಕ್ಸ್‌ನಲ್ಲಿ ಆರುಶಿ ಯಾದವ್ ಎಂಬ ಬಳಕೆದಾರರು ಪೋಸ್ಟ್ ಮಾಡಿದ್ದಾರೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿಕೊಂಡು ಹುಡುಕಿದಾಗ 2025ರ ನವೆಂಬರ್ 30ರಂದು 'ಲಾಂಚ್ ಕ್ಯಾಪ್ಚರ್' ಎಂಬ ಫೇಸ್‌ಬುಕ್ ಖಾತೆಯಲ್ಲಿ ಇದೇ ವಿಡಿಯೊ ಪೋಸ್ಟ್ ಮಾಡಿರುವುದು ಕಂಡಿತು. 'ಚಾರ್ಮೋನಾಯೀ ಮಹಫಿಲ್' (ಬಾಂಗ್ಲಾದೇಶದಲ್ಲಿ ನಡೆಯುವ ಮುಸ್ಲಿಮರ ವಾರ್ಷಿಕ ಸಮಾವೇಶ) ಮುಗಿದ ನಂತರ ಸಾವಿರಾರು ಇಸ್ಲಾಂ ಅನುಯಾಯಿಗಳು ಲಾಂಚ್‌ಗಳಿಗೆ (ಜನರ ಪ್ರಯಾಣಕ್ಕೆ ಬಳಸುವ ವಿಶೇಷ ದೋಣಿಗಳು) ಹತ್ತಿದರು' ಎಂಬ ಅಡಿ ಬರಹ ಈ ಪೋಸ್ಟ್‌ನಲ್ಲಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಡಿದಾಗ 'ಕ್ಲಿಕರ್‌ಪಾಯಿಂಟ್' ಎಂಬ ಫೇಸ್‌ಬುಕ್ ಖಾತೆಯಲ್ಲಿ 2025ರ ಡಿ.16ರಂದು ಇದೇ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ಬಾಂಗ್ಲಾದೇಶದ ಮಾಧ್ಯಮ ಸಂಸ್ಥೆ 'ದಿ ಕಂಟ್ರಿ ಟುಡೇ' ಕೂಡ 2025ರ ನವೆಂಬರ್ 27ರಂದು ಬಾಂಗ್ಲಾದೇಶದ ಬರಿಸಾಲ್ ಜಿಲ್ಲೆಯಲ್ಲಿ ಚಾರ್ಮೋನಾಯೀ ದರ್ಬಾರ್ ಷರೀಫ್‌ನಲ್ಲಿ ನಡೆದ ಚಾರ್ಮೋನಾಯೀ ಮಹಫಿಲ್ ಕುರಿತಾಗಿ ವರದಿ ಪ್ರಕಟಿಸಿತ್ತು. ಬಾಂಗ್ಲಾದೇಶದ ಹಳೆಯ ವಿಡಿಯೊವನ್ನು ಈಗ ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶಕ್ಕೆ ತಳಕು ಹಾಕಿ, ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ವಾಸುದೇವ ನಾಡಿಗ್

ಬಾ ಅತಿಥಿ

ಗಾಸಿಗೊಂಡಂತಿದ್ದ ಮಧ್ಯವಯಸ್ಸಿನ ವ್ಯಕ್ತಿ; ಕಡುಸ್ವಾರ್ಥ ಮತ್ತು ಜಿಪುಣರ ಊರೆಂದೇ ಪ್ರಸಿದ್ಧವಾದ ಈ ಊರಿಗೆ ಬಂದ. ತೀರಾ ಅಪರಿಚಿತ. ನಸುಕಿನಲ್ಲಿ ಬಂದವನೇ ಹಿಡಿ ಅನ್ನಕ್ಕಾಗಿ ಅನೇಕ ಮನೆಗಳ ಬಾಗಿಲನ್ನು ತಟ್ಟಿದ. ಯಾರೂ ಓಗೊಡಲಿಲ್ಲ. ಸೂರ್ಯ ನೆತ್ತಿಗೇರುತ್ತಿದ್ದಂತೆ ಅವನು ಅಲ್ಲೇ ಊರ ಜನನಿಬಿಡ ಬೀದಿಯಲ್ಲಿ ಒಂದು ದೊಡ್ಡ ಮಡಕೆ ತುಂಬಾ ನೀರು ತುಂಬಿಸಿ ಮೂರು ಕಲ್ಲು ಒಂದಿಷ್ಟು ಕಟ್ಟಿಗೆ ಪುರಲೆ ಒಲೆ ತಂದು ಕುದಿಸತೊಡಗಿದ. ಜನರಿಗೆ ಅಚ್ಚರಿ. ಇನ್ನೂ ಒಂದಿಷ್ಟು ಜನ ಸೇರಿದ ಮೇಲೆ ಒಂದು ಕಲ್ಲನ್ನು ನೀರಿಗೆ ಹಾಕಿ ಕುದಿಸಲು ಶುರುಮಾಡಿದ. ಜನ ಕೇಳಿದರೆ, ಕಲ್ಲಿನ ಸೂಪ್ ರುಚಿಯಾಗಿರುತ್ತದೆ ಅಂತ ವಿವರಿಸಿ ಇದಕ್ಕೆ ಸ್ವಲ್ಪ ಉಪ್ಪು ಬೆರೆಸಿದರೆ ಇನ್ನೂ ರುಚಿಯಾಗಿರುತ್ತೆ ಅಂದಾಗ ಒಬ್ಬ ಓಡಿ ಹೋಗಿ ಉಪ್ಪು ತಂದು ಬೆರೆಸಿದ. ಇದಕ್ಕೆ ಏನಾದರೂ ತರಕಾರಿ ಬೆರೆಸಿದರೆ ಇನ್ನೂ ರುಚಿಯಾಗಿರುತ್ತದೆ ಅಂದ. ಇನ್ನೊಬ್ಬ ಹೋಗಿ ಒಂದು ಈರುಳ್ಳಿ, ಒಂದು ಆಲೂಗಡ್ಡೆ ತಂದು ಹಾಕಿದ. ಹೀಗೆ ಬೇರೆ ಬೇರೆ ಬಗೆಯ ತರಕಾರಿ, ಮಸಾಲೆ ಪದಾರ್ಥಗಳನ್ನು ಜನ ಒಬ್ಬೊಬ್ಬರಾಗಿಯೇ ನೀರಿಗೆ ಸೇರಿಸುತ್ತ ಹೋದರು. ಇಡೀ ಊರಿನ ತುಂಬಾ ಕುದಿವ ನೀರಿನಿಂದ ಹೊಮ್ಮುವ ಪರಿಮಳ ಹರಡುತ್ತ ಹೋಯಿತು. ವ್ಯಕ್ತಿ ಎಲ್ಲರ ಮನೆಯಿಂದ ಒಂದೊಂದು ಬಟ್ಟಲು ತರಲು ಸೂಚಿಸಿದಾಗ ರುಚಿಕರವಾದ ಸೂಪ್ ಎಲ್ಲರೂ ಹಂಚಿಕೊಂಡು ಕುಡಿದರು.

ಈ ಬದುಕು ಹೀಗೇ ಅಲ್ಲವೆ? ನಂಬಿಕೆಯ ಮೇಲೆ ನಿಂತಿರುತ್ತದೆ. ಅಪರಿಚಿತ ಅಂತ ಬಾಗಿಲನ್ನೂ ತೆರೆಯದೇ ವಾಪಸ್ ಕಳಿಸಿದ್ದ ಜನರೇ ಅಪರಿಚಿತನನ್ನು ನಂಬಲು ಶುರು ಮಾಡುತ್ತಾರೆ. ಒಂದು ರುಚಿಕರವಾದ ಪೇಯ ಅವರನ್ನು ಹತ್ತಿರ ಸೇರಿಸುತ್ತದೆ. ಕಲ್ಲಿನಿಂದ ಸೂಪ್ ತಯಾರಾಗುತ್ತದೆ ಎಂಬ ಅವನ ಮಾತಿನ ಮೇಲಿದ್ದ ಬಲವಾದ ನಂಬಿಕೆ, ಜನರನ್ನು ಸೇರಿಸಿದ ಭಾವವೇ ಅಗಾಧವಾದದ್ದು. ಕಲ್ಲಿನಿಂದ ಆರಂಭವಾದ ರುಚಿಯಾದ ಸೂಪಿನ ಆಸೆಯಿಂದ ಆ ಜನರೆಲ್ಲ ಸೇರಿದ್ದರೂ ಅದರ ಹಿಂದೆ ನಿಸ್ವಾರ್ಥವಾದ ಕೈ, ಮನಸ್ಸು ಕೆಲಸ ಮಾಡಿದ್ದು ಸುಳ್ಳಲ್ಲ. ಬಾಗಿಲೇ ತೆರೆಯದ, ಪರಸ್ಪರ ಸಹಾಯ, ಕರುಣೆ ತೋರದ ಜನ ಈ ದಿನ ತಮ್ಮ ಮನೆಯ ಒಂದೊಂದು ಪದಾರ್ಥ ಒಂದೇ ನೀರಿಗೆ ಬೆರೆತುಹೋಗುವ ವಿಸ್ಮಯದ ರುಚಿಗೆ ಮಾರುಹೋಗಿದ್ದರು, ಒಂದಾದರು.

ಕೈಚೆಲ್ಲಿ ಅಸಹಾಯಕನಾದ ಒಬ್ಬ ಮನುಷ್ಯನಿಗೆ ಬೇಕಾದುದು ಒಂದು ಹಿಡಿ ಭರವಸೆ ಮತ್ತು ಗಾಢವಾದ ನಂಬಿಕೆ. ಮನೆ ಮನ ಮತ್ತು ರಾಜ್ಯವನ್ನು ಕಟ್ಟುವ ಬಗೆಯೂ ಇದೇ ಅಲ್ಲವೆ. ಆ ಊರಿನ ಸ್ವಭಾವವನ್ನು ಅರಿತೇ ಪಾಠ ಕಲಿಸಲು ಬಂದಂತಿದ್ದ ಆ ವ್ಯಕ್ತಿಯ ಅಗತ್ಯ ಅದೆಷ್ಟೋ ಮನೆ ಊರು ರಾಜ್ಯ ಮತ್ತು ಪ್ರಾಂತ್ಯಕ್ಕೆ ಇರುತ್ತದೆ. ಒಬ್ಬ ಇಂತಹ 'ರಿಪೇರಿ' ಮಾಡುವವನ ಅಗತ್ಯ ಇದೆ. ಮುರಿದ ಮನ, ಅಪನಂಬಿಕೆಗಳ ಮನೆ, ನಿರ್ಲಕ್ಷಿತ ಆಸೆ ಆಕಾಂಕ್ಷೆಗಳಿಗೆ ಒಬ್ಬ ಮಾಂತ್ರಿಕ ಮತ್ತು ಅವನ ಸ್ಪರ್ಶದ ತುರ್ತು ಇದು. ಬಂದು ಜೀವ ತುಂಬಿ ಮೌನವನ್ನು ಮುರಿವ, ಮುಚ್ಚಿದ ಬಾಗಿಲನ್ನು ತೆರೆವ ಒಬ್ಬ ಅತಿಥಿಯನ್ನು ಆಹ್ವಾನಿಸಬೇಕಾಗಿದೆ; ಕುವೆಂಪು ಅವರ 'ತೆರೆದಿದೆ ಮನೆ ಓ ಬಾ ಅತಿಥಿ' ರಚನೆ ಮತ್ತೆ ಮತ್ತೆ ಕೇಳಿ ಬರುವ ಹಾಗೆ.

ಗುಂಡಣ್ಣ

ಪದಬಂಧ 6394

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಧ್ಯಾಹ್ನದ ಹೊತ್ತು ಏರಿದ ಅಮಲು! (2)
3.ಆಸ್ತಿಯಲ್ಲಿ ಭಾಗವನ್ನು ಪಡೆಯುವವನು (3)
5.ಲಲಾಟಲಿಪಿ ನಿಮಗೆ ಕಾಣಿಸುತ್ತಿದೆಯೇ (5)
6.ಗಡಗಡ ನಡುಗುವಂತೆ ಬಂದೆರಗಿದ ಗಂಡು ಕೋತಿ (3)
7.ಪಚನಾಂಗ ಇಲ್ಲಿದೆ (3)
8.ಅಳಿಯತನಕ್ಕೆ ವಹಿಸಿಕೊಂಡಿರುವ ಮಧ್ಯಸ್ತಿಕೆ! (5)
9.ನಿಧಾನವಾಗಿ ರೂಢಿಸಿಕೊಂಡ ರೀತಿ! (3)
10. ಈತ ದೇವರನ್ನೇ ನಂಬದವನು! (3)
13.ಪ್ರಾಣವಾಯು ಇಲ್ಲಿದೆ (5)
14.ಕರದಲ್ಲಿರುವುದು ಪರಿಷ್ಕತವಾಗದಿರುವ ಪ್ರತಿ (3)
15.ಅಚ್ಚುಮೆಚ್ಚಿನ ಕಡಿಗತ್ತಿ! (2)

ಮೇಲಿಂದ ಕೆಳಕ್ಕೆ

1.ಮಗನಲ್ಲಿ ಕಾಣಿಸಿರುವ ಅಪಸ್ಮಾರ (4)
2.ಮೂಗಿನಲ್ಲಿ ಸುರಿಯುವ ಶ್ಲೇಷ್ಮ (3)
3.ಬಾಯಾರಿಕೆ ಹೀಗೆ ಬಂದಿದೆ (2)
4.ಸೂರ್ಯನ ಇನ್ನೊಂದು ಹೆಸರು (4)
5.ಅಶ್ವದ ಮೊಗವಿದು (5)
7.ಈ ಲೀಡರ್, ಪಕ್ಕಾ ಕನ್ನಡಿಗ! (5)
9.ಹಂಚಿಕೆದಾರ ಇಲ್ಲಿದ್ದಾನೆ (4)
11.ಅಕ್ಕಿ ತೊಳೆದ ನೀರು (4)
12.ಮಜವಾಗಿ ಹಂತ ಬಂದಿದೆ (3)
13.ಆಡುವಾಗ ಅಡ್ಡ ಬಂದಿರುವ ಗಂಡುಕುರಿ (2)



6393ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿತಾಪ 3.ಕೂಗಳತೆ 5.ಮಾರ್ಮಿಕ 6.ಅವಗುಣ 8.ಷರಬತ್ತು 10.ಮತದಾನ 12.ತರಗತಿ 13.ವಕ್ತಾರ 16.ಪರಿಹಾಸ 17.ಮಧುಚಂದ್ರ

ಮೇಲಿಂದ ಕೆಳಕ್ಕೆ:
1.ಪತ್ತೆ 2.ಪರಿಮಾಣ 3.ಕೂಲಂಕಷ 4.ತೆಪ್ಪ 7.ವರಾತ 9.ಬಳಗ 11.ನವಮಾಸ 12.ತರತಮ 14.ಶಾಪ 15.ಇಂದ್ರ

ಸುಡೊಕು 6777

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		4		5			9	
			1		9	6		5
6		5		3			1	
					4	1		9
9		1	5	8			4	
4				1		3		7
			3		7			1
	6			9	1	7		
1				2			6	4

6776 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

06 ಮೇ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ಥಿ ಗಂ. 7-52 ನಕ್ಷತ್ರ: ಮೂಲ ಗಂ. 15-54 ಯೋಗ: ಸಿದ್ಧ ಗಂ. 25-12 ಕರಣ: ಬಾಲವ ಗಂ.7-52, ಮೇಷ ಮಾಸದ 23 ನೇ ದಿನ. ಮಳೆ ನಕ್ಷತ್ರ : ಭರಣಿ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ,ಸೂರ್ಯೋದಯ : 06-11 ಸೂರ್ಯಾಸ್ತ : 06-43 ಮುಸ್ಲಿಂ ದಿನಾಂಕ : 18 ಜುಲ್ಕಾದಾ , ಅದೃಷ್ಟ ಸಂಖ್ಯೆ : 4, 9

ಮೇಷ: ವೃತ್ತಿಯಲ್ಲಿ ಅಧಿಕಾರಿಗಳು ಕಾರ್ಯಸಾಧನೆ ಗುರುತಿಸಿ ಸೌಲಭ್ಯ ಒದಗಿಸಿಕೊಡುವರು. ಮಗನಿಗಾಗಿ ವೈದ್ಯಕೀಯ ಖರ್ಚು ಸಂಭವಿಸಬಹುದು. ಬಂಧುಗಳಲ್ಲಿ ನಿಷ್ಠುರ ವರ್ತನೆಗೆ ಆಸ್ಪದ ನೀಡುವುದು ಸರಿಯಲ್ಲ.

ವೃಷಭ: ಗೃಹನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಆರ್ಥಿಕತೆ ತೊಂದರೆ ಸೃಷ್ಟಿ ಮಾಡಬಹುದು. ತೀಕ್ಷ್ಣ ಮಾತುಗಳಿಂದ ಇನ್ನೊಬ್ಬರ ಮನಸ್ಸಿಗೆ ನೋವಾಗುವ ಸಂದರ್ಭ ಬರಲಿದೆ. ತೈಲ ಉತ್ಪನ್ನಗಳ ಮಾರಾಟದಿಂದ ಲಾಭ.

ಮಿಥುನ: ಬೇರೆಯವರ ಸಹಾಯ ಅಪೇಕ್ಷಿಸದೆ ವಿಶ್ವಾಸದಿಂದ ಕಾರ್ಯೋನ್ಮುಖರಾಗಿ. ಜಯ ದೊರೆಯುತ್ತದೆ. ಮಿತ್ರರ ಉಪಾಯವೊಂದರಿಂದ ಸಂಕಟದಿಂದ ಪಾರಾಗುವಂತಾಗಲಿದೆ. ಆಲಂಕಾರಿಕ ವಸ್ತುಗಳಿಗೆ ಖರ್ಚು ಮಾಡುವಿರಿ.

ಕರ್ಕಾಟಕ: ಕನಸುಗಳಿಗೆ ಹಿರಿಯರ ಬೆಂಬಲ ಒದಗಿ ಬರಲಿದೆ. ಸಂಗಾತಿಯ ಅಭಿಪ್ರಾಯಗಳಿಗೂ ಗಮನಹರಿಸಿ. ಮೋಜು ಮಸ್ತಿಯ ಆಲೋಚನೆಯಿಂದ ದೂರವಿರುವ ಪ್ರಯತ್ನ ಒಳ್ಳೆಯದು.

ಸಿಂಹ: ಸಮಸ್ಯೆಗಳಿಗೆ ಕಾರಣವಾಗಿರುವ ಜನ, ಪರಿಸ್ಥಿತಿ ಬಗ್ಗೆ ಮಾಹಿತಿ ಇಲ್ಲದಿದ್ದರೆ ತೊಂದರೆ ಉಲ್ಬಣಿಸುವ ಸಾಧ್ಯತೆ. ಸೂಕ್ಷ್ಮ ಮನಸ್ಸಿನ ನಿಮಗೆ ಹೆಚ್ಚಿನ ಜವಾಬ್ದಾರಿ ಜತೆಗೆ ರಹಸ್ಯ ಭೇದಿಸುವ ಹುದ್ದೆಗೆ ವರ್ಗವಾಗಲಿದೆ.

ಕನ್ಯಾ: ಜಲೋತ್ಪನ್ನ ವಸ್ತುಗಳ ಮಾರಾಟಗಾರರಿಗೆ ಅಥವಾ ನೀರಿಗೆ ಸಂಬಂಧಿಸಿದ ವ್ಯವಹಾರ ನಡೆಸುವವರಿಗೆ ಅಧಿಕ ಆದಾಯ ಇರಲಿದೆ. ಮಕ್ಕಳ ಆಸೆಗೆ ಅಡ್ಡಗಾಲು ಹಾಕಿ ಮನಸ್ಸನ್ನು ನೋವಿಸುವ ಕೆಲಸವನ್ನು ಮಾಡದಿರಿ.

ತುಲಾ: ಸಂಬಂಧಗಳನ್ನು ಗಟ್ಟಿ ಮಾಡಿಕೊಳ್ಳದೇ ಇರುವುದರಿಂದ ವೈಯಕ್ತಿಕ ಜೀವನದಲ್ಲಿ ವಿಷಾದ, ದುಃಖ ಆವರಿಸುವ ಲಕ್ಷಣಗಳಿವೆ. ಆದಾಯಕ್ಕೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗಲಾರದು.

ವೃಶ್ಚಿಕ: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಕುಶಲಮತಿಯಾಗಿರುವ ನೀವು ಅವಸರದಲ್ಲಿ ಸಣ್ಣ ತಪ್ಪು ಮಾಡುವ ಲಕ್ಷಣಗಳಿದೆ. ಬಿಡುವಿನ ಸಮಯವನ್ನು ಅತ್ಯಂತ ಪ್ರಯೋಜನಕರವಾಗಿ ಬಳಸುವಿರಿ.

ಧನು: ಸಾಕಷ್ಟು ಸಮಸ್ಯೆಗಳು ಆತ್ಮವಿಶ್ವಾಸಕ್ಕೆ ಅಡ್ಡಿ ಉಂಟುಮಾಡಲಿದೆ. ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇ ಬೇಕಾದ ಪರಿಸ್ಥಿತಿ ತೋರಲಿದೆ. ರಾಸಾಯನಿಕ ವಸ್ತುಗಳ ರಫ್ತು ವ್ಯವಹಾರ ನಡೆಸುವವರು ನಿಯಮಕ್ಕೆ ಬದ್ಧರಾಗಿರಿ.

ಮಕರ: ಕೆಲಸದ ನಿಮಿತ್ತ ದೂರ ಪ್ರಯಾಣ ಬೆಳೆಸುವುದು ಸರಿಯಲ್ಲ. ಅನಿವಾರ್ಯ ಎನಿಸಿದರೆ ಸ್ನೇಹಿತರೊಂದಿಗೆ ಪ್ರಯಾಣ ಮಾಡಿ. ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಲು ಸೂಕ್ತವಾದ ಸಮಯ.

ಕುಂಭ: ಅನಿಸಿಕೆಗಳನ್ನು ಉತ್ತಮ ರೀತಿಯಲ್ಲಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗುವುದು ಕಷ್ಟವೆನಿಸುತ್ತದೆ. ದುರಭ್ಯಾಸಗಳು ಹೊಂದಿದ ಸ್ನೇಹಿತರಿಂದ ಆಪತ್ತಿಗೆ ಸಿಲುಕಬಹುದು. ಧಾರ್ಮಿಕ ಕಾರ್ಯದಿಂದ ಸಂತೋಷ ಸಿಗುವುದು.

ಮೀನ: ತಪ್ಪುಗಳನ್ನು ತಿದ್ದಿಹೇಳುವಲ್ಲಿ ಹಿರಿಯ ಅಧಿಕಾರಿಗಳು ನೆರವಿಗೆ ನಿಲ್ಲುವರು. ಬಟ್ಟೆ ವ್ಯಾಪಾರಿಗಳಿಗೆ ರೇಷ್ಮೆ ಮತ್ತು ಹತ್ತಿ ಬಟ್ಟೆಯ ಮೇಲೆ ಅಧಿಕ ಬಂಡವಾಳ ಹೂಡುವ ಬಗ್ಗೆ ಯೋಚನೆ ಬರಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,119
ಇಂದಿನ ಅಂತ್ಯ:	24,032
ದಿನದ ಕನಿಷ್ಠ:	22,181
	86

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹590
	12 ಕ್ಕೆ	₹84
ಮೈಸೂರು:	100 ಕ್ಕೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹300-565
ದ್ವಿತಳಿ (ಬಿ.ವಿ)	₹380-780

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹247
ಆರ್‌ಎಸ್‌ಎಸ್-5	₹242
ಗುಡ್ ಲಾಟ್	₹212

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹23600
ಎಸಿ	₹14050
ಆರ್‌ಪಿ	₹18150
ಆರ್‌ಸಿ	₹9800

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1640 (1610)
ಸೋಯಾ (ರಿಫೈನ್ಡ್)	₹1520(1530)
ಸೂರ್ಯಕಾಂತಿ (ರಿಫೈನ್ಡ್)	₹1670 (1660)
ಪಾಮೋಲಿನ್	₹1480 (1460)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1000-1400
ಮಧ್ಯಮ	₹600-1000
ಸಣ್ಣ	₹200-600

ಎಲ್‌ಆ್ಯಂಡ್‌ಟಿ ಲಾಭ ಇಳಿಕೆ

ನವದೆಹಲಿ (ಪಿಟಿಐ): ಲಾರ್ಸನ್ ಆ್ಯಂಡ್ ಟೂಬ್ರೊ ಕಂಪನಿಯ ಮಾರ್ಚ್ ತ್ರೈಮಾಸಿಕದ ನಿವ್ವಳ ತೆರಿಗೆ ನಂತರದ ಲಾಭವು (ಪಿಎಟಿ) ಶೇ 3ರಷ್ಟು ಇಳಿಕೆ ಆಗಿದ್ದು, ₹5,326 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹5,497 ಕೋಟಿ ತೆರಿಗೆ ನಂತರದ ಲಾಭ ಕಂಡಿತ್ತು.

‘ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕಕ್ಕೆ ಹೋಲಿಸಿದರೆ ಈ ಬಾರಿ ಪಿಎಟಿ ಇಳಿಕೆ ಆಗಿರುವುದಕ್ಕೆ ಒಂದು ಮುಖ್ಯ ಕಾರಣ, ಹಿಂದಿನ ವರ್ಷದಲ್ಲಿ ಆಗಿದ್ದ ವಿಶೇಷ ಲಾಭ’ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಆದರೆ ಈ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಾರ್ಯಾಚರಣೆ ವರಮಾನವು ಶೇ 11ರಷ್ಟು ಹೆಚ್ಚಳ ಕಂಡು ₹82,762 ಕೋಟಿಗೆ ತಲುಪಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹74,392 ಕೋಟಿ ಆಗಿತ್ತು.

ಎಲ್‌ಆ್ಯಂಡ್‌ಟಿ ಸಮೂಹದ ಒಟ್ಟು ಕಾರ್ಯಾದೇಶಗಳ ಮೊತ್ತವು ಶೇ 28ರಷ್ಟು ಜಾಸ್ತಿ ಆಗಿದ್ದು ದಾಖಲೆಯ ₹7.40 ಲಕ್ಷ ಕೋಟಿಗೆ ತಲುಪಿದೆ. ಒಟ್ಟು ಕಾರ್ಯಾದೇಶದಲ್ಲಿ ವಿದೇಶಗಳ ಕಾರ್ಯಾದೇಶದ ಪಾಲು ಶೇ 52ರಷ್ಟು ಇದೆ.

ಕಂಪನಿಯ ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹38 ಅಂತಿಮ ಲಾಭಾಂಶ ನೀಡಲು ಶಿಫಾರಸು ಮಾಡಿದೆ.

ಎಂಎಸ್‌ಎಂಇ: ಸಾಲ ಖಾತರಿ

ಯೋಜನೆಗೆ ಮಂಗಳವಾರ ಒಪ್ಪಿಗೆ ನೀಡಿದ ಕೇಂದ್ರ ಸಚಿವ ಸಂಪುಟ

ನವದೆಹಲಿ (ಪಿಟಿಐ): ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ (ಎಂಎಸ್‌ಎಂಇ) ಉದ್ದಿಮೆಗಳನ್ನು ಗುರಿಯಾಗಿಸಿಕೊಂಡ, ₹18,100 ಕೋಟಿ ಮೊತ್ತದ ತುರ್ತು ಸಾಲ ಖಾತರಿ ಯೋಜನೆಗೆ (ಇಸಿಎಲ್‌ಜಿಎಸ್) ಕೇಂದ್ರ ಸಚಿವ ಸಂಪುಟವು ಮಂಗಳವಾರ ಒಪ್ಪಿಗೆ ನೀಡಿದೆ.

ಈ ಯೋಜನೆಯು ವಿಮಾನಯಾನ ಕಂಪನಿಗಳು ಹಾಗೂ ಇತರ ಕೆಲವು ಕಂಪನಿಗಳನ್ನು ಕೂಡ ಒಳಗೊಳ್ಳಲಿದೆ. ಪಶ್ಚಿಮ ಏಷ್ಯಾದಲ್ಲಿನ ಸಮರದ ಕಾರಣದಿಂದಾಗಿ ತೊಂದರೆಗೆ ಸಿಲುಕಿರುವ ಉದ್ದಿಮೆಗಳಿಗೆ ಕಾರ್ಯಾಚರಣೆ ಬಂಡವಾಳವನ್ನು ಒದಗಿಸಲು ಯೋಜನೆಯು ನೆರವಾಗಲಿದೆ.

ಯೋಜನೆಯು ಹೆಚ್ಚುವರಿಯಾಗಿ ₹2.55 ಲಕ್ಷ ಕೋಟಿ ಮೊತ್ತದ ಸಾಲ ನೀಡಲು ನೆರವಾಗಲಿದೆ. ಸಂಪುಟದ ತೀರ್ಮಾನ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ವಿವರ ಒದಗಿಸಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರು ‘ಎಂಎಸ್‌ಎಂಇ ಹಾಗೂ ವಿಮಾನಯಾನ ಉದ್ದಿಮೆಗಳಿಗೆ ಕೂಡ ಇದರಿಂದಾಗಿ ನೆರವು ಸಿಗುತ್ತದೆ’ ಎಂದು ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನಿಂದಾಗಿ ಸೃಷ್ಟಿಯಾಗಿರುವ ಸವಾಲುಗಳನ್ನು ಎದುರಿಸಲು ಈ ಯೋಜನೆಯು ಉದ್ದಿಮೆಗಳಿಗೆ ನೆರವು ಒದಗಿಸುತ್ತದೆ ಎಂದು ಕೇಂದ್ರ ಸರ್ಕಾರವು ಹೇಳಿಕೆಯಲ್ಲಿ ತಿಳಿಸಿದೆ.

‘ಯೋಜನೆಯು ಉದ್ದಿಮೆಗಳಿಗೆ ತಮ್ಮ ವಹಿವಾಟನ್ನು ಉಳಿಸಿಕೊಳ್ಳಲು ನೆರವಾಗುತ್ತದೆ, ಉದ್ಯೋಗಾವಕಾಶಗಳನ್ನು ಉಳಿಸುತ್ತದೆ, ಪೂರೈಕೆ ವ್ಯವಸ್ಥೆಯನ್ನು ರಕ್ಷಿಸುತ್ತದೆ ಎಂಬ ನಿರೀಕ್ಷೆ ಇದೆ. ಉದ್ದಿಮೆಗಳಿಗೆ, ಅದರಲ್ಲೂ ಮುಖ್ಯವಾಗಿ ಎಂಎಸ್‌ಎಂಇ ವಲಯ ಹಾಗೂ ವಿಮಾನಯಾನ ಕಂಪನಿಗಳಿಗೆ ಬೇಕಿರುವ ಹೆಚ್ಚುವರಿ ಕಾರ್ಯಾಚರಣೆ ಬಂಡವಾಳವು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಲಭ್ಯವಾಗುವಂತೆ ಮಾಡುವಲ್ಲಿ ಈ ಯೋಜನೆಯು ಬಹಳ ದೊಡ್ಡ ಹೆಜ್ಜೆಯಾಗಿರಲಿದೆ’ ಎಂದು ಕೂಡ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಅಗತ್ಯ ಸಮಯದಲ್ಲಿ ನಗದು ಲಭ್ಯತೆಯನ್ನು ಖಾತರಿಪಡಿಸುವ ಮೂಲಕ ಈ ಯೋಜನೆಯು ಉದ್ದಿಮೆಗಳನ್ನು ಉಳಿಸಲಿದೆ ಹಾಗೂ ಉದ್ಯೋಗ ನಷ್ಟವನ್ನು ತಪ್ಪಿಸಲಿದೆ. ದೇಶಿ ಉತ್ಪಾದನೆಯು ಅಡೆತಡೆಗಳು ಇಲ್ಲದಂತೆ ನಡೆಯಲು ಸಹಾಯ ಮಾಡಲಿದೆ ಎಂದು ಸರ್ಕಾರ ಹೇಳಿದೆ.

ಎಂಎಸ್‌ಎಂಇ ವಲಯದ ಉದ್ದಿಮೆಗಳು ಹಾಗೂ ವಿಮಾನಯಾನ ಕಂಪನಿಗಳು ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಕಾರಣದಿಂದಾಗಿ ಗಣನೀಯ ಪ್ರಮಾಣದ ಹಣಕಾಸಿನ ಸಮಸ್ಯೆ ಎದುರಿಸುತ್ತಿವೆ.

ಈ ಯೋಜನೆಯು ಎಂಎಸ್‌ಎಂಇ ವಲಯದ ಉದ್ದಿಮೆಗಳ ಶೇ 100ರಷ್ಟು ಸಾಲದ ಅಗತ್ಯಕ್ಕೆ ಖಾತರಿ ಒದಗಿಸಲಿದೆ. ಎಂಎಸ್‌ಎಂಇ ಅಲ್ಲದ ಉದ್ದಿಮೆಗಳ ಸಾಲದ ಶೇ 90ರಷ್ಟಕ್ಕೆ ಖಾತರಿ ಒದಗಿಸಲಿದೆ. ರಾಷ್ಟ್ರೀಯ ಸಾಲ ಖಾತರಿ ಟ್ರಸ್ಟಿ ಕಂಪನಿಯು ಸಾಲದಾತ ಕಂಪನಿಗಳಿಗೆ ಖಾತರಿ ಒದಗಿಸುವ ಕೆಲಸ ಮಾಡಲಿದೆ ಎಂದು ಪ್ರಕಟಣೆಯು ಹೇಳಿದೆ.

ವಿಮಾನಯಾನ ವಲಯದ ಕಂಪನಿಗಳಿಗೆ ಸಾಲ ಖಾತರಿಯ ಅವಧಿಯು ಸಾಲದ ಮೊದಲ ವಿತರಣೆಯಿಂದ ಏಳು ವರ್ಷಗಳವರೆಗೆ ಚಾಲ್ತಿಯಲ್ಲಿ ಇರಲಿದೆ. ಎಂಎಸ್‌ಎಂಇ ಮತ್ತು ಎಂಎಸ್‌ಎಂಇ ಅಲ್ಲದ ಉದ್ದಿಮೆಗಳಿಗೆ ಇದು ಐದು ವರ್ಷಗಳ ಅವಧಿಯದ್ದಾಗಿರಲಿದೆ.

ಕೊರೊನಾ ವೈರಾಣುವಿನ ಕಾರಣದಿಂದಾಗಿ ಉಂಟಾಗಿದ್ದ ಸಾಂಕ್ರಾಮಿಕದ ಆರ್ಥಿಕ ಪರಿಣಾಮಗಳನ್ನು ಎದುರಿಸಲು ಉದ್ದಿಮೆಗಳಿಗೆ ನೆರವು ನೀಡುವ ಉದ್ದೇಶದಿಂದ ಸಾಲ ಖಾತರಿ ಯೋಜನೆಯನ್ನು ಕೇಂದ್ರ ಸರ್ಕಾರವು 2020ರ ಮೇ ತಿಂಗಳಲ್ಲಿ ಮೊದಲ ಬಾರಿಗೆ ಆರಂಭಿಸಿತ್ತು.

WAN-IFRA I COLOR QUALITY CLUB 2026-28 I V1

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಬಾಬು ರಾವ್, ಮಡಿಕೇರಿ, ಕೊಡಗು

- **ಪ್ರಶ್ನೆ: ಹೂಡಿಕೆಗೆ ಸಂಬಂಧಪಟ್ಟು ನಾನು ಅನೇಕ ಮಾಹಿತಿ ಓದಿದ್ದೇನೆ. ಅದರಲ್ಲೂ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ನನಗೆ ಆಸಕ್ತಿ. ಷೇರು ಮಾರುಕಟ್ಟೆಯಲ್ಲಿ ಷೇರುಗಳ ಗುಣಮಟ್ಟವನ್ನು ಆಯಾ ಕಂಪನಿಯ ಆರ್ಥಿಕ ಮಾಹಿತಿ ಹಾಗೂ ತಾಂತ್ರಿಕ ವಿವರಗಳ ಮೂಲಕ ವಿಶ್ಲೇಷಿಸಲಾಗುತ್ತದೆ. ಆದರೆ ಮ್ಯೂಚುವಲ್ ಫಂಡ್‌ಗಳ ಬಗ್ಗೆ ಹಾಗೂ ಹೂಡಿಕೆಗೂ ಮುನ್ನ ಅವುಗಳ ಗುಣಮಟ್ಟ, ಮಾರುಕಟ್ಟೆ ಸ್ವಭಾವ ತಿಳಿದುಕೊಳ್ಳಲು ಪ್ರತಿದಿನದ ಎನ್‌ಎವಿ ಅಲ್ಲದೆ ಇನ್ನಾವುದಾದರೂ ಮಾನದಂಡಗಳಿವೆಯೇ?**

ಉತ್ತರ: ಸಾಮಾನ್ಯವಾಗಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮುನ್ನ ದಿಕ್ಸೂಚಿ ಇಂಡೆಕ್ಸ್ ಆಧರಿಸಿ ಅಥವಾ ಆಯಾ ವಲಯಗಳಿಗೆ ಸಂಬಂಧಿಸಿದ ಇಂಡೆಕ್ಸ್ ಆಧರಿಸಿ ಹೂಡಿಕೆ ನಿರ್ಧಾರ ಕೈಗೊಳ್ಳುವುದು ಹೂಡಿಕೆದಾರರ ಮೊದಲ ಆಯ್ಕೆಯಾಗಿರುತ್ತದೆ. ಮಾರುಕಟ್ಟೆ ಶೇ 5-10ರಷ್ಟು ಕುಸಿದಾಗ ಹೆಚ್ಚುವರಿ ಹೂಡಿಕೆ ಮಾಡುವ ಅಥವಾ ಹೊಸ ಹೂಡಿಕೆ ಮಾಡುವ ನಿರ್ಧಾರ ಇಂತಹ ಹಂತದಲ್ಲಿ ನಡೆಯುತ್ತದೆ. ಆದರೆ ಈ ನಿರ್ಧಾರ ಕೈಗೊಂಡ ನಂತರ, ಫಂಡ್‌ಗಳ ಅಂತಿಮ ಆಯ್ಕೆಯಲ್ಲಿ ಕೆಲವೆಲ್ಲ ಅಂಕಿಅಂಶಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ.

ಮ್ಯೂಚುವಲ್ ಫಂಡ್ ಹೂಡಿಕೆಯನ್ನು ವಿಶ್ಲೇಷಿಸುವಾಗ ನಿತ್ಯದ ಎನ್‌ಎವಿ ನೋಡುವುದರಿಂದ ಮಾತ್ರ ಸಮಗ್ರ ಚಿತ್ರಣ ಸಿಗುವುದಿಲ್ಲ. ಎನ್‌ಎವಿ ಮೌಲ್ಯದ ಸೂಚಕ; ಆದರೆ ಹೂಡಿಕೆಯ ಗುಣಮಟ್ಟ, ಫಂಡ್ ನಿರ್ವಹಣಾ ಸಾಮರ್ಥ್ಯ ಮತ್ತು ರಿಸ್ಕ್-ರಿಟರ್ನ್ ಸಮತೋಲನವನ್ನು ಅರ್ಥಮಾಡಿಕೊಳ್ಳಲು ಇನ್ನಷ್ಟು ಮಾನದಂಡಗಳನ್ನು ಪರಿಗಣಿಸಬೇಕು. ಹೀಗಾಗಿ ಹೂಡಿಕೆ ಮಾಡಿದ ನಂತರವೂ ನಿಯಮಿತವಾಗಿ ವಿಮರ್ಶೆ ಮಾಡುವುದು ಮುಖ್ಯ. ಅದನ್ನು ಅಲ್ಪಾವಧಿಯಲ್ಲಾಗುವ ಬದಲಾವಣೆಯ ಆಧಾರದಲ್ಲಿ ತೀರ್ಮಾನ ಮಾಡದೆ, ನಿಯಮಿತ ಹಾಗೂ ವ್ಯವಸ್ಥಿತ ವಿಧಾನದಲ್ಲಿ ಮಾಡಬೇಕು. ಅವುಗಳಲ್ಲಿ ಪ್ರಮುಖ ಅಂಶಗಳನ್ನು ನೀವು ನಿಮ್ಮ ಹೂಡಿಕೆ ನಿರ್ಧಾರ ಕೈಗೊಳ್ಳುವ ಮೊದಲು ತಿಳಿದುಕೊಳ್ಳಿ.

1. ಗಳಿಕೆ ವಿಶ್ಲೇಷಣೆಯಲ್ಲಿ ಎಕ್ಸ್‌ಐಆರ್‌ಆರ್ ಅಥವಾ ಸಿಎಜಿಆರ್ ಮೂಲಕ 1, 3, 5 ವರ್ಷದ ಅವಧಿಯಲ್ಲಿ ಫಂಡ್‌ನ ಸಾಧನೆಯನ್ನು ಅದೇ ವರ್ಗದ ಹೂಡಿಕೆಗಳ ಸರಾಸರಿ ಗಳಿಕೆ ಮತ್ತು ಸೂಚ್ಯಂಕದ ಗಳಿಕೆ ಜೊತೆ ಹೋಲಿಕೆ ಮಾಡಬೇಕು. ಇವುಗಳಲ್ಲಿ ಉತ್ತಮ ಗಳಿಕೆ ನೀಡಿದ ಮಾಹಿತಿಯ ಆಧಾರದ ಮೇಲೆ ಮೊದಲ ಹಂತದ ಆಯ್ಕೆ ನಡೆಯುತ್ತದೆ. ಈ ಹಿಂದಿನ ಲಾಭ-ನಷ್ಟ ಮುಂದಿನ ಹೂಡಿಕೆಗೆ ನೇರವಾಗಿ ಸಂಬಂಧಿಸಿರದಿದ್ದರೂ, ಅವು ಮಾರುಕಟ್ಟೆಯ ವಿವಿಧ ಸನ್ನಿವೇಶಗಳು ನಮ್ಮ ಹೂಡಿಕೆಯ ಮೇಲೆ ಹೇಗೆ ಪರಿಣಾಮ ಬೀರಿವೆ ಎನ್ನುವುದನ್ನು ನಿಖರವಾಗಿ ಪ್ರತಿಬಿಂಬಿಸುತ್ತವೆ.

2. ನಂತರ ನಾವು ವಿಮರ್ಶಿಸುವ ಫಂಡ್‌ಗಳು ಹಿಂದಿನ ಸರಾಸರಿ ಮೌಲ್ಯದಿಂದ ಎಷ್ಟು ವ್ಯತ್ಯಾಸದಲ್ಲಿ ಇದೆ ಎಂಬುದನ್ನು ತೋರಿಸುವ ಸ್ಟ್ಯಾಂಡರ್ಡ್ ಡೀವಿಯೇಷನ್ ಪ್ರಮಾಣ ನೋಡಬೇಕು. ಇವು ಫಂಡ್ ಒಂದರ ಸಂವೇದನೆ (ವೋಲಾಟಲಿಟಿ) ಸೂಚಿಸುತ್ತದೆ. ಉದಾಹರಣೆಗೆ, ಎರಡು ಫಂಡ್‌ಗಳು ಶೇ 12 ಸರಾಸರಿ ಗಳಿಕೆ ನೀಡಿದರೂ, ಫಂಡ್ ‘ಎ’ಯ ಸ್ಟ್ಯಾಂಡರ್ಡ್ ಡಿವಿಯೇಷನ್ ಶೇ 10 ಮತ್ತು ಫಂಡ್ ‘ಬಿ’ ಯದು ಶೇ 18 ಇದ್ದರೆ, ಫಂಡ್ ‘ಎ’ ಹೆಚ್ಚು ಸ್ಥಿರ ಎಂದು ಅರ್ಥ. ಕಾರಣ, ಕಡಿಮೆ ಸಂವೇದನೆ ಹೊಂದಿ ಅದು ಶೇ 12ರಷ್ಟು ಲಾಭ ನೀಡುತ್ತದೆ.

3. ಶಾರ್ಪ್ ಸೂಚ್ಯಂಕ: ನಾವು ಹೊಂದಿರುವ ಒಟ್ಟು ಹೂಡಿಕೆಗೆ ಸಂಬಂಧಿಸಿ, ನಾವು ಹೆಚ್ಚುವರಿ ರಿಸ್ಕ್ ತೆಗೆದುಕೊಳ್ಳಲು ನಿರ್ಧರಿಸಿದರೆ ಆ ನಿರ್ಧಾರಕ್ಕೆ ಎಷ್ಟು ಹೆಚ್ಚುವರಿ ಗಳಿಕೆ ಸಿಗುತ್ತದೆ ಎಂಬುದನ್ನು ಇದು ತೋರಿಸಿಕೊಡುತ್ತದೆ. ಉದಾಹರಣೆಗೆ, ಫಂಡ್ ‘ಎ’ 1.2 ಮತ್ತು ಫಂಡ್ ‘ಬಿ’ 0.7 ಶಾರ್ಪ್ ಸೂಚ್ಯಂಕ ಹೊಂದಿದ್ದರೆ, ಫಂಡ್ ‘ಎ’ ಹೆಚ್ಚುವರಿಯಾಗಿ ತೆಗೆದುಕೊಂಡ ಆರ್ಥಿಕ ಅಪಾಯಕ್ಕೆ ಎಷ್ಟು ಹೆಚ್ಚುವರಿ ಉತ್ತಮ ಲಾಭ ನೀಡುತ್ತದೆ ಎಂಬುದನ್ನು ಸೂಚಿಸುತ್ತದೆ. ಹೀಗಾಗಿ ನಮ್ಮ ಆಯ್ಕೆ ಹೆಚ್ಚಿನ ಶಾರ್ಪ್ ಸೂಚ್ಯಂಕ ಇರುವ ಫಂಡ್ ಆಗಿರಬೇಕು.

4. ಸೋರ್ಟಿನೊ ರೇಷ್ಯೊ: ಮೇಲೆ ಹೇಳಿರುವ ಶಾರ್ಪ್ ಸೂಚ್ಯಂಕಕ್ಕೆ ತದ್ವಿರುದ್ಧವಾದುದು ಇದು. ಫಂಡ್‌ಗಳು ಅಪಾಯವನ್ನು ಎಷ್ಟು ಪ್ರಬಲವಾಗಿ ನಿರ್ವಹಿಸಿವೆ ಎನ್ನುವ ಮಾಹಿತಿಯನ್ನು ಇದು ನೀಡುತ್ತದೆ. ಹೀಗಾಗಿ ಕುಸಿತದ ಸಂದರ್ಭಗಳಲ್ಲಿ ಯಾವ ಫಂಡ್ ಹೆಚ್ಚು ಸಾಮರ್ಥ್ಯ ತೋರಿದೆ ಎಂಬುದನ್ನು ಇದು ಸೂಚಿಸುತ್ತದೆ. ಒಟ್ಟಾರೆ ಮಾರುಕಟ್ಟೆ ಕೆಳಮಟ್ಟದಲ್ಲಿದ್ದಾಗ ಇದು ಇತರ ಫಂಡ್‌ಗಳಿಗಿಂತ ಅಧಿಕ ಇದ್ದರೆ, ಅಂತಹ ಫಂಡ್ ಹೆಚ್ಚು ಸುರಕ್ಷಿತ ಎಂದು ಅರ್ಥ.

5. ಈ ಮೇಲಿನ ಸೂಚ್ಯಂಕಗಳಲ್ಲದೆ, ಆಲ್ಫಾ ಮತ್ತು ಬೀಟಾ ಎಂಬ ಎರಡು ಪ್ರಮುಖ ಮಾನದಂಡಗಳು ಫಂಡ್ ಮ್ಯಾನೇಜರ್‌ಗಳ ಸಾಮರ್ಥ್ಯ ಮತ್ತು ಒಟ್ಟಾರೆ ಮಾರುಕಟ್ಟೆ ಸಂವೇದನೆಯನ್ನು ಅಳೆಯುತ್ತವೆ. ಪ್ರತಿ ಫಂಡ್ ಕೂಡ ಒಂದು ನಿರ್ದಿಷ್ಟ ಮಾರುಕಟ್ಟೆ ಸೂಚ್ಯಂಕಕ್ಕೆ ತನ್ನ ಹೂಡಿಕೆಯನ್ನು ಸರಿದೂಗುವಂತೆ ಹೂಡಿಕೆ ಮಾಡಬೇಕು. ಈ ಸಂದರ್ಭದಲ್ಲಿ ನಿರ್ಧಾರವಾಗುವ ‘ಆಲ್ಫಾ’ ಮೌಲ್ಯಾಂಕ, ಆಯ್ಕೆ ಮಾಡಿದ ಮಾರುಕಟ್ಟೆ ಸೂಚ್ಯಂಕಕ್ಕಿಂತ ಎಷ್ಟು ಹೆಚ್ಚುವರಿ ಗಳಿಕೆ ಕೊಟ್ಟಿದೆ ಎನ್ನುವುದನ್ನು ಸೂಚಿಸುತ್ತದೆ. ಉದಾಹರಣೆಗೆ, ಫಂಡ್ ಶೇ 14ರಷ್ಟು ಮತ್ತು ಅದೇ ಅವಧಿಯಲ್ಲಿ ಅದರ ಮಾರುಕಟ್ಟೆ ಸೂಚ್ಯಂಕವು ಶೇ 12ರಷ್ಟು ಲಾಭ ನೀಡಿದ್ದರೆ, ಶೇ 2ರ ಹೆಚ್ಚುವರಿ ಆಲ್ಫಾ ಸಿಕ್ಕಿದೆ, ಫಂಡ್ ಸುಸ್ಥಿತಿಯಲ್ಲಿದೆ ಎಂಬುದನ್ನು ಸೂಚಿಸುತ್ತದೆ. ಇದು ನಿರಂತರವಾಗಿ ಧನಾತ್ಮಕ ಮಟ್ಟದಲ್ಲಿದ್ದರೆ ಮ್ಯಾನೇಜರ್ ಉತ್ತಮ ಮೌಲ್ಯವನ್ನು ಸೃಷ್ಟಿಸುತ್ತಿದ್ದಾನೆ ಎಂದು ಅರ್ಥ.

ಬೀಟಾ ಸೂಚ್ಯಂಕವು ಮಾರುಕಟ್ಟೆಯ ಚಲನೆಯೊಂದಿಗೆ ಫಂಡ್ ಹೇಗೆ ಚಲಿಸುತ್ತದೆ ಎಂಬುದನ್ನು ತೋರಿಸುತ್ತದೆ.

ಹೂಡಿಕೆ ಮಾಡುವಾಗ ಮತ್ತು ನಂತರವೂ ಗಮನಿಸಬೇಕಾದ ಇತರ ಅಂಶಗಳಲ್ಲಿ ಪೋರ್ಟ್‌ಫೋಲಿಯೊ ಗುಣಮಟ್ಟ, ವಲಯವಾರು ಹಂಚಿಕೆ, ಟಾಪ್ ಹೋಲ್ಡಿಂಗ್‌ಗಳಲ್ಲಿನ ಹೂಡಿಕೆ, ಒಟ್ಟು ಹೂಡಿಕೆ ಗಾತ್ರ ಮತ್ತು ಎಕ್ಸ್‌ಪೆನ್ಸ್ ರೇಶಿಯೋ, ಎಕ್ಸಿಟ್ ಲೋಡ್ ಸೇರಿವೆ. ಈ ರೀತಿ ತುಲನೆ ಮಾಡುವಾಗ, ಆಯ್ಕೆ ಮಾಡುವ ಫಂಡ್‌ಗಳು ಒಂದೇ ವರ್ಗದ್ದಾಗಿರಬೇಕು ಮತ್ತು ಒಂದೇ ಅವಧಿಯದ್ದಾಗಿವೆ ಎಂಬುದನ್ನು ಖಾತ್ರಪಡಿಸಿಕೊಳ್ಳಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯ ಸ್ಮರಣೆ

ಶ್ರೀಮತಿ ಗಿರಿಜಾ ಶಿವರಾಜು
ನಿಧನ: 06.05.2024
ನೀವು ನಮ್ಮನ್ನು ಅಗಲಿ ಇಂದಿಗೆ ಎರಡು ವರ್ಷ ಕಳೆದರೂ ಸದಾ ನಿಮ್ಮ ಸವಿನೆನಪಿನಲ್ಲಿರುವ
ಪತಿ: ಶ್ರೀ ಶಿವರಾಜು
ಮಗ: ಮಂಜುನಾಥ ಹಾಗೂ ಕುಟುಂಬಸ್ಥರು

ಹನ್ನೆರಡನೇ ವರ್ಷದ ಪುಣ್ಯಸ್ಮರಣೆ

ಶ್ರೀ. ಸಿ. ಟಿ. ರಾಮಚಂದ್ರನ್
ಕಾರ್ಯನಿರ್ವಾಹಕ ಇಂಜಿನಿಯರ್ (ನಿವೃತ್ತ), ಪಿಡಬ್ಲ್ಯೂಡಿ
12.04.1932 - 06.05.2014
ಸಂಸ್ಥಾಪಕ ಅಧ್ಯಕ್ಷರು
ಎಸ್. ಎಸ್. ಬಿ. ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ಸ್
ಇಂದಿರಾನಗರ, ಬೆಂಗಳೂರು – 560 038.
ಸದಾ ನಿಮ್ಮನ್ನು ಸ್ಮರಿಸುವ –
ಪ್ರೀತಿಯ ಮಗ, ಮಗಳು ಮತ್ತು ಕುಟುಂಬ ವರ್ಗ ಮ್ಯಾನೇಜ್‌ಮೆಂಟ್ ಕಮಿಟಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು

IN LOVING MEMORY

22-05-1996 - 06-05-2022
A.S. HARSHAVARDHAN, Advocate
S/o A. M Suresh Reddy
You live in our hearts ....always
Fondly Remembered by All

ಪಿಎನ್‌ಬಿ ಲಾಭ ಶೇ 12ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ (ಪಿಎನ್‌ಬಿ) ಮಾರ್ಚ್ ತ್ರೈಮಾಸಿಕದ ಒಟ್ಟು ನಿವ್ವಳ ಲಾಭವು ಶೇ 12.54ರಷ್ಟು ಹೆಚ್ಚಳ ಕಂಡಿದ್ದು ₹5,225 ಕೋಟಿ ಆಗಿದೆ.

ರೈಟ್ ಆಫ್ ಆಗಿದ್ದ ಸಾಲದಲ್ಲಿ ಒಂದಿಷ್ಟು ವಸೂಲಾಗಿರುವುದು ಕೂಡ ಲಾಭದ ಏರಿಕೆಗೆ ನೆರವಾಗಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹4,642 ಕೋಟಿ ಲಾಭ ಗಳಿಸಿತ್ತು.

‘ಶುಲ್ಕ ಆಧಾರಿತ ವರಮಾನವು ಕೂಡ ಲಾಭ ಹೆಚ್ಚಳಕ್ಕೆ ನೆರವಾಗಿದೆ’ ಎಂದು ಬ್ಯಾಂಕ್‌ನ ಎಂ.ಡಿ ಹಾಗೂ ಸಿಇಒ ಅಶೋಕ್ ಚಂದ್ರ ಅವರು ತಿಳಿಸಿದ್ದಾರೆ.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ಶೇ 3.5ರಷ್ಟು ಇಳಿಕೆ ಆಗಿದೆ. ಆದರೆ ಇದು 2026–27ರಲ್ಲಿ ಶೇ 7ರಷ್ಟು ಹೆಚ್ಚಳ ಆಗಲಿದೆ ಎಂದು ಬ್ಯಾಂಕ್ ಅಂದಾಜು ಮಾಡಿದೆ.

ಬ್ಯಾಂಕ್‌ನ ಆಡಳಿತ ಮಂಡಳಿಯು 2025–26ನೇ ಸಾಲಿಗೆ ಪ್ರತಿ ಷೇರಿಗೆ ₹3 ಲಾಭಾಂಶ ನೀಡಲು ಶಿಫಾರಸು ಮಾಡಿದೆ.

ಕಬ್ಬಿನ ಎಫ್‌ಆರ್‌ಪಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ಟೋಬರ್‌ನಲ್ಲಿ ಪ್ರಾರಂಭವಾಗುವ 2026-27ರ ಹಂಗಾಮಿನಲ್ಲಿ ಕಬ್ಬು ಬೆಳೆಗಾರರಿಗೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಠ ಬೆಲೆಯನ್ನು ಕ್ವಿಂಟಲ್‌ಗೆ ₹365ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರ ಮಂಗಳವಾರ ನಿರ್ಧರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಕಬ್ಬಿನ ನ್ಯಾಯಸಮ್ಮತ ಮತ್ತು ಲಾಭದಾಯಕ ದರದ (ಎಫ್‌ಆರ್‌ಪಿ) ಕುರಿತು ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಳೆದ ವರ್ಷ ಎಫ್‌ಆರ್‌ಪಿ ₹355 ಇತ್ತು.

‘ಶೇ 10.25ರ ಮೂಲ ಇಳುವರಿ ದರ ಆಧರಿಸಿ ಎಫ್‌ಆರ್‌ಪಿಯನ್ನು ಕ್ವಿಂಟಲ್‌ಗೆ ₹365 ನಿಗದಿಪಡಿಸಲಾಗಿದೆ. ಶೇ 10.25ಕ್ಕಿಂತ ಹೆಚ್ಚಿನ ಇಳುವರಿಯಲ್ಲಿ ಪ್ರತಿ ಶೇ 0.1 ರಷ್ಟು ಹೆಚ್ಚಳಕ್ಕೆ, ಎಫ್‌ಆರ್‌ಪಿ ಕ್ವಿಂಟಾಲ್‌ಗೆ ₹3.56ರಷ್ಟು ಜಾಸ್ತಿ ಆಗುತ್ತದೆ’ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

ಎಫ್‌ಆರ್‌ಪಿ ಈಗ ಅಖಿಲ ಭಾರತ ಸರಾಸರಿ ಉತ್ಪಾದನಾ ವೆಚ್ಚದ 200.5 ಪ್ರತಿಶತದಷ್ಟಿದೆ. ಈ ಹೆಚ್ಚಳದಿಂದ 1 ಕೋಟಿ ಕಬ್ಬು ಬೆಳೆಗಾರರಿಗೆ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ (CACP) ಶಿಫಾರಸುಗಳ ಆಧಾರದಲ್ಲಿ ಸರ್ಕಾರವು ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡುತ್ತದೆ. ಸಕ್ಕರೆ ಕಾರ್ಖಾನೆಗಳು ರೈತರಿಂದ ಎಫ್‌ಆರ್‌ಪಿ ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಗೆ ಕಬ್ಬನ್ನು ಖರೀದಿಸುವುದು ಕಡ್ಡಾಯ.

ಜೆಎಲ್‌ಆರ್ ಕಾರು: ₹75 ಲಕ್ಷ ಇಳಿಕೆ

ನವದೆಹಲಿ (ಪಿಟಿಐ): ಬ್ರಿಟನ್ನಿನಲ್ಲೇ ಪೂರ್ಣವಾಗಿ ತಯಾರಿಸಿ, ಭಾರತಕ್ಕೆ ಆಮದು ಮಾಡಿಕೊಳ್ಳುವ ರೇಂಜ್ ರೋವರ್ ಕಾರುಗಳ ಬೆಲೆಯನ್ನು ₹75 ಲಕ್ಷದವರೆಗೆ ಕಡಿಮೆ ಮಾಡಲಾಗುತ್ತದೆ ಎಂದು ಜಾಗ್ವಾರ್ ಲ್ಯಾಂಡ್ ರೋವರ್ ಇಂಡಿಯಾ ಕಂಪನಿಯು ಮಂಗಳವಾರ ಹೇಳಿದೆ.

ಭಾರತ ಮತ್ತು ಬ್ರಿಟನ್ ನಡುವೆ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಅನುಷ್ಠಾನಕ್ಕೆ ಬರುವ ನಿರೀಕ್ಷೆಯಲ್ಲಿ ಕಂಪನಿ ಈ ಹೇಳಿಕೆ ನೀಡಿದೆ.

ಎಫ್‌ಟಿಎ ಕಾರಣದಿಂದಾಗಿ ರೇಂಜ್ ರೋವರ್ ಎಸ್‌ವಿ, ರೇಂಜ್ ರೋವರ್ ಸ್ಪೋರ್ಟ್ ಎಸ್‌ವಿ ಮಾದರಿಗಳಿಗೆ ಅತಿಹೆಚ್ಚಿನ ಅನುಕೂಲ ಆಗಲಿದೆ ಎಂದು ಕಂಪನಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ. ಹೊಸ ಬೆಲೆ ಪಟ್ಟಿಯ ಅನ್ವಯ ರೇಂಜ್ ರೋವರ್ ಎಸ್‌ವಿ ಮಾದರಿಯ ಆರಂಭಿಕ ಎಕ್ಸ್ ಷೋರೂಂ ಬೆಲೆಯು ₹4.25 ಕೋಟಿಯ ಬದಲು ₹3.50 ಕೋಟಿ ಇರಲಿದೆ.

‘ಪರಿಷ್ಕೃತ ದರವು ಎಫ್‌ಟಿಎ ಅನುಗುಣವಾದ ಹೊಸ ಸುಂಕ ಪ್ರಮಾಣವನ್ನು ಒಳಗೊಂಡಿದೆ, ತಕ್ಷಣದಿಂದ ಜಾರಿಗೆ ಬಂದಿದೆ’ ಎಂದು ಕಂಪನಿ ಹೇಳಿದೆ. ಭಾರತದಲ್ಲಿಯೇ ತಯಾರಾಗುವ ರೇಂಜ್ ರೋವರ್, ರೇಂಜ್ ರೋವರ್ ಸ್ಪೋರ್ಟ್, ರೇಂಜ್ ರೋವರ್ ಇವೋಕ್ ಸೇರಿದಂತೆ ವಿವಿಧ ಮಾದರಿಯ ಕಾರುಗಳ ಬೆಲೆಯಲ್ಲಿ ವ್ಯತ್ಯಾಸ ಇರುವುದಿಲ್ಲ ಎಂದು ತಿಳಿಸಿದೆ.

‘ಭಾರತದ ಆರ್ಥಿಕತೆ ಗಟ್ಟಿ’

ನವದೆಹಲಿ (ಪಿಟಿಐ): ಪ್ರವರ್ಧಮಾನಕ್ಕೆ ಬರುತ್ತಿರುವ ಬೃಹತ್ ಅರ್ಥವ್ಯವಸ್ಥೆಗಳ ಪೈಕಿ ಭಾರತದ ಅರ್ಥವ್ಯವಸ್ಥೆಯು 2020ರಿಂದ ಈಚೆಗೆ ಅತ್ಯಂತ ಹೆಚ್ಚಿನ ಗಟ್ಟಿತನವನ್ನು ತೋರಿದೆ ಎಂದು ಮೂಡಿಸ್ ರೇಟಿಂಗ್ಸ್ ಮಂಗಳವಾರ ಹೇಳಿದೆ.

ಭಾರತವು ಹೊಂದಿರುವ ಗಣನೀಯ ಮಟ್ಟದ ವಿದೇಶಿ ವಿನಿಮಯ ಸಂಗ್ರಹವು ಕರೆನ್ಸಿ ಮಾರುಕಟ್ಟೆಯಲ್ಲಿನ ಅಸ್ಥಿರತೆಯನ್ನು ನಿಭಾಯಿಸಲು ಮತ್ತು ಜಾಗತಿಕ ಬಿಕ್ಕಟ್ಟುಗಳ ಸಂದರ್ಭದಲ್ಲಿ ಭಾರತದ ಅರ್ಥ ವ್ಯವಸ್ಥೆಯ ಮೇಲೆ ವಿಶ್ವಾಸ ಮೂಡಲು ನೆರವಾಗಿದೆ ಎಂದು ಕೂಡ ಮೋಡಿಸ್ ಅಭಿಪ್ರಾಯಪಟ್ಟಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳ ಬಗ್ಗೆ ವರದಿಯೊಂದನ್ನು ಸಿದ್ಧಪಡಿಸಿರುವ ಮೂಡಿಸ್, ಭವಿಷ್ಯದಲ್ಲಿ ಎದುರಾಗುವ ಆಘಾತಗಳನ್ನು ಚೆನ್ನಾಗಿ ನಿಭಾಯಿಸುವ ಸ್ಥಿತಿಯಲ್ಲಿ ಭಾರತ ಇದೆ ಎಂದು ಹೇಳಿದೆ.

‘ಭಾರತವು ಹಣಕಾಸಿಗಾಗಿ ದೇಶಿ ಮೂಲಗಳನ್ನು ನೆಚ್ಚಿಕೊಂಡಿದೆ, ಇದಕ್ಕೆ ಪೂರಕವಾಗಿ ದೇಶದಲ್ಲಿ ಬೃಹತ್ ಮಾರುಕಟ್ಟೆ ಇದೆ ಹಾಗೂ ಮೀಸಲು ಪ್ರಮಾಣವು ಗಣನೀಯವಾಗಿದೆ’ ಎಂದು ಮೂಡಿಸ್ ವರದಿಯು ಹೇಳಿದೆ. ಹೀಗಿದ್ದರೂ ಭಾರತವು ಹೊಂದಿರುವ ಹೆಚ್ಚಿನ ಮಟ್ಟದ ಸಾಲದ ಹೊರೆಯು ಮತ್ತೆ ಮತ್ತೆ ಎದುರಾಗುವ ಆಘಾತಗಳಿಗೆ ಸ್ಪಂದಿಸುವ ಶಕ್ತಿಗೆ ಮಿತಿ ಹಾಕುತ್ತವೆ ಎಂದು ಹೇಳಿದೆ.

ಏಕಪಕ್ಷೀಯ ಕದನವಿರಾಮ ಘೋಷಿಸಿದ ರಷ್ಯಾ

ಮಾಸ್ಕೊ (ಎಪಿ): ಎರಡನೇ ವಿಶ್ವ ಯುದ್ಧದ 81ನೇ ವಿಜಯೋತ್ಸವದ ಅಂಗವಾಗಿ ರಷ್ಯಾವು ಶುಕ್ರವಾರ ಮತ್ತು ಶನಿವಾರ ಏಕಪಕ್ಷೀಯ ಕದನ ವಿರಾಮವನ್ನು ಘೋಷಿಸಿದೆ. ಆದರೆ ವಿಜಯೋತ್ಸವ ಆಚರಣೆಗೆ ಉಕ್ರೇನ್ ಅಡ್ಡಿಪಡಿಸಿದರೆ ಪ್ರತಿ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದೆ.

ರಷ್ಯಾದ ಪ್ರಮುಖ ರಜಾದಿನದ ವೇಳೆ ಕದನ ವಿರಾಮವನ್ನು ಉಕ್ರೇನ್ ಪಾಲಿಸುವ ವಿಶ್ವಾಸವಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ. ಆದರೆ ಉಕ್ರೇನ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ‘ವಿಜಯೋತ್ಸವಕ್ಕೆ ಅಡ್ಡಿಯಾದರೆ ಉಕ್ರೇನ್ ರಾಜಧಾನಿ ಮೇಲೆ ಕ್ಷಿಪಣಿ ದಾಳಿ ನಡೆಸುತ್ತೇವೆ. ಅಲ್ಲಿನ ನಾಗರಿಕರು, ವಿದೇಶಿ ರಾಜತಾಂತ್ರಿಕರು ಸ್ಥಳಾಂತರಗೊಳ್ಳಬೇಕಾಗಬಹುದು’ ಎಂದು ಎಚ್ಚರಿಕೆ ನೀಡಿದೆ.

ದಾದಿಯರ ರ‍್ಯಾಲಿ

ಪಿಟಿಐ ಚಿತ್ರ

‘ರಾಷ್ಟ್ರೀಯ ದಾದಿಯರ ವಾರ’ದ ಅಂಗವಾಗಿ ಕೋಯಿಕ್ಕೋಡ್‌ನಲ್ಲಿ ಮಂಗಳವಾರ ನಡೆದ ರ‍್ಯಾಲಿಯಲ್ಲಿ ನರ್ಸ್‌ಗಳು ಭಾಗಿಯಾಗಿದ್ದರು

ಅಡಿಕೆ ಧಾರಣೆ

ತರೀಕೆರೆ				ಯಲ್ಲಾಪುರ	
ಬಿಳಿಗೋಟು	10000-10000	ಬೆಟ್ಟೆ	56399-64589	ಆಪಿ	58179-60779
ಇತರೆ	25000-28000	ರಾಶಿಇಡಿ	41099-56199	ಬಿಳಿಗೋಟು	15199-38299
ಸಿಪ್ಪೆಗೋಟು	11000-13500	**ಸಿದ್ದಾಪುರ**		ಚಾಲಿ	37609-49288
ಸುಳ್ಯ		ಬಿಳಿಗೋಟು	26899-35870	ಕೋಕ	13900-35299
ಕೋಕ	20000-33000	ಚಾಲಿ	39099-47699	ಕೆಂಪುಗೋಟು	20600-37599
ಹಳತು	47600-52500	ಕೋಕ	23499-34699	ರಾಶಿ	50199-56821
ಸಾಗರ		ಕೆಂಪುಗೋಟು	31000-35300	ತಟ್ಟಿಬೆಟ್ಟೆ	38701-50199
ಬಿಳಿಗೋಟು	27999-31786	ರಾಶಿ	49099-53729	**ಹೊನ್ನಾವರ**	
ಚಾಲಿ	39199-41799	ತಟ್ಟಿಬೆಟ್ಟೆ	37699-46599	ಹಳೆ ಚಾಲಿ	42000-44000
ಕೋಕ	32699-32699	**ಶಿರಸಿ**		ಹೊಸ ಚಾಲಿ	37000-39000
ಕೆಂಪುಗೋಟು	31599-31599	ಬೆಟ್ಟೆ	42799-50299	**ಭದ್ರಾವತಿ**	
ರಾಶಿ	46999-53999	ಬಿಳಿಗೋಟು	26919-40599	ಇತರೆ	53726-53726
ಸಿಪ್ಪೆಗೋಟು	13099-22699	ಚಾಲಿ	44229-48671	ಪುಡಿ	3500-3500
ಶಿವಮೊಗ್ಗ		ಕೆಂಪುಗೋಟು	26709-37199	ಸಿಪ್ಪೆಗೋಟು	12000-12500
ಸರಕು	54099-98596	ರಾಶಿ	50799-54100		

ಮುಂಬೈ ಧಾರಣೆ (ಶೇಂಗಾ)

05-05-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1620)
ಒಂದು ವಾರದ ಡೆಲಿವರಿ	1645 (1615)
ಪಾಮ್ ವಾರದ ಡೆಲಿವರಿ	1478 (1458)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1550)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,47,700 (1,47,000)
ಬೆಳ್ಳಿ ಕೆ.ಜಿಗೆ	2,40,800 (2,40,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ವೈಯಕ್ತಿಕ

Announcements

ಸಾರ್ವಜನಿಕ ಪ್ರಕಟಣೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರಡಿಯಲ್ಲಿ ಕೌಸ್ತುಭ ಕ್ರೆಡಿಟ್ ಸಹಕಾರ ಸಂಘ ನೋಂದಣಿಗೆ ಪ್ರಸ್ತಾವನೆ ಸದಸ್ಯತ್ವಕ್ಕೆ ಅರ್ಜಿಗಳು ಆಹ್ವಾನಿಸಲಾಗಿದೆ ಸಂಪರ್ಕಿಸಿ ಕೆ ಗೋವರ್ಧನ ಗುಪ್ತ ಪ್ರಮೋಟರ್ 9480400051

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 26 ಮಂದಿ ಸಾವು

ಬೀಜಿಂಗ್ (ಪಿಟಿಐ): ಚೀನಾದ ಹುನಾನ್ ಪ್ರಾಂತ್ಯದಲ್ಲಿರುವ ಪಟಾಕಿ ತಯಾರಿಕಾ ಕಾರ್ಖಾನೆಯೊಂದರಲ್ಲಿ ಸ್ಫೋಟ ಸಂಭವಿಸಿ, 26 ಮಂದಿ ಮೃತಪಟ್ಟು, 61 ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ.

ಸೋಮವಾರ ಮಧ್ಯಾಹ್ನ ಈ ದುರಂತ ಸಂಭವಿಸಿದೆ ಎಂದು ಅಧಿಕಾರಿಗಳು ಮಂಗಳವಾರ ಮಾಹಿತಿ ನೀಡಿದ್ದಾರೆ. ಸ್ಫೋಟ ಸಂಭವಿಸಲು ಕಾರಣವೇನು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದೂ ಹೇಳಿದ್ದಾರೆ. ರಕ್ಷಣಾ ಕಾರ್ಯಾಚರಣೆಗೆ ಸುಮಾರು 480 ಮಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಫೋಟದ ತೀವ್ರತೆಗೆ ಕಾರ್ಖಾನೆಯ ಸುತ್ತಲಿನ ಕೆಲವು ಕಿಲೋಮೀಟರ್‌ವರೆಗಿನ ಕಟ್ಟಡಗಳಿಗೆ ಹಾನಿಯಾಗಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಘಟನೆಗೆ ಸಂಬಂಧಿಸಿದಂತೆ ಕಾರ್ಖಾನೆಯ ಉಸ್ತುವಾರಿಯನ್ನು ಬಂಧಿಸಿ, ವಿಚಾರಣೆ ನಡೆಸುತ್ತಿರುವುದಾಗಿಯೂ ಹೇಳಿದ್ದಾರೆ.

ನವೋದ್ಯಮ ಸಂಶೋಧನೆ ಒಪ್ಪಂದಕ್ಕೆ ಸಹಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ನಾವೀನ್ಯತಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಮತ್ತು ನವೋದ್ಯಮಗಳ ಸಂಶೋಧನೆಗಳಿಗೆ ಜಾಗತಿಕ ಮಾನ್ಯತೆ ಒದಗಿಸುವ ಉದ್ದೇಶದಿಂದ ಬೆಂಗಳೂರು ಬಯೋ-ಇನ್ನೋವೇಶನ್ ಸೆಂಟರ್ (ಬಿಬಿಸಿ) ಹಾಗೂ ಎನ್‌ಎಬಿಎಲ್ ಜತೆ ಒಪ್ಪಂದ ನಡೆದಿದೆ.

ಈ ಒಪ್ಪಂದಕ್ಕೆ ಬಿಬಿಸಿಯ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಆದಿಲ್ ಮತ್ತು ಎನ್‌ಎಬಿಎಲ್ (ಕ್ವಾಲಿಟಿ ಕಂಟ್ರೋಲ್ ಇಂಡಿಯಾ)ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಮಾನಂದ ಶುಕ್ಲಾ ಸಹಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸರ್ಕಾರದ ಐಟಿ-ಬಿಟಿ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ‘ಜೀವ ವಿಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವನ್ನು ಜಾಗತಿಕ ಹಬ್ ಆಗಿ ಗುರುತಿಸಿಕೊಳ್ಳುವುದಕ್ಕೆ ಈ ಒಪ್ಪಂದ ಬಹಳ ಸಹಕಾರಿಯಾಗಲಿದೆ. ನಾವು 512ಕ್ಕೂ ಹೆಚ್ಚಿನ ನಾವೀನ್ಯತಾ ಯೋಜನೆಗಳಿಗೆ ಬೆಂಬಲ ನೀಡಲಿದ್ದೇವೆ. ಇದರಲ್ಲಿ 24 ಜಾಗತಿಕ ನವೋದ್ಯಮಗಳು ಮತ್ತು 74 ಪೇಟೆಂಟ್‌ಗಳು ಸೇರಿವೆ. ಜೈವಿಕ ತಂತ್ರಜ್ಞಾನದಲ್ಲಿ ಬೆಂಗಳೂರು ಬಯೋ ಇನ್ನೋವೇಷನ್ ಸೆಂಟರ್ ಅನ್ನು ಜಾಗತಿಕ ನಾವೀನ್ಯತಾ ಕೇಂದ್ರವಾಗಿ ಬಲಪಡಿಸಲು ಈ ಒಪ್ಪಂದ ಅನುಕೂಲಕರವಾಗಿದೆ’ ಎಂದು ಹೇಳಿದರು.

ಇರಾನ್ ದಾಳಿ: ಮೂವರು ಭಾರತೀಯರಿಗೆ ಗಾಯ

ಒಂದನೇ ಪುಟದಿಂದ...

‘ಇರಾನ್ ಡ್ರೋನ್ ದಾಳಿಯಲ್ಲಿ ಯುಎಇ ಕರಾವಳಿಯಲ್ಲಿ ಸರಕು ಸಾಗಾಣೆ ಹಡಗು ಹೊತ್ತಿ ಉರಿಯಿತು’ ಎಂದು ಬ್ರಿಟನ್ ಸೇನೆ ಹೇಳಿದೆ. ‘ಬುಖಾ ಪಟ್ಟಣದಲ್ಲಿನ ವಸತಿ ಕಟ್ಟಡದ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದೆ’ ಎಂದು ಒಮಾನ್ ಹೇಳಿದೆ.

ಭಾರತದ ಖಂಡನೆ

ಒಂದನೇ ಪುಟದಿಂದ...

‘ಮುಗ್ಧ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ದಾಳಿಯನ್ನು ತಕ್ಷಣವೇ ನಿಲ್ಲಿಸಬೇಕು. ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆ ನೆಲೆಗೊಳಿಸಲು ನಡೆಯುತ್ತಿರುವ ಮಾತುಕತೆ ಮತ್ತು ರಾಜತಾಂತ್ರಿಕ ಪ್ರಯತ್ನಗಳನ್ನು ಭಾರತ ಬೆಂಬಲಿಸಲಿದೆ’ ಎಂದು ಜೈಸ್ವಾಲ್ ಹೇಳಿದ್ದಾರೆ.

ಹೊರ್ಮುಜ್ ಜಲಸಂಧಿ ದಾಟಿದ ಅಮೆರಿಕದ ಎರಡು ಹಡಗು

ಅಮೆರಿಕದ ಧ್ವಜ ಹೊಂದಿದ್ದ ಎರಡು ಹಡಗುಗಳು ಹೊರ್ಮುಜ್ ಜಲಸಂಧಿಯನ್ನು ಮಂಗಳವಾರ ಯಶಸ್ವಿಯಾಗಿ ದಾಟಿವೆ ಎಂದು ಅಮೆರಿಕದ ಸೇನೆ ಹೇಳಿಕೊಂಡಿದೆ.

ಆದರೆ, ‘ಹೊರ್ಮುಜ್ ಜಲಸಂಧಿಯ ಆಗ್ನೇಯಕ್ಕೆ ಅಮೆರಿಕದ ನೌಕಾಪಡೆಯ ಹಡಗಿನ ಮೇಲೆ ದಾಳಿ ನಡೆಸಿ ಅದನ್ನು ಮುಳುಗಿಸಿದ್ದೇವೆ’ ಎಂದು ಇರಾನ್ ಹೇಳಿಕೊಂಡಿದೆ. ಅಮೆರಿಕದ ಸೇನೆ ಇದನ್ನು ಅಲ್ಲಗಳೆದಿದೆ.

‘ಕದನ ವಿರಾಮದ ನಂತರ ಅಮೆರಿಕದ ಹಡಗಿನ ಮೇಲೆ ದಾಳಿಗೆ ಮುಂದಾದ ಇರಾನ್‌ನ 6 ಸಣ್ಣ ಬೋಟ್‌ಗಳನ್ನು ಹೊರ್ಮುಜ್ ಜಲಸಂಧಿಯಲ್ಲಿ ಮುಳುಗಿಸಿದ್ದೇವೆ’ ಎಂದು ಅಮೆರಿಕದ ಸೇನೆ ಹೇಳಿಕೊಂಡಿದೆ.

‘ಅಮೆರಿಕ ಮತ್ತು ಯುಎಇ ಎರಡೂ ಮತ್ತೆ ಸಂಕಷ್ಟಕ್ಕೆ ಸಿಲುಕುವ ಬಗ್ಗೆ ಎಚ್ಚರಿಕೆಯಿಂದ ಇರಬೇಕು’ ಎಂದು ಇರಾನ್‌ನ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಮುಕ್ತ ಸಂಚಾರಕ್ಕೆ ರಾಜತಾಂತ್ರಿಕ ಕ್ರಮಗಳನ್ನು ತೀವ್ರಗೊಳಿಸಬೇಕು’ ಎಂದು ಅಮೆರಿಕ ಮತ್ತು ಕೊಲ್ಲಿ ರಾಷ್ಟ್ರಗಳು ಒತ್ತಾಯಿಸಿವೆ.

ಬೃಂದಾವಿಹಾರಿಯ ರಾಧಾ ರಾಧಾ...

ಗಣೇಶ್, ದೇವಿಕಾ

'ದಂಡುಪಾಳ್ಯ' ಸಿನಿಮಾ ನಿರ್ದೇಶಕ ಶ್ರೀನಿವಾಸರಾಜು ಅವರು ಗಣೇಶ್ ನಟನೆಯ 'ಕೃಷ್ಣಂ ಪ್ರಣಯ ಸಖಿ' ಸಿನಿಮಾ ಮೂಲಕ ಪ್ರೇಕ್ಷಕರಿಗೆ ಹತ್ತಿರವಾದವರು. ಅವರು ನಿರ್ದೇಶಿಸಿರುವ 'ಬೃಂದಾವಿಹಾರಿ' ಸಿನಿಮಾದ 'ರಾಧಾ ರಾಧಾ' ಹಾಡು ಇತ್ತೀಚೆಗೆ ತುಮಕೂರಿನಲ್ಲಿ ಬಿಡುಗಡೆಯಾಗಿದೆ.

ಚಿತ್ರರಂಗದಲ್ಲಿ ಎರಡು ದಶಕಗಳನ್ನು ಪೂರೈಸಿ ಹೆಜ್ಜೆ ಇಡುತ್ತಿರುವ ಗಣೇಶ್ ಈ ಸಿನಿಮಾದಲ್ಲಿ ನಾಯಕರಾಗಿ ನಟಿಸುತ್ತಿದ್ದು, ಅವರಿಗೆ ದೇವಿಕಾ ಭಟ್ ಹಾಗೂ ಮಾಳವಿಕಾ ಶರ್ಮ ಜೋಡಿಯಾಗಿದ್ದಾರೆ. 'ರಾಧಾ ರಾಧಾ' ಚಿತ್ರದ ಎರಡನೇ ಹಾಡಾಗಿದ್ದು, ದೇವಿಕಾ ಭಟ್ 'ರಾಧ' ಆಗಿ ಹೆಜ್ಜೆ ಹಾಕಿದ್ದಾರೆ. ವಿ.ನಾಗೇಂದ್ರ ಪ್ರಸಾದ್ ಬರೆದಿರುವ ಈ ಹಾಡಿಗೆ ಹೇಶಮ್ ಅಬ್ದುಲ್ ವಹಾಬ್ ಸಂಗೀತ ನೀಡಿದ್ದಾರೆ. ಸಿದ್ ಶ್ರೀರಾಮ್ ಮತ್ತು ಚಿನ್ಮಯಿ ದನಿಯಾಗಿರುವ ಈ ಹಾಡಿನಲ್ಲಿ ಗಣೇಶ್ ಹಾಗೂ ದೇವಿಕಾ ಭಟ್ ಕಾಣಿಸಿಕೊಂಡಿದ್ದಾರೆ. ಮಾಳವಿಕಾ ಶರ್ಮ ಸಿನಿಮಾದಲ್ಲಿ 'ಮೀರಾ' ಎಂಬ ಪಾತ್ರದಲ್ಲಿ ನಟಿಸಿದ್ದಾರೆ.

'ನನಗೂ ತುಮಕೂರಿಗೂ ಹತ್ತಿರದ ನಂಟಿದೆ. ನಾನು ಓದಿದ್ದು ನೆಲಮಂಗಲದಲ್ಲಿ. ಆಗಾಗ ತುಮಕೂರಿಗೆ ಬರುತ್ತಿದ್ದೆ. ನಾನು ನಾಯಕನಾಗಿ ಇಪ್ಪತ್ತು ವರ್ಷಗಳಾಗಿವೆ. ನನ್ನ ಯಶಸ್ಸನ್ನು ಅಭಿಮಾನಿಗಳಿಗೆ ಅರ್ಪಿಸುತ್ತೇನೆ. ವಿಶೇಷ ಧನ್ಯವಾದವನ್ನು ಉದಯ ಟಿವಿಗೆ ಹೇಳುತ್ತೇನೆ. ಅಲ್ಲಿನ 'ಕಾಮಿಡಿ ಟೈಮ್' ಕಾರ್ಯಕ್ರಮವೇ ನನ್ನನ್ನು ಚಿತ್ರರಂಗಕ್ಕೆ ಕರೆತಂದಿತ್ತು. ಈಗಾಗಲೇ ಬಿಡುಗಡೆಯಾಗಿರುವ 'ಬೃಂದಾವಿಹಾರಿ'ಯ ಮೊದಲ ಹಾಡು 'ರಾಮ ರಾಮ' ಯಶಸ್ವಿಯಾಗಿದೆ' ಎಂದರು ಗಣೇಶ್.

ಸಮೃದ್ಧಿ ವಿ. ಮಂಜುನಾಥ್ ನಿರ್ಮಾಣದ ಈ ಚಿತ್ರದಲ್ಲಿ ಒಟ್ಟು ಏಳು ಹಾಡುಗಳಿವೆ. ಎಲ್ಲಾ ಹಾಡುಗಳನ್ನು ವಿ.ನಾಗೇಂದ್ರ ಪ್ರಸಾದ್ ಅವರೇ ಬರೆದಿದ್ದಾರೆ. ನಿರ್ದೇಶಕ ಶ್ರೀನಿವಾಸರಾಜು ಕಥೆ, ಚಿತ್ರಕಥೆ ಬರೆದಿದ್ದಾರೆ. ವೆಂಕಟ್ ಪ್ರಸಾದ್ ಛಾಯಾಚಿತ್ರಗ್ರಹಣ ಸಿನಿಮಾಗಿದೆ.

ಅದ್ದೂರಿ ಸೆಟ್‌ನಲ್ಲಿ ಡ್ರೀಮ್ ಥಿಯೇಟರ್

ಧನಂಜಯ

ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ '666 ಆಪರೇಷನ್ ಡ್ರೀಮ್ ಥಿಯೇಟರ್' ಚಿತ್ರದ ಚಿತ್ರೀಕರಣ ಅಂತಿಮ ಹಂತದಲ್ಲಿದ್ದು, ಇತ್ತೀಚೆಗೆ ಚಿತ್ರದ ಹಾಡೊಂದನ್ನು ಅದ್ದೂರಿಯಾದ ಸೆಟ್‌ನಲ್ಲಿ ಚಿತ್ರೀಕರಣ ಮಾಡಲಾಗಿದೆ.

ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಈ ಸೆಟ್ ಹಾಕಲಾಗಿದ್ದು, ರೆಟ್ರೊ ಹಾರ್ಟ್-ಡಿಸ್ಕೊ ಸೋಲ್ ಎಂಬ ಅಡಿಬರಹ ಕೊಟ್ಟು ಹೇಮಂತ್ ತೆರೆಹಿಂದಿನ ಫೋಟೊಗಳನ್ನು ಹಂಚಿಕೊಂಡಿದ್ದಾರೆ. ಸಿನಿಮಾ 70ರ ದಶಕದ ಶೈಲಿಯಲ್ಲಿದೆ. 'ನನ್ನ ಹಿಂದಿನ ಚಿತ್ರಗಳಲ್ಲಿ ಈ ರೀತಿಯ ಹಾಡನ್ನು ಚಿತ್ರೀಕರಿಸಿರಲಿಲ್ಲ. ಹಾಡಿಗಾಗಿ ದೊಡ್ಡ ಸೆಟ್ ನಿರ್ಮಾಣ ಮಾಡಿದ್ದೇವೆ. ಇದು ಕೇವಲ ಹಾಡಲ್ಲ. ಚಿತ್ರದ ನಿರೂಪಣೆಯ ಒಂದು ತುಣುಕು ಇದಾಗಿದೆ' ಎಂದಿದ್ದಾರೆ ಹೇಮಂತ್.

ಶಿವರಾಜ್‌ಕುಮಾರ್ ಹಾಗೂ ಧನಂಜಯ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರದಲ್ಲಿ ನಾಯಕಿಯಾಗಿ ಪ್ರಿಯಾಂಕಾ ಮೋಹನ್ ನಟಿಸಿದ್ದಾರೆ. ಬಹುಭಾಷಾ ನಟಿ ಅದಿತಿ ಬಾಲನ್ ತಾರಾಬಳಗದಲ್ಲಿದ್ದಾರೆ. ವೈಶಾಕ್ ಜೆ ಫಿಲ್ಮ್ಸ್ ಅಡಿಯಲ್ಲಿ ಡಾ.ವೈಶಾಕ್ ಜೆ ಗೌಡ ಸಿನಿಮಾವನ್ನು ನಿರ್ಮಿಸುತ್ತಿದ್ದು, ವರ್ಷದ ದ್ವಿತೀಯಾರ್ಧದಲ್ಲಿ ಸಿನಿಮಾ ಬಿಡುಗಡೆಯಾಗಲಿದೆ.

ಲವ್ ಸೀಸನ್ಸ್‌ನಲ್ಲಿ ಮಳೆಯ ಹಾಡು

ದಿಯಾ ಕೀರ್ತಿ

ಬಹುತೇಕ ಹೊಸಬರಿಂದಲೇ ಕೂಡಿರುವ 'ಲವ್ ಸೀಸನ್ಸ್' ಚಿತ್ರದ 'ಮಳೆಯಾಗೋ ಮೊದಲೇ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೃತ್ವಿಕ್ ನಿರ್ದೇಶನದ ಚಿತ್ರ ವಿಭಿನ್ನ ಪ್ರೇಮಕಥೆ ಹೊಂದಿದೆ.

'ಮಳೆಯಾಗೋ ಮೊದಲೇ' ಗೀತೆಗೆ ಪ್ರಮೋದ್ ಮರವಂತೆ ಸಾಹಿತ್ಯವಿದ್ದು, ಪ್ರಜ್ಞಾ ಮರಾಠೆ ಮತ್ತು ಅರ್ಮಾನ್ ಮಲಿಕ್ ಧ್ವನಿಯಾಗಿದ್ದಾರೆ. ವೀರ್ ಸಮರ್ಥ್ ಸಂಗೀತವಿದೆ. ಮುಕುಂದ ರಾಮಸ್ವಾಮಿಗೆ ದಿಯಾ ಕೀರ್ತಿ ಜೋಡಿಯಾಗಿದ್ದಾರೆ. ರಾಜೇಶ್ ನಟರಂಗ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ಇದೊಂದು ಪ್ರೇಮಕಥೆ ಹೊಂದಿರುವ ಚಿತ್ರ. ಯಾರು ಯಾರನ್ನೂ ನಂಬಲು ಕಷ್ಟವಾಗುವಂಥ ಕಾಲಮಾನವಿದು. ಇಂಥ ಹೊತ್ತಿನಲ್ಲಿ ನಂಬಿಕೆಯೆಂಬ ಚುಂಬಕಶಕ್ತಿಯ ಸುತ್ತ ಹೆಣೆದ ಕಥೆಯಿದು. ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಜೂನ್ ತಿಂಗಳಲ್ಲಿ ಚಿತ್ರ ಬಿಡುಗಡೆ ಆಲೋಚನೆಯಿದೆ' ಎಂದಿದ್ದಾರೆ ನಿರ್ದೇಶಕ.

ಎನ್.ಆರ್ ಮಂಜುನಾಥ (ನೀಲೇರಿ) ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಅವಿನಾಶ ಶಾಸ್ತ್ರಿ ಛಾಯಾಚಿತ್ರಗ್ರಹಣ, ಮಧು ತುಂಬಕೆರೆ ಸಂಕಲನವಿದೆ. ಚಂದನಾ ಗೌಡ ಮತ್ತು ಶ್ವೇತಾ ಕೊಗ್ಲೂರು, ಮಂಡ್ಯ ರಮೇಶ್, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಕಾಮಿಡಿ ಕಿಲಾಡಿ ಸದಾನಂದ, ಹುಲಿ ಕಾರ್ತಿಕ್ ಮುಂತಾದವರ ತಾರಾಗಣವಿದೆ.

ಹೊಸಬರ 'ಲಾಕ್‌ಡೌನ್'

ಚಿತ್ರತಂಡ

ಉತ್ತರ ಕರ್ನಾಟಕ ಭಾಷೆಯ ಸೊಗಡನ್ನು ಹೊಂದಿರುವ 'ಲಾಕ್‌ಡೌನ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಜಾವೇದ್ ತಿಪ್ಪನಹಟ್ಟಿ ಸಿನಿಮಾಕ್ಕೆ ಚಿತ್ರಕಥೆ ಬರೆದು, ನಿರ್ದೇಶನ ಮಾಡಿದ್ದಾರೆ.

'ಲಾಕ್‌ಡೌನ್' ಪದ ಕೇಳಿದರೆ ಹಲವರಿಗೆ ಈಗಲೂ ಭಯವಾಗುತ್ತದೆ.ಈ ಅವಧಿ ಕೆಲವರಿಗೆ ಖುಷಿ ತಂದುಕೊಟ್ಟಿದೆ. ಹೀಗಾಗಿಯೇ ಚಿತ್ರಕ್ಕೆ ವಿಷಾದ ಆ್ಯಂಡ್ ರಂಜನೆ ಎಂಬ ಅಡಿಬರಹವಿದೆ. ಬಳ್ಳಾರಿಯಲ್ಲಿ ನಡೆದ ಒಂದಷ್ಟು ಕಹಿಘಟನೆಗಳನ್ನು ಇಟ್ಟುಕೊಂಡು ಚಿತ್ರ ಸಿದ್ಧಗೊಂಡಿದೆ. ಜತೆಗೆ ಯುವ ಪ್ರೇಮಿಗಳು ಹಾಗೂ ಮಧ್ಯವಯಸ್ಕ ದಂಪತಿಯ ಹಾಸ್ಯ ಸನ್ನಿವೇಶಗಳಿವೆ. ಅಂದುಕೊಂಡಂತೆ ಆದರೆ ಇದೇ ತಿಂಗಳು ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕ.

ಅಭಿನವ ಪ್ರೊಡಕ್ಷನ್ ಅಡಿಯಲ್ಲಿ ಮಂಜು ಮುದ್ಗಲ್ ಚಿತ್ರ ನಿರ್ಮಾಣ ಮಾಡುವ ಜತೆಗೆ, ಪ್ರಮುಖ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ವಿಜಯ್ ವಿಘ್ನೇಶ್ ನಾಯಕ. ದಾವಣಗೆರೆಯ ವಾಣಿಶ್ರೀ ಶ್ರೀನಿವಾಸ್ ನಾಯಕಿ. ಇವರೊಂದಿಗೆ ಶ್ರಾವಣಿ, ಅಶ್ವಿನಿ ಮುದ್ಗಲ್, ಮಮತಾ, ಗೋವಿಂದರಾಜು-ವೈಲಾ ಮುಂತಾದವರು ನಟಿಸಿದ್ದಾರೆ. ನಿರ್ದೇಶಕರೇ ಸಾಹಿತ್ಯ ಬರೆದು, ಸಂಗೀತ ಸಂಯೋಜಿಸಿದ್ದಾರೆ. ಶರಣಪ್ಪ ಸುಗ್ಗನಹಳ್ಳಿ ಛಾಯಾಚಿತ್ರಗ್ರಹಣ, ಶಿವರಾಜ್ ಮೆಹೂ ಸಂಕಲನ ಚಿತ್ರಕ್ಕಿದೆ.

'ಅಭಿನಯಕ್ಕಾಗಿ ಅವಕಾಶ ಕೇಳಿಕೊಂಡು ಎಲ್ಲರ ಬಳಿ ಹೋಗುತ್ತಿದ್ದೆ. ಸರಿಯಾದ ಅವಕಾಶ ಸಿಗಲಿಲ್ಲ. ಆಗ ನಾನೇ ಒಂದು ಸಿನಿಮಾ ನಿರ್ಮಾಣ ಮಾಡುವೆ ಎಂದು ಹೊರಟೆ. ಇಂದು ಸಿನಿಮಾ ಬಿಡುಗಡೆ ಹಂತಕ್ಕೆ ಬಂದಿದೆ' ಎಂದರು ನಿರ್ಮಾಪಕ.

ಕೊಪ್ಪಳ, ಉಪ್ಪಿನ ಬೇಟಗೇರಿ ಸುತ್ತಮುತ್ತ ಚಿತ್ರೀಕರಣಗೊಂಡಿದೆ.

'ಹಿಂದಿ ಸೀಮೆ ಪಕ್ಷ' ಹಣೆಪಟ್ಟಿ ಕಳಚಿದ ಬಿಜೆಪಿ

ತೆಲಂಗಾಣದಲ್ಲಿ ಕಮಲದ ಬೇರುಗಳು ಆಳಕ್ಕೆ • ಕೇರಳದಲ್ಲಿ ನೆಲೆ ವಿಸ್ತರಣೆ • ಮತ ಪ್ರಮಾಣ ಗಣನೀಯವಾಗಿ ಹೆಚ್ಚಳ

• ಮಂಜುನಾಥ ಹೆಬ್ಬಾರ್

ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2026

ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಗಳಿಸಿದ ಸ್ಥಾನಗಳು (ಶೇ)



ಹಿಂದಿ ಸೀಮೆಯ ರಾಜ್ಯಗಳು: ಬಿಹಾರ, ಛತ್ತೀಸಗಢ, ಹರಿಯಾಣ, ಹಿಮಾಚಲ ಪ್ರದೇಶ, ಜಾರ್ಖಂಡ್, ಮಧ್ಯ ಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ಉತ್ತರಾಖಂಡ ಹಾಗೂ ಕೇಂದ್ರಾಡಳಿತ ಪ್ರದೇಶವಾದ ನವದೆಹಲಿ

ನವದೆಹಲಿ: ಬಿಜೆಪಿಗೆ ಮೊದಲಿನಿಂದಲೂ 'ಹಿಂದಿ ಸೀಮೆಯ ಪಕ್ಷ' ಎಂಬ ಹಣೆಪಟ್ಟಿ ಅಂಟಿಕೊಂಡಿದೆ. ಅಸ್ಸಾಂನಲ್ಲಿ ಸತತ ಮೂರು ಗೆಲುವು ಸಾಧಿಸುವ ಹಾಗೂ ಪಶ್ಚಿಮ ಬಂಗಾಳದ ಗದ್ದುಗೆ ಹಿಡಿಯುವ ಮೂಲಕ ಈ ಹಣೆಪಟ್ಟಿಯಿಂದ ಮುಕ್ತವಾಗುವತ್ತ ಕಮಲ ಪಾಳಯ ಮುಂದಡಿ ಇಟ್ಟಿದೆ.

17 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಐದು ರಾಜ್ಯಗಳ ಚುಕ್ಕಾಣಿ ಎನ್‌ಡಿಎ ಮೈತ್ರಿಕೂಟದ ಕೈಯಲ್ಲಿದೆ. ಜಾರ್ಖಂಡ್ ಹಾಗೂ ಹಿಮಾಚಲ ಪ್ರದೇಶ ಹೊರತುಪಡಿಸಿ ಹಿಂದಿ ಸೀಮೆಯ ಎಲ್ಲ ರಾಜ್ಯಗಳು ಬಿಜೆಪಿ ಪಾಲಾಗಿ ಬಹಳ ಕಾಲ ಕಳೆದಿದೆ.

ಹಿಂದಿಯೇತರ ಭಾಷೆ ಮಾತನಾಡುವ ಪೂರ್ವ ಭಾರತದ ಮೂರು ರಾಜ್ಯಗಳು (ಅಸ್ಸಾಂ, ಪಶ್ಚಿಮ ಬಂಗಾಳ, ಒಡಿಶಾ) ಹಾಗೂ ಪಶ್ಚಿಮ ಭಾರತದ ಮೂರು ರಾಜ್ಯಗಳಲ್ಲಿ (ಮಹಾರಾಷ್ಟ್ರ, ಗುಜರಾತ್, ಗೋವಾ) ಬಿಜೆಪಿ ಮುಖ್ಯಮಂತ್ರಿಗಳಿದ್ದಾರೆ. ಕರ್ನಾಟಕದಲ್ಲಿ ಪಕ್ಷಕ್ಕೆ ಪ್ರಬಲ ನೆಲೆ ಇದೆ. ಆಂಧ್ರ ಪ್ರದೇಶದಲ್ಲಿ ಎನ್‌ಡಿಎ ಮೈತ್ರಿ ಸರ್ಕಾರವಿದೆ. ತೆಲಂಗಾಣದಲ್ಲಿ ಕಮಲದ ಬೇರುಗಳು ಆಳಕ್ಕೆ ಇಳಿಯುತ್ತಿರುವುದಕ್ಕೆ ಈಚಿನ ಚುನಾವಣಾ ಫಲಿತಾಂಶಗಳೇ ಸಾಕ್ಷಿ.

ಕೇರಳದಲ್ಲಿ ಪಕ್ಷ ನಿಧಾನಕ್ಕೆ ನೆಲೆ ವಿಸ್ತರಿಸುತ್ತಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಖಾತೆ ತೆರೆದಿದ್ದ ಪಕ್ಷವು, 2026ರ ವಿಧಾನಸಭಾ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಗೆದ್ದಿದೆ. ಪಕ್ಷದ ಮತ ಪ್ರಮಾಣ ಗಣನೀಯವಾಗಿ ಹೆಚ್ಚಳ ಆಗಿದೆ. ಇದೊಂದು ಸಣ್ಣ ಸಾಧನೆ ಎನಿಸಿದರೂ, ಮುಂಬರುವ ದಿನಗಳಲ್ಲಿ ಎಡಪಕ್ಷಗಳ ಮತ ಬ್ಯಾಂಕ್ ಅನ್ನು ಸೆಳೆದು ರಾಜ್ಯದಲ್ಲಿ ಭದ್ರವಾಗಿ ನೆಲೆಯೂರುವುದು ಬಿಜೆಪಿಯ ಆಲೋಚನೆ. ದಶಕದ ಹಿಂದೆ ಪಶ್ಚಿಮ ಬಂಗಾಳದಲ್ಲಿ ಕಮಲ ಪಾಳಯ ಶುರು ಮಾಡಿದ್ದು ಇದನ್ನೇ. ಈಗ ಅಲ್ಲಿ ಗೆಲುವಿನ ಫಸಲು ಸಿಕ್ಕಿದೆ.

ತಮಿಳುನಾಡಿನಲ್ಲಿ ಪ್ರಾದೇಶಿಕ ಪಕ್ಷಗಳ ಸವಾಲುಗಳನ್ನು ಮೆಟ್ಟಿ ನಿಂತು ಭದ್ರವಾಗಿ ತಳವೂರಲು ಶತಪ್ರಯತ್ನ ಮಾಡುತ್ತಿದೆ. ಪಶ್ಚಿಮ ಬಂಗಾಳದ ಮಾದರಿಯಲ್ಲೇ ದ್ರಾವಿಡ ನಾಡಿನ ಗದ್ದುಗೆ ಹಿಡಿಯಲು ಬಿಜೆಪಿ ಮೈತ್ರಿಕೂಟ ಪ್ರಯತ್ನ ನಡೆಸಿದ್ದರೂ ಫಲ ಸಿಕ್ಕಿಲ್ಲ. ಅಚ್ಚರಿಯ ಗೆಲುವು ಸಾಧಿಸಿ ಗದ್ದುಗೆ ಏರಲು ಸಜ್ಜಾಗಿರುವ ಟಿವಿಕೆಯ ವಿಜಯ್ ಅವರೊಂದಿಗೆ ಮೈತ್ರಿ ಕುದುರಿಸಲು ಪಕ್ಷವು ಈಗಲೂ ಪ್ರಯತ್ನ ನಡೆಸಿದೆ.

2014ರ ಲೋಕಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವಿನ ಬಳಿಕ ಪಕ್ಷವು ಹಿಂದಿಯೇತರ ಭಾಷೆ ಮಾತನಾಡುವ ಒಡಿಶಾ, ಅಸ್ಸಾಂ, ಪಶ್ಚಿಮ ಬಂಗಾಳದಂತಹ ರಾಜ್ಯಗಳನ್ನು ಬಗಲಿಗೆ ಹಾಕಿಕೊಂಡಿದೆ. ಮಹಾರಾಷ್ಟ್ರ ಹಾಗೂ ಅಸ್ಸಾಂನಲ್ಲಿ ಪಕ್ಷವು ಈ ಹಿಂದೆ ಪ್ರಾದೇಶಿಕ ಪಕ್ಷಗಳಿಗೆ ಕಿರಿಯ ಪಾಲುದಾರ ಆಗಿತ್ತು. ಆದರೆ, ಈಗ ಉಲ್ಟಾ ಪಲ್ಟಾ ಆಗಿದೆ. ಪ್ರಾದೇಶಿಕ ಪಕ್ಷಗಳು ಹಿಂಬಡ್ತಿ ಪಡೆದಿವೆ. ಬಿಹಾರದಲ್ಲಿ ದಶಕದ ಹಿಂದೆ ಎನ್‌ಡಿಎ ಮೈತ್ರಿಕೂಟದಲ್ಲಿ ಬಿಜೆಪಿ ಕಿರಿಯ ಪಾಲುದಾರ ಆಗಿತ್ತು. 2025ರ ಚುನಾವಣೆಯಲ್ಲಿ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಇದೀಗ, ಆ ರಾಜ್ಯದಲ್ಲಿ ಬಿಜೆಪಿಯ ಮುಖ್ಯಮಂತ್ರಿ ಇದ್ದಾರೆ.

ಮತ್ತಷ್ಟು ದುರ್ಬಲವಾದ ವಿಪಕ್ಷಗಳು: ಇನ್ನೊಂದೆಡೆ, ಕೇಂದ್ರ ಸರ್ಕಾರದ ನೀತಿ ವಿರುದ್ಧ ಪದೇ ಪದೇ ಧ್ವನಿ ಎತ್ತುತ್ತಿದ್ದ ಮಮತಾ ಬ್ಯಾನರ್ಜಿ, ಎಂ.ಕೆ. ಸ್ಟಾಲಿನ್, ಪಿಣರಾಯಿ ವಿಜಯನ್ ಅವರು ಮುಖ್ಯಮಂತ್ರಿ ಗಾದಿ ಕಳೆದುಕೊಂಡಿದ್ದಾರೆ. ತೆರಿಗೆ ಪಾಲು ಹಂಚಿಕೆ, ಅನುದಾನ ತಾರತಮ್ಯ, ಕ್ಷೇತ್ರ ಪುನರ್ ವಿಂಗಡಣೆಯ ತಾರತಮ್ಯದ ವಿರುದ್ಧ ಈ ನಾಯಕರು ಗಟ್ಟಿ ಧ್ವನಿ ಆಗಿದ್ದರು. ಕೇಂದ್ರದ ವಿರುದ್ಧ ನ್ಯಾಯಾಲಯದ ಮೊರೆ ಹೋಗಿ ನ್ಯಾಯ ಪಡೆಯುವ ಛಾತಿ ತೋರಿಸಿದ್ದರು. ಕಳೆದ ಐದು ವರ್ಷಗಳಲ್ಲಿ ಲೋಕಭವನ– ರಾಜ್ಯ ಸರ್ಕಾರಗಳ ನಡುವೆ ಅತೀ ಹೆಚ್ಚು ಸಂಘರ್ಷ ನಡೆದಿದ್ದು ಈ ರಾಜ್ಯಗಳಲ್ಲೇ.

ಇನ್ನೊಂದು ವಿಷಯ ಇಲ್ಲಿ ಗಮನಿಸಬೇಕು. 2019 ಹಾಗೂ 2024ರ ಲೋಕಸಭಾ ಚುನಾವಣೆಗಳಲ್ಲಿ ಟಿಎಂಸಿ ಹಾಗೂ ಡಿಎಂಕೆ ಉತ್ತಮ ಸಾಧನೆ ಮಾಡಿದ್ದವು. ವಿಧಾನಸಭಾ ಚುನಾವಣೆಗಳಲ್ಲಿ ಹೀನಾಯವಾಗಿ ಸೋತಿರುವುದು ಪಕ್ಷದ ನೇತಾರರ ಆತ್ಮಸ್ಥೈರ್ಯಕ್ಕೆ ಹೊಡೆತ ನೀಡಿದಂತಾಗಿದೆ. ಇನ್ನೊಂದೆಡೆ, 2024ರ ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರ, ಹರಿಯಾಣ, ಅಸ್ಸಾಂನಲ್ಲಿ ಕಾಂಗ್ರೆಸ್ ಉತ್ತಮ ಸಾಧನೆ ಮಾಡಿತ್ತು. ಆದರೆ, ಆ ಬಳಿಕ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಈ ರಾಜ್ಯಗಳಲ್ಲಿ ಕಾಂಗ್ರೆಸ್‌ನದ್ದು ಕಳಪೆ ಸಾಧನೆ. 2024ರ ಲೋಕಸಭಾ ಚುನಾವಣೆಯಲ್ಲಿನ ಹಿನ್ನಡೆ ಕಂಡ ಬಳಿಕ ಬಹುತೇಕ ರಾಜ್ಯಗಳಲ್ಲಿ ಬಿಜೆಪಿ ಗೆಲ್ಲುತ್ತಾ ಬಂದರೆ, ವಿಪಕ್ಷಗಳದ್ದು ವ್ಯತಿರಿಕ್ತ ಸ್ಥಿತಿ. 2024ರಲ್ಲಿ ಬಿಜೆಪಿಗೆ ಪ್ರಬಲ ಸ್ಪರ್ಧೆ ನೀಡಿದ್ದ ಪ್ರಾದೇಶಿಕ ಪಕ್ಷಗಳು ಈಗ ದುರ್ಬಲವಾಗಿವೆ.

'ಬಿಜೆಪಿ ಗೆಲುವು ತಡೆಯಲು ಜಾತ್ಯತೀತ ಪಕ್ಷಗಳಿಂದ ಅಸಾಧ್ಯ'

ಓವೈಸಿ

ಹೈದರಾಬಾದ್ (ಪಿಟಿಐ): 'ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸೇರಿದಂತೆ ರಾಜಕೀಯ ಪಕ್ಷಗಳು 'ಮೃದು ಹಿಂದುತ್ವ' ರಾಜಕಾರಣ ಮಾಡುತ್ತಿವೆ. ಜಾತ್ಯತೀತ ಪಕ್ಷಗಳಿಂದ ಬಿಜೆಪಿಯ ಗೆಲುವನ್ನು ತಡೆಯಲು ಸಾಧ್ಯವಿಲ್ಲ' ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಮಂಗಳವಾರ ಹೇಳಿದ್ದಾರೆ.

'ಆಮ್ ಆದ್ಮಿ ಪಾರ್ಟಿ, ಶಿವಸೇನೆ (ಯುಬಿಟಿ), ಮಹಾರಾಷ್ಟ್ರದ ಎನ್‌ಸಿಪಿ ಮತ್ತು ಪಶ್ಚಿಮ ಬಂಗಾಳದ ಟಿಎಂಸಿ ಪಕ್ಷಗಳು ಈ ಹಿಂದೆ ಮೃದು ಹಿಂದುತ್ವ ರಾಜಕಾರಣ ಮಾಡಲು ಪ್ರಯತ್ನಿಸಿದ್ದವು. ಆದ್ದರಿಂದ ಮುಸ್ಲಿಮರು ಇತರರ ಮೇಲೆ ಅವಲಂಬಿತರಾಗದೆ ತಮ್ಮದೇ ಆದ ಸ್ವತಂತ್ರ ರಾಜಕೀಯ ನಾಯಕತ್ವವನ್ನು ರೂಪಿಸಿಕೊಳ್ಳಲು ಪ್ರಯತ್ನಿಸಬೇಕು' ಎಂದು ಸಲಹೆ ನೀಡಿದ್ದಾರೆ.

'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಮುಸ್ಲಿಮರ ಮೇಲಿನ ಶೋಷಣೆಯಿಂದಾಗಿ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ಸೋತಿದೆ' ಎಂದು ಹೇಳಿದ್ದಾರೆ.

'ಮುಸ್ಲಿಮರು ರಾಜಕೀಯವಾಗಿ ಸಂಘಟಿತರಾಗಬೇಕು. ಸಮುದಾಯದವರ ಅಭಿವೃದ್ಧಿಗೆ ಶ್ರಮಿಸುವ ಹಾಗೂ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುವ ಚುನಾಯಿತ ಪ್ರತಿನಿಧಿಗಳನ್ನು ಆರಿಸಿಕೊಳ್ಳುವ ಕಾಲ ಬಂದಿದೆ' ಎಂದು ಅವರು ತಿಳಿಸಿದ್ದಾರೆ.

ಪುದುಚೆರಿ ಮುನ್ನಡೆಸಲು ಎನ್. ರಂಗಸ್ವಾಮಿ ಸಜ್ಜು


ರಂಗಸ್ವಾಮಿ

ಪುದುಚೆರಿ (ಪಿಟಿಐ): ಶಾಂತ ಹಾಗೂ ಮೃದು ಸ್ವಭಾವದ ಎನ್.ರಂಗಸ್ವಾಮಿ ಅವರು ಐದನೇ ಬಾರಿಗೆ ಪುದುಚೆರಿ ಮುನ್ನಡೆಸಲು ಸಜ್ಜಾಗಿದ್ದಾರೆ.

ಕೇಂದ್ರಾಡಳಿತ ಪ್ರದೇಶದಲ್ಲಿ ಏಪ್ರಿಲ್ 9ರಂದು ನಡೆದ ಚುನಾವಣೆಯಲ್ಲಿ ಎಐಎನ್‌ಆರ್‌ಸಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಭರ್ಜರಿ ಗೆಲುವು ಸಾಧಿಸಿದೆ.

ಎಐಎನ್‌ಆರ್‌ಸಿ ಪಕ್ಷವು ಸ್ಪರ್ಧಿಸಿದ್ದ 16 ಸ್ಥಾನಗಳ ಪೈಕಿ 12ರಲ್ಲಿ ಜಯಗಳಿಸಿದೆ. ಬಿಜೆಪಿ 10 ಸ್ಥಾನಗಳ ಪೈಕಿ ನಾಲ್ಕು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ಎಐಎಡಿಎಂಕೆ, ಎಲ್‌ಜೆಕೆ ಸೇರಿದಂತೆ ಎನ್‌ಡಿಎ ಮೈತ್ರಿಕೂಟದ ಇತರ ಪಾಲುದಾರ ಪಕ್ಷಗಳು ತಲಾ ಒಂದೊಂದು ಸ್ಥಾನವನ್ನು ಪಡೆದಿವೆ. ಈ ಮೈತ್ರಿಕೂಟವು 30 ಸದಸ್ಯ ಸ್ಥಾನಗಳ ಪೈಕಿ 18 ಸ್ಥಾನಗಳನ್ನು ಹೊಂದಿದೆ. ಸರ್ಕಾರ ರಚಿಸಲು 16 ಸ್ಥಾನಗಳ ಅಗತ್ಯವಿದ್ದು, ಈಗ ಅದಕ್ಕಿಂತ ಎರಡು ಸ್ಥಾನಗಳು ಹೆಚ್ಚಾಗಿವೆ. ಇದಲ್ಲದೆ, ಮೂವರು ನಾಮನಿರ್ದೇಶಿತ ಸದಸ್ಯರೂ ಇರುತ್ತಾರೆ.

ರಂಗಸ್ವಾಮಿ ಅವರು ಈ ಹಿಂದೆ (2001, 2006) ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿಯಾಗಿದ್ದರು. 2011ರಲ್ಲಿ ಕಾಂಗ್ರೆಸ್ ತೊರೆದು ಸ್ವಂತ ಪಕ್ಷವನ್ನು ಸ್ಥಾಪಿಸಿದ್ದರು.

ಅವರು 2011ರಲ್ಲಿ ತಮಿಳುನಾಡು ಮುಖ್ಯಮಂತ್ರಿ, ಎಐಎಡಿಎಂಕೆ ಮುಖ್ಯಸ್ಥೆ ಜೆ. ಜಯಲಲಿತಾ ಅವರೊಂದಿಗೆ ಕೈಜೋಡಿಸಿದ್ದರು. ಆ ಮೈತ್ರಿಕೂಟವು ಚುನಾವಣೆಯಲ್ಲಿ ಗೆದ್ದಿತ್ತು. ನಂತರ ಇಬ್ಬರ ನಡುವಿನ ಸಂಬಂಧ ಹದಗೆಟ್ಟಿತ್ತು.

ಆರು ಸ್ಥಾನ: 'ಇಂಡಿಯಾ' ಬಣ ಆರು ಸ್ಥಾನ ಗೆದ್ದಿದೆ. ಈ ಪೈಕಿ ಡಿಎಂಕೆ ಐದು ಮತ್ತು ಕಾಂಗ್ರೆಸ್ ಒಂದು ಸ್ಥಾನ ಪಡೆದಿದೆ. ಹಾಲಿ ಸಂಸದ ವೈತಿಲಿಂಗಂ ಸೇರಿದಂತೆ ಅದರ ಹೆಚ್ಚಿನ ಅಭ್ಯರ್ಥಿಗಳು ಸೋತಿದ್ದಾರೆ.

ಟಿವಿಕೆ ಪಕ್ಷವು ಎರಡು ಸ್ಥಾನಗಳನ್ನು ಗೆದ್ದರೆ, ಅದರ ಬೆಂಬಲಿತ ಮಕ್ಕಳ್ ನೇಯ ಕಳಗಂ ಒಂದು ಸ್ಥಾನ ಗೆದ್ದಿದೆ. ನೆಡುನ್ಕಾಡು ಮೀಸಲು ಕ್ಷೇತ್ರ, ಕದಿರ್ಕಾಮಂ ಮತ್ತು ಮಾಹೆ ಕ್ಷೇತ್ರದಿಂದ ಮೂವರು ಸ್ವತಂತ್ರ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಎಲ್‌ಜೆಕೆ ಮತ್ತು ಎಐಎಡಿಎಂಕೆ ಪಕ್ಷಗಳು ಸಹ ಸಂಪುಟದಲ್ಲಿ ಸಚಿವ ಸ್ಥಾನಕ್ಕಾಗಿ ಬೇಡಿಕೆ ಇಡುವ ಸಾಧ್ಯತೆ ಇದೆ.

ಬಿಜೆಪಿ, ಟಿಎಂಸಿ ಕಾರ್ಯಕರ್ತರ ಹತ್ಯೆ

ಕೋಲ್ಕತ್ತ, ಪಶ್ಚಿಮ ಬಂಗಾಳ (ಪಿಟಿಐ): ಮಂಗಳವಾರ ನಡೆದ ಚುನಾವಣೋತ್ತರ ಹಿಂಸಾಚಾರದ ಪ್ರತ್ಯೇಕ ಘಟನೆಗಳಲ್ಲಿ ಬಿಜೆಪಿ, ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ತಲಾ ಒಬ್ಬರು ಕಾರ್ಯಕರ್ತರು ಮೃತಪಟ್ಟಿದ್ದಾರೆ.

'ಮಂಗಳವಾರ ರಾತ್ರಿ ನ್ಯೂ ಟೌನ್ ಪ್ರದೇಶದಲ್ಲಿ ವಿಜಯೋತ್ಸವ ಮೆರವಣಿಗೆ ವೇಳೆ ಟಿಎಂಸಿ ಕಾರ್ಯಕರ್ತರು ಥಳಿಸಿದ್ದರಿಂದ ಬಿಜೆಪಿಯ ಮಧು ಮೊಂಡಲ್ ಅವರು ಮೃತಪಟ್ಟಿದ್ದಾರೆ. ವೀರ್‌ಭೂಮ್‌ನ ನಾನೂರ್‌ನಲ್ಲಿ ಟಿಎಂಸಿ ಕಾರ್ಯಕರ್ತ ಅಬಿರ್ ಶೇಖ್ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆ ನಡೆಸಿದ್ದರಿಂದ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಭಲ್ಲಿಗುಡಿ ಪ್ರದೇಶದಲ್ಲಿ ಬಿಜೆಪಿ ವಿಜಯೋತ್ಸವ ಕಾರ್ಯಕ್ರಮ ಸಾಗುತ್ತಿದ್ದ ವೇಳೆ ಟಿಎಂಸಿ–ಬಿಜೆಪಿ ಕಾರ್ಯಕರ್ತರ ನಡುವೆ ಜಗಳ ಆರಂಭಗೊಂಡಿದ್ದು, ಮೊಂಡಲ್ ಮೇಲೆ ಟಿಎಂಸಿ ಕಾರ್ಯಕರ್ತರು ದಾಳಿ ನಡೆಸಿದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ದರೂ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು.

'ಘಟನೆ ಬಳಿಕ ಟಿಎಂಸಿ ಕಾರ್ಯಕರ್ತರ ಮನೆಗಳ ಮೇಲೆ ಬಿಜೆಪಿ ಕಾರ್ಯಕರ್ತರು ನುಗ್ಗಿ ದಾಳಿ ನಡೆಸಿ, ನಂತರ ರಸ್ತೆ ತಡೆ ನಡೆಸಿದರು. ತಕ್ಷಣವೇ ಸ್ಥಳದಲ್ಲಿ ಕೇಂದ್ರೀಯ ಮೀಸಲು ಪಡೆಯನ್ನು ನಿಯೋಜಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾನೂರ್ ಪ್ರದೇಶದಲ್ಲಿ ನಡೆದ ಜಗಳದಲ್ಲಿ ಶೇಖ್ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಟಿಎಂಸಿಯ ಸ್ಥಳೀಯ ಕಮಿಟಿ ಸದಸ್ಯರಾಗಿದ್ದರು. ಘಟನೆಯಲ್ಲಿ ಮತ್ತೊಬ್ಬರು ಗಾಯಗೊಂಡಿದ್ದು, ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ.

ದಾಳಿ: ಬಿಜೆಪಿ ಕಾರ್ಯಕರ್ತರು ಸೋಮವಾರ ಪಶ್ಚಿಮ ಬಂಗಾಳದಾದ್ಯಂತ ಗೆಲುವಿನ ಸಂಭ್ರಮ ಆಚರಿಸಿದ ಸಂದರ್ಭದಲ್ಲಿ ಟಿಎಂಸಿ ಪಕ್ಷದ ಕಚೇರಿಗಳಿಗೆ ಬೆಂಕಿ ಹಚ್ಚಿದ ಮತ್ತು ಧ್ವಂಸಗೊಳಿಸಿದ ಘಟನೆಗಳು ವರದಿಯಾಗಿವೆ.

ಸರ್ಕಾರ ರಚನೆ ಕಸರತ್ತು ಶುರು

ಹಕ್ಕು ಮಂಡಿಸಿದ ವಿಜಯ್

ಒಂದನೇ ಪುಟದಿಂದ...

ಪನೈಯೂರಿನಲ್ಲಿರುವ ಪಕ್ಷದ ಪ್ರಧಾನ ಕಚೇರಿಯಲ್ಲಿ ನಡೆದ ಸಭೆಗೆ ವಿಜಯ್ ಬರುತ್ತಿದ್ದಂತೆ, ನೂತನ ಶಾಸಕರು, ಪಕ್ಷದ ಮುಖಂಡರು, ಬೆಂಬಲಿಗರು ಅದ್ದೂರಿ ಸ್ವಾಗತ ಕೋರಿದರು. ತಮ್ಮ ಮೆಚ್ಚಿನ ನಟ ಹಾಗೂ ಭಾವಿ ಮುಖ್ಯಮಂತ್ರಿಯನ್ನು ಕಣ್ತುಂಬಿಕೊಳ್ಳಲು ಭಾರಿ ಸಂಖ್ಯೆಯ ಅಭಿಮಾನಿಗಳು ಜಮಾಯಿಸಿದ್ದರು.

ಕಚೇರಿ ಪ್ರವೇಶಿಸುತ್ತಿದ್ದಂತೆ ಪೆರಿಯಾರ್ ಇ.ವಿ. ರಾಮಸ್ವಾಮಿ, ಡಾ. ಬಿ.ಆರ್. ಅಂಬೇಡ್ಕರ್, ಕೆ. ಕಾಮರಾಜ್, ವೇಲು ನಾಚಿಯಾರ್, ಅಂಜಲೈ ಅಮ್ಮಾಳ್ ಅವರ ಪುತ್ಥಳಿಗಳಿಗೆ ವಿಜಯ್ ಅವರು ಪುಷ್ಪನಮನ ಸಲ್ಲಿಸಿದರು.

'ಸರ್ಕಾರ ರಚನೆಗೆ ಅವಶ್ಯವಿರುವ 10 ಶಾಸಕರ ಬೆಂಬಲವನ್ನು ವಿಜಯ್ ಪಡೆಯಲಿದ್ದಾರೆ. ಸಕಾರಾತ್ಮಕ ಫಲಿತಾಂಶದ ಬಗ್ಗೆ ವಿಶ್ವಾಸವಿದೆ. ಶೀಘ್ರದಲ್ಲೇ ಒಳ್ಳೆಯ ಸುದ್ದಿ ಸಿಗಲಿದೆ' ಎಂದು ಪಕ್ಷದ ಮುಖಂಡ ನಂಜಿಲ್ ಸಂಪತ್ ಹೇಳಿದ್ದಾರೆ.

ಸ್ಟಾಲಿನ್ ರಾಜೀನಾಮೆ ಅಂಗೀಕಾರ: ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ರಾಜೀನಾಮೆಯನ್ನು ತಮಿಳುನಾಡು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಅಂಗೀಕರಿಸಿದ್ದಾರೆ. ಆಡಳಿತಾರೂಢ ಡಿಎಂಕೆ ಚುನಾವಣೆಯಲ್ಲಿ ಸೋತ ನಂತರ ಮುಖ್ಯಮಂತ್ರಿ ರಾಜೀನಾಮೆ ನೀಡಿದ್ದರು.

ಕೆಳಗಿಳಿಯಲು ಒಲ್ಲದ ಮಮತಾ

ಒಂದನೇ ಪುಟದಿಂದ...

'ಅರವಿಂದ ಕೇಜ್ರಿವಾಲ್, ಉದ್ಧವ್ ಠಾಕ್ರೆ, ಅಖಿಲೇಶ್ ಯಾದವ್ ಮತ್ತು ಹೇಮಂತ್ ಸೊರೇನ್ ಅವರಂತಹ ನಾಯಕರಿಂದಲೂ ನನಗೆ ಕರೆಗಳು ಬಂದಿವೆ' ಎಂದರು.

'ಮುಖ್ಯಮಂತ್ರಿ ಹುದ್ದೆಯಲ್ಲಿ ಇರುವವರೆಗೂ, ನಾನು ಅನೇಕ ವಿಷಯಗಳನ್ನು ಸಹಿಸಿಕೊಂಡಿದ್ದೆ. ಈಗ ಸ್ವತಂತ್ರಗೊಂಡ ಹಕ್ಕಿಯಂತಾಗಿದ್ದೇನೆ. ನಾನೊಬ್ಬಳು ಬೀದಿ ಹೋರಾಟಗಾರ್ತಿ. ಬೀದಿಗಳಲ್ಲಿದ್ದುಕೊಂಡೇ ಎಲ್ಲಾ ಅನ್ಯಾಯಗಳ ವಿರುದ್ಧ ಹೋರಾಡುತ್ತೇನೆ' ಎಂದು ಹೇಳಿದರು.

ಕೇರಳಂ: ಮೂವರಲ್ಲಿ ಯಾರಿಗೆ ಸಿಎಂ ಕುರ್ಚಿ?

ಒಂದನೇ ಪುಟದಿಂದ...

'ಕಾಂಗ್ರೆಸ್ ಹೈಕಮಾಂಡ್ ನಿಯೋಜಿಸಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಕೇರಳಂ ಉಸ್ತುವಾರಿ ದೀಪಾ ದಾಸ್ ಮುನ್ಶಿ ನೇತೃತ್ವದ ಸಮಿತಿಯು ಮುಖ್ಯಮಂತ್ರಿ ಹೆಸರನ್ನು ಅಂತಿಮಗೊಳಿಸಲಿದೆ.

ಈ ಸಮಿತಿಯು ಮೂರೂ ಆಕಾಂಕ್ಷಿಗಳೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಲಿದೆ. ಐಯುಎಂಎಲ್ ಸೇರಿ ಮಿತ್ರ ಪಕ್ಷಗಳ ಅಭಿಪ್ರಾಯವನ್ನೂ ಆಲಿಸಲಿದೆ. ನಂತರ ಕಾಂಗ್ರೆಸ್ ಶಾಸಕಾಂಗ ಪಕ್ಷವು ಸಭೆ ಸೇರಿ, ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದರ ಬಗ್ಗೆ ಒಂದು ಸಾಲಿನ ನಿರ್ಣಯವನ್ನು ಅಂಗೀಕರಿಸಲಿದೆ' ಎಂದು ಮೂಲಗಳು ಹೇಳಿವೆ.

ವೀಕ್ಷಕರಾಗಿ ಅಮಿತ್ ಶಾ ನೇಮಕ

ನವದೆಹಲಿ (ಪಿಟಿಐ): ಬಿಜೆಪಿಯು ಪಶ್ಚಿಮ ಬಂಗಾಳದಲ್ಲಿ ತನ್ನ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗಾಗಿ ಗೃಹ ಸಚಿವ ಅಮಿತ್ ಶಾ ಅವರನ್ನು ಕೇಂದ್ರದ ವೀಕ್ಷಕರಾಗಿ ನೇಮಿಸಿದೆ.

ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರನ್ನು ಸಹ ವೀಕ್ಷಕರನ್ನಾಗಿ ನೇಮಿಸಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಅಸ್ಸಾಂನಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಕೇಂದ್ರ ಸಚಿವ ಜೆ.ಪಿ ನಡ್ಡಾ ಅವರನ್ನು ವೀಕ್ಷಕರನ್ನಾಗಿ ಮತ್ತು ಹರಿಯಾಣ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರನ್ನು ಸಹ ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ.

ಮೆಟ್ಟುಪಾಳ್ಯಂ ಶಾಸಕ ತುರುವೇಕೆರೆ ಮೊಮ್ಮಗ

ಪ್ರಜಾವಾಣಿ ವಾರ್ತೆ


ಸುನಿಲ್

ತುರುವೇಕೆರೆ (ತುಮಕೂರು): ತಮಿಳುನಾಡಿನ ಮೆಟ್ಟುಪಾಳ್ಯಂ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದ ಟಿವಿಕೆ ಶಾಸಕ ಸುನಿಲ್ ಆನಂದ್ ಮೂಲತಃ ಕನ್ನಡಿಗರು. ಅವರ ಮೂಲ ಊರು ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ ಹೋಬಳಿಯ ಹೊಡಿಕೇಘಟ್ಟ.

ಹೊಡಿಕೇಘಟ್ಟ ಸುನಿಲ್ ಅಜ್ಜನ (ತಂದೆಯ ತಂದೆ) ಊರು. 1925ರಲ್ಲಿ ವ್ಯವಹಾರಕ್ಕಾಗಿ ಸುನಿಲ್ ಅವರ ಅಜ್ಜ ನಿಂಗೇಗೌಡ ತಮಿಳುನಾಡಿಗೆ ವಲಸೆ ಹೋಗಿದ್ದರು. ಅವರ ಕುಟುಂಬ ಅಲ್ಲಿಯೇ ನೆಲೆ ಕಂಡುಕೊಂಡಿತು. ನಿಂಗೇಗೌಡರ ಮಗನ ಮಗನೇ ಸುನಿಲ್.

ಸುನಿಲ್ ಮೂಲತಃ ಉದ್ಯಮಿ. ಹೋಟೆಲ್ ಸೇರಿದಂತೆ ವಿವಿಧ ವ್ಯವಹಾರಗಳಲ್ಲಿ ತೊಡಗಿದ್ದಾರೆ. ರಾಜಕೀಯ ನಂಟು ಹೊಂದಿದ್ದ ಅವರಿಗೆ ಟಿವಿಕೆ ನಾಯಕ ವಿಜಯ್ ಜೊತೆಗೂ ಉತ್ತಮ ಒಡನಾಟ ಇದೆ. ವಿಜಯ್ ಜತೆಗಿನ ನಂಟು ಅವರು ಟಿವಿಕೆ ಸೇರಲು ಕಾರಣ. ಪ್ರಥಮ ಯತ್ನದಲ್ಲೇ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದಲ್ಲಿ ಧಾರ್ಮಿಕ ಕಾರ್ಯಕ್ರಮ ಹಾಗೂ ಸಂಬಂಧಿಕರ ಮನೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ ಎಂದು ಅವರ ಸಂಬಂಧಿ, ಮಾಜಿ ಶಾಸಕ ಎಚ್.ಬಿ.ನಂಜೇಗೌಡ ತಿಳಿಸಿದರು.

ಸುನಿಲ್ ಅವರ ತಾಯಿಯ ತಂದೆ ಲಿಂಗಪ್ಪ ಅವರು ಮೈಸೂರಿನ ಮೇಯರ್ ಆಗಿದ್ದರು.

ಕೋಲ್ಕತ್ತದ ಟಾಲಿಗಂಜ್ ಕ್ಷೇತ್ರದ ಬೀದಿಯೊಂದರಲ್ಲಿ ಬಿಜೆಪಿ ಕಾರ್ಯಕರ್ತರು ಟಿಎಂಸಿ ಪಕ್ಷದ ಬ್ಯಾನರ್‌ಗಳನ್ನು ಹರಿದು ಹಾಕಿದರು ಪಿಟಿಐ ಚಿತ್ರ

ತಮಿಳುನಾಡು ವಿಧಾನಸಭಾ ಚುನಾವಣೆ • ಟಿವಿಕೆ ಅಭ್ಯರ್ಥಿಗೆ ಗೆಲುವು

ಒಂದು ಮತದಿಂದ ಸೋತ ಸಚಿವ

ಪ್ರಜಾವಾಣಿ ವಾರ್ತೆ/ ಪಿಟಿಐ

ತಿರುಪ್ಪತ್ತೂರು: ಆಡಳಿತಾರೂಢ ಡಿಎಂಕೆಯ ಹಿರಿಯ ನಾಯಕ, ಸಹಕಾರ ಸಚಿವ ಕೆ.ಆರ್. ಪೆರಿಯಕರುಪ್ಪನ್ ಅವರು ತಿರುಪತ್ತೂರು ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಒಂದು ಮತದಿಂದ ಸೋತಿದ್ದಾರೆ.

ಟಿವಿಕೆಯ ಸೀನಿವಾಸ ಸೇತುಪತಿ ಆರ್. ಅವರು 83,375 ಮತ ಪಡೆಯುವ ಮೂಲಕ ಗೆಲುವು ಸಾಧಿಸಿದರೆ, ಪೆರಿಯಕರುಪ್ಪನ್ ಅವರು 83,374 ಮತ ಗಳಿಸಿದ್ದಾರೆ.

ಅಂತಿಮ ಸುತ್ತಿನ ಮತ ಎಣಿಕೆಯಲ್ಲಿ ಕರುಪ್ಪನ್ ಅವರು 30 ಮತಗಳ ಮುನ್ನಡೆ ಸಾಧಿಸಿದ್ದರು. ಅಂತಿಮ ಅಂಕಿ–ಅಂಶಗಳನ್ನು ಪರಿಗಣಿಸಿದಾಗ ಟಿವಿಕೆ ಅಭ್ಯರ್ಥಿಯ ಪರ ಫಲಿತಾಂಶ ಹೊರಹೊಮ್ಮಿತು.

ಬಿಜೆಪಿಯ ಕೆ.ಸಿ. ತಿರುಮಾರನ್ ಅವರು 29,054 ಮತ ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ.

2008ರ ರಾಜಸ್ಥಾನ ವಿಧಾನಸಭಾ ಚುನಾವಣೆಯಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದ ಸಿ.ಪಿ. ಜೋಶಿ ಅವರು ಬಿಜೆಪಿ ಅಭ್ಯರ್ಥಿ ಕಲ್ಯಾಣ್ ಸಿಂಗ್ ಚೌಹಾಣ್ ವಿರುದ್ಧ ಒಂದು ಮತದಿಂದ ಸೋತಿದ್ದರು.

35 ವರ್ಷದ ಬಳಿಕ ಅತ್ತೆ–ಅಳಿಯನ ಜೋಡಿ

ಲೀಮಾ

ಆಧವ್

'ಲಾಟರಿ ರಾಜ' ಎಂದೇ ಪ್ರಸಿದ್ಧರಾಗಿದ್ದ ಸ್ಯಾಂಟಿಯಾಗೊ ಮಾರ್ಟಿನ್ ಕುಟುಂಬದ ಮೂವರು ತಮಿಳುನಾಡು, ಪುದುಚೆರಿ ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಮಾರ್ಟಿನ್ ಅವರ ಪತ್ನಿ ಲೀಮಾ ರೋಸ್ ಅವರು ತಿರುಚಿರಾಪಳ್ಳಿ ಜಿಲ್ಲೆಯ ಲಾಲ್‌ಗುಡಿ ವಿಧಾನಸಭಾ ಕ್ಷೇತ್ರದಿಂದ ಎಐಎಡಿಎಂಕೆಯ ಶಾಸಕಿಯಾಗಿ ಆಯ್ಕೆಯಾದರೆ, ಈ ದಂಪತಿಯ ಅಳಿಯ, ಟಿವಿಕೆ ನಾಯಕ ಆಧವ್ ಅರ್ಜುನ ಅವರು ವಿಲ್ಲಿವಕ್ಕಂನಿಂದ ವಿಜಯಿಯಾಗಿದ್ದಾರೆ.

35 ವರ್ಷದ ಬಳಿಕ ತಮಿಳುನಾಡು ವಿಧಾನಸಭೆಗೆ ಆಯ್ಕೆಯಾದ ಅತ್ತೆ- ಅಳಿಯನ ಜೋಡಿ ರೋಸ್- ಆಧವ್ ಅವರದ್ದಾಗಿದೆ.

1991ರಲ್ಲಿ ಕಾಂಗ್ರೆಸ್‌ನ ಎ.ಎಸ್. ಪೊನ್ನಮ್ಮಾಳ್ ಹಾಗೂ ಅಳಿಯ ಎಐಎಡಿಎಂಕೆಯ ಎ. ಸುಬ್ಬುರತ್ನಂ ಅವರು ನೀಲಕೋಟೆ ಮತ್ತು ಪಳನಿಯಿಂದ ಶಾಸಕರಾಗಿ ಆಯ್ಕೆಯಾಗಿದ್ದರು.

ಮಾರ್ಟಿನ್ ಅವರ ಪುತ್ರ ಜೋಸ್ ಚಾರ್ಲ್ಸ್ ಮಾರ್ಟಿನ್ ಅವರು ಕಾಮರಾಜ ನಗರದಿಂದ ಪುದುಚೆರಿ ವಿಧಾನಸಭೆ ಪ್ರವೇಶಿಸಿದ್ದಾರೆ.

ಈ ಮೂವರು ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಸಂಜು ಮಿಂಚು: ಚೆನ್ನೈಗೆ ಗೆಲುವು

ನೂರ್ ಅಹಮದ್‌ಗೆ ಎರಡು ವಿಕೆಟ್

• ಡೆಲ್ಲಿ ಕ್ಯಾಪಿಟಲ್ಸ್‌ಗೆ ತವರಿನಲ್ಲಿ ಸತತ 4ನೇ ಸೋಲು

ನವದೆಹಲಿ (ಪಿಟಿಐ): ಬೌಲರ್‌ಗಳ ಶಿಸ್ತಿನ ದಾಳಿಯ ಬಳಿಕ ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ (ಔಟಾಗದೇ 87;52ಎ) ಮತ್ತೊಂದು ಸೊಗಸಾದ ಇನಿಂಗ್ಸ್ ಆಡಿದರು. ಇದರಿಂದಾಗಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಮಂಗಳವಾರ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಎಂಟು ವಿಕೆಟ್‌ಗಳ ಸುಲಭ ಜಯ ದಾಖಲಿಸಿತು.

ಈ ಗೆಲುವಿನೊಂದಿಗೆ ಋತುರಾಜ್ ಗಾಯಕವಾಡ್ ಪಡೆಯು ಏ.11ರಂದು ಡೆಲ್ಲಿ ವಿರುದ್ಧ ತನ್ನ ತವರಿನಲ್ಲಿ ಅನುಭವಿಸಿದ್ದ 23 ರನ್‌ಗಳ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು. 10 ಪಂದ್ಯಗಳಲ್ಲಿ 10 ಅಂಕ (5 ಗೆಲುವು, 5 ಸೋಲು) ಗಳಿಸಿದ ಚೆನ್ನೈ ತಂಡವು ಪ್ಲೇ ಆಫ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು. ತವರಿನಲ್ಲಿ ಸತತ ನಾಲ್ಕನೇ ಸೋಲು ಕಂಡ ಅಕ್ಷರ್ ಪಟೇಲ್ ಪಡೆಯ ಪ್ಲೇ ಆಫ್ ಹಾದಿ ಕಠಿಣವಾಯಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ದುಕೊಂಡಿತು. ಚೆನ್ನೈ ಬೌಲರ್‌ಗಳಾದ ನೂರ್ ಅಹಮ್ಮದ್ (22ಕ್ಕೆ 2), ಅಕೀಲ್ ಹುಸೇನ್ (19ಕ್ಕೆ 1), ಗುರ್ಜಪನೀತ್ ಸಿಂಗ್ (29ಕ್ಕೆ1) ಅವರ ಪರಿಣಾಮಕಾರಿ ದಾಳಿ ಮುಂದೆ ಡೆಲ್ಲಿ ಬ್ಯಾಟರ್‌ಗಳು ಪರದಾಡಿದರು. ಟ್ರಿಸ್ಟನ್ ಸ್ಟಬ್ಸ್ (38; 31ಎ) ಮತ್ತು ಸಮೀರ್ ರಿಜ್ವಿ (ಔಟಾಗದೇ 40; 24ಎ) ಅವರ ಹೋರಾಟದಿಂದಾಗಿ 7 ವಿಕೆಟ್‌ಗಳಿಗೆ 155 ರನ್‌ಗಳ ಸಾಧಾರಣ ಮೊತ್ತ ಕಲೆಹಾಕಿತು.

ಗುರಿ ಬೆನ್ನಟ್ಟಿದ ಚೆನ್ನೈ ತಂಡವು ಸಂಜು ಮತ್ತು ಕಾರ್ತಿಕ್ ಶರ್ಮಾ (ಔಟಾಗದೇ 41;31ಎ) ಅವರ ಶತಕದ ಜೊತೆಯಾಟದ ಬಲದಿಂದ 17.3 ಓವರ್‌ಗಳಲ್ಲಿ 2 ವಿಕೆಟ್‌ಗೆ 159 ರನ್ ಗಳಿಸಿ ಸತತ ಎರಡನೇ ಜಯ ದಾಖಲಿಸಿತು. ಹಾಲಿ ಆವೃತ್ತಿಯಲ್ಲಿ ಎರಡು ಅಮೋಘ ಶತಕ ದಾಖಲಿಸಿರುವ ವಿಕೆಟ್‌ಕೀಪರ್ ಸಂಜು 13 ರನ್‌ಗಳ ಅಂತರದಿಂದ ಮೂರಂಕಿ ತಪ್ಪಿಸಿಕೊಂಡರು.

ಚೆನ್ನೈ ತಂಡದ ಆರಂಭವೂ ಉತ್ತಮ ವಾಗಿರಲಿಲ್ಲ. ಹಿಂದಿನ ಎರಡು ಪಂದ್ಯಗಳಲ್ಲಿ ಅರ್ಧಶತಕ ಬಾರಿಸಿದ್ದ ಋತುರಾಜ್ (6) ನಿರಾಸೆ ಮೂಡಿಸಿದರು. ನಂತರ ಬಂದ ಉರ್ವಿಲ್ ಪಟೇಲ್ (17) ಬೇಗನೆ ಪೆವಿಲಿಯನ್ ಸೇರಿಕೊಂಡರು. 45 ರನ್‌ಗೆ 2 ವಿಕೆಟ್ ಕಳೆದುಕೊಂಡ ತಂಡಕ್ಕೆ ಸಂಜು ಮತ್ತು ಕಾರ್ತಿಕ್ ಮಹತ್ವದ ಚೇತರಿಕೆ ನೀಡಿದರು. ಅವರು ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ ಬಿರುಸಿನ 114 (66ಎ) ರನ್ ಸೇರಿಸಿ 15 ಎಸೆತಗಳು ಬಾಕಿ ಇರುವಂತೆ ತಂಡವನ್ನು ಗೆಲುವಿನ ದಡ ತಲುಪಿಸಿದರು. ಸಂಜು ಇನಿಂಗ್ಸ್‌ನಲ್ಲಿ ಏಳು ಬೌಂಡರಿ ಮತ್ತು ಆರು ಸಿಕ್ಸರ್‌ಗಳು ಸೇರಿದ್ದವು.



ಇದಕ್ಕೂ ಮೊದಲು ಡೆಲ್ಲಿ ತಂಡದ ಆರಂಭಿಕ ಬ್ಯಾಟರ್ ಪಥುಮ್ ನಿಸಾಂಕಾ (19; 15ಎ) ಮತ್ತು ಕೆ.ಎಲ್. ರಾಹುಲ್ (12; 13ಎ) ಅವರು ತಲಾ ಒಂದು ಬೌಂಡರಿ ಹೊಡೆದು ತಮ್ಮ ಖಾತೆ ತೆರೆದರು. ಆದರೆ ನಾಲ್ಕನೇ ಓವರ್‌ನಲ್ಲಿ ಮುಕೇಶ್ ಚೌಧರಿಯ ನಿಧಾನಗತಿಯ ಎಸೆತವನ್ನು ಹೊಡೆಯುವ ಯತ್ನದಲ್ಲಿ ನಿಸಾಂಕ ಅವರು ಮಿಡ್ ಆನ್ ಫೀಲ್ಡರ್ ಡಿವಾಲ್ಡ್ ಬ್ರೆವಿಸ್‌ಗೆ ಕ್ಯಾಚ್ ಕೊಟ್ಟರು.

ಇದಾದ ನಂತರ ಸ್ಪಿನ್ನರ್‌ಗಳ ಆಟ ಆರಂಭವಾಯಿತು. ಅಕೀಲ್ ಹುಸೇನ್ ಎಸೆತವನ್ನು ಹೊಡೆದ ಕೆ.ಎಲ್. ರಾಹುಲ್ ಅವರು ಋತುರಾಜ್ ಅವರಿಗೆ ಕ್ಯಾಚ್ ಆದರು. ಇದರಿಂದಾಗಿ ಪವರ್ ಪ್ಲೇಯಲ್ಲಿ ತಂಡವು 37ಕ್ಕೆ 2 ವಿಕೆಟ್ ಕಳೆದುಕೊಂಡಿತು.

ಇದೇ ಕ್ರೀಡಾಂಗಣದಲ್ಲಿ ಈಚೆಗೆ ಡೆಲ್ಲಿ ತಂಡವು 75 ರನ್‌ಗಳಿಗೆ ಆಲೌಟ್ ಆಗಿತ್ತು. ಮತ್ತೊಮ್ಮೆ ಅಲ್ಪ ಮೊತ್ತಕ್ಕೆ ಕುಸಿಯುವ ಭೀತಿ ಕಾಡಿತ್ತು. ಸ್ಟಬ್ಸ್ ಮತ್ತು ರಿಜ್ವಿ ಅವರು ತಂಡದ ಆತಂಕವನ್ನು ದೂರಗೊಳಿಸಿ ಚೇತರಿಕೆ ನೀಡುವಲ್ಲಿ ಯಶಸ್ವಿಯಾದರು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 155 (ಪಥುಮ್ ನಿಸಾಂಕ 19, ಕೆ.ಎಲ್. ರಾಹುಲ್ 12, ನಿತೀಶ್ ರಾಣಾ 15, ಕರುಣ್ ನಾಯರ್ 13, ಟ್ರಿಸ್ಟನ್ ಸ್ಟಬ್ಸ್ 38, ಸಮೀರ್ ರಿಜ್ವಿ ಔಟಾಗದೇ 40, ಆಶುತೋಷ್ ಶರ್ಮಾ 14, ನೂರ್ ಅಹಮದ್ 22ಕ್ಕೆ2, ಗುರ್ಜಪನೀತ್ ಸಿಂಗ್ 29ಕ್ಕೆ1, ಜೇಮಿ ಓವರ್ಟನ್ 5ಕ್ಕೆ1). ಚೆನ್ನೈ ಸೂಪರ್ ಕಿಂಗ್ಸ್: 17.3 ಓವರ್‌ಗಳಲ್ಲಿ 2 ವಿಕೆಟ್‌ಗೆ 159 (ಸಂಜು ಸ್ಯಾಮ್ಸನ್ ಔಟಾಗದೇ 87, ಕಾರ್ತಿಕ್ ಶರ್ಮಾ ಔಟಾಗದೇ 41; ಅಕ್ಷರ್ ಪಟೇಲ್ 25ಕ್ಕೆ 1). ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ 8 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ಸಂಜು ಸ್ಯಾಮ್ಸನ್

ನೂರ್ ಅಹಮದ್ ಚಿತ್ರ: ಎಎಫ್‌ಪಿ/ ಪಿಟಿಐ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	9	6	2	1	13	0.855
ಆರ್‌ಸಿಬಿ	9	6	3	0	12	1.420
ಎಸ್‌ಆರ್‌ಎಚ್	10	6	4	0	12	0.644
ಆರ್ ಆರ್	10	6	4	0	12	0.510
ಜಿ ಟಿ	10	6	4	0	12	- 0.147
ಸಿಎಸ್‌ಕೆ	10	5	5	0	10	0.151
ಡಿ ಸಿ	10	4	6	0	8	- 0.949
ಕೆಕೆಆರ್	9	3	5	1	7	- 0.539
ಎಂ ಐ	10	3	7	0	6	- 0.649
ಎಲ್‌ಎಸ್‌ಜಿ	9	2	7	0	4	- 1.076

ಆರೆಂಜ್ ಕ್ಯಾಪ್: ಕೆ.ಎಲ್. ರಾಹುಲ್, ಡಿಸಿ (445 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)

ಪಂಜಾಬ್ ಕಿಂಗ್ಸ್‌ಗೆ ಕಮಿನ್ಸ್ ಬಳಗದ ಸವಾಲು ಇಂದು

ಮುಯ್ಯಿ ತೀರಿಸಿಕೊಳ್ಳುವತ್ತ ಸನ್ ಚಿತ್ತ

ಹೈದರಾಬಾದ್ (ಪಿಟಿಐ): ಸತತ ಎರಡು ಪಂದ್ಯಗಳಲ್ಲಿ ಸೋತಿರುವ ಪಂಜಾಬ್ ಕಿಂಗ್ಸ್ ತಂಡವು ತನ್ನ ಬ್ಯಾಟಿಂಗ್ ವಿಭಾಗ ದಲ್ಲಿರುವ ಲೋಪಗಳನ್ನು ಸುಧಾರಿಸಿ ಕೊಂಡು ಸನ್‌ರೈಸರ್ಸ್ ಹೈದರಾಬಾದ್ ಎದುರು ಕಣಕ್ಕಿಳಿಯಲು ಸಿದ್ಧವಾಗಿದೆ.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯವು ರೋಚಕ ಘಟ್ಟ ತಲುಪುವ ನಿರೀಕ್ಷೆ ಮೂಡಿಸಿದೆ. ಏಕೆಂದರೆ; ಪಂಜಾಬ್ ತಂಡವು ಈ ಟೂರ್ನಿಯಲ್ಲಿ ತನ್ನ ಮೊದಲ ಏಳು ಪಂದ್ಯಗಳ ಪೈಕಿ ಆರರಲ್ಲಿ ಜಯಭೇರಿ ಬಾರಿಸಿತ್ತು. ಒಂದು ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಆದರೆ ಕಳೆದ ಎರಡು ಪಂದ್ಯಗಳಲ್ಲಿ ಸೋತಿತು. ಆದರೂ 13 ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು, ಸನ್‌ರೈಸರ್ಸ್ ಹೈದರಾಬಾದ್, ರಾಜಸ್ಥಾನ ರಾಯಲ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳು ತಲಾ 12 ಅಂಕ ಗಳಿಸಿವೆ. ಕ್ರಮವಾಗಿ 2ರಿಂದ 5ನೇ ಸ್ಥಾನದಲ್ಲಿವೆ. ಆದ್ದರಿಂದ ಈ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡವು ಗೆದ್ದರೆ ಅಗ್ರಸ್ಥಾನಕ್ಕೇರಲಿದೆ. ಆತಿಥೇಯ ಬಳಗಕ್ಕೆ ಇದು ಮುಯ್ಯಿ ತೀರಿಸಿಕೊಳ್ಳುವ ಅವಕಾಶವೂ ಹೌದು. ಏಕೆಂದರೆ ಮೊದಲ ಸುತ್ತಿನಲ್ಲಿ ಸನ್‌ರೈಸರ್ಸ್ ತಂಡವು ಪಂಜಾಬ್ ಎದುರು ಮುಲ್ಲನಪುರದಲ್ಲಿ ಸೋತಿತ್ತು.

ಹಾಲಿ ರನ್ನರ್ಸ್ ಅಪ್ ಪಂಜಾಬ್ ತಂಡದ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಹಾಗೂ ಕೂಪರ್ ಕೊನೊಲಿ ಅವರು ಉತ್ತಮ ಲಯದಲ್ಲಿದ್ದಾರೆ. ಆದರೆ ಕಳೆದ ಎರಡೂ ಹಣಾಹಣಿಗಳಲ್ಲಿ ಅವಸರದ ಹೊಡೆತಗಳಿಗೆ ಪ್ರಯತ್ನಿಸಿದ್ದರಿಂದ ದಂಡ ತೆತ್ತರು. ಅದಕ್ಕಾಗಿ ತಂಡವೂ ಪರಿತಪಿಸಬೇಕಾಯಿತು.

ಮಧ್ಯಮ ಕ್ರಮಾಂಕದಲ್ಲಿ ದೊಡ್ಡ ಜೊತೆಯಾಟಗಳು ಮೂಡಿ ಬಂದರೆ ಮಾತ್ರ ಉತ್ತಮ ಮೊತ್ತ ಗಳಿಸಲು ಸಾಧ್ಯವಾಗಲಿದೆ. ಅರ್ಷದೀಪ್ ಸಿಂಗ್, ವೈಶಾಖ ವಿಜಯಕುಮಾರ್, ಝೇವಿಯರ್ ಬಾರ್ಟಲೆಟ್, ಮಾರ್ಕೊ ಯಾನ್ಸೆನ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಇರುವ ಬೌಲಿಂಗ್ ಬಳಗವು ಸ್ಥಿರತೆ ಕಾಪಾಡಿಕೊಳ್ಳುವ ಅಗತ್ಯವಿದೆ. ಏಕೆಂದರೆ ಸನ್‌ರೈಸರ್ಸ್ ತಂಡದ ಬ್ಯಾಟಿಂಗ್ ವಿಭಾಗವು ಬಲಾಢ್ಯವಾಗಿದೆ.

ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್ ಅವರು ಉತ್ತಮ ಆರಂಭ ನೀಡಿದರೆ, ಇಶಾನ್ ಕಿಶನ್, ಹೆನ್ರಿಚ್ ಕ್ಲಾಸೆನ್, ನಿತೀಶ್ ಕುಮಾರ್ ರೆಡ್ಡಿ ಹಾಗೂ ಅನಿಕೇತ್ ವರ್ಮಾ ಅವರು ಮಧ್ಯಮ ಕ್ರಮಾಂಕದಲ್ಲಿ ರನ್ ಗಳಿಸಬಲ್ಲರು. ಈ ಹಿಂದಿನ ಪಂದ್ಯದಲ್ಲಿ ಇಂತಹ ಆಟವು ತಂಡದಿಂದ ಮೂಡಿಬಂದಿದೆ. ಬೌಲಿಂಗ್‌ನಲ್ಲಿ ಪ್ಯಾಟ್ ಕಮಿನ್ಸ್ ಮರಳಿರುವುದರಿಂದ ತಂಡದ ಬಲ ಹೆಚ್ಚಿದೆ. ಸನ್ ತಂಡವು ಕಳೆದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಸೋತಿತ್ತು. ಮತ್ತೆ ಪುಟಿದೇಳುವ ಛಲದಲ್ಲಿದೆ. ಇನ್ನೊಂದೆಡೆ ಪಂಜಾಬ್ ತಂಡವು ಗೆಲುವಿನ ಹಳಿಗೆ ಮರಳುವತ್ತ ಚಿತ್ತ ನೆಟ್ಟಿದೆ.

ಸನ್‌ರೈಸರ್ಸ್ ಹೈದರಾಬಾದ್ ತಂಡದ ಅಭಿಷೇಕ್ ಶರ್ಮಾ

ಪಂಜಾಬ್ ಕಿಂಗ್ಸ್ ತಂಡದ ಬ್ಯಾಟರ್ ಪ್ರಭಸಿಮ್ರನ್ ಸಿಂಗ್

ಬಲಾಬಲ ಒಟ್ಟು ಪಂದ್ಯ 25
ಹೈದರಾಬಾದ್ ಗೆಲುವು 17
ಪಂಜಾಬ್ ಗೆಲುವು 8

ಇಂದಿನ ಪಂದ್ಯ
ಸನ್‌ರೈಸರ್ಸ್ ಹೈದರಾಬಾದ್ V/s ಪಂಜಾಬ್ ಕಿಂಗ್ಸ್
ತಾಣ: ಹೈದರಾಬಾದ್, ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ತುಮಕೂರು ಓಪನ್ ಐಟಿಎಫ್ ಡಬ್ಲ್ಯು 35 ಟೂರ್ನಿ

ಭಾರತದ ಆಟಗಾರ್ತಿಯರ ಮುನ್ನಡೆ

ಪ್ರಜಾವಾಣಿ ವಾರ್ತೆ

ತುಮಕೂರು: ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಸ್ಫೂರ್ತಿಯುತ ಪ್ರದರ್ಶನ ನೀಡಿದ ಭಾರತದ ಆಟಗಾರ್ತಿಯರು, ಮಂಗಳವಾರ ಆರಂಭವಾದ 'ತುಮಕೂರು ಓಪನ್' ಐಟಿಎಫ್ ಡಬ್ಲ್ಯು 35 ವಿಶ್ವ ಮಹಿಳಾ ಟೆನಿಸ್ ಟೂರ್ನಿಯ ಎರಡನೇ ಸುತ್ತನ್ನು ತಲುಪಿದರು.

ಇಲ್ಲಿನ ವಿಶ್ವವಿದ್ಯಾಲಯ ಆವರಣದ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಸಿಂಗಲ್ಸ್‌ನಲ್ಲಿ ಮಧುರಿಮಾ ಸಾವಂತ್ ಮೊದಲ ಸುತ್ತಿನಲ್ಲಿ 6-3, 3-6, 6-1 ರಿಂದ ರಷ್ಯಾದ ಮಾರಿಯಾ ಮಿಖೈಲೋವಾ ಅವರನ್ನು ಸೋಲಿಸಿದರು.

ಭಾರತದ ಆಟಗಾರ್ತಿಯರ ವ್ಯವಹಾರವಾಗಿದ್ದ ಇತರ ಪಂದ್ಯಗಳಲ್ಲಿ ಸಂದೀಪ್ತಿ ಸಿಂಗ್ ರಾವ್ 6-3, 6-4 ರಲ್ಲಿ ನೇರ ಸೆಟ್‌ಗಳಿಂದ ಯಶಸ್ವಿನಿ ಅವರನ್ನು ಹಿಮ್ಮೆಟ್ಟಿಸಿದರೆ, ಪೂಜಾ ಇಂಗಳೆ ಉತ್ತಮ ಹೋರಾಟದ ನಂತರ 7-5, 1-6, 6-4 ರಿಂದ ಡ್ಯಾನಿಕಾ ಫೆರ್ನಾಂಡೊ ಅವರನ್ನು ಪರಾಭವಗೊಳಿಸಿದರು.

ಕರ್ನಾಟಕದ ಸ್ನಿಗ್ಧಾ ಕಾಂತಾ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಸೋನಲ್ ಪಾಟೀಲ 6-0, 6-3ರಿಂದ ಸ್ನಿಗ್ಧಾ ವಿರುದ್ಧ ಗೆಲುವಿಗೆ ಅಷ್ಟೇನೂ ಕಷ್ಟಪಡಲಿಲ್ಲ. ರಷ್ಯಾದ ಎಲಿನಾ ನೆಪ್ಲಿ ಅವರು 6-4, 6-1 ರಿಂದ ಕರ್ನಾಟಕದ ಇನ್ನೊಬ್ಬ ಆಟಗಾರ್ತಿ ಹರ್ಷಿಣಿ ನಾಗರಾಜ್ ವಿರುದ್ಧ 6-4, 6-1 ಜಯಗಳಿಸಿದರು. ರಷ್ಯಾದ ಸೇನಿಯಾ ಲಸ್ಕುಟೋವಾ 6-3, 7-6 (2) ರಿಂದ ಜಪಾನ್‌ನ ಮಿಚಿಕಾ ಒಜೆಕಿ ವಿರುದ್ಧ ಗೆಲುವು ಪಡೆದರು.

ಡಬಲ್ಸ್‌ನಲ್ಲೂ ಭಾರತದ ಆಟಗಾರ್ತಿಯರು ಗಮನ ಸೆಳೆದರು. ವೈದೇಹಿ ಚೌಧರಿ- ಝುಝುನಾ ಪಾವ್ಲಿಕೋವಾಸ್ಕಾ (ಪೋಲೆಂಡ್) ಜೋಡಿ 6-1, 6-2 ರಿಂದ ಮಾರಿಯಾ ಮಿಖೈಲೋವಾ- ಸಂದೀಪ್ತಿ ಸಿಂಗ್ ಜೋಡಿಯನ್ನು ಸೋಲಿಸಿತು. ಐಶ್ವರ್ಯ ಜಾಧವ್- ಆಕೃತಿ ನಾರಾಯಣ್ ಜೋಡಿ 6-4, 7-5 ರಿಂದ ಅರಿನಾ ಅರಿಫುಲಿನಾ- ಎಕಟೆರಿನಾ ಯಾಶಿನಾ ಜೋಡಿಯನ್ನು 6-4, 7-5 ರಿಂದ ಸೋಲಿಸಿದರು.

ಇನ್ನೊಂದು ಪಂದ್ಯದಲ್ಲಿ ಶ್ರಾವ್ಯಾ ಶಿವಾನಿ ಚಿಲಕಲಪುಡಿ- ಜೀಲ್ ದೇಸಾಯಿ ಜೋಡಿ 6-0, 6-2 ರಿಂದ ಯಶಸ್ವಿನಿ ಪನ್ವಾರ್ ಮತ್ತು ಬೇಲಾ ತಮವಿರುದ್ಧ 6-0, 6-2 ಅಂತರದಲ್ಲಿ ಜಯ ಗಳಿಸಿದರು.

ಮಧುರಿಮಾ ಸಾವಂತ್

ಡೋಪಿಂಗ್ ಪರೀಕ್ಷೆ ತಪ್ಪಿಸಿಕೊಂಡ ವಿನೇಶ್‌ಗೆ ಮೊದಲ ನೋಟಿಸ್

ನವದೆಹಲಿ (ಪಿಟಿಐ): ಭಾರತದ ಕುಸ್ತಿ ತಾರೆ ವಿನೇಶ್ ಫೋಗಟ್ ಅವರು ಸ್ಪರ್ಧೆಯಿರದ ವೇಳೆ ನಡೆಸಲಾಗುವ ಡೋಪಿಂಗ್ ಪರೀಕ್ಷೆ ತಪ್ಪಿಸಿಕೊಂಡಿದ್ದು, 12 ತಿಂಗಳಲ್ಲಿ ಮೊದಲ ಬಾರಿ ಅವರು 'ವಾಸಸ್ಥಳದ ಮಾಹಿತಿ' (ವೇರಬೌಟ್ಸ್) ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ಇಂಟರ್‌ನ್ಯಾಷನಲ್ ಟೆಸ್ಟಿಂಗ್ ಏಜನ್ಸಿ (ಐಟಿಎ) ನೋಟಿಸ್ ನೀಡಿದೆ.

2025ರ ಡಿ. 18ರಂದು ಸಿಬ್ಬಂದಿ ಪರೀಕ್ಷೆಗೆ ಬಂದಾಗ ತಾವು ಇರುವ ಸ್ಥಳದ ಬಗ್ಗೆ ವಿನೇಶ್ ಪರೀಕ್ಷಾ ಅಧಿಕಾರಿ ಗಳಿಗೆ ನೀಡಿರಲಿಲ್ಲ. ಮೇ 4ರಂದು ಹೊರಡಿಸಲಾದ ನೋಟಿಸ್‌ನಲ್ಲಿ ಐಟಿಎ, ಈ ಅಂಶ ಉಲ್ಲೇಖಿಸಲಾಗಿದೆ.

ಐಟಿಎ, ವಿಶ್ವ ಉದ್ದೀಪನಮದ್ದುಸೇವನೆ ತಡೆ ಏಜನ್ಸಿ (ವಾಡಾ)ದ ಕಾರ್ಯ ನಿರ್ವಹಣೆಯಲ್ಲಿ ಪಾಲುದಾರ ಆಗಿದೆ. ಪರೀಕ್ಷೆ ತಪ್ಪಿಸಿಕೊಂಡಿದ್ದಕ್ಕೆ ಐಟಿಎ ವಿನೇಶ್ ಅವರಿಂದ ಜನವರಿ 5ರಂದು ಪ್ರತಿಕ್ರಿಯೆ ಕೇಳಿತ್ತು. ಅವರು ಜನವರಿ 19ರಂದು ವಿವರಣೆ ನೀಡಿದ್ದರು.

ಇದು ಡೋಪಿಂಗ್ ಉಲ್ಲಂಘನೆಗೆ ಸಂಬಂಧಿಸಿದ ನೋಟಿಸ್ ಆಗಿಲ್ಲ. ಆದರೆ ವಾಸ್ತವ್ಯ ಸ್ಥಳ ಮಾಹಿತಿ ತಿಳಿಸದ್ದಕ್ಕೆ ನೀಡಿದ ಎಚ್ಚರಿಕೆಯಾಗಿದೆ. ದಿಢೀರ್ ಆಗಿ ಮಾದರಿ ಪಡೆಯಲು ಮುಂದಾಗುವಾಗ ಕ್ರೀಡಾಪಟುಗಳು ವಾಸ್ತವ್ಯಸ್ಥಳದ ಮಾಹಿತಿ ನೀಡಬೇಕೆಂಬುದನ್ನು ಮನವರಿಕೆ ಮಾಡುವ ಯತ್ನವೂ ಇದಾಗಿದೆ.

ಒಂದು ವರ್ಷದ ಅವಧಿಯಲ್ಲಿ ಮೂರು ಬಾರಿ ವಾಸ್ತವ್ಯ ಸ್ಥಳದ ಮಾಹಿತಿ ನೀಡದೇ ಪರಿಕ್ಷೆ ತಪ್ಪಿಸಿಕೊಂಡಲ್ಲಿ, ವಿಶ್ವ ಕುಸ್ತಿ ಸಂಸ್ಥೆ ಮತ್ತು ವಾಡಾ ರೂಪಿಸಿರುವ ನಿಯಮಾವಳಿಯ ಪ್ರಕಾರ ಎರಡು ವರ್ಷಗಳವರೆಗೆ ಅಮಾನತು ಶಿಕ್ಷೆ ವಿಧಿಸಲು ಅವಕಾಶವಿದೆ.

ಟಿಟಿ: ಭಾರತದ ಪುರುಷರಿಗೆ ನಿರಾಸೆ

ಲಂಡನ್ (ಪಿಟಿಐ): ಭಾರತ ಪುರುಷರ ತಂಡವು ಮಂಗಳವಾರ ನಡೆದ ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಫೈನಲ್ಸ್‌ನ 32ನೇ ಸುತ್ತಿನ ಪಂದ್ಯದಲ್ಲಿ 0-3ರಿಂದ ಆಸ್ಟ್ರಿಯಾ ವಿರುದ್ಧ 0-3 ಸೋತು ಟೂರ್ನಿಯಿಂದ ಹೊರಬಿತ್ತು.

ಮಾನವ್ ಠಕ್ಕರ್ ಮತ್ತು ಸತ್ಯನ್ ಜ್ಞಾನಶೇಖರನ್ ಅವರು ತಮ್ಮ ಎದುರಾಳಿಗಳ ವಿರುದ್ಧ ಬೇಗನೆ ಸೋಲೊಪ್ಪಿಕೊಂಡರು. ಮಾನುಷ್ ಶಾ ಒಂದು ಗಂಟೆ 34 ನಿಮಿಷ ಹೋರಾಟ ನಡೆಸಿ ಪರಾಭವಗೊಂಡರು.

ಸಂಕ್ಷಿಪ್ತ ಸುದ್ದಿ

ಪರಿಷ್ಕೃತ ನಿಯಮ ಹೆಚ್ಚು ವ್ಯತ್ಯಾಸವಿಲ್ಲ: ಚಿರಾಗ್ ಶೆಟ್ಟಿ

ನವದೆಹಲಿ (ಪಿಟಿಐ): ಬ್ಯಾಡ್ಮಿಂಟನ್ ಪಂದ್ಯಗಳಲ್ಲಿ '15x3 ಸ್ಕೋರಿಂಗ್ ನಿಯಮ' ಪರಿಷ್ಕೃತಗೊಳಿಸಲಾಗುತ್ತಿದೆ. ಇದರಿಂದ ಹೆಚ್ಚು ವ್ಯತ್ಯಾಸವೇನೂ ಆಗಲ್ಲ ಎಂದು ಭಾರತದ ಡಬಲ್ಸ್ ಆಟಗಾರ ಚಿರಾಗ್ ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ.

ಈಚೆಗಷ್ಟೇ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಈ ನಿಯಮವನ್ನು ಪರಿಷ್ಕರಣೆಗೊಳಿಸಿದ್ದರ ಕುರಿತು ಘೋಷಣೆ ಮಾಡಿತ್ತು. ಇದು 2027ರ ಜನವರಿ 4ರಿಂದ ಜಾರಿಗೆ ಬರಲಿದೆ. ಈ ನಿಯಮ ಕುರಿತು ಹಲವು ಮಾಜಿ ಮತ್ತು ಹಾಲಿ ಆಟಗಾರರಿಂದ ಮಿಶ್ರ ಪತ್ರಿಕ್ರಿಯೆ ವ್ಯಕ್ತವಾಗಿವೆ.

ಇಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದ ಚಿರಾಗ್, '11X5 ಸ್ಕೋರಿಂಗ್ ನಿಯಮದ ಪಂದ್ಯಗಳಲ್ಲಿ ನಾನು ಆಡಿದ್ದೇನೆ. ಅಪಾರ ವೇಗದ ಆಟ ಅದು. ತುಂಬಾ ಚುರುಕಾಗಿ ಆಡಬೇಕು. ಅದನ್ನು ನೋಡಿದರೆ 15X3 ಗೇಮ್ ಪಂದ್ಯಗಳು ಕಷ್ಟಕರವೇನಲ್ಲ. ವೇಗ ಮತ್ತು ಶಕ್ತಿ ಎರಡನ್ನೂ ಮೇಳೈಸಿ ಆಡುವ ಅಗತ್ಯವಿರುತ್ತದೆ' ಎಂದು ವಿಶ್ಲೇಷಿಸಿದರು.

3ನೇ ಸ್ಥಾನದಲ್ಲಿ ಭಾರತ ತಂಡ

ಶಾಂಘೈ (ಪಿಟಿಐ): ಮಾಜಿ ವಿಶ್ವ ಚಾಂಪಿಯನ್ ಓಜಸ್ ದೇವತಳೆ ನೇತೃತ್ವದಲ್ಲಿ ಭಾರತ ಪುರುಷರ ತಂಡ, ಆರ್ಚರಿ ವಿಶ್ವ ಕಪ್ ಸ್ಟೇಜ್ 2 ಟೂರ್ನಿಯ ಕಾಂಪೌಂಡ್ ವಿಭಾಗದ ಅರ್ಹತಾ ಸುತ್ತಿನಲ್ಲಿ ಮಂಗಳವಾರ ಉತ್ತಮ ಆರಂಭ ಮಾಡಿದೆ.

2023ರ ಬರ್ಲಿನ್ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್ ಗೆದ್ದಿದ್ದ ದೇವತಳೆ, 711 ಪಾಯಿಂಟ್ಸ್‌ನೊಡನೆ ಒಟ್ಟಾರೆ ಏಳನೇ ಸ್ಥಾನದಲ್ಲಿ ಮುಗಿಸಿದರು. ಸಾಹಿಲ್ ಜಾಧವ್ ಸಹ 711 ಪಾಯಿಂಟ್ಸ್ ಗಳಿಸಿ ನಂತರದ ಸ್ಥಾನ ಗಳಿಸಿದರು. ಕುಶಲ್ ದಲಾಲ್ ಅವರು ಒಟ್ಟಾರೆ 18ನೇ ಸ್ಥಾನ ಗಳಿಸಿದರು. ತಂಡ ಮೂರನೇ ಶ್ರೇಯಾಂಕ ಗಿಟ್ಟಿಸಿತು.

ಆದರೆ, ಏಷ್ಯನ್ ಗೇಮ್ಸ್ ಪದಕ ವಿಜೇತ ಅಭಿಷೇಕ್ ವರ್ಮಾ ನಿರಾಸೆ ಅನುಭವಿಸಿ 705 ಪಾಯಿಂಟ್‌ಗಳೊಡನೆ 25ನೇ ಸ್ಥಾನ ಪಡೆದರು. ವೈಯಕ್ತಿಕ ಎಲಿಮಿನೇಷನ್ ಸುತ್ತಿನಲ್ಲಿ ಪಾಲ್ಗೊಳ್ಳಲು ಅವರಿಗೆ ಇನ್ನೂ ಅವಕಾಶವಿದೆ.

ಕಾಂಪೌಂಡ್ ಮಹಿಳಾ ತಂಡ ವಿಭಾಗದಲ್ಲಿ ಮಾಜಿ ವಿಶ್ವ ಚಾಂಪಿಯನ್ ಅದಿತಿ ಸ್ವಾಮಿ 700 ಪಾಯಿಂಟ್‌ಗಳೊಡನೆ 13ನೇ ಸ್ಥಾನ ಗಳಿಸಿದರು. ಪ್ರಗತಿ 19ನೇ ಸ್ಥಾನ (697) ಗಳಿಸಿದರು. ಜ್ಯೋತಿ ಸುರೇಖಾ ವೆನ್ನಂ 21ನೇ ಸ್ಥಾನಕ್ಕೆ ಸರಿದರು.

ಎಎಫ್‌ಸಿ ಏಷ್ಯನ್ ಕಪ್: ಜಪಾನ್‌ಗೆ ಮಣಿದ ಭಾರತ ವನಿತೆಯರು

ಸುಝೌ (ಚೀನಾ), (ಪಿಟಿಐ): ಭಾರತ ತಂಡ, ಎಎಫ್‌ಸಿ 17 ವರ್ಷದೊಳಗಿನವರ ಮಹಿಳಾ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಪ್ರಬಲ ಜಪಾನ್ ಎದುರು 0-3 ಗೋಲುಗಳ ಸೋಲನುಭವಿಸಿತು.

'ಬಿ' ಗುಂಪಿನ ಈ ಪಂದ್ಯದ ಪೂರ್ವಾರ್ಧದಲ್ಲಿ ಭಾರತ ಒಂದೂ ಗೋಲು ಬಿಟ್ಟುಕೊಟ್ಟಿರಲಿಲ್ಲ. ಆದರೆ ಪಂದ್ಯದ 59ನೇ ನಿಮಿಷ ಯುಮಿ ಹಯಾಷಿ ಜಪಾನ್‌ಗೆ ಮುನ್ನಡೆ ಒದಗಿಸಿದರು. ನಂತರ ಯುಝುಹಾ ಇಕೆಡಾ ಎರಡು (76, 81ನೇ) ಗೋಲು ಹೊಡೆದು ಗೆಲುವಿನ ಅಂತರ ಹೆಚ್ಚಿಸಿದರು.

ಇದು ಜಪಾನ್‌ಗೆ ಎರಡನೇ ಜಯವಾಗಿದ್ದು, ಆರು ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಎರಡೂ ಪಂದ್ಯಗಳನ್ನು ಸೋತ ಭಾರತ ಕೊನೆಯ ಸ್ಥಾನದಲ್ಲಿದೆ. ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಆಸ್ಟ್ರೇಲಿಯಾ ಮತ್ತು ಲೆಬನಾನ್ 1-1 ಡ್ರಾ ಮಾಡಿಕೊಂಡಿದ್ದವು.

ರಾಜ್ಯದ ಕಿರಿಯ ಐಎಂ ಆಗಿ ಅಪಾರ್

ಬೆಂಗಳೂರು: ನಗರದ ಚೆಸ್ ಪ್ರತಿಭೆ ಅಪಾರ್ ಸಕ್ಸೇನಾ, ಕರ್ನಾಟಕದ ಅತಿ ಕಿರಿಯ ಇಂಟರ್‌ನ್ಯಾಷನಲ್ ಮಾಸ್ಟರ್ ಎನಿಸಿದ್ದಾನೆ. ಇದಕ್ಕೆ ಅಗತ್ಯವಿರುವ ಮೂರು ಐಎಂ ನಾರ್ಮ್ ಮತ್ತು ರೇಟಿಂಗ್‌ಅನ್ನು ಅಪಾರ್ ಕೇವಲ ಐದು ವಾರಗಳ ಅಂತರದಲ್ಲಿ ಪೂರೈಸಿದ್ದಾನೆ.

ಮಾರ್ಚ್ 30ರಂದು ಬೋಸ್ನಿಯಾದಲ್ಲಿ ಮುಕ್ತಾಯಗೊಂಡ ರಿನೋಮ್ ಟೂರ್ನಿಯಲ್ಲಿ ಮೊದಲ ನಾರ್ಮ್ ಗಳಿಸಿದ್ದನು. ಆ ಟೂರ್ನಿಯಲ್ಲಿ 9 ಸುತ್ತುಗಳಿಂದ 7 ಪಾಯಿಂಟ್ಸ್ ಗಳಿಸಿ ಪ್ರಶಸ್ತಿ ಜಯಿಸಿದ್ದ. ವಾರದ ನಂತರ ಸ್ಪೇನ್‌ನ ಸ್ಯಾನ್ ವಿಸೆಂಟ್ ಓಪನ್ ಟೂರ್ನಿಯಲ್ಲೂ 9 ಸುತ್ತುಗಳಿಂದ 7 ಪಾಯಿಂಟ್ಸ್ ಗಳಿಸಿ ಎರಡನೇ ನಾರ್ಮ್ ಗಳಿಸಿದ್ದನು. ಅಲ್ಲಿ 12ನೇ ಸ್ಥಾನ ಪಡೆದಿದ್ದ. 54 ದೇಶಗಳ 520 ಮಂದಿ ಅಲ್ಲಿ ಆಡಿದ್ದನು.

ಸ್ಪೇನ್‌ನ ಮೆನೊರ್ಕಾದಲ್ಲಿ ನಡೆದ ಟೂರ್ನಿಯಲ್ಲೂ ಉತ್ತಮ ಸಾಧನೆ ತೋರಿದ ಅಪಾರ್ 44 ರೇಟಿಂಗ್ ಪಾಯಿಂಟ್ಸ್ ಸಂಗ್ರಹಿಸಿದ್ದ. ಸದ್ಯ 2450ರ ಲೈವ್ ರೇಟಿಂಗ್ ಹೊಂದಿದ್ದಾನೆ. ಅಪಾರ್, ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್ ಶಾಲೆಯ ವಿದ್ಯಾರ್ಥಿಯಾಗಿದ್ದಾನೆ.

ಅಗ್ರಸ್ಥಾನ ಉಳಿಸಿಕೊಂಡ ಭಾರತ

ದುಬೈ (ಪಿಟಿಐ): ಮೂರು ಬಾರಿಯ ವಿಶ್ವಕಪ್ ಗೆದ್ದಿರುವ ಭಾರತ ತಂಡ, ಮಂಗಳವಾರ ಪ್ರಕಟವಾದ ಯಸಿಸಿ ಟಿ20 ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದೆ. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ.

ಮಾರ್ಚ್‌ನಲ್ಲಿ ಟಿ20 ವಿಶ್ವಕಪ್ ಉಳಿಸಿಕೊಳ್ಳುವ ಮೂಲಕ ಒಟ್ಟಾರೆ ಮೂರನೇ ಬಾರಿ ವಿಶ್ವಕಪ್ ಗೆದ್ದ ಮೊದಲ ತಂಡ ಎಂಬ ಹಿರಿಮೆಗೆ ಭಾರತ ತಂಡ ಪಾತ್ರವಾಗಿತ್ತು. ಭಾರತ 275 ಂಕ ಹೊಂದಿದೆ. ಎರಡು ಬಾರಿಯ ಚಾಂಪಿಯನ್ ಇಂಗ್ಲೆಂಡ್ 262 ಅಂಕ ಗಳಿಸಿದ್ದು ಎರಡನೇ ಮತ್ತು ಮಾಜಿ ಚಾಂಪಿಯನ್ ಆಸ್ಟ್ರೇಲಿಯಾ 258 ಪಾಯಿಂಟ್ಸ್ ಗಳಿಸಿದ್ದು ಮೂರನೇ ಸ್ಥಾನದಲ್ಲಿವೆ.

ಐ-ಲೀಗ್: ಅಗ್ನಿಪುತ್ರ ತಂಡಕ್ಕೆ ಸೋಲು

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಇಲ್ಲಿನ ದ್ರಾವಿಡ್- ಪಡುಕೋಣೆ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ಮಂಗಳವಾರ ನಡೆದ ಐ-ಲೀಗ್ 3ರ ಡಿ ಗುಂಪಿನ ಪಂದ್ಯದಲ್ಲಿ 0-2ರಿಂದ ರಾಯಲ್ ರೇಂಜರ್ಸ್ ವಿರುದ್ಧ ಸೋಲು ಅನುಭವಿಸಿತು.

ಮೊದಲಾರ್ಧದ ಇಂಜುರಿ ಅವಧಿಯಲ್ಲಿ ಅಗ್ನಿಪುತ್ರ ತಂಡದ ಸೆಂಥಾಮಿಲ್ ಎಸ್. ಅವರಿಗೆ ರೆಫ್ರಿ 'ಕೆಂಪು ಕಾರ್ಡ್' ನೀಡಿದ್ದು ವಿವಾದಕ್ಕೆ ಕಾರಣವಾಯಿತು. ಎದುರಾಳಿ ತಂಡದ ನಿತೇಶ್ ಚಿಕ್ಕಾರ ಅವರನ್ನು ಮೊಣಕೈಯಿಂದ ತಳ್ಳಿದ ಆರೋಪದಲ್ಲಿ ಸೆಂಥಾಮಿಲ್ ಅವರನ್ನು ಮೈದಾನದಿಂದ ಹೊರ ಕಳುಹಿಸಲಾಯಿತು. ಇದರ ಲಾಭ ಪಡೆದ ರಾಯಲ್ ತಂಡವು ದ್ವಿತೀಯಾರ್ಧದಲ್ಲಿ ಎರಡು ಗೋಲು ದಾಖಲಿಸಿ ಸಂಭ್ರಮಿಸಿತು.